# ಧಮ್ಮಪದ

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211
ಹಾಸನ್ ಜಿಲ್ಲೆ
1997

ವಿಷಯಾನುಕ್ರಮಣಿಕೆ

ಅಧ್ಯಾತ್ಮ ಗ್ರಂಥಾವಳಿ

# ಧಮ್ಮಪದ

(ಪಾಳಿ ಮೂಲ, ಕನ್ನಡದ ಅನುವಾದ,
ಟಿಪ್ಪಣಿ, ಪರಿಶಿಷ್ಟಗಳೊಡನೆ)

ಬರೆದವರು
ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

ಕ್ರಮಾಂಕ ೫೪

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573211
1997

ಪ್ರಥಮ ಸಂಸ್ಕರಣ 1935 500 ಪ್ರತಿಗಳು
ದ್ವಿತೀಯ ಸಂಸ್ಕರಣ 1997 1000 ಪ್ರತಿಗಳು

All Rights Reserved
ಹಕ್ಕುಗಳೆಲ್ಲವನ್ನೂ ಕಾದಿಟ್ಟಿದೆ

ಪ್ರಕಾಶಕರು :
ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ - 573 211
ದೂ : 08175-73820

ಅಕ್ಷರ ಜೋಡಣೆ ಮತ್ತು ವಿನ್ಯಾಸ :
ಎಲ್. ಎಂ. ಗ್ರಾಫಿಕ್ಸ್
1752/3, 'ಅಕ್ಷಯ ಮ್ಯಾನ್‌ಷನ್',
ಮಲ್ಲೇಶ್ವರಂ ರೈಲ್ವೆನಿಲ್ದಾಣದ ಎದುರು,
ಮಾರುತಿ ಬಡಾವಣೆ, ಬೆಂಗಳೂರು - 21.

ಮುದ್ರಕರು :
ಲೇಸರ್ ಗ್ರಾಫಿಕ್ಸ್
ಚೆಂಗಯ್ಯ ಲೇ ಔಟ್,
ತ್ಯಾಗರಾಜನಗರ, ಬೆಂಗಳೂರು - 28

# ಬಿನ್ನಹ

ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಸಂಸ್ಥಾಪಕರಾದ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು (ಪೂರ್ವಾಶ್ರಮದ ವೈ. ಸುಬ್ಬರಾವ್) 1935ನೇ ಇಸವಿಯಲ್ಲಿಯೇ ಈ 'ಧಮ್ಮಪದ' ಗ್ರಂಥದ ಕನ್ನಡ ಅನುವಾದವನ್ನು ಪೀಠಿಕೆ, ಟಿಪ್ಪಣಿ - ಮುಂತಾದ ಸೌಕರ್ಯಗಳೊಡನೆ ಪ್ರಕಾಶಗೊಳಿಸಿದ್ದರು. ಬಹಳ ವರ್ಷಗಳವರೆಗೆ ಆ ಗ್ರಂಥದ ಪ್ರತಿಗಳು ಮಾರಾಟಕ್ಕೂ ದೊರೆಯುತ್ತಿದ್ದು ಈಚೆಗೆ ಅದು ಪೂರೈಸಿಹೋಗಿದ್ದು ಮತ್ತೆ ಪುನರ್ಮುದ್ರಣವಾಗಲಿಲ್ಲ. ಅನಂತರ 1975ರಲ್ಲಿ ಶ್ರೀಶ್ರೀ ಗಳವರು, ಬ್ರಹ್ಮೀಭೂತರಾದಮೇಲೆ ಮತ್ತೆ ಈ ಗ್ರಂಥವನ್ನು ಪುನರ್ಮುದ್ರಿಸುವ ಬಗ್ಗೆ ಕಾರ್ಯಾಲಯದವರೂ ಪ್ರಯತ್ನಮಾಡಿರಲ್ಲಿಲ್ಲ. ಆದರೆ ಕಳೆದ ಎರಡು ವರ್ಷಗಳಿಂದ ಇದರ ಪುನರ್ಮುದ್ರಣದ ವಿಚಾರವಾಗಿ ಆಲೋಚಿಸಿದಾಗ ಈ ಗ್ರಂಥದ ಮೂಲವನ್ನೂ ಅನುವಾದದೊಡನೆ ಜೋಡಿಸಿ ಪ್ರಕಟಿಸಬೇಕೆಂದು ನಿಶ್ಚಯಿಸಲಾಯಿತು. ಅದರಂತೆ ಪಾಳೀಭಾಷೆಯಲ್ಲಿರುವ ಮೂಲವನ್ನು ಜೋಡಿಸಿ ಈಗ ಮತ್ತೊಮ್ಮೆ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಲಾಗಿದೆ.

ಈ ಗ್ರಂಥದ ಪರಿಚಯ, ಇದರ ಇತಿಹಾಸ, ಬೌದ್ಧಧರ್ಮದವರಿಗೆ ಇದು - ಹಿಂದೂಗಳಿಗೆ ಭಗವದ್ಗೀತೆ ಇರುವಂತೆ - ಪೂಜ್ಯವಾಗಿದ್ದು ಅವರುಗಳು ಬೇರ ಬೇರೆಯ ಭಾಷೆಗಳಿಗೆ ಇದನ್ನು ಪರಿವರ್ತಿಸಿ ಭೂಮಂಡಲದಲ್ಲೆಲ್ಲ ಪ್ರಚಾರಮಾಡಿರುವದು, ಬೌದ್ಧಧರ್ಮವು ಹಿಂದೂ ದೇಶದಲ್ಲಿಯೇ ಹುಟ್ಟಿದ್ದರೂ ಅದರ ವಿಚಾರವಾಗಿ ಭಾರತೀಯರು ಏನೂ ಅರಿಯದೆ ಇರುವದು, ಆದರೆ ಇದರಲ್ಲಿರುವ ಎಷ್ಟೋ ಉಪದೇಶಗಳು ಹಿಂದೂಧರ್ಮಕ್ಕೆ ಹೊಂದಾಣಿಕೆಯಾಗಿರುವದು - ಮುಂತಾದ ಕಾರಣಗಳಿಂದ ಈ ಗ್ರಂಥವನ್ನು ಕನ್ನಡಿಗರಿಗೆ ಮತ್ತೊಮ್ಮೆ ಪರಿಚಯಮಾಡಿಕೊಡುವದಕ್ಕಾಗಿ ಎರಡನೆಯ ಬಾರಿಗೆ ಮುದ್ರಿಸಿ ಪ್ರಕಾಶಗೊಳಿಸಲಾಗಿದೆ.

ಈ ಗ್ರಂಥದ ಪ್ರಕಟನೆಗೆ ಹಾಲಿ ಕಾರ್ಯಾಲಯದ ಟ್ರಸ್ಟ್‌ಕಮಿಟಿ ಅಧ್ಯಕ್ಷರಾದ ಶ್ರೀ ಹೆಚ್. ವೆಂಕಟನರಸಪ್ಪನವರೂ, ಬೆಂಗಳೂರು ಶಾಖಾಕಾರ್ಯಾಲಯದ ಭಕ್ತರಾದ ಶ್ರೀ ಹೆಚ್. ಎನ್. ರಂಗಸ್ವಾಮಿಗಳೂ ಸಾಕಷ್ಟು ಶ್ರಮವನ್ನು ವಹಿಸಿರುತ್ತಾರೆ. ಇವರುಗಳಿಗೆ ಕಾರ್ಯಾಲಯದ ಪರವಾಗಿ ಅಭಿನಂದನೆಗಳನ್ನು ಅರ್ಪಿಸಲಾಗಿದೆ. ವಾಚಕರು ಈ ಗ್ರಂಥವನ್ನು ಬರಮಾಡಿಕೊಂಡು ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

ಹೊಳೆನರಸೀಪುರ — ಇತಿ ಸಜ್ಜನ ವಿಧೇಯ

ತಾ. 15-12-96 — ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ಪ್ರವೇಶಿಕೆ

## ೧

ಬೌದ್ಧಮತವು ಭರತಖಂಡದಲ್ಲಿ ಹುಟ್ಟಿ ಬೆಳೆದು ಮೈಗರೆದು ಇಂದಿಗೆ ಹದಿನಾಲ್ಕು ಶತಮಾನಗಳ ಮೇಲೆ ಆಯಿತು. ತನ್ನ ಎಂಬತ್ತನೆಯ ವರ್ಷದವರೆಗೂ ಧರ್ಮೋಪದೇಶವನ್ನು ಮಾಡುತ್ತಿದ್ದು ಭರತಖಂಡದಲ್ಲೆಲ್ಲ ವಿಷ್ಣುವಿನ ಅವತಾರ ವೆಂದು ಭಾವಿಸಲ್ಪಡುವಷ್ಟು ಪೂಜ್ಯತೆಯನ್ನು ಹೊಂದಿ ದೇಹವನ್ನು ಇಟ್ಟ ಗೌತಮಬುದ್ಧನ ಚರಿತ್ರೆಯು ನಮ್ಮ ದೇಶದಲ್ಲಿ ಯಾರೊಬ್ಬರ ಕಿವಿಗೂ ಬೀಳದಂಥ ಅಜ್ಞಾತವಾಸವನ್ನು ಅನುಭವಿಸಿ ಈಗ ತಾನೆ ಅಲ್ಲಲ್ಲಿ ತಲೆಯೆತ್ತುತ್ತಿದೆ. ಗೌತಮನ ಧರ್ಮವು ಪ್ರಪಂಚದ ಮೂರನೆಯ ಒಂದು ಭಾಗದಷ್ಟು ಜನರ ಆದರಕ್ಕೆ ಪಾತ್ರವಾಗಿದ್ದರೂ ಅದನ್ನು ಕಣ್ಣೆತ್ತಿ ಕೂಡ ನೋಡದೆ ಇದ್ದ ನಮ್ಮ ದೇಶದವರು ಯುರೋಪಿನವರ, ಅದರಲ್ಲಿಯೂ ನಮ್ಮನ್ನಾಳುವ ಆಂಗ್ಲೇಯರ, ಸಹಾನುಭೂತಿ ಯನ್ನು ಪಡೆದು ಇಂಗ್ಲಿಷಿನ ಉಡುಪಿನಲ್ಲಿ ಇಲ್ಲಿಗೆ ಹೊಸದಾಗಿ ಬಂದಿರುವ ಈ ಧರ್ಮದ ಉಪದೇಶಗಳನ್ನು ಈಗ ತುಂಬ ಗೌರವದಿಂದ ಕಾಣುವದಕ್ಕೆ ಮೊದಲು ಮಾಡಿರುತ್ತಾರೆ. ಈ ಸುಸಮಯವನ್ನು ಸಾಧಿಸಿಕೊಂಡು ಬೌದ್ಧರೂ ಕಾಶಿಯಲ್ಲಿ ತಮ್ಮ ವಿದ್ಯಾಪೀಠವನ್ನು ಸ್ಥಾಪಿಸಿ ಮತಪ್ರಸಾರವನ್ನು ಮಾಡುವ ಹವಣಿಕೆಯನ್ನು ತೋರ್ಪಡಿಸಿಕೊಳ್ಳುತ್ತಿದ್ದಾರೆ. ಬೌದ್ಧಮತವು ಈಶ್ವರನನ್ನಾಗಲಿ ಜೀವನನ್ನಾಗಲಿ ಒಪ್ಪದೆ ವೇದಪ್ರಾಮಾಣ್ಯವನ್ನು ಕಡೆಗಣಿಸಿದುದೇ ನಮ್ಮ ದೇಶದಲ್ಲಿ ಆ ಮತದ ಹೀನಸ್ಥಿತಿಗೆ ಕಾರಣವಾಯಿತೆಂದು ಕೆಲವರು ಊಹಿಸುತ್ತಾರೆ. ಇದರ ನಿಜವು ಹೇಗಾದರೂ ಇರಲಿ. ಪುಣ್ಯಪಾಪಕರ್ಮ, ಜನ್ಮಾಂತರ, ಜನ್ಮಾಂತರದಿಂದ ಬಿಡುಗಡೆ - ಈ ವಿಚಾರಗಳಲ್ಲಿ ಭರತಖಂಡದ ಉಳಿದ ದರ್ಶನಗಳಂತೆಯೇ ತನ್ನದೊಂದು ವಿಶಿಷ್ಟವಾದ ಸಿದ್ಧಾಂತವನ್ನು ಹೊರಕ್ಕೆ ತಂದಿರುವ ಗೌತಮಬುದ್ಧನ ದರ್ಶನದ ಸಾರವೇನೆಂಬುದನ್ನು ತಿಳಿಯುವದರಿಂದ ನಮ್ಮೆಲ್ಲರಿಗೂ ಪ್ರಯೋಜನವುಂಟೆಂಬುದ ರಲ್ಲಿ ಸಂದೇಹವೇ ಇಲ್ಲ. ಗೌತಮಬುದ್ಧನ ಧರ್ಮದಲ್ಲಿ ನಮಗಿದ್ದ ತಿರಸ್ಕಾರ ಬುದ್ಧಿಯ ಕಾಲದಲ್ಲಿ ನಾವು ಸಂಪಾದಿಸಿಕೊಂಡಿರುವ ತಪ್ಪುತಿಳಿವಳಿಕೆಯು ಹೋಗ ಬೇಕಾದರೆ ಪಾಲಿಯಲ್ಲಿಯೂ ಸಂಸ್ಕೃತದಲ್ಲಿಯೂ ಚೈನ, ಜಪಾನಿ, ಟಿಬ್ಬೆಟಿ ಭಾಷೆ ಗಳಲ್ಲಿಯೂ ಕಾಣಬರುವ ಗ್ರಂಥಗಳನ್ನು ಓದುವದು ಅತ್ಯವಶ್ಯವು ; ಅದರಲ್ಲಿಯೂ ಅತ್ಯಂತ ಪ್ರಾಚೀನವಾದ ಬೌದ್ಧಧರ್ಮದ ಉಪದೇಶಗಳನ್ನು ತಿಳಿಯಬೇಕೆನ್ನುವವರು ಪಾಲಿಭಾಷೆಯಲ್ಲಿರುವ ತ್ರಿಪಿಟಕಗಳನ್ನು ಮೊಟ್ಟಮೊದಲು ಓದಬೇಕು.

ಪಾಲಿಗ್ರಂಥಗಳು ಹಲವು ಈಗ ಇಂಗ್ಲಿಷು ಅಕ್ಷರದಲ್ಲಿ ಅಚ್ಚಾಗಿವೆ, ದೇವನಾಗರಿಯಲ್ಲಿಯೂ ಅಚ್ಚಾಗುತ್ತಲಿವೆ. ಇವುಗಳ ಪರಿವರ್ತನೆಗಳೂ ಪ್ರಚಾರ ಗ್ರಂಥಗಳೂ ಇಂಗ್ಲಿಷು, ಜರ್ಮನ್, ಫ್ರೆಂಚು - ಈ ಯೂರೋಪಿನ ಭಾಷೆಗಳ ಲ್ಲಿಯೂ ಮರಾಠಿ, ಹಿಂದಿ, ಬಂಗಾಳಿ - ಈ ಭರತಖಂಡದ ಭಾಷೆಗಳಲ್ಲಿಯೂ ಈಗ ಸಿಕ್ಕುತ್ತವೆ. ನಮ್ಮ ಕನ್ನಡದಲ್ಲಿ ಮಾತ್ರ ಬೌದ್ಧಧರ್ಮಗ್ರಂಥಗಳು ತೀರ ಕಡಿಮೆ, ಮಾತ್ರವಲ್ಲ ಇಲ್ಲವೇ ಇಲ್ಲವೆಂದರೂ ಸಲ್ಲುವಂತಿದೆ.

ವೈದಿಕರಿಗೆ ಸಂಸ್ಕೃತವು ಹೇಗೋ ಹಾಗೆ ದಾಕ್ಷಿಣಾತ್ಯಬೌದ್ಧರಿಗೆ ಪಾಲೀ ಭಾಷೆಯು ಧಾರ್ಮಿಕಗ್ರಂಥಗಳ ಭಾಷೆಯಾಗಿದೆ. ಪಾಲೀಭಾಷೆಯು ಬುದ್ಧನ ಕಾಲದಲ್ಲಿ ಪ್ರಚಾರದಲ್ಲಿರಲಿಲ್ಲವೆಂದು ಕೆಲವರು ; ಅದು ಮಾಗಧೀ ಭಾಷೆಯೆಂದು ಕೆಲವರು ; ಅದರ ರೂಪಾಂತರವೆಂದು ಕೆಲವರು ; ಹೀಗೆ ಬಗೆಬಗೆಯಾಗಿ ಶೋಧಕರು ಅಭಿಪ್ರಾಯಪಡುತ್ತಿದ್ದಾರೆ. ಸಂಸ್ಕೃತನಾಟಕಗಳಲ್ಲಿ ಕಂಡುಬರುವ ಪ್ರಾಕೃತಭಾಷೆಗಳ ಗುಂಪಿಗೆ ಸೇರತಕ್ಕದ್ದಾಗಿರುವ ಈ ಭಾಷೆಯು ಅವುಗಳಂತೆಯೇ ಈಗ ಬರಿಯ ಗ್ರಂಥಸ್ಥಭಾಷೆಯಾಗಿರುತ್ತದೆ. ಸಂಸ್ಕೃತದ ಎಷ್ಟೋ ಶಬ್ದಗಳು ಈ ಭಾಷೆಯಲ್ಲಿ ಸೇರಿಕೊಂಡಿವೆ ; ಮಿಕ್ಕ ಬಹುಭಾಗದ ಶಬ್ದಗಳು ಸಂಸ್ಕೃತದ ತದ್ಭವಗಳಾಗಿರುತ್ತವೆ. ಶುದ್ಧಪಾಲಿಯೆಂದು ಹೇಳಬಹುದಾದ ಶಬ್ದಗಳು ಅತ್ಯಲ್ಪವಾಗಿರುತ್ತವೆ. ಆದ್ದರಿಂದ ಸಂಸ್ಕೃತವನ್ನು ಬಲ್ಲವರು ಈ ಭಾಷೆಯನ್ನು ಬಹು ಬೇಗನೆ ಕಲಿತುಕೊಳ್ಳಬಹು ದಾಗಿರುತ್ತದೆ.

ಪಾಲಿಯಲ್ಲಿರುವ **ತ್ರಿಪಿಟಕಗಳೆಂಬ** ಧರ್ಮಭಾಂಡಾಗಾರವನ್ನು **ಸುತ್ತಪಿಟಕ** (ಸೂತ್ರಪಿಟಕ), **ವಿನಯಪಿಟಕ, ಅಭಿಧಮ್ಮಪಿಟಕ** (ಅಭಿಧರ್ಮಪಿಟಕ)ವೆಂದು ಮೂರು ಭಾಗವಾಗಿ ವಿಂಗಡಿಸಬಹುದು. ಸೂತ್ರಪಿಟಕದಲ್ಲಿ ದೀಘ (ದೀರ್ಘ) ನಿಕಾಯ, ಮಜ್ಝಿಮ (ಮಧ್ಯಮ) ನಿಕಾಯ, ಸಂಯುತ್ತ (ಸಂಯುಕ್ತ) ನಿಕಾಯ, ಅಂಗುತ್ತರ ನಿಕಾಯ, ಖುದ್ದಕನಿಕಾಯ (ಕ್ಷುದ್ರಕನಿಕಾಯ) - ಎಂಬ ಐದು ವಿಭಾಗಗಳಿವೆ. ಹೀಗೆಯೇ ವಿನಯಪಿಟಕದಲ್ಲಿ ಮೂರು ಭಾಗಗಳಿವೆ, ಅಭಿಧರ್ಮ ಪಿಟಕದಲ್ಲಿ ಏಳು ಗ್ರಂಥಗಳಿವೆ. ಈಗ ನಾವು ಕನ್ನಡಿಸಿರುವ ಧಮ್ಮಪದವು ಸೂತ್ರಪಿಟಕದ ವಿಭಾಗವಾದ ಖುದ್ದಕನಿಕಾಯದಲ್ಲಿ ಸೇರಿರುವ ಹದಿನೈದು ಗ್ರಂಥಗಳಲ್ಲಿ ಒಂದೆಂದು ಬೌದ್ಧರು ಹೇಳುತ್ತಾರೆ.

ತ್ರಿಪಿಟಕವೆಲ್ಲ ಬುದ್ಧನ ವಚನವೆಂದು ಬೌದ್ಧರು ಹೇಳುತ್ತಾರಾದರೂ ಬುದ್ಧನ ಕಾಲದಲ್ಲಿ ಅಥವಾ ಅವನ ಪರಿನಿರ್ವಾಣವಾದ ಮೇಲೆ ಈ ಗ್ರಂಥಗಳನ್ನು

ಬರೆದಿರಬೇಕೆಂದು ಅನೇಕ ಕಾರಣಗಳಿಂದ ಹೇಳಬಹುದಾಗಿರುತ್ತದೆ. ಎಷ್ಟೋ ಗ್ರಂಥಗಳ ಪ್ರಾರಂಭದಲ್ಲಿ ''ಹೀಗೆಂದು ನಾನು ಕೇಳಿದೆನು'' (ಏವಂ ಮೇ ಶ್ರುತಮ್) ಎಂಬುದೊಂದು ಪಲ್ಲವಿಯು ಕಂಡುಬರುತ್ತದೆ. ಇದರ ನಿಜವು ಹೇಗಾದರೂ ಇರಲಿ. ಪ್ರಕೃತದಲ್ಲಿ ನಾವು ಕನ್ನಡಕ್ಕೆ ತಂದಿರುವ ಧಮ್ಮಪದದಲ್ಲಿರುವ ಎಷ್ಟೋ ''ಗಾಥೆ'' (ಶ್ಲೋಕ)ಗಳು ಬೇರೆ ಬೌದ್ಧಗ್ರಂಥಗಳಲ್ಲಿಯೂ ದೊರೆಯುತ್ತಿರುವವು. ಆದ್ದರಿಂದ ಈ ಗ್ರಂಥವು ಭರ್ತೃಹರಿಯ ಸುಭಾಷಿತವೇ ಮುಂತಾದ ಗ್ರಂಥಗಳ ಹಾಗೆ ಮೊದಲು ಬೇರೆ ಬೇರೆ ಕಡೆಯಿಂದ ಸಂಕಲಿತವಾಗಿದ್ದು ಈಚೆಗೆ ಖುದ್ದಕನಿಕಾಯದಲ್ಲಿ ಸೇರಿದ ಗ್ರಂಥವೆಂದು ಪರಿಗಣಿತವಾಯಿತೆಂತ ತೋರುತ್ತದೆ.

ಧಮ್ಮಪದವು ಬೌದ್ಧರಲ್ಲಿ ಬಹಳ ಪೂಜ್ಯವಾದ ಸ್ಥಾನವನ್ನು ಹೊಂದಿರುತ್ತದೆ. ಬೌದ್ಧಭಿಕ್ಷುಗಳು ಇದನ್ನು ಕಂಠಪಾಠಮಾಡಿಯೇ ತೀರುತ್ತಾರೆ. ನಮ್ಮ ದೇಶದಲ್ಲಿ ಭಗವದ್ಗೀತೆಯ ಶ್ಲೋಕಗಳನ್ನು ಸಂಭಾಷಣೆಯಲ್ಲಿಯೂ ಉಪನ್ಯಾಸದಲ್ಲಿಯೂ ಹೇಗೆ ಅಲ್ಲಲ್ಲಿ ಉದಾಹರಿಸುವರೋ ಅದರಂತೆ ಧಮ್ಮಪದದ ಗಾಥೆಗಳನ್ನೂ ಆಗಾಗ್ಗೆ ಬೌದ್ಧರು ಉದಾಹರಿಸುತ್ತಿರುತ್ತಾರೆ. ಭಗವದ್ಗೀತೆಯಂತೆಯೇ ಇದು ಪ್ರಪಂಚದ ಮುಖ್ಯಭಾಷೆಗಳಿಗೆಲ್ಲ ಪರಿವರ್ತನೆಯಾಗಿರುತ್ತದೆ. ಇದನ್ನು ಬೌದ್ಧರ ಭಗವದ್ಗೀತೆ ಅಥವಾ 'ಬುದ್ಧಗೀತೆ' ಎಂದು ಕರೆದರೆ ತಪ್ಪಾಗದು. ಬುದ್ಧಗೀತೆಯೆಂಬ ಹೆಸರಿನಿಂದಲೇ ಇದನ್ನು ಆಗಲೆ ಅನೇಕರು ಪರಿವರ್ತಿಸಿಯೂ ಇರುತ್ತಾರೆ. ಈ ಗ್ರಂಥದಲ್ಲಿರುವ ಕೆಲವು ಗಾಥೆಗಳು ಸಂಸ್ಕೃತರೂಪದಲ್ಲಿ ಮಹಾಭಾರತದಲ್ಲಿಯೂ ಮನುಸ್ಮೃತಿಯಲ್ಲಿಯೂ ಕಂಡುಬರುತ್ತವೆ. ಬೌದ್ಧಧರ್ಮವು ಹುಟ್ಟುವದಕ್ಕೆ ಮೊದಲೇ ಆರ್ಯರಲ್ಲಿ ಹರಡಿಕೊಂಡಿದ್ದ ಎಷ್ಟೋ ನೀತಿವಚನಗಳನ್ನು ಇಲ್ಲಿ ಸೇರಿಸಿದೆಯೆಂಬುದು ಇದರಿಂದ ವ್ಯಕ್ತವಾಗುತ್ತದೆ. ಧಮ್ಮಪದವೆಂಬ ಮಾತಿಗೆ 'ಧರ್ಮವನ್ನು ತಿಳಿಸುವ ವಚನ' ಎಂದೇ ಅರ್ಥವೆಂದು ತೋರುತ್ತದೆ ; ಚೈನಭಾಷೆಯಲ್ಲಿ ಇದಕ್ಕೆ ಈ ಅರ್ಥವನ್ನೇ ಮಾಡಿದೆಯಂತೆ.*

ಧಮ್ಮಪದವನ್ನು ಇಪ್ಪತ್ತಾರು ವರ್ಗಗಳಾಗಿ ವಿಂಗಡಿಸಿರುತ್ತದೆ.† ಒಂದೊಂದು ವರ್ಗದಲ್ಲಿ ಕೆಲವು ಗಾಥೆಗಳು ಅಥವಾ ಶ್ಲೋಕಗಳು ಇವೆ. ವರ್ಗಗಳನ್ನು ಒಂದು

---

* Texts from the Buddhist Canon by Samul Beal. .

† ಶ್ರೀಯುತ ಸ್ಯಾಮ್ಯುಯೆಲ್ ಬೀಲ್‌ರವರು ಇಂಗ್ಲಿಷಿಗೆ ಪರಿವರ್ತಿಸಿರುವ ಚೈನ ಧಮ್ಮಪದದಲ್ಲಿ ಮೂವತ್ತೊಂಬತ್ತು ವರ್ಗಗಳಿವೆ. ಇದರಲ್ಲಿ ಪಾಲಿಗ್ರಂಥದ ೨೬ ವರ್ಗಗಳೂ ಅಡಕವಾಗಿವೆ. ಧಮ್ಮಪದ ಎಂಬ ಹೆಸರಿನಿಂದ ಅನೇಕ ಸಂಗ್ರಹಗಳಾಗಿದ್ದವೆಂಬುದು ತೋರುತ್ತದೆ.

ಕ್ರಮದಲ್ಲಿ ಜೋಡಿಸಿರುವದಿಲ್ಲ. ವರ್ಗಗಳಿಗೆ ಕೊಟ್ಟಿರುವ ಹೆಸರು ಗಾಥೆಗಳಲ್ಲಿ ವಿಶೇಷವಾಗಿ ಬಂದಿರುವ (ಪುಷ್ಪ, ಸಹಸ್ರ) ಮುಂತಾದ ಒಂದೊಂದು ಮಾತಿನ ಆಧಾರದ ಮೇಲೆ ಬಂದಿರುತ್ತದೆಯೇ ಹೊರತು ಮತ್ತೇನೂ ವಿಶೇಷಕಾರಣದಿಂದಲ್ಲ ; ಕೆಲವು ಗಾಥೆಗಳನ್ನು ಎರಡೆರಡು ಸಲ ಕೊಟ್ಟಿರುತ್ತದೆ. ಸಂಸ್ಕೃತದ ಸುಭಾಷಿತಗಳನ್ನು ಓದಿರುವವರಿಗೆ ಗ್ರಂಥದ ಶೈಲಿಯು ಸ್ವಾಭಾವಿಕವಾಗಿಯೇ ಕಾಣುತ್ತದೆ.

೩

ಧಮ್ಮಪದವನ್ನು ಕೆಲವು ವರ್ಷಗಳ ಹಿಂದೆ ಕೈಲಾಸವಾಸಿಗಳಾದ ಬಿ. ಅಶ್ವತ್ಥನಾರಾಯಣಶಾಸ್ತ್ರಿಗಳವರು ಕನ್ನಡಕ್ಕೆ ಅನುವಾದಮಾಡಿದ್ದರು. ಆ ಅನುವಾದವು ಪಾಲಿಯಿಂದಲೇ ನೇರಾಗಿ ಮಾಡಿದ್ದೆಂತ ತೋರುವದಿಲ್ಲ. ಅದರಲ್ಲಿ ಪ್ರತಿಯೊಂದು ಪುಟದಲ್ಲಿಯೂ ವೈದಿಕಗ್ರಂಥಗಳಿಂದ - ಎಂದರೆ ಉಪನಿಷತ್ತುಗಳು, ಭಾರತ, ಸ್ಮೃತಿ, ಗೀತೆ - ಮುಂತಾದವುಗಳಿಂದ ಆರಿಸಿದ ಕೆಲವು ಉದಾಹರಣೆಗಳನ್ನು ಸಮಾನಾರ್ಥಕವೆಂದು ಕೊಡಲಾಗಿದ್ದಿತು. ಅದ್ವೈತವೇದಾಂತಕ್ಕೂ ಬೌದ್ಧಮತಕ್ಕೂ ಸಿದ್ಧಾಂತದಲ್ಲಿ ಯಾವ ತಾರತಮ್ಯವೂ ಇಲ್ಲವೆಂದೂ ಬೌದ್ಧನು ಮಾಡಿದ್ದ ಉಪದೇಶಗಳನ್ನೇ ಕಾಲಾಂತರದಲ್ಲಿ ಶಂಕರಾಚಾರ್ಯರೂ ಮಾಡಿದರೆಂದೂ ಅನುವಾದಕರು ತಮ್ಮ ಪೀಠಿಕೆಯಲ್ಲಿ ಬರೆದಿದ್ದರು. ನಾನು ಮೊದಲನೆಯ ಸಲ ಆ ಅನುವಾದವನ್ನು ಓದಿದಾಗ, ಎಂದರೆ ಸುಮಾರು ಮೂವತ್ತು ವರ್ಷಗಳ ಹಿಂದೆ, ನನಗೆ ಅನುವಾದಕರ ಅಭಿಪ್ರಾಯವು ಸರಿಯೆಂದೇ ತೋರಿತು ; ಅಮರಕೋಶದಲ್ಲಿ ಬುದ್ಧದೇವನಿಗೆ 'ಅದ್ವಯವಾದಿ' ಎಂಬ ಹೆಸರಿಟ್ಟಿರುವದನ್ನು ಕಂಡು ಮಾಯಾದೇವಿಯ ಮಗನಾದ ಬುದ್ಧನು ಉಪದೇಶಿಸಿದ ಸಿದ್ಧಾಂತವು ಅದ್ವೈತವೂ ಮಾಯಾವಾದವೂ ಆಗಿರುವದರಲ್ಲಿ ಆಶ್ಚರ್ಯವೇನೂ ಇಲ್ಲವೆಂದು ಕೂಡ ನಾನು ಒಮ್ಮೆ ಅಭಿಪ್ರಾಯಪಟ್ಟಿದ್ದೆನು. ಶಂಕರಾಚಾರ್ಯರನ್ನು ಪ್ರಚ್ಛನ್ನಬೌದ್ಧರೆಂದು ಮತಾಂತರದವರು ಕರೆಯುವದಕ್ಕೆ ಇದೇ ಕಾರಣವಿರಬಹುದೆಂದೂ ನನಗೆ ಆಗ ಅನಿಸಿತ್ತು. ಆದರೆ ಕುತೂಹಲದಿಂದ ಬೌದ್ಧಲೇಖನಗಳನ್ನು ನೋಡುತ್ತನೋಡುತ್ತ ಬಂದಹಾಗೆಲ್ಲ ಈ ನನ್ನ ಅಭಿಪ್ರಾಯವು ಕನಸಿನಂತೆ ಕರಗಿಹೋಗಿ ಅನಾತ್ಮವಾದವನ್ನು ಹೇಳುವ ಬೌದ್ಧಮತಕ್ಕೂ ಸರ್ವಾತ್ಮವಾದವನ್ನು ಹೇಳುವ ಅದ್ವೈತಕ್ಕೂ ಯಾವ ದೊಂದು ಸಾಮ್ಯವೂ ಇರುವದು ಸಾಧ್ಯವಿಲ್ಲವೆಂದು ನಿಶ್ಚಿತವಾಯಿತು. ಬುದ್ಧನು ಕೂಡ ಮೊದಲು ಆತ್ಮವಾದವನ್ನೇ ಇಟ್ಟುಕೊಂಡಿದ್ದನೆಂದು ಕಲವರು ಶೋಧಕರು ಈಚೆಗೆ ಊಹಿಸುತ್ತಿದಾರೆಯಾದರೂ ಬೌದ್ಧಗ್ರಂಥಗಳಲ್ಲಿಯಾಗಲಿ ವೇದಾಂತಗ್ರಂಥಗಳಲ್ಲಿ ಯಾಗಲಿ ಈ ಅಭಿಪ್ರಾಯಕ್ಕೆ ಯಾವದೊಂದು ಆಧಾರವೂ ದೊರಕಿರುವದಿಲ್ಲ ;

ಇಷ್ಟೇ ಅಲ್ಲ, ಬೌದ್ಧರಿಗೂ ವೇದಾಂತಿಗಳಿಗೂ ಆಗಿರುವ ವಾದಗಳೆಲ್ಲ ಆತ್ಮವಿಷಯ ವಾಗಿಯೇ ಉಂಟಾಗಿರುತ್ತವೆಯೆಂಬುದು ಅತ್ಯಂತವಾಗಿ ಸ್ಫುಟವಾಗಿರುತ್ತದೆ.

ಈ ನನ್ನ ಅಭಿಪ್ರಾಯವನ್ನು ಸ್ಪಷ್ಟಗೊಳಿಸುವದಕ್ಕಾಗಿ ಕೆಲವು ಪ್ರಧಾನವಾದ ಬೌದ್ಧಗ್ರಂಥಗಳನ್ನು ಕನ್ನಡಿಸಬೇಕೆಂಬ ಸಂಕಲ್ಪವನ್ನು ನಾಲ್ಕಾರು ವರ್ಷಗಳ ಹಿಂದೆಯೇ ಮಾಡಿಕೊಂಡೆನು. ಧಮ್ಮಪದವನ್ನು ಕನ್ನಡಿಸಿ ಮೂರು ವರ್ಷವಾದರೂ ಮುದ್ರಿಸುವವಕ್ಕೆ ತಕ್ಕ ಅನುಕೂಲವಿಲ್ಲದೆ ಅದರ ಪ್ರಕಟನೆಯನ್ನು ಸ್ವಲ್ಪ ತಡಮಾಡಬೇಕಾಯಿತು. ಈಚೆಗೆ ಶ್ರೀಯುತ ಜಿ.ಪಿ. ರಾಜರತ್ನಂ, ಎಂ.ಎ. - ಇವರು ''ಸುಬೋಧ'' ಪತ್ರಿಕೆಯಲ್ಲಿ ಇದೇ ಗ್ರಂಥದ ಪರಿವರ್ತನೆಯನ್ನು ಅನುವಾದ ಮಾಡಿದ್ದನ್ನು ಕಂಡೆನು. ನನ್ನ ಭಾಷಾಂತರವು ಹೊರಕ್ಕೆ ಬರುವದು ಈಗಲೂ ಅಗತ್ಯವೆ ? ಎಂದು ಯೋಚಿಸಲಾರಂಭಿಸಿದೆನು. ಆದರೆ ಶ್ರೀಯುತರವರು ಕನ್ನಡಿಸಿರುವ ಕ್ರಮವೂ ಅದನ್ನು ಅವರು ಪ್ರಕಟಿಸಿರುವದರಲ್ಲಿ ಅವರ ದೃಷ್ಟಿಕೋನವೂ ನನ್ನ ಕ್ರಮ, ದೃಷ್ಟಿಕೋನ - ಇವುಗಳಿಗಿಂತ ತೀರ ಬೇರೆಯಾಗಿರುವದೆಂದು ನಿಶ್ಚಿತವಾದ ಮೇಲೆ ನನ್ನ ಅನುವಾದವನ್ನು ಅಚ್ಚಿಗೆ ಕೊಟ್ಟೆನು.

ಈ ಅನುವಾದದಲ್ಲಿ (೧) ಧಮ್ಮಪದ (ದೇವನಾಗರಿಯಲ್ಲಿ) ಮೂಲ, ಶ್ರೀಯುತ ಎನ್. ಜಿ. ಪಿಂಗಲೆ ಬಿ.ಎ. ರವರು ಪ್ರೊಫೆಸರ್ ಧರ್ಮಾನಂದ ಕೋಶಾಂಬಿ ಎಂಬವರ ಸಹಾಯದಿಂದ ಪೂನದಲ್ಲಿ ಪ್ರಕಟಿಸಿದ್ದು ; (೨) ಧಮ್ಮಪದ (ದೇವನಾಗರಿಯಲ್ಲಿ) ಮೂಲ, ಇಂಗ್ಲಿಷ್ ಪೀಠಿಕೆ, ಭಾಷಾಂತರ, ಟಿಪ್ಪಣಿಸಹಿತ, ಡಾಕ್ಟರ್ ಪಿ. ಎಲ್. ವೈದ್ಯ ಇವರು ಪೂನದಲ್ಲಿ ಪ್ರಕಟಿಸಿದ್ದು ; (೩) ಧಮ್ಮಪದ (ದೇವನಾಗರಿಯಲ್ಲಿ) ಮೂಲ, ಸಂಸ್ಕೃತಛಾಯಾ ಹಿಂದೀ ಅನುವಾದಸಹಿತ, ಮಹಾಪಂಡಿತ ತ್ರಿಪಿಟಿಕಾಚಾರ್ಯ ರಾಹುಲ ಸಾಂಕೃತ್ಯಾಯನರು ಪ್ರಯಾಗದಲ್ಲಿ ಪ್ರಕಟಿಸಿದ್ದು ; (೪) Dhammapada or Way of Truth ಶ್ರೀಶಿಲಾಚಾರ (ಭಿಕ್ಕು) - ಇವರು ಲಂಡನ್ನಿನಲ್ಲಿ ಪ್ರಕಟಿಸಿದ್ದು (೫) The Buddha's Path of Virtue ಶ್ರೀಯುತ ಎಫ್.ಎಲ್. ವುಡ್‌ವಾರ್ಡ್ ಎಮ್.ಎ.ರವರು ಮದರಾಸಿನಲ್ಲಿ ಪ್ರಕಟಿಸಿದ್ದು - ಈ ಐದು ಗ್ರಂಥಗಳ ನೆರವನ್ನು ಮುಖ್ಯವಾಗಿ ಪಡೆದಿರುತ್ತೇನೆ. ಮಿಕ್ಕ ಗ್ರಂಥಗಳಿಂದಲೂ ಅಲ್ಪಸ್ವಲ್ಪ ಸಹಾಯವಾಗಿರುತ್ತದೆ. ಮುಖ್ಯವಾಗಿ ಸಾಂಕೃತ್ಯಾಯನರ ಪರಿವರ್ತನೆಯಿಂದಲೂ ಪೂನಾದ ಪರಿವರ್ತನೆಗಳಿಂದಲೂ ನನಗೆ ತುಂಬ ಸಹಾಯವಾಗಿರುತ್ತದೆಯಾಗಿ ಆ ಗ್ರಂಥಗಳ ಪ್ರಕಾಶಕರಿಗೆ ನಾನು ತುಂಬ ಕೃತಜ್ಞನಾಗಿರುತ್ತೇನೆ.

ಮೂಲದ ಅಕ್ಷರಾರ್ಥವನ್ನು ಕೊಡಬೇಕೆಂಬ ದೃಷ್ಟಿಯಿಂದ ಪಾಲಿಯನ್ನು

ಕನ್ನಡಿಸಿಲ್ಲವಾದ್ದರಿಂದ ಮೂಲದ ಛಾಯೆಯನ್ನೇ ಅನುಸರಿಸುವ ಕಷ್ಟಕ್ಕೆ ಬೀಳ ಬೇಕಾದ ಸಂಭವವು ಒದಗಲಿಲ್ಲ. ಮೂಲದಲ್ಲಿ ಕೊಟ್ಟಿರುವ ಕೆಲವು ಪದಗಳು ಬೌದ್ಧರಲ್ಲಿ ಪಾರಿಭಾಷಿಕವಾಗಿವೆಯೆಂಬುದನ್ನು ಸೂಚಿಸುವದಕ್ಕಾಗಿ ಅವುಗಳನ್ನು ದಪ್ಪಕ್ಷರದಲ್ಲಿಟ್ಟು ಟಿಪ್ಪಣಿಯಲ್ಲಿ ಅವನ್ನು ಸಂಕ್ಷೇಪವಾಗಿ ವಿವರಿಸಿ ಅಂಥ ಶಬ್ದಗಳ ಸೂಚಿಯೊಂದನ್ನು ಗ್ರಂಥದ ಕೊನೆಯಲ್ಲಿ ಕೊಟ್ಟಿರುತ್ತೇನೆ. ವೈದಿಕಧರ್ಮದ ವಿಚಾರವು ನಮ್ಮ ದೇಶದಲ್ಲಿ ಪ್ರಚಾರವಾಗಿಯೇ ಇರುವದರಿಂದ ಆ ದೃಷ್ಟಿಯಿಂದ ನೋಡಿದರೆ ಮೂಲದಲ್ಲಿ ಯಾವಯಾವ ವಿವರವು ಅಗತ್ಯವೆಂದು ತೋರಿತೋ ಅದನ್ನೆಲ್ಲ ಸಂಗ್ರಹಿಸಿರುತ್ತೇನೆ. ಅನುವಾದವು ನನಗೆ ಸರಿಯಾಗಿ ತಿಳಿಯದೆಯೂ ನಾನು ನಂಬಿರುವ ಬೇರೆ ಬೇರೆ ಗ್ರಂಥಗಳಲ್ಲಿ ಭಿನ್ನಾಭಿಪ್ರಾಯದಿಂದ ವಾದಗ್ರಸ್ತ ವಾಗಿಯೂ ಇದ್ದ ಕಡೆಯಲ್ಲಿ ಟಿಪ್ಪಣಿಯಲ್ಲಿ ಆಯಾ ಮತಭೇದವನ್ನು ಸಂಕ್ಷೇಪವಾಗಿ ತಿಳಿಸಿರುತ್ತೇನೆ. ಪರಿಶಿಷ್ಟದಲ್ಲಿ ವೇದಾಂತಕ್ಕೂ ಬೌದ್ಧದರ್ಶನಕ್ಕೂ ಇರುವ ತಾರತಮ್ಯವನ್ನು ಸ್ವಲ್ಪದರಲ್ಲಿಯೇ ಸ್ಫುಟವಾಗಿ ತೋರುವಂತೆ ಬರೆದಿರುತ್ತೇನೆ ; ವೇದಾಂತಿಗಳು ಮುಂದಕ್ಕೆ ತಂದಿರುವ ಅವಸ್ಥಾತ್ರಯ ದೃಷ್ಟಿ, ಸಾಕ್ಷಿಚೈತನ್ಯವಾದ - ಇವೆರಡೂ ಬೌದ್ಧದರ್ಶನದಲ್ಲಿ ತಿಲಮಾತ್ರವೂ ಕಂಡುಬಾರದೆ ಇರುವದರಿಂದ ಈ ಎರಡು ದರ್ಶನಗಳು ಅತ್ಯಂತಭಿನ್ನಪ್ರಸ್ಥಾನಗಳಾಗಿವೆಯೆಂಬುದು ಈ ಪರಿಶಿಷ್ಟದಿಂದ ಸ್ಪಷ್ಟಪಡುವಂತಿದೆ.* ನೀತ್ಯುಪದೇಶದಲ್ಲಿ ಹಿಂದೂಮತವೂ ಬೌದ್ಧಮತವೂ ಒಂದೇ ಮರದಲ್ಲಿ ಒಡೆದುಕೊಂಡಿರುವ ಎರಡು ಕೊಂಬೆಗಳಂತೆ ಕಾಣುತ್ತವೆ ; ಆದ್ದರಿಂದ ಈ ವಿಷಯದಲ್ಲಿ ಅನೇಕ ಸಾಮ್ಯಗಳಿರುವದು ಸ್ವಾಭಾವಿಕವಾಗಿರುತ್ತದೆ. ಇಂಥ ಸಾಮ್ಯವನ್ನು ತೋರಿಸುವ ಸಮಾನಾರ್ಥಕವಚನಗಳ ಪಟ್ಟಿಯೊಂದನ್ನು ಪರಿಶಿಷ್ಟದಲ್ಲಿ ಕೊಟ್ಟಿರುತ್ತೇನೆ. ಈ ವಚನಗಳಲ್ಲಿ ಕೆಲವನ್ನು ನಾನು ಮೊಟ್ಟಮೊದಲನೆಯ ಸಲ ಹುಡುಕಿ ತೆಗೆದಿರುತ್ತೇನೆ ; ಇನ್ನೂ ಇಂಥ ಅನೇಕ ವಚನಗಳು ಮಹಾಭಾರತ ದಲ್ಲಿಯೂ ಪುರಾಣಗಳಲ್ಲಿಯೂ ಹುದುಗಿರುವವೆಂದು ನನ್ನ ದೃಢವಿಶ್ವಾಸವಿರುತ್ತದೆ. ಇಂಥ ವಚನಗಳನ್ನು ಕಂಡುಕೊಂಡಹಾಗೆಲ್ಲ ಬೌದ್ಧಧರ್ಮದಲ್ಲಿ ವೈದಿಕರಿಗೆ ಹೆಚ್ಚು ಹೆಚ್ಚು ಸಹಾನುಭೂತಿಯುಂಟಾಗುವದರಲ್ಲಿ ಸಂದೇಹವಿಲ್ಲ.

* ಗೌತಮಬುದ್ಧನ ಜೀವನಚರಿತೆಯನ್ನೂ ಉಪದೇಶಗಳನ್ನೂ ಮತ್ತೊಂದು ಗ್ರಂಥದಲ್ಲಿ ನಾನು ಪ್ರಕಟಿಸಬೇಕೆಂದಿರುವೆನು. ಅವಕಾಶವು ದೊರೆತರೆ ಆಗ ಈ ದರ್ಶನಗಳ ತಾರತಮ್ಯವನ್ನು ಮತ್ತಷ್ಟು ಸ್ಫುಟವಾಗಿ ತೋರಿಸಿಕೊಡಬೇಕೆಂದಿರುತ್ತೇನೆ. ಬುದ್ಧನ ಉಪದೇಶಗಳಲ್ಲಿ ಕೆಲವು ನಮ್ಮಲ್ಲಿ ಪ್ರಚಾರವಾಗಿರುವ ಯೋಗದರ್ಶನದ ತತ್ತ್ವಗಳನ್ನು ಒಳಗೊಂಡಿರುವಂತೆ ಥಕ್ಕನೆ ತೋರಿದರೂ ನಿಜವಾಗಿ ಅಲ್ಲಿಯೂ ಬಹುಮುಖ್ಯವಾದ ತಾರತಮ್ಯಗಳಿರುವವು. ಅವುಗಳನ್ನೂ ಬುದ್ಧನ ಜೀವನಚರಿತೆಯಲ್ಲಿಯೇ ಸ್ಪಷ್ಟಪಡಿಸುವದಕ್ಕೆ ಪ್ರಯತ್ನಮಾಡುವೆನು.

ಧಮ್ಮಪದದಲ್ಲಿ ಕೆಲಕೆಲವು ಗಾಥೆಗಳನ್ನು ಕೆಲಕೆಲವು ಸಂದರ್ಭಗಳಲ್ಲಿ ಬುದ್ಧನು ಹೇಳಿದನೆಂದು ವರ್ಣಿಸುವದು ಬೌದ್ಧರ ಸಂಪ್ರದಾಯವಾಗಿದೆ. ಧಮ್ಮ ಪದಕ್ಕೆ ಬುದ್ಧಘೋಷನು ಬರೆದದ್ದೆಂದು ಪ್ರಸಿದ್ಧವಾಗಿರುವ ಅಟ್ಟಕಥಾ (ಅರ್ಥ ಕಥಾ) ಎಂಬ ಒಂದು ವಿಸ್ತಾರವಾದ ವ್ಯಾಖ್ಯಾನವಿದೆ. ಯಾವ ಯಾವ ಗಾಥೆಗಳನ್ನು ಎಲ್ಲಿ ಯಾವ ಸಂದರ್ಭದಲ್ಲಿ ಯಾರಿಗೆ ಬುದ್ಧನು ಹೇಳಿದನೆಂಬುದನ್ನು ಈ ವ್ಯಾಖ್ಯಾನದಲ್ಲಿ ವಿವರಿಸಿರುತ್ತದೆ. ಭಗವದ್ಗೀತೆಯ ಶ್ಲೋಕಗಳೇ ಸಾಕ್ಷಾತ್ತಾಗಿ ಶ್ರೀಕೃಷ್ಣನ ಮುಖದಿಂದ ಬಂದವೆಂದು ನಂಬುವ ಕೆಲವರು ಹಿಂದುಗಳ ವಿಶ್ವಾಸಕ್ಕೆ ಇಲ್ಲೊಂದು ಸಮಾನದೃಷ್ಟಾಂತವಿದೆಯೆಂದು ಹೇಳಬಹುದು. ಇದಿರಲಿ. ಮೊದಲು ಪಾಲಿಯಲ್ಲಿ ಬರೆದಿದ್ದ ಧಮ್ಮಪದವು ಭರತಖಂಡದಲ್ಲಿಯೇ ಅಸ್ತವಾಗಲು ಅನೂರಾಧಪುರಕ್ಕೆ ಹೋಗಿದ್ದ ಬುದ್ಧಘೋಷನು ಸಿಂಹಳಭಾಷೆಯಿಂದ ಅದನ್ನು ಮತ್ತೆ ಪಾಲಿಗೆ ತಿರುಗಿಸಿದನೆಂದೂ ಈಗ ಸಿಂಹಳಭಾಷೆಯ ಮೂಲವೂ ಸಿಕ್ಕುವಹಾಗಿಲ್ಲ ವೆಂದೂ ಹೇಳುತ್ತಾರೆ. ಈ ಕಥೆಯು ಎಷ್ಟು ಮಟ್ಟಿಗೆ ವಿಶ್ವಾಸಾರ್ಹವೋ ಹೇಳುವದಕ್ಕೆ ಬರುವದಿಲ್ಲ ; ಆದರೂ ಬುದ್ಧಘೋಷನು ಬೌದ್ಧಮತವನ್ನು ಪುನಃಪ್ರತಿಷ್ಠೆ ಮಾಡಿದವನೆಂಬ ಗೌರವಕ್ಕೆ ಪಾತ್ರನಾಗಿರುವದರಿಂದಲೂ ಸದ್ಯಕ್ಕೆ ಸಿಕ್ಕುವದು ಅವನ ವ್ಯಾಖ್ಯಾನುಸಾರವಾದ ಪಾಠವೇ ಆಗಿರುವದರಿಂದಲೂ ಟಿಪ್ಪಣಿಯಲ್ಲಿ ಅಲ್ಲಲ್ಲಿ ವ್ಯಾಖ್ಯಾನುಸಾರವಾದ ವಿಶೇಷವನ್ನು ಸೂಚಿಸಿರುತ್ತೇನೆ. ಸಂದರ್ಭವನ್ನೆಲ್ಲ ವಿವರಿಸದೆ ಗಾಥೆಯನ್ನು ಹೇಳಿದ ಸ್ಥಳ, ಯಾರಿಗೆ ಹೇಳಿದ್ದು - ಇವೆರಡನ್ನು ಮಾತ್ರ ಕೊಡುವದರಿಂದ ಯಾವ ಪ್ರಯೋಜನವೂ ಕಾಣಲಿಲ್ಲವಾದ್ದರಿಂದ ಸಂಗ್ರಹವಾಗಿ ಬರೆದಿರುವ ಈ ಗ್ರಂಥದಲ್ಲಿ ಅದರ ಗೋಜಿಗೆ ಹೋಗಲಿಲ್ಲ.

ಬೌದ್ಧಧರ್ಮವು ಮೂಲರೂಪದಲ್ಲಿ ಹೇಗಿರುವದೆಂಬುದನ್ನು ತಿಳಿಯಬೇಕೆನ್ನು ವವರಿಗೂ ವೇದಾಂತಕ್ಕೂ ಬೌದ್ಧದರ್ಶನಕ್ಕೂ ಇರುವ ಸಾಮ್ಯ ವೈಷಮ್ಯಗಳನ್ನು ತಿಳಿಯಬೇಕೆನ್ನುವವರಿಗೂ ಈ ಚಿಕ್ಕ ಪುಸ್ತಕವು ವಿಷಯ ಪ್ರವೇಶಿಕೆಯಾಗಿ ಪರಿಣಮಿ ಸಿದರೆ ನನ್ನ ಶ್ರಮವು ಸಾರ್ಥಕವೆಂದು ಭಾವಿಸುವೆನು.

**ಚಾಮರಾಜಪೇಟೆ**

29.10.1935

**ಅನುವಾದಕ**

# ವಿಷಯಾನುಕ್ರಮಣಿಕೆ


| | | ಗಾಥೆಗಳ ಸಂಖ್ಯೆ | ಪುಟ |
|---|---|---|---|
| | ಪ್ರವೇಶಿಕೆ | | |
| ೧ | ಯಮಕವರ್ಗ | ೨೦ | ೧ |
| ೨ | ಅಪ್ರಮಾದವರ್ಗ | ೧೨ | ೭ |
| ೩ | ಚಿತ್ತವರ್ಗ | ೧೧ | ೧೦ |
| ೪ | ಪುಷ್ಪವರ್ಗ | ೧೬ | ೧೩ |
| ೫ | ಬಾಲವರ್ಗ | ೧೬ | ೧೭ |
| ೬ | ಪಂಡಿತವರ್ಗ | ೧೪ | ೨೧ |
| ೭ | ಅರ್ಹನ್ತವರ್ಗ | ೧೦ | ೨೫ |
| ೮ | ಸಹಸ್ರವರ್ಗ | ೧೬ | ೨೮ |
| ೯ | ಪಾಪವರ್ಗ | ೧೩ | ೩೨ |
| ೧೦ | ದಂಡವರ್ಗ | ೧೭ | ೩೬ |
| ೧೧ | ಜರಾವರ್ಗ | ೧೧ | ೪೦ |
| ೧೨ | ಆತ್ಮವರ್ಗ | ೧೦ | ೪೨ |
| ೧೩ | ಲೋಕವರ್ಗ | ೧೨ | ೪೫ |
| ೧೪ | ಬುದ್ಧವರ್ಗ | ೧೮ | ೪೮ |
| ೧೫ | ಸುಖವರ್ಗ | ೧೨ | ೫೨ |
| ೧೬ | ಪ್ರಿಯವರ್ಗ | ೧೨ | ೫೫ |
| ೧೭ | ಕ್ರೋಧವರ್ಗ | ೧೪ | ೫೮ |
| ೧೮ | ಮಲವರ್ಗ | ೨೧ | ೬೨ |
| ೧೯ | ಧರ್ಮಸ್ಥವರ್ಗ | ೧೭ | ೬೭ |
| ೨೦ | ಮಾರ್ಗವರ್ಗ | ೧೭ | ೭೧ |
| ೨೧ | ಪ್ರಕೀರ್ಣಕವರ್ಗ | ೧೬ | ೭೫ |
| ೨೨ | ನಿರಯವರ್ಗ | ೧೪ | ೮೦ |
| ೨೩ | ನಾಗವರ್ಗ | ೧೪ | ೮೪ |
| ೨೪ | ತೃಷ್ಣಾವರ್ಗ | ೨೬ | ೮೮ |
| ೨೫ | ಭಿಕ್ಷುವರ್ಗ | ೨೩ | ೯೫ |
| ೨೬ | ಬ್ರಾಹ್ಮಣವರ್ಗ | ೪೧ | ೧೦೦ |

ಪರಿಶಿಷ್ಟ ಪುಟ

೧ ಬೌದ್ಧಮತದ ಸಾರ ೧೧೧
೨ ವೇದಾಂತಕ್ಕೂ ಬೌದ್ಧಮತಕ್ಕೂ ತಾರತಮ್ಯ ೧೧೬
೩ ಧರ್ಮಪದಪಾಳಿಗಾಥೆಗಳೂ
ಸಮಾನಾರ್ಥಕ ಸಂಸ್ಕೃತಶ್ಲೋಕಗಳೂ ೧೧೯
೪ ಶಬ್ದಾನುಕ್ರಮಣಿಕೆ ೧೩೧

## ಓದುಗರಿಗೆ

೧. ಇಲ್ಲಿ ವರ್ಗಗಳ ಹೆಸರನ್ನೂ ನಡುನಡುವೆ ಬರುವ ಪಾರಿಭಾಷಿಕಪದಗಳನ್ನೂ ಓದುವವರ ಸೌಕರ್ಯಕ್ಕಾಗಿ ಸಂಸ್ಕೃತರೂಪದಲ್ಲಿಯೇ ಕೊಟ್ಟಿರುತ್ತದೆ.

೨. ಪಾರಿಭಾಷಿಕಶಬ್ದಗಳನ್ನು ಕಪ್ಪಕ್ಷರದಲ್ಲಿ ಅಚ್ಚುಮಾಡಿಸಿದೆ ; ಇವುಗಳಲ್ಲಿ ಮುಖ್ಯವಾದವುಗಳನ್ನು ಪರಿಶಿಷ್ಟದ ಶಬ್ದಾನುಕ್ರಮಣಿಕೆಯಲ್ಲಿ ವಿವರಿಸಿರುತ್ತದೆ.

೩. ಸಾಂ॥ = ಸಾಂಕೃತ್ಯಾಯನರು ಹಿಂದಿಯಲ್ಲಿ ಬರೆದಿರುವ ಧಮ್ಮಪದ ; ವ್ಯಾ ॥ = ವ್ಯಾಖ್ಯಾನ ; ಪೂ ॥ (೧) = ಪೂನಾದಲ್ಲಿ ಅಚ್ಚಾಗಿರುವ ದೇವನಾಗರಿಯ ಧಮ್ಮಪದ, ಶ್ರೀಯುತ ಪಿಂಗಲೆಯವರ ಟಿಪ್ಪಣಿಯ ಸಮೇತ ; ಪೂ. (೨) ಪೂನಾದಲ್ಲಿ ಡಾ॥ ಪಿ.ಎಲ್. ವೈದ್ಯರವರು ಬರೆದಿರುವ ಟಿಪ್ಪಣಿಯ ಸಮೇತದ ಧಮ್ಮಪದ ; W = Woodward ಎಂಬುವರು ಬರೆದಿರುವ ಇಂಗ್ಲಿಷು ಪದ್ಯಾತ್ಮಕವಾದ ಧಮ್ಮಪದ, ಮದರಾಸಿನಲ್ಲಿ ಪ್ರಕಟವಾದದ್ದು.

೪. ಇಲ್ಲಿ ಪ್ರತಿಯೊಂದು ಪುಟದ ಕೆಳಗೆ ಕೊಟ್ಟಿರುವ ಟಿಪ್ಪಣಿಯೂ ಪರಿಶಿಷ್ಟ ಭಾಗವೂ ಅನುವಾದಕರು ಹೊಸದಾಗಿ ಬರೆದವುಗಳಾಗಿವೆ.

# ಧಮ್ಮಪದ

## ೧. ಯಮಕವರ್ಗ (ಯಮಕವಗ್ಗ)

**ಮನೋಪುಬ್ಬಂಗಮಾ ಧಮ್ಮಾ ಮನೋಸೆಟ್ಠಾ ಮನೋಮಯಾ ;**
**ಮನಸಾ ಚೇ ಪದುಟ್ಠೇನ ಭಾಸತಿ ವಾ ಕರೋತಿ ವಾ,**
**ತತೋ ನಜ್ ದುಕ್ಖಜ್ ಅನ್ವೇತಿ ಚಕ್ಕಂ ವ ವಹತೋ ಪದಜ್** ||೧||

೧. ಧರ್ಮಗಳಿಗೆ* ಮನಸ್ಸೇ ಮುಂದಾಳು, ಅವುಗಳಿಗೆ ಮನಸ್ಸೇ ಒಡೆಯನು, ಅವು ಮನೋಮಯವಾಗಿರುವವು. ಯಾವನಾದರೂ ಬಗ್ಗಡವಾದ ಮನಸ್ಸಿನಿಂದ ಮಾತನಾಡಿದರೆ, ಅಥವಾ ಕೆಲಸಮಾಡಿದರೆ, ಆಗ, ಬಂಡಿಯನ್ನು ಹೊತ್ತೆಳೆಯುವ ಪ್ರಾಣಿಯ ಹೆಜ್ಜೆಯನ್ನು ಗಾಲಿಯು ಹಿಂಬಾಲಿಸುವಂತೆ, ಆತನನ್ನು ದುಃಖವು ಹಿಂಬಾಲಿಸುವದು.

**ಮನೋಪುಬ್ಬಂಗಮಾ ಧಮ್ಮಾ ಮನೋಸೆಟ್ಠಾ ಮನೋಮಯಾ ;**
**ಮನಸಾ ಚೇ ಪಸನ್ನೇನ ಭಾಸತಿ ವಾ ಕರೋತಿ ವಾ**
**ತತೋ ನಜ್ ಸುಖಂ ಅನ್ವೇತಿ ಛಾಯಾ ವ ಅನಪಾಯಿನೀ** ||೨||

೨. ಧರ್ಮಗಳಿಗೆ* ಮನಸ್ಸೇ ಮುಂದಾಳು. ಅವುಗಳಿಗೆ ಮನಸ್ಸೇ ಒಡೆಯನು, ಅವು ಮನೋಮಯವಾಗಿರುವವು. ಯಾವನಾದರೂ ತಿಳಿಯಾದ ಮನಸ್ಸಿನಿಂದ ಮಾತನಾಡಿದರೆ, ಅಥವಾ ಕೆಲಸ ಮಾಡಿದರೆ, ಆಗ, ತನ್ನ ನೆರಳು ಎಡೆಬಿಡದೆ ತನ್ನನ್ನೇ ಹಿಂಬಾಲಿಸುವಂತೆ, ಆತನನ್ನು ಸುಖವು ಹಿಂಬಾಲಿಸುವದು.

**ಅಕ್ಕೋಚ್ಛಿ ಮಜ್, ಅವಧಿ ಮಜ್, ಅಜಿನಿ ಮಜ್, ಅಹಾಸಿ ಮೇ**
**ಯೇ ಚ ತಜ್ ಉಪನಹ್ಯಂತಿ ವೇರಜ್ ತೇಸಜ್ ನ ಸಮ್ಮತಿ** ||೩||

೩. ನನ್ನನ್ನು ಬೈದಿದ್ದಾನೆ, ನನ್ನನ್ನು ಹೊಡೆದಿದ್ದಾನೆ, ನನ್ನನ್ನು

* ಇಲ್ಲಿ ಧರ್ಮವೆಂಬ ಮಾತಿನಲ್ಲಿ ವೇದನಾ, ಸಂಜ್ಞಾ, ಸಂಸ್ಕಾರ - ಈ ಮೂರು **ಸ್ಕಂಧ**ಗಳೂ ಸೇರಿರುವವೆಂದು ವ್ಯಾಖ್ಯಾನದಲ್ಲಿದೆ. ಕಾಯಿಕವಾಚಿಕಮಾನಸಿಕಕರ್ಮಗಳು ಅಥವಾ ಸುಖದುಃಖಾದಿ ಅನುಭವಗಳು ಎಂದು **ಸಾಂಕೃತ್ಯಾಯನರು** ಭಾವಾರ್ಥವನ್ನು ಕೊಟ್ಟಿರುತ್ತಾರೆ.

ಸೋಲಿಸಿದ್ದಾನೆ, ನನ್ನದನ್ನು ಕಸಿದುಕೊಂಡಿದ್ದಾನೆ - ಎಂಬೀ ಚಿಂತೆಯನ್ನು ಯಾರು ಕಟ್ಟಿಕೊಂಡಿರುವರೋ ಅವರ ವೈರವು ಆರುವದಿಲ್ಲ.

**ಅಕ್ಕೊಚ್ಛಿ ಮಜ್, ಅವಧಿ ಮಜ್, ಅಜಿನಿ ಮಜ್, ಅಹಾಸಿ ಮೇ**
**ಯೇ ತಜ್ ನ ಉಪನಹ್ಯಂತಿ ವೇರಜ್ ತೇಸೂಪಸಮ್ಮತಿ** ||೪||

೪. ನನ್ನನ್ನು ಬೈದಿದ್ದಾನೆ, ನನ್ನನ್ನು ಹೊಡೆದಿದ್ದಾನೆ, ನನ್ನನ್ನು ಸೋಲಿಸಿದ್ದಾನೆ, ನನ್ನದನ್ನು ಕಸಿದುಕೊಂಡಿದ್ದಾನೆ - ಎಂಬೀ ಚಿಂತೆಯನ್ನು ಯಾರು ಕಟ್ಟಿಕೊಂಡಿರುವದಿಲ್ಲವೋ ಅವರ ವೈರವು ಆರಿ ಹೋಗುವದು.

**ನ ಹಿ ವೇರೇನ ವೇರಾನಿ ಸಮ್ಮಂತೀ ಧ ಕುದಾಚನಜ್ ;**
**ಅವೇರೇನ ಚ ಸಮ್ಮಂತಿ ; ಯೇಸ ಧಮ್ಮೋ ಸನಾತನೋ** ||೫||

೫. ಈ ಲೋಕದಲ್ಲಿ ವೈರದಿಂದ ವೈರಗಳು ಎಂದಿಗೂ ಶಾಂತವಾಗುವದಿಲ್ಲ, ಅವೈರದಿಂದಲೇ ಶಾಂತವಾಗುವವು. ಇದೇ ಸನಾತನಧರ್ಮವು.*

**ಪರೇ ಚ ನ ವಿಜಾನಂತಿ ಮಯಿಂ ಎಟ್ಥ ಯಮಾಮಸೆ ;**
**ಯೇ ಚ ತಟ್ಥ ವಿಜಾನಂತಿ, ತತೋ ಸಮ್ಮಂತಿ ಮೇಧಗಾ** ||೬||

೬. ನಾವೆಲ್ಲರೂ ಇಲ್ಲಿ ಸಾಯುವವರೇ - ಎಂಬುದನ್ನು ಪಂಡಿತರನ್ನುಳಿದು ಮಿಕ್ಕವರು ಅರಿಯರು. ಯಾರು ಇದನ್ನು ಬಲ್ಲರೋ ಅವರಿಂದ ಜಗಳಗಳು† ಶಾಂತವಾಗುವವು.

**ಸುಭಾನುಪಸ್ಸಿಜ್ ವಿಹರಂತಜ್ ಇಂದ್ರಿಯೇಸು ಅಸಜ್ವುತಜ್**
**ಭೋಜನಮ್ಹಿ ಅಮತ್ತಣ್ಣುಜ್, ಕುಸೀತಜ್ ಹೀನವೀರಿಯಜ್**
**ತಜ್ ವೇ ಪಸಹತಿ ಮಾರೋ ವಾತೋ ರುಕ್ಖಜ್ ವ ದುಬ್ಬಲಜ್** ||೭||

೭. ಯಾವನು **ಶುಭಾನುಪಶ್ಯ**ನಾಗಿ‡ ವಿಹರಿಸುತ್ತ, ಇಂದ್ರಿಯಗಳನ್ನು ಬಿಗಿಹಿಡಿಯದೆ, ಊಟದಲ್ಲಿ ಅಳತೆಯಿಲ್ಲದೆ ಸೋಮಾರಿಯಾಗಿ ಹೀನವೀರ್ಯ

* ನಿಯಮವು. † ಮೇಧಗಾ - ಎಂಬ ಮಾತಿನ ಅರ್ಥವಿದು ; 'ಮನಸ್ಸಿನ ವಿಕಾರಗಳು' ಎಂದು ಸಾಂಕೃತ್ಯಾಯನರು ಅರ್ಥಮಾಡಿರುತ್ತಾರೆ.

‡ ದೇಹದಲ್ಲಿ ತುಚ್ಛಬುದ್ಧಿಯನ್ನು ಮಾಡುತ್ತಿರಬೇಕೆಂಬುದು ಬೌದ್ಧಭಿಕ್ಕುಗಳಿಗೊಂದು ನಿಯಮವು ; ಇಂಥ ಅಶುಭಭಾವನೆಯನ್ನು ಮಾಡುವವನು ಅಶುಭಾನುಪಶ್ಯನು, ದೇಹದಲ್ಲಿ ಉತ್ತಮಬುದ್ಧಿಯನ್ನು ಮಾಡುವವನು ಶುಭಾನುಪಶ್ಯನು.

ನಾಗಿರುವನೋ, ಅವನನ್ನು ಬಲವಾಗಿಲ್ಲದ ಮರವನ್ನು ಗಾಳಿಯು ವಶಗೊಳಿಸಿಕೊಳ್ಳುವಂತೆ, **ಮಾರ**ನು* ತನ್ನ ವಶಕ್ಕೆ ತೆಗೆದುಕೊಳ್ಳುವನು.

**ಅಸುಭಾನುಪಸ್ಸಿಜ್ ವಿಹರಂತಜ್ ಇಂದ್ರಿಯೇಸು ಸುಸಜ್‌ವುತಜ್**
**ಭೋಜನಮ್ಹಿ ಚ ಮತ್ತಣ್ಣುಜ್ ಸದ್ಧಜ್ ಆರದ್ಧವೀರಿಯಜ್**
**ತಜ್ ವೇ ನಪ್ಪಸಹತಿ ಮಾರೋ ವಾತೋ ಸೇಲಜ್ ವ ಪಬ್ಬತಜ್** ॥೮॥

೮. ಯಾವನು **ಅಶುಭಾನುಪಶ್ಯ**ನಾಗಿ ವಿಹರಿಸುತ್ತ, ಇಂದ್ರಿಯಗಳನ್ನು ಚೆನ್ನಾಗಿ ಬಿಗಿಯಹಿಡಿದು ಊಟದಲ್ಲಿ ಮಿತಿಯರಿತವನಾಗಿ, ಶ್ರದ್ಧೆಯುಳ್ಳವನಾಗಿ, **ವೀರ್ಯ**ವಂತನಾಗಿರುವನೋ† ಅವನನ್ನು ಬಂಡೆಗಳ ಪರ್ವತವನ್ನು ಗಾಳಿಯು ವಶಪಡಿಸಿಕೊಳ್ಳಲಾಗದಿರುವಂತೆ **ಮಾರ**ನು ವಶಗೊಳಿಸಿಕೊಳ್ಳಲಾರದೆ ಇರುವನು.

**ಅನಿಕ್ಕಸಾವೋ ಕಾಸಾವಜ್ ಯೋ ವತ್ಥಜ್ ಪರಿದಹಿಸ್ಸತಿ**
**ಅಪೇತೋ ದಮಸಚ್ಚೇನ ನ ಸೋ ಕಾಸಾವಂ ಅರಹತಿ** ॥೯॥

೯. ಯಾವನು ಕಷಾಯವನ್ನು‡ ಹೊರಕ್ಕೆ ಹಾಕದೆ ಕಾಷಾಯವಸ್ತ್ರವನ್ನು§ ಹಾಕಿಕೊಳ್ಳುವನೋ ದಮವಾಗಲಿ ಸತ್ಯವಾಗಲಿ ಇಲ್ಲದವನಾಗಿರುವನೋ ಆತನು ಕಾಷಾಯಕ್ಕೆ ತಕ್ಕವನಾಗಿರುವದಿಲ್ಲ.

**ಯೋ ಚ ವಂತಕಸಾವಸ್ಸ ಸೀಲೇಸು ಸುಸಮಾಹಿತೋ**
**ಉಪೇತೋ ದಮಸಚ್ಚೇನ ಸಾ ವೇ ಕಾಸಾವಂ ಅರಹತಿ** ॥೧೦॥

೧೦. ಯಾವಾತನು ಕಷಾಯವನ್ನು ಕಕ್ಕಿ **ಶೀಲ**ಗಳಲ್ಲಿಯೇ¶ ಚೆನ್ನಾಗಿ ಮನಸ್ಸಿಟ್ಟಿರುವನೋ, ದಮಸತ್ಯಗಳಿಂದಲೂ ಕೂಡಿರುವನೋ, ಅವನೇ ಕಾಷಾಯಕ್ಕೆ ತಕ್ಕವನು.

* ಮಾರ - ಸಾಧಕನನ್ನು ಕೆಟ್ಟ ಹಾದಿಗೆ ಎಳೆಯುವ ದೇವತೆ. ಮಾರನನ್ನು ಗೆದ್ದದ್ದರಿಂದ ಬುದ್ಧನಿಗೆ ಮಾರಜಿತ್ ಎಂಬ ಹೆಸರು ಬಂದಿತು.

† ಶ್ರದ್ಧಾ. ವೀರ್ಯ - ಇವು ಸಾಧನಗಳು. ವೀರ್ಯವೆಂದರೆ ಉದ್ಯೋಗಶೀಲನಾಗಿ ಸಾಧನೆಮಾಡುವದು.

‡ ರಾಗದ್ವೇಷಾದಿಮಲಗಳನ್ನು.

§ ಬೌದ್ಧಭಿಕ್ಕುಗಳು ಧರಿಸುವ ಹಳದಿಯ ಬಟ್ಟೆ.

¶ ಶೀಲಗಳ ವಿಷಯದಲ್ಲಿ ಪರಿಶಿಷ್ಟವನ್ನು ನೋಡಿ.

**ಅಸಾರೇ ಸಾರಮತಿನೋ ಸಾರೇ ಚಾಸಾರದಸ್ಸಿನೋ**
**ತೇ ಸಾರಙ್ ನಾಧಿಗಚ್ಛಂತಿ ಮಿಚ್ಛಾಸಂಕಪ್ಪ - ಗೋಚರಾ** ||೧೧||

೧೧. ಯಾರು ಅಸಾರವಾದದ್ದರಲ್ಲಿ ಸಾರವೆಂಬ ಬುದ್ಧಿಯನ್ನಿಟ್ಟು ಸಾರವಾದದ್ದರಲ್ಲಿ ಅಸಾರವನ್ನು ಕಾಣುತ್ತಿರುವರೋ, ಮಿಥ್ಯಾ ಸಂಕಲ್ಪವನ್ನಿಟ್ಟುಕೊಂಡಿರುವ* ಅವರಿಗೆ ಸಾರವು ದಕ್ಕದು.

**ಸಾರಙ್ ಚ ಸಾರತೋ ನತ್ವಾ ಅಸಾರಙ್ ಚ ಅಸಾರತೋ**
**ತೋ ಸಾರಂ ಅಧಿಗಚ್ಛಂತಿ ಸಮ್ಮಾಸಂಕಪ್ಪಗೋಚರಾ** ||೧೨||

೧೨. ಯಾರು ಸಾರವನ್ನು† ಸಾರವೆಂದೂ ಅಸಾರವನ್ನು ಅಸಾರವೆಂದೂ ತಿಳಿದಿರುವರೋ **ಸಮ್ಯಕ್ಸಂಕಲ್ಪ**ವನ್ನಿಟ್ಟುಕೊಂಡಿರುವ* ಅವರಿಗೆ ಸಾರವು ದೊರಕುವದು.

**ಯಥಾ ಅಗಾರಙ್ ದುಚ್ಛನ್ನಙ್ ವುಟ್ಠೀ ಸಮತಿವಿಜ್ಝತಿ**
**ಯೇವಂ ಅಭಾವಿತಙ್ ಚಿತ್ತಙ್ ರಾಗೋ ಸಮತಿವಿಜ್ಝತಿ** ||೧೩||

೧೩. ಹೇಗೆ ಸರಿಯಾದ ಮೇಲುಛಾವಣಿಯಿಲ್ಲದ ಮನೆಯೊಳಕ್ಕೆ ಮಳೆಯು ಬಲವಾಗಿ ನುಗ್ಗುವದೋ, ಅದರಂತೆ **ಭಾವನೆ**ಯಿಲ್ಲದ‡ ಚಿತ್ತದೊಳಕ್ಕೆ ರಾಗವು ಬಲವಾಗಿ ನುಗ್ಗುವದು.

**ಯಥಾ ಅಗಾರಙ್ ಸುಚ್ಛನ್ನಙ್ ವುಟ್ಠೀ ನ ಸಮತಿವಿಜ್ಝತಿ**
**ಏವಙ್ ಸುಭಾವಿತಙ್ ಚಿತ್ತಙ್ ರಾಗೋ ನ ಸಮತಿವಿಜ್ಝತಿ** ||೧೪||

೧೪. ಹೇಗೆ ಸರಿಯಾದ ಮೇಲುಛಾವಣಿಯುಳ್ಳ ಮನೆಯೊಳಕ್ಕೆ ಮಳೆಯು ನುಗ್ಗಲಾರದೋ ಅದರಂತೆ ಚೆನ್ನಾಗಿ ಭಾವನೆಯಿಂದ ಕೂಡಿದ ಚಿತ್ತವನ್ನು ರಾಗವು ಹೊಗಲರಿಯದು.

---

* ಸರಿಯಾದ ಸಂಕಲ್ಪ (ಸಮ್ಮಾಸಙ್ಕಪ್ಪ = ಸಮ್ಯಕ್ಸಂಕಲ್ಪ) ಎಂಬುದು ಬುದ್ಧನುಪದೇಶಿಸಿದ 'ಅಷ್ಟಾಂಗಮಾರ್ಗ'ದಲ್ಲಿ ಒಂದು ಸಾಧನ ; ೧೪-೧೩ ನ್ನು ನೋಡಿ. ಮಿಥ್ಯಾ ಸಂಕಲ್ಪವು ಇದಕ್ಕೆ ವಿರುದ್ಧವಾದದ್ದು.

† ಶೀಲವನ್ನೇ ಇಲ್ಲಿ ಸಾರವೆಂದು ಕರೆದಿದೆ ಎಂದು ತೋರುವದು.

‡ ಭಾವನೆಯೆಂದರೆ ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವ ಪ್ರಯತ್ನ ; ಮೈತ್ರೀ ಮುಂತಾದ ಭಾವನೆಗಳೆಂದೂ ಅರ್ಥಮಾಡಬಹುದು.

**ಇಧ ಸೋಚತಿ, ಪೆಚ್ಚ ಸೋಚತಿ ಪಾಪಕಾರೀ ಉಭಯತ್ಥ ಸೋಚತಿ**
**ಸೋ ಸೋಚತಿ, ಸೋ ವಿಹಞ್ಞತಿ, ದಿಸ್ವಾ ಕಮ್ಮ - ಕಿಲಿಟ್ಠಂ ಅತ್ತನೋ ||೧೫||**

೧೫. ಇಲ್ಲಿಯೂ* ಶೋಕಿಸುವನು, ಸತ್ತಮೇಲೂ ಶೋಕಿಸುವನು - ಪಾಪಿಯು ಎರಡು ಕಡೆಯಲ್ಲಿಯೂ ಶೋಕಿಸುವನು. ತನ್ನ ಕರ್ಮಗಳು ಮಲಿನವಾದವುಗಳೆಂಬುದನ್ನು ಕಂಡು ಅವನು ಶೋಕಿಸುವನು, ಅವನು ಸಂಕಟಪಡುವನು.

**ಇಧ ಮೋದತಿ, ಪೆಚ್ಚಮೋದತಿ, ಕಟಪುಞ್ಞೋ ಉಭಯತ್ಥ ಮೋದತಿ**
**ಸೋ ಮೋದತಿ ಸೋ ಪಮೋದತಿ ದಿಸ್ವಾ ಕಮ್ಮವಿಸುದ್ಧಿಂ ಅತ್ತನೋ ||೧೬||**

೧೬. ಇಲ್ಲಿ ಮೋದದಿಂದಿರುವನು, ಸತ್ತಮೇಲೂ ಮೋದದಿಂದಿರುವನು - ಪುಣ್ಯವನ್ನು ಮಾಡಿದವನು ಎರಡು ಕಡೆಯಲ್ಲಿಯೂ ಮೋದದಿಂದಿರುತ್ತಾನೆ. ತನ್ನ ಕರ್ಮಗಳು ಶುದ್ಧವಾದವುಗಳೆಂಬುದನ್ನು ಕಂಡು ಅವನು ಮೋದದಿಂದಿರುವನು, ಪ್ರಮೋದದಿಂದಿರುವನು.

**ಇಧ ತಪ್ಪತಿ, ಪೆಚ್ಚತಪ್ಪತಿ ಪಾಪಕಾರೀ ಉಭಯತ್ಥ ತಪ್ಪತಿ**
**'ಪಾಪಂ ಮೇ ಕತಂ' ತಿ ತಪ್ಪತಿ ಭೀಯೋ ತಪ್ಪತಿ ದುಗ್ಗತಿಂ ಗತೋ ||೧೭||**

೧೭. ಇಲ್ಲಿಯೂ ಕುದಿದುಕೊಳ್ಳುವನು, ಸತ್ತಮೇಲೂ ಕುದಿದುಕೊಳ್ಳುವನು - ಪಾಪವನ್ನು ಮಾಡಿದವನು ಎರಡು ಕಡೆಯಲ್ಲಿಯೂ ಕುದಿದುಕೊಳ್ಳುತ್ತಾನೆ. 'ನಾನು ಪಾಪವನ್ನು ಮಾಡಿದೆನಲ್ಲ !' ಎಂದು ಇಲ್ಲಿ ಕುದಿದುಕೊಳ್ಳುವನು, ದುರ್ಗತಿಯನ್ನು ಹೊಂದಿದ ಮೇಲೆ ಮತ್ತೂ ಕುದಿದುಕೊಳ್ಳುವನು.

**ಇಧ ನಂದತಿ, ಪೆಚ್ಚನಂದತಿ ಕಟಪುಞ್ಞೋ ಉಭಯತ್ಥ ನಂದತಿ ;**
**'ಪುಞ್ಞಂ ಮೇ ಕತಂ' ತಿ ನಂದತಿ ಭೀಯೋ ನಂದತಿ ಸುಗ್ಗತಿಂ ಗತೋ ||೧೮||**

೧೮. ಇಲ್ಲಿಯೂ ಆನಂದದಿಂದಿರುವನು, ಸತ್ತಮೇಲೂ ಆನಂದದಿಂದಿರುವನು - ಪುಣ್ಯವನ್ನು ಮಾಡಿದವನು ಎರಡು ಕಡೆಯಲ್ಲಿಯೂ ಆನಂದದಿಂದಿರುತ್ತಾನೆ. ನಾನು ಪುಣ್ಯವನ್ನು ಮಾಡಿದೆನಲ್ಲ ! - ಎಂದು ಇಲ್ಲಿ ಆನಂದ

ಕರ್ಮಕ್ಕೆ ತಕ್ಕಂತ ಇಹದಲ್ಲಿಯೂ ಪರದಲ್ಲಿಯೂ ಸುಖದುಃಖಗಳುಂಟಾಗುವವೆಂಬ

ದಿಂದರುವನು, ಸದ್ಗತಿಯನ್ನು ಹೊಂದಿದ ಮೇಲೆ ಮತ್ತೂ ಆನಂದ ದಿಂದಿರುವನು.

ಬಹುಂ ಪಿ ಚೆ ಸಾಹಿತಿಂ ಭಾಸಮಾನೋ
ನ ತಕ್ಕರೋ ಹೋತಿ ನರೋ ಪಮತ್ತೋ
ಗೋಪೋ ವಾ ಗಾವೋ ಗಣಯಂ ಪರೇಸಜ್
ನ ಭಾಗವಾ ಸಾಮಞ್ಞಸ್ಸ ಹೋತಿ ||೧೯||

೧೯. ಬಹುಸಂಹಿತೆಗಳನ್ನು* ಹೇಳುವವನಾದರೂ ಯಾವನು ಅದರಂತೆ ಆಚರಿಸದೆ ಮೈಮರೆತಿರುವನೋ ಅವನು ಮತ್ತೊಬ್ಬರ ಗೋವುಗಳನ್ನು ಎಣಿಕೆ ಮಾಡುತ್ತಿರುವ ಗೊಲ್ಲನಂತೆ† ಶ್ರಾಮಣ್ಯದಲ್ಲಿ ಪಾಲುಗಾರನಲ್ಲದೆ ಹೋಗುವನು.

ಅಪ್ಪಂ ಪಿ ಚೆ ಸಾಹಿತಜ್ ಭಾಸಮಾನೋ
ಧಮ್ಮಸ್ಸ ಹೋತಿ ಅನುಧಮ್ಮಚಾರೀ
ರಾಗಂ ಚ ದೋಸಂ ಚ ಪಹಾಯ ಮೋಹಜ್
ಸಮ್ಮಪ್ಪಜಾನೋ ಸುವಿಮುತ್ತ - ಚಿತ್ತೋ
ಅನುಪಾದಿಯಾನೋ ಇಧ ವಾ ಹುರಜ್ ವಾ
ಸಾ ಭಾಗವಾ ಸಾಮಞ್ಞಸ್ಸ ಹೋತಿ ||೨೦||

೨೦. ಯಾವನು ಒಂದಿಷ್ಟೇ ಸಂಹಿತೆಯನ್ನು ಹೇಳುವವನಾದರೂ ಧರ್ಮಕ್ಕೆ ಅನುಗುಣವಾಗಿ ಆಚಾರವುಳ್ಳವನಾಗಿರುವನೋ, ರಾಗವನ್ನೂ ದ್ವೇಷವನ್ನೂ ಮೋಹವನ್ನೂ ಬಿಟ್ಟು ಸರಿಯಾದ ಜ್ಞಾನವುಳ್ಳವನಾಗಿ ಸರಿಯಾಗಿ ಮುಕ್ತಚಿತ್ತನಾಗಿರುವನೋ, ಇಹದಲ್ಲಾಗಲಿ ಪರದಲ್ಲಾಗಲಿ ಆಸಕ್ತಿಯಿಲ್ಲದವ ನಾಗಿರುವನೋ, ಅವನು ಶ್ರಾಮಣ್ಯದಲ್ಲಿ ಪಾಲುಗಾರನಾಗುವನು.

* ಇಲ್ಲಿ ಮೂಲದಲ್ಲಿರುವ 'ಸಹಿತಂ' ಎಂಬುದು 'ಬುದ್ಧವಚನ'ವೆಂಬರ್ಥದಲ್ಲಿ ಉಪಯೋಗಿಸಿದೆ ಎಂದು ವ್ಯಾಖ್ಯಾನಕಾರನು ಬರೆದಿರುತ್ತಾನೆ. ಆದರೆ ತ್ರಿಪಿಟಕಕ್ಕೆ ಸಹಿತವೆಂಬ ಹೆಸರು ಮತ್ತೆಲ್ಲಿಯೂ ಪ್ರಯೋಗವಾಗಿರುವದು ಶೋಧಕರ ಕಣ್ಣಿಗೆ ಬಿದ್ದಿರುವದಿಲ್ಲ.

† ಗೊಲ್ಲನು ಮತ್ತೊಬ್ಬರ ಗೋವುಗಳನ್ನು ಎಣಿಸುವದೊಂದೇ ಹೊರತು ಅವನಿಗೆ ಹಾಲಿನಲ್ಲಿ ಪಾಲಿಲ್ಲ ; ಇದರಂತೆ ಧರ್ಮವಚನಗಳನ್ನು ಸುಮ್ಮನೆ ನುಡಿಯುತ್ತಿರುವವನಿಗೆ ನಿಜ ವಾಗಿ ಶ್ರಮಣನಾದ (ಬೌದ್ಧಭಿಕ್ಕುವಾದ) ಫಲವು ದಕ್ಕುವದಿಲ್ಲ ಎಂಬುದು ಇಲ್ಲಿಯ ಭಾವ.

# ೨. ಅಪ್ರಮಾದವರ್ಗ (ಅಪ್ಪಮಾದವಗ್ಗ)*

**ಅಪ್ಪಮಾದೋ ಅಮತಪದಙ್ ; ಪಮಾದೋ ಮಚ್ಚುನೋಪದಙ್**
**ಅಪ್ಪಮಾತ್ತಾ ನ ಮೀಯಂತಿ ; ಯೇ ಪಮತ್ತಾ ಯಥಾ ಮತಾ** ॥೨೧॥

೨೧. ಎಚ್ಚರಿಕೆಯಿಂದಿರುವದು **ಅಮೃತ**ಕ್ಕೆ† ಹಾದಿಯು, ಎಚ್ಚರಿಕೆಯಿಲ್ಲದಿರುವದು ಮೃತ್ಯುವಿನ ಹಾದಿಯು. ಎಚ್ಚರಿಕೆಯುಳ್ಳವರು ಸಾಯುವದಿಲ್ಲ, ಎಚ್ಚರಿಕೆಯಿಲ್ಲದವರು ಬದುಕಿದ್ದರೂ ಸತ್ತಂತೆಯೇ.‡

**ಏತಙ್ ವಿಸೇಸತೋ ಞತ್ವಾ ಅಪ್ಪಮಾದಮ್ಹಿ ಪಂಡಿತಾ**
**ಅಪ್ಪಮಾದೇ ಪಮೋದಂತಿ ಅರಿಯಾನಙ್ ಗೋಚರೇ ರತಾ** ॥೨೨॥

೨೨. ಎಚ್ಚರಿಕೆಯಲ್ಲಿರುವ ಈ ವಿಶೇಷವನ್ನು ತಿಳಿದ ಪಂಡಿತರು **ಆರ್ಯ**ರ§ ಆಚರಣೆಯಲ್ಲಿಯೇ ನಿರತರಾಗಿ ಎಚ್ಚರಿಕೆಯಲ್ಲಿಯೇ ಪ್ರಮೋದದಿಂದಿರುವರು.

**ತೇ ಝಾಯಿನೋ ಸಾತತಿಕಾ ನಿಚ್ಚಙ್ ದಳ್ಹಪರಕ್ಕಮಾ**
**ಫುಸಂತಿ ಧೀರಾ ನಿಬ್ಬಾನಙ್ ಯೋಗಕ್ಖೇಮಙ್ ಅನುತ್ತರಙ್** ॥೨೩॥

೨೩. ಎಡೆಬಿಡದೆ **ಧ್ಯಾನ**ಮಾಡುತ್ತಾ¤ ಯಾವಾಗಲೂ ದೃಢಪರಾಕ್ರಮರಾಗಿರುವ# ಆ ಧೀರರು ಮಿಗಿಲಿಲ್ಲದ ಯೋಗಕ್ಷೇಮವಾದ** ನಿರ್ವಾಣವನ್ನು ಮುಟ್ಟುವರು.

---

* ಈ ವರ್ಗದಲ್ಲಿ ಬರುವ 'ಅಪ್ರಮಾದ'ವೆಂಬ ಮಾತನ್ನು 'ಎಚ್ಚರಿಕೆ'ಯೆಂದೂ 'ಪ್ರಮಾದ'ವೆಂಬುದನ್ನು ಎಚ್ಚರಿಕೆಯಿಲ್ಲದಿರುವದು - ಎಂದೂ ಕನ್ನಡಿಸಿದೆ. ಧರ್ಮಮಾರ್ಗದಲ್ಲಿ ಸತತವೂ ನಡೆಯುತ್ತಾ ಕೆಟ್ಟ ಮಾರ್ಗಕ್ಕೆ ಬೀಳದಂತೆ ಇರುವದೇ ಅಪ್ರಮಾದವು ; ಆಲಸ್ಯದಿಂದ ಕೂಡಿ ಮನಸ್ಸುಬಂದಂತೆ ನಡೆಯುವದೇ ಪ್ರಮಾದವು.

† ಅಮೃತವೆಂದರೆ ಬೌದ್ಧರು ಹೇಳುವ ನಿರ್ವಾಣವೆಂಬ ಮೋಕ್ಷವು.

‡ 'ಎಚ್ಚರಿಕೆಯಿಲ್ಲದವರು ಸಾಯುವಂತೆ ಎಚ್ಚರಿಕೆಯುಳ್ಳವರು ಸಾಯುವದಿಲ್ಲ' -ಸಾಂ.

§ ಆರ್ಯರೆಂದರೆ ಬುದ್ಧ, ಪ್ರತ್ಯೇಕಬುದ್ಧ, ಶ್ರಾವಕ - ಇವರೆಂದು ವ್ಯಾಖ್ಯಾನ.

¤ ಧ್ಯಾನದ ವಿಷಯದಲ್ಲಿ ಪರಿಶಿಷ್ಟವನ್ನು ನೋಡಿ. # ಮುಂದುವರಿಯುವದು.

** ನಿರ್ವಾಣವು ಅನುತ್ತರ ಎಂದರೆ ಮಿಗಿಲಿಲ್ಲದ ಸದ್ಗತಿಯು, ಯೋಗಕ್ಷೇಮವು ಎಂದರೆ ಮಂಗಲಕರವಾದ ಪ್ರಾಪ್ತಿಯು. ತಾನೇ ನಾಶವಾಗುವದೇ ಮೋಕ್ಷವೆಂದು ಬೌದ್ಧರು ಹೇಳುವರೆಂತ ಕೆಲವರು ಕಲ್ಪಿಸಿರುವದು ತಪ್ಪೆಂಬುದು ಇಲ್ಲಿ ವ್ಯಕ್ತವಾಗುತ್ತದೆ.

ಉತ್ಥಾನವತೋ ಸತಿಮತೋ ಸುಚಿಕಮ್ಮಸ್ಸ ನಿಸಮ್ಮಕಾರಿನೋ
ಸಞ್ಞತಸ್ಸ ಚ ಧಮ್ಮಜೀವಿನೋ ಅಪ್ಪಮತ್ತಸ್ಸ ಯಸೋಭಿವಡ್ಢತಿ ||೨೪||

೨೪. ಉದ್ಯೋಗಿಯಾಗಿ, **ಸ್ಮೃತಿ**ವಂತನಾಗಿ,* ಶುಚಿಯಾದ ಕರ್ಮಗಳನ್ನು ಮಾಡುತ್ತಾ, ಆಲೋಚಿಸಿ ಕರ್ಮಮಾಡುವವನಾಗಿ ಮನಸ್ಸನ್ನು ಬಿಗಿಹಿಡಿದುಕೊಂಡು ಧರ್ಮದಿಂದೇ ಬಾಳುತ್ತಾ ಎಚ್ಚರಿಕೆಯಿಂದಿರುವಾತನ ಕೀರ್ತಿಯು ಹಬ್ಬುವದು.

ಉತ್ಥಾನೇನಪ್ಪಮಾದೇನ ಸಞ್ಞಮೇನ ದಮೇನ ಚ
ದೀಪಂ ಕಯಿರಾಥ ಮೇಧಾವಿ ಯಂ ಓಘೋ ನಾಭಿಕೀರತಿ ||೨೫||

೨೫. ಜ್ಞಾನಿಯಾದವನು ಉದ್ಯೋಗದಿಂದಲೂ ಎಚ್ಚರಿಕೆಯಿಂದಲೂ ಸಂಯಮದಿಂದಲೂ, ದಮದಿಂದಲೂ, ಪ್ರವಾಹವು† ಕೊಚ್ಚಿಕೊಂಡುಹೋಗಲಾರದಂಥ ದ್ವೀಪವನ್ನು‡ ಮಾಡಿಕೊಳ್ಳಬೇಕು.

ಪಮಾದಂ ಅನುಯುಂಜಂತಿ ಬಾಲಾ ದುಮ್ಮೇಧಿನೋ ಜನಾ ;
ಅಪ್ಪಮಾದಞ್ಚ ಮೇಧಾವಿ ಧನಂ ಸೆಟ್ಠಂ ವಾ ರಕ್ಖತಿ ||೨೬||

೨೬. ಮೂರ್ಖರೂ ಅವಿವೇಕಿಗಳೂ ಆದ ಜನರು ಪ್ರಮಾದವನ್ನು ಸೇರಿಕೊಳ್ಳುವರು. ಜ್ಞಾನಿಯಾದವನು ಅಪ್ರಮಾದವನ್ನು ಉತ್ತಮವಾದ ಧನದಂತೆ ಕಾಪಾಡಿಕೊಳ್ಳುತ್ತಾನೆ.

ಮಾ ಪಮಾದಂ ಅನುಯುಂಜೇಥ ಮಾ ಕಾಮರತಿ - ಸಂತವಂ
ಅಪ್ಪಮತ್ತೋ ಹಿ ಝಾಯಂತೋ ಪಪ್ಪೋತಿ ವಿಪುಲಂ ಸುಖಂ ||೨೭||

೨೭. ಪ್ರಮಾದವನ್ನು ಸೇರಿಕೊಳ್ಳಬೇಡ, ಕಾಮರತಿಯಲ್ಲಿ ಅಂಟಿಕೊಳ್ಳಬೇಡ. ಏಕೆಂದರೆ ಎಚ್ಚರಿಕೆಯಿಂದ ಧ್ಯಾನಮಾಡುತ್ತಿರುವಾತನು ಹೆಚ್ಚಿನ ಸುಖವನ್ನು ಪಡೆಯುವನು.

ಪಮಾದಂ ಅಪ್ಪಮಾದೇನ ಯದಾ ನುದತಿ ಪಂಡಿತೋ
ಪಞ್ಞಾಪಾಸದಂ ಆರುಯ್ಹ ಅಸೋಕೋ ಸೋಕಿನಿಂ ಪಜಂ
ಪಬ್ಬತಟ್ಠೋ ವಾ ಭುಮ್ಮಟ್ಠೇ ಧೀರೋ ಬಾಲೇ ಅವೆಕ್ಖತಿ ||೨೮||

* ಸ್ಮೃತಿಗಳ ವಿಷಯದಲ್ಲಿ ೨೧ನೆಯ ವರ್ಗವನ್ನು ನೋಡಿ.

† ಕ್ಲೇಶಗಳ ಹೊಳೆ. ‡ ಅರ್ಹಂತನ ಪದವಿ.

೨೮. ತಿಳಿದವನು ಯಾವಾಗ ಎಚ್ಚರಿಕೆಯಿಂದ ಪ್ರಮಾದವನ್ನು ಹೋಗಲಾಡಿಸಿಕೊಳ್ಳುವನೋ ಆಗ ಆ ಧೀರನು ಯಾವ ಶೋಕವೂ ಇಲ್ಲದೆ ಶೋಕಕ್ಕೊಳಗಾಗಿರುವ ಅಜ್ಞರಾದ ಜನರನ್ನು, ಪರ್ವತದ ಮೇಲಿರುವವನು ನೆಲದ ಮೇಲಿರುವವನನ್ನು ನೋಡುವ ಹಾಗೆ **ಪ್ರಜ್ಞೆ**ಯ* ಉಪ್ಪರಿಗೆಯನ್ನೇರಿ ನೋಡುತ್ತಿರುವನು.

**ಅಪ್ಪಮತ್ತೋ ಪಮತ್ತೇಸು ಸುತ್ತೇಸು ಬಹುಜಾಗರೋ**
**ಅಬಲಸ್ಸಜ್ ವಾ ಸೀಘಸ್ಸೋ ಹಿತ್ವಾ ಯಾತಿ ಸುಮೇಧಸೋ** ||೨೯||

೨೯. ಜಾಣನಾದವನು ಎಚ್ಚರಿಕೆಯಿಲ್ಲದವರಲ್ಲಿ ತಾನು ಎಚ್ಚರಿಕೆಯುಳ್ಳವನಾಗಿ, ನಿದ್ರಿಸುವವರಲ್ಲಿ ಪೂರ ಎಚ್ಚತ್ತವನಾಗಿ, ಶಕ್ತಿಯಿಲ್ಲದ ಕುದುರೆಯನ್ನು ವೇಗವಾಗಿ ನಡೆಯುವ ಕುದುರೆಯು ಹಿಂದಕ್ಕೆ ಹಾಕಿಹೋಗುವಂತೆ, ಅವರನ್ನು ಬಿಟ್ಟು ಮುಂದಕ್ಕೆ ಹೋಗುತ್ತಾನೆ.

**ಅಪ್ಪಮಾದೇನ ಮಾಘವ ದೇವಾನಜ್ ಸೆಟ್ಠತಜ್ ಗತೋ**
**ಅಪ್ಪಮಾದಜ್ ಪಸಜ್ ಸತಿ ಪಮಾದೋ ಗರಹಿತೋ ಸದಾ** ||೩೦||

೩೦. ಅಪ್ರಮಾದದಿಂದಲೇ **ಮಘವಂತನು**† ದೇವತೆಗಳಲ್ಲಿ ಶ್ರೇಷ್ಠನಾದನು. ಅಪ್ರಮಾದವನ್ನು ಕೊಂಡಾಡುವರು, ಪ್ರಮಾದವನ್ನು ಯಾವಾಗಲೂ ಹೀಯಾಳಿಸುವರು.

**ಅಪ್ಪಮಾದರತೋ ಭಿಕ್ಖು ಪಮಾದೇ ಭಯದಸ್ಸಿವಾ**
**ಸಞ್ಞೋಜನಜ್ ಅಣುಜ್ ತೂಲಜ್ ದಹಜ್ ಅಗ್ಗೀ ವಾ ಗಚ್ಛತಿ** ||೩೧||

೩೧. ಅಪ್ರಮಾದದಲ್ಲಿಯೇ ರತನಾಗಿ ಪ್ರಮಾದದಲ್ಲಿ ಭಯವನ್ನು ಕಾಣುವ ಭಿಕ್ಷುವು ಸಣ್ಣ ದೊಡ್ಡ **ಸಂಯೋಜನ**ವನ್ನೆಲ್ಲ‡ ಬೆಂಕಿಯಂತೆ ುಡುತ್ತಾ ಹೋಗುವನು.

* ಪ್ರಜ್ಞೆಯೆಂಬುದೊಂದು ಸಾಧನ.

† ಮಘವಂತನು - ಇಂದ್ರನು. ಇಂದ್ರನು ದೇವತೆಗಳ ಒಡೆಯನೆಂಬುದನ್ನು ಬೌದ್ಧರೂ ಒಪ್ಪುವರು.

‡ ಸಂಯೋಜನಗಳೆಂದರೆ ಬಂಧನಗಳು, ನಿರ್ವಾಣವನ್ನು ಪಡೆಯುವದಕ್ಕಿರುವ ಹತ್ತು ಅಡಚಣೆಗಳು. ಪರಿಶಿಷ್ಟವನ್ನು ನೋಡಿ.

ಅಪ್ಪಮಾದರತೋ ಭಿಕ್ಕು ಪಮಾದೇ ಭಯದಸ್ಸಿವಾ
ಅಭಬ್ಬೋ ಪರಿಹಾನಯ ನಿಬ್ಬಾಣಸ್ಸೇವ ಸಂತಿಕೆ ||೩೨||

೩೨. ಅಪ್ರಮಾದದಲ್ಲಿಯೇ ರತನಾಗಿ ಪ್ರಮಾದದಲ್ಲಿ ಭಯವನ್ನು ಕಾಣುವ ಭಿಕ್ಷುವು ಎಂದಿಗೂ ಕೆಳಕ್ಕೆ ಬೀಳಲಾರನು, ಅವನು **ನಿರ್ವಾಣ**ಕ್ಕೇ ಹತ್ತಿರವಿರುವನು.

## ೩. ಚಿತ್ತವರ್ಗ (ಚಿತ್ತವಗ್ಗ)

ಫಂದನಜ್ ಚಪಲಜ್ ಚಿತ್ತಜ್ ದುರಕ್ಖಜ್ ದುನ್ನಿವಾರಯಜ್
ಉಜುಜ್ ಕರೋತಿ ಮೇಧಾವಿ ಉಸುಕಾರೋ ವಾ ತೇಜನಜ್ ||೩೩||

೩೩. ಜ್ಞಾನಾದವನು ಅಲುಗಾಡುತ್ತಿರುವ, ಚಂಚಲವಾದ, ಹಿಡಿತದಲ್ಲಿಡಲು ಕಷ್ಟವಾದ, ತಡೆಯಲಾಗದ ಚಿತ್ತವನ್ನು, ಬಾಣವನ್ನು ಮಾಡುವಾತನು ಬಾಣದ ಬಿದಿರನ್ನು ನೆಟ್ಟಗೆ ಮಾಡುವಂತೆ, ನೇರ್ಪಡಿಸಿಕೊಳ್ಳುತ್ತಾನೆ.

ವಾರಿಜೋ ವಾ ಥಲೆ ಖಿತ್ತೋ ಓಕಮೋಕತ ಉಬ್ಭತೋ
ಪರಿಫಂಡಿತಿದಜ್ ಚಿತ್ತಜ್ ಮಾರಧೆಯ್ಯಜ್ ಪಹಾತವೆ ||೩೪||

೩೪. ನೀರ್ಮನೆಯಿಂದ ಮೇಲಕ್ಕೆತ್ತಿ ನೆಲದ ಮೇಲಕ್ಕೆ ಬಿಸುಟ ಮೀನಿನಂತೆ, ಈ ಚಿತ್ತವು **ಮಾರನ***‌ ಪಾಶವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಒದ್ದಾಡುತ್ತಿರುವದು.

ದುನ್ನಿಗಹಸ್ಸ ಲಹನೋ ಯತ್ಥಕಾಮಿನಿಪಾತಿನೋ
ಚಿತ್ತಸ್ಸ ದಮಥೋ ಸಾಧು ಚಿತ್ತಜ್ ದಂತಜ್ ಸುಖಾವಹಜ್ ||೩೫||

೩೫. ಹಿಡಿತದಲ್ಲಿಟ್ಟುಕೊಳ್ಳಲು ಕಷ್ಟವಾಗಿ ಹಾರಾಡುತ್ತಾ ತನಗೆ ಇಷ್ಟ

* ರಾಗದ್ವೇಷಾದಿಗಳು ಮಾರನಿಂದಲೇ ಆಗುವದೆಂದು ಬೌದ್ಧರ ನಂಬಿಕೆ.

## ಚಿತ್ತವರ್ಗ

ನುಗ್ಗುತ್ತಿರುವ ಚಿತ್ತವನ್ನು ಪಳಗಿಸಿಕೊಳ್ಳುವದು ಒಳ್ಳೆಯದು. ಚಿತ್ತವು ಪಳಗಿದರೆ ಸುಖವನ್ನುಂಟುಮಾಡುವದು.

**ಸುದುದ್ದಸಜ್ ಸುನಿಪುನಜ್ ಯತ್ಥಕಾಮಿನಿಪಾತಿನಜ್**
**ಚಿತ್ತಜ್ ರಕ್ಖೇಥ ಮೇಧಾವೀಜ್ ; ಚಿತ್ತಜ್ ಗುತ್ತಜ್ ಸುಖಾವಹಜ್** ||೩೬||

೩೬. ಕಾಣುವದಕ್ಕೆ ಕಷ್ಟವಾಗಿ, ಬಲುಸೂಕ್ಷ್ಮವಾದ, ತನಗಿಷ್ಟವಾದೆಡೆಗೆ ನುಗ್ಗುತ್ತಿರುವ ಚಿತ್ತವನ್ನು ಜಾಣನಾದವನು ಕಾದಿಡಬೇಕು. ಚಿತ್ತವನ್ನು ಕಾಪಾಡಿಕೊಂಡರೆ ಸುಖವುಂಟು.

**ದೂರಂಗಮಜ್ ಏಕಚರಜ್ ಅಸರೀರಜ್ ಗುಹಾಸಯಜ್**
**ಯೇ ಚಿತ್ತಜ್ ಸಞ್ಞಮೆಸ್ಸಂತಿ ಮೊಕ್ಖಂತಿ ಮಾರಬಂಧನಾ** ||೩೭||

೩೭. ದೂರಕ್ಕೆ ಹೋಗಬಲ್ಲ, ತಾನೊಂದೇ ಸಂಚರಿಸಬಲ್ಲ, ಯಾವ ಶರೀರವೂ* ಇಲ್ಲದ, ಗುಹೆಯಲ್ಲಿರುವ ಚಿತ್ತವನ್ನು ಯಾರು ಬಿಗಿಹಿಡಿಯುವರೋ ಅವರು ಮಾರನ ಕಟ್ಟಿನಿಂದ ಬಿಡುಗಡೆಯಾಗುವರು.

**ಅನವಟ್ಠಿತಚಿತ್ತಸ್ಸ ಸದ್ಧಮ್ಮಜ್ ಅವಿಜಾನತೋ**
**ಪರಿಪ್ಲವಪಸಾದಸ್ಸ ಪಞ್ಞಾ ನ ಪರಿಪೂರತಿ** ||೩೮||

೩೮. ಯಾವನ ಚಿತ್ತವು ನಿಲುಗಡೆಗೆ ಬಂದಿಲ್ಲವೋ ಯಾವನು ಸರಿಯಾದ† ಧರ್ಮವನ್ನರಿಯನೋ, ಯಾವನ ಚಿತ್ತಪ್ರಸನ್ನತೆಯು ಇನ್ನೂ ಹೊಯ್ದಾಡುತ್ತಿರುವದೋ, ಆತನ **ಪ್ರಜ್ಞೆ**ಯು ಪರಿಪೂರ್ಣವಾದದ್ದಲ್ಲ.

**ಅನವಸ್ಸುತಚಿತ್ತಸ್ಸ ಅನನ್ವಾಹತ ಚೇತಸೋ**
**ಪುಞ್ಞ - ಪಾಪ ಪಹೀನಸ್ಸ ನತ್ಥಿ ಜಾಗರತೋ ಭಯಜ್** ||೩೯||

೩೯. ಯಾವನ ಚಿತ್ತವು ಸೋರದಿರುವದೋ,‡ ಯಾವನ ಚಿತ್ತವು

* ವೇದಾಂತಿಗಳು ಆತ್ಮನಿಗೆ ಹಾಕುವ ವಿಶೇಷಣಗಳಲ್ಲಿ ಕೆಲವು ಇಲ್ಲಿವೆಯಾದರೂ ಬೇರೆ ಅರ್ಥದಲ್ಲಿ ಉಪಯುಕ್ತವಾಗಿವೆ ; ಬೌದ್ಧರು ಆತ್ಮನನ್ನು ಒಪ್ಪುವದಿಲ್ಲ. ಶರೀರವಿಲ್ಲದ - ಆಕಾರವಿಲ್ಲದ, ಗುಹಾಶಯ - ಹೃದಯದಲ್ಲಿರುವ.

† ಬುದ್ಧನು ಉಪದೇಶಿಸಿದ ಧರ್ಮ.

‡ ಸೋರದೆ ಇರುವದೋ ಎಂದರೆ ರಾಗಕ್ಕೊಳಗಾಗದೆ ಇರುವದೋ ಎಂದು ವ್ಯಾಖ್ಯಾನ ; ಮೂಲದಲ್ಲಿ 'ಅನವಸ್ಸುತ' ಎಂದಿದೆ ; ಇದಕ್ಕೆ ಆಸ್ರವಗಳಿಲ್ಲದ, ಮಲರಹಿತವಾದ ಎಂದೂ ವ್ಯಾಖ್ಯಾನಮಾಡಬಹುದು - **ಸಾಂ.**

ಹೊಡೆದಾಡುತ್ತಿರುವದಿಲ್ಲವೋ, ಯಾವನು ಪುಣ್ಯಪಾಪಗಳನ್ನು* ಮೀರಿರುವನೋ, ಅಂಥ ಜಾಗರೂಕನಿಗೆ ಭಯವಿಲ್ಲ.

**ಕುಂಭೂಪಮಜ್ ಕಾಯಂ ಇಮಜ್ ವಿದಿತ್ವಾ**
**ನಗರೂಪಜ್ ಚಿತ್ತಜ್ ಇದಜ್ ಠಪೆತ್ವಾ**
**ಯೋಧೇಥ ಮಾರಜ್ ಪಞ್ಞಾವುಧೇನ ;**
**ಜಿತಜ್ ಚ ರಕ್ಖೇ ಅನಿವೇಸನೋ ಸಿಯಾ** ||೪೦||

೪೦. ಈ ಶರೀರವು ಮಣ್ಣಿನ ಗಡಿಗೆಯಂತೆ ಎಂದು ತಿಳಿದುಕೊಂಡು, ನಗರದ ಕೋಟೆಯಂತ ಇರುವ ಚಿತ್ತವನ್ನು ನಿಲ್ಲಿಸಿಕೊಂಡು, ಪ್ರಜ್ಞೆಯೆಂಬ ಆಯುಧವನ್ನು ಹಿಡಿದು ಮಾರನೊಡನೆ ಹೋರಾಡಬೇಕು ; ಗೆದ್ದ ಮೇಲೂ ಅವನನ ಹಿಡಿತದಲ್ಲಿಟ್ಟಿರಬೇಕು, ಮನೆಯಿಲ್ಲದವನಾಗಿ ಸಂಚರಿಸುತ್ತಿರಬೇಕು.

**ಅಚಿರಜ್ ವತಯಜ್ ಕಾಯೋ ಪಠವಿಜ್ ಅಧಿಸೆಸ್ಸತಿ,**
**ಛಡ್ಡೋ ಅಪೇತವಿಞ್ಞಾನೋ ನಿರತ್ಥಜ್ ವಾ ಕಳಿಂಗರಜ್** ||೪೧||

೪೧. ಅಯ್ಯೋ ! ಈ ಶರೀರವು ಇಷ್ಟರಲ್ಲಿಯೇ ಚೇತನಾರಹಿತವಾಗಿ ಯಾವ ಕೆಲಸಕ್ಕೂ ಬಾರದ ಕೊರಡಿನಂತೆ ತುಚ್ಛವಾಗಿ ನೆಲದ ಮೇಲೆ ಬಿದ್ದುಕೊಳ್ಳುವದಲ್ಲ !

**ದಿಸೋ ದಿಸಜ್ ಯಜ್ ತಜ್ ಕಯಿರಾ ವೇರೀ ವಾ ಪನ ವೇರಿನಜ್**
**ಮಿಚ್ಛಾ ಪಣಿಹಿತಜ್ ಚಿತ್ತಜ್ ಪಾಪಿಯಜ್ ನಜ್ ತತೋ ಕರೇ** ||೪೨||

೪೨. ಹಗೆಯು ತನ್ನ ಹಗೆಗೆ ಯಾವ ಕೇಡನ್ನು ಮಾಡಿಯಾನೋ, ವೈರಿಯು ತನ್ನ ವೈರಿಗೆ ಯಾವ ಕೇಡನ್ನು ಮಾಡಿಯಾನೋ, ಅದಕ್ಕಿಂತಲೂ ಹೆಚ್ಚಿನ ಕೆಡುಕನ್ನು ತಪ್ಪುಮಾರ್ಗದಲ್ಲಿಟ್ಟ ಚಿತ್ತವು ತನಗೆ ಮಾಡುವುದು.

**ನ ತಜ್ ಮಾತಾ - ಪಿತಾ ಕಯಿರಾ ಅಞ್ಞೇ ವಾ ಪಿ ಚ ಞಾತಕಾ**
**ಸಮ್ಮಾಪಣಿಹಿತಜ್ ಚಿತ್ತಜ್ ಸೆಯ್ಯಸೋ ನಜ್ ತತೋ ಕರೇ** ||೪೩||

೪೩. ತಾಯಿಯೂ ತಂದೆಯೂ ಎಷ್ಟು ಒಳ್ಳೆಯದನ್ನು ಮಾಡಲಾರರೋ,

* ಪುಣ್ಯಪಾಪಗಳನ್ನು ಮೀರುವದೇ ಪರಮಪುರುಷಾರ್ಥವೆಂಬುದು ಬೌದ್ಧರಿಗೂ ವೇದಾಂತಿಗಳಿಗೂ ಸಮಾನವು. ಪುರುಷಾರ್ಥಸ್ವರೂಪದ ವಿಷಯಕ್ಕೆ ಮತಭೇದವಿದೆ.

ಮತ್ತೆ ಯಾವ ಬಂಧುಗಳೂ ಮಾಡಲಾರರೋ, ಅದಕ್ಕಿಂತಲೂ ಹೆಚ್ಚಿನ ಶ್ರೇಯಸ್ಸನ್ನೇ ಸರಿಯಾದ ದಾರಿಯಲ್ಲಿಟ್ಟ* ಚಿತ್ತವು ಮಾಡುವದು.

# ೪. ಪುಷ್ಪವರ್ಗ (ಪುಪ್ಫವಗ್ಗ)

ಕೋ ಇಮಜ್ ಪಠವಿಜ್ ವಿಜೆಸ್ಸತಿ
ಯಮಲೋಕಜ್ ಚ ಇಮಜ್ ಸದೇವಕಜ್ ?
ಕೋ ಧಮ್ಮಪದಜ್ ಸುದೇಸಿತಜ್
ಕುಸಲೋ ಪುಪ್ಫಂ ಇವ ಪಚೆಸ್ಸತಿ ? ||೪೪||

೪೪. ಯಾವನು ಈ ಪೃಥ್ವಿಯನ್ನು ಗೆಲ್ಲುವನು, ದೇವತೆಗಳ ಸಹಿತ ಈ **ಯಮಲೋಕ**ವನ್ನು ಗೆಲ್ಲುವನು ? ಯಾವನು ಚೆನ್ನಾಗಿ ಉಪದೇಶಿಸಿದ **ಧರ್ಮಪದ**ವನ್ನು† ಜಾಣನು ಹೂಗಳನ್ನು ಆಯ್ದುಕೊಳ್ಳುವಂತೆ ಆಯ್ದು ಕೊಳ್ಳುವನು ?

ಸೇಖೋ ಪಠವಿಜ್ ವಿಜೆಸ್ಸತಿ
ಯಮಲೋಕಜ್ ಚ ಇಮಜ್ ಸದೇವಕಜ್
ಸೇಖೋ ಧಮ್ಮಪದಜ್ ಸುದೇಸಿತಜ್
ಕುಸಲೋ ಪುಪ್ಫಜ್ ಇವ ಪಚೆಸ್ಸತಿ ||೪೫||

೪೫. **ಶೈಕ್ಷನು**‡ ಪೃಥ್ವಿಯನ್ನು ಗೆಲ್ಲುವನು, ದೇವತೆಗಳ ಸಹಿತ

* ಸಮ್ಮಾಪ್ಪಣಿಹಿತಂ ( ಸಮ್ಯಕ್ಪ್ರಣಿಹಿತಂ) ಎಂಬ ಮೂಲದಲ್ಲಿ ಅಡಗಿರುವ ಪ್ರಣಿಧಾನವೆಂಬ ಮಾತಿಗೆ ಒಕ್ಕಡೆಯಲ್ಲಿ ನಿಲ್ಲಿಸುವದು ಎಂದು ಅಕ್ಷರಾರ್ಥವಾಗುವದು.

† ಧಮ್ಮಪದ ಎಂಬ ಈ ಗ್ರಂಥದ ಹೆಸರು ಧರ್ಮವಚನವೆಂಬರ್ಥದಲ್ಲಿಯೇ ಉಪಯುಕ್ತವಾಗಿರುಬಹುದೆಂದು ಇದರಿಂದ ತಿಳಿಯಬಹುದು.

‡ ಶೈಕ್ಷನಂದರೆ ಸಚ್ಛಿಷ್ಯನು, ನಿರ್ವಾಣಮಾರ್ಗದಲ್ಲಿ ಸೇರಿದ್ದು ಇನ್ನೂ ಅರ್ಹಂತನಾಗದ ಇರುವಾತನು. ಪರಿಶಿಷ್ಟವನ್ನು ನೋಡಿ.

ಈ ಯಮಲೋಕವನ್ನು ಗೆಲ್ಲುವನು. ಶೈಕ್ಷನು ಚೆನ್ನಾಗಿ ಉಪದೇಶಿಸಿದ ಧರ್ಮ ಪದವನ್ನು ಜಾಣನು ಹೂಗಳನ್ನು ಆಯ್ದುಕೊಳ್ಳುವಂತೆ ಆಯ್ದುಕೊಳ್ಳುತ್ತಾನೆ.

**ಫೇಣೂಪಮಜ್ ಕಾಯಂ ಇಮಜ್ ವಿದಿತ್ವಾ**
**ಮರೀಚಿಧಮ್ಮಜ್ ಅಭಿಸಂಬುಧಾನೋ**
**ಚೆತ್ವಾನ ಮಾರಸ್ಸ ಪಾಪುಪ್ಫಕಾನಿ**
**ಅದಸ್ಸನಜ್ ಮಚ್ಚುರಾಜಸ್ಸ ಗಚ್ಛೇ** ||೪೬||

೪೬. ಈ ಶರೀರವು ನೊರೆಯಂತಿರುವದೆಂದು* ತಿಳಿದು, ಬಿಸಿಲ್ಗುದುರೆ ಯಂತೆ ಇರುವದೆಂದು† ಚೆನ್ನಾಗಿ ಅರಿತುಕೊಂಡಾತನು ಮಾರನ ಹೂಗೋಲು ಗಳನ್ನು ಕಡಿದುಹಾಕುವನು, ಮೃತ್ಯುರಾಜನಿಗೆ ಕಾಣಿಸಿಕೊಳ್ಳದಿರುವನು.

**ಪುಪ್ಫಾನಿ ಹೇವ ಪಚಿನಂತಜ್ ಬ್ಯಾಸತ್ತಮನಸಜ್ ನರಜ್**
**ಸುತ್ತಜ್ ಗಾಮಜ್ ಮಹೋಘೋ ವಾ ಮಚ್ಚು ಆದಾಯ ಗಚ್ಛತಿ** ||೪೭||

೪೭. ಯಾವ ಮನುಷ್ಯನು ಮನಸ್ಸನ್ನು ಎತ್ತಲೋ ಇಟ್ಟು ಹೂಗಳನ್ನೇ ಕೊಯ್ಯುತ್ತಿರುವವನಂತೆ ಇರುವನೋ ಅವನನ್ನು ನಿದ್ರಿಸುತ್ತಿರುವ ಊರಿನವರನ್ನು ಹೊಳೆಯು ಬಂದು ಕೊಚ್ಚಿಕೊಂಡುಹೋಗುವಂತೆ ಮೃತ್ಯುವು ಕೊಂಡೊಯ್ಯು ವದು.

**ಪುಪ್ಫಾನಿ ಹೇವ ಪಚಿನಂತಜ್ ಬ್ಯಾಸತ್ತಮನಸಜ್ ನರಜ್**
**ಅತಿತ್ತಜ್ ಯೇವ ಕಾಮೇಸು ಅಂತಕೋ ಕುರುತೇ ವಸಜ್** ||೪೮||

೪೮. ಯಾವ ಮನುಷ್ಯನು ಎತ್ತಲೋ ಮನಸ್ಸಿಟ್ಟು ಹೂಗಳನ್ನು ಕೊಯ್ಯುತ್ತಿರುವನಂತೆ ಎಷ್ಟು ಕಾಮಗಳಿಂದಲೂ ತೃಪ್ತಿಯನ್ನೈದದೆ ಇರುವನೋ, ಅವನನ್ನು ಅಂತಕನು ವಶಗೊಳಿಸಿಕೊಳ್ಳುವನು.

**ಯಥಾ ಪಿ ಭಮರೋ ಪುಪ್ಫಜ್ ವಣ್ಣಗಂಧಜ್ ಅಹೇಠಯಜ್**
**ಪಲೇತಿ ರಸಂ ಆದಾಯ ಏವಜ್ ಗಾಮೇ ಮುನೀ ಚರೇ** ||೪೯||

೪೯. ದುಂಬಿಯು ಹೇಗೆ ಹೂವಿನ ಬಣ್ಣವನ್ನಾಗಲಿ ವಾಸನೆಯನ್ನಾಗಲಿ ಕೆಡಿಸದೆ ರಸವನ್ನು ತೆಗೆದುಕೊಂಡು ಓಡುವದೋ, ಹಾಗೆಯೇ ಮುನಿಯಾದ ವನು ಗ್ರಾಮದಲ್ಲಿ ಸಂಚರಿಸಬೇಕು.

* ಮಲಿನವಾದದ್ದೆಂದು. † ತೋರಿಹಾರುವದೆಂದು.

**ನ ಪರೇಸಜ್ ವಿಲೋಮಾನಿ ನ ಪರೇಸಜ್ ಕತಾಕತಜ್**
**ಅತ್ತನೋ ವಾ ಅವೆಕ್ಖೆಯ್ಯ ಕತಾನಿ ಅಕತಾನಿ ಚ** ||೫೦||

೫೦. ಮತ್ತೊಬ್ಬರ ಕೆಟ್ಟ ಕೃತ್ಯಗಳನ್ನಾಗಲಿ* ಮತ್ತೊಬ್ಬರು ಮಾಡಿದ್ದು ಬಿಟ್ಟದ್ದನ್ನಾಗಲಿ ನೋಡುವುದಕ್ಕೆ ಹೋಗಬಾರದು, ತಾನು ಮಾಡಿದ್ದು ಬಿಟ್ಟದ್ದು - ಇವುಗಳನ್ನೇ ನೋಡಿಕೊಳ್ಳಬೇಕು.

**ಯಥಾ ಪಿ ರಚಿರಜ್ ಪುಪ್ಫಜ್ ವಣ್ಣವಂತಜ್ ಅಗಂಧಕಜ್**
**ಏವಜ್ ಸುಭಾಸಿತಾ ವಾಚಾ ಅಫಲಾ ಹೋತಿ ಅಕುಬ್ಬತೋ** ||೫೧||

೫೧. ನೋಡುವದಕ್ಕೆ ಅಂದವಾಗಿದ್ದು ಬಣ್ಣವಿದ್ದು ವಾಸನೆಯಿಲ್ಲದ ಹೂವು ಹೇಗೋ ಹಾಗೆ ಮಾತಿನಂತೆ ನಡೆಯಿಲ್ಲದವನ ಒಳ್ಳೆಯ ಮಾತೂ ಬೆಲೆಯಿಲ್ಲದ್ದಾಗುವದು.

**ಯಥಾಪಿ ರುಚಿರಜ್ ಪುಪ್ಫಜ್ ವಣ್ಣವಂತಜ್ ಸುಗಂಧಕಜ್**
**ಏವಜ್ ಸುಭಾಸಿತಾ ವಾಚಾ ಸಫಲಾ ಹೋತಿ ಕುಬ್ಬತೋ** ||೫೨||

೫೨. ನೋಡುವದಕ್ಕೆ ಅಂದವಾಗಿ ಒಳ್ಳೆಯ ಬಣ್ಣವೂ ವಾಸನೆಯೂ ಇರುವ ಹೂವು ಹೇಗೋ, ಹಾಗೆ ಮಾತಿನಂತೆ ನಡೆಯುವವನ ಒಳ್ಳೆಯ ಮಾತು ಬೆಲೆಯುಳ್ಳದ್ದಾಗಿರುವದು.

**ಯಥಾಪಿ ಪುಪ್ಫರಾಸಿಂಹಾ ಕಯಿರಾ ಮಾಲಾಗುಣೇ ಬಹೂ**
**ಏವಜ್ ಜಾತೇನ ಮಚ್ಚೇನ ಕತ್ತಬ್ಬಜ್ ಕುಸಲಜ್ ಬಹುಜ್** ||೫೩||

೫೩. ಹೇಗೆ ಪುಷ್ಪರಾಶಿಯಿಂದ ಬಲುಬಗೆಯ ಮಾಲೆಗಳನ್ನು ಮಾಡಬಹುದಾಗಿರುವದೋ, ಹಾಗೆ ಹುಟ್ಟಿದ ಮನುಷ್ಯನು ಬಹಳ ಪುಣ್ಯಕರ್ಮಗಳನ್ನು ಮಾಡಬಹುದು.

**ನ ಪುಪ್ಫಗಂಧೋ ಪಟಿವಾತಜ್ ಏತಿ**
**ನ ಚಂದನಜ್ ತಗರಮಲ್ಲಿಕಾ ವಾ**
**ಸತಂ ಚ ಗಂಧೋ ಪಟಿವಾತಂ ಏತಿ**
**ಸಬ್ಬಾ ದಿಸಾ ಸಪ್ಪುರಿಸೋ ಪವಾತಿ** ||೫೪||

೫೪. ಹೂಗಳ ವಾಸನೆಯು ಗಾಳಿಗೆ ಎದುರಾಗಿ ಹಬ್ಬಲಾರದು, ಚಂದನ

* ಬಿರುನುಡಿಗಳನ್ನು - ಎಂದು ವ್ಯಾಖ್ಯಾನ.

ತಗರ ಮಲ್ಲಿಗೆ - ಇವುಗಳ ವಾಸನೆಯೂ ಹಾಗೆ ಹಬ್ಬಲಾರದು ; ಆದರೆ ಸತ್ಪುರುಷರ ವಾಸನೆಯು ಗಾಳಿಗೆ ಎದುರಾಗಿಯೂ ಹಬ್ಬಬಲ್ಲದು. ಸತ್ಪುರುಷನು ಎಲ್ಲಾ ದಿಕ್ಕುಗಳಲ್ಲಿಯೂ ತನ್ನ ಪರಿಮಳವನ್ನು ಬೀರುವನು.

**ಚಂದನಙ್ ತಗರಙ್ ವಾ ಪಿ ಅಪ್ಪಲಙ್ ಅಥ ವಸ್ಸಿಕೀ**
**ಏತೇಸಙ್ ಗಂಧಜಾತಾನಙ್ ಸೀಲಗಂಧೋ ಅನುತ್ತರೋ**

೫೫. ಚಂದನವಾಗಲಿ ತಗರವಾಗಲಿ* ನೈದಿಲೆಯಾಗಲಿ ವಾರ್ಷಿಕಿ ಯಾಗಲಿ† ಇವುಗಳೆಲ್ಲದರ ವಾಸನೆಗಳಿಗಿಂತಲೂ **ಶೀಲ**ದ ಪರಿಮಳವು ಮಿಗಿಲಿಲ್ಲದಷ್ಟು ಹೆಚ್ಚಿನದು.

**ಅಪ್ಪಮತ್ತೋ ಅಯಙ್ ಗಂಧೋ ಯಾ ಯಙ್ ತಗರಚಂದನೀ**
**ಯೋ ಚ ಸೀಲವತಙ್ ಗಂಧೋ ವಾತಿ ದೇವೇಸು ಉತ್ತಮೋ** ||೫೬||

೫೬. ತಗರಚಂದನಗಳಲ್ಲಿರುವ ವಾಸನೆಯೆಂಬುದು ಸ್ವಲ್ಪ ಮಾತ್ರವಾಗಿರುವದು ; **ಶೀಲ**ವಂತರ ಉತ್ತಮಪರಿಮಳದ ವಾಸನೆಯು ದೇವತೆಗಳಲ್ಲಿಯೂ ಹಬ್ಬಿರುವದು.

**ತೇಸಙ್ ಸಂಪನ್ನಸೀಲಾನಙ್ ಅಪ್ಪಮಾದವಿಹಾರಿನಙ್**
**ಸಮ್ಮಾದಞ್ಞಾ ವಿಮುತ್ತಾನಙ್ ಮಾರೋ ಮಗ್ಗಙ್ ನ ವಿಂದತಿ** ||೫೭||

೫೭. ಶೀಲವಂತರಾಗಿ ಎಚ್ಚರಿಕೆಯಿಂದ ವಿಹರಿಸುತ್ತಾ ಸರಿಯಾದ ತಿಳಿವಳಿಕೆಯಿಂದ **ಮುಕ್ತ**ರಾಗಿರುವವರ ಮಾರ್ಗವು‡ **ಮಾರ**ನಿಗೆ ಸಿಕ್ಕುವದಿಲ್ಲ.

**ಯಥಾ ಸಂಕಾರಧಾನಸ್ಮಿಙ್ ಉಜ್ಝಿತಸ್ಮಿಙ್ ಮಹಾಪಥೇ**
**ಪದುಮಙ್ ತತ್ಥ ಸುಚಿಗಂಧಙ್ ಮನೋರಮಙ್**

* ತಗರ ಎಂಬುದು ಯಾವ ಹೂವೆಂಬುದು ತಿಳಿಯಲಿಲ್ಲ ; ಕಸ್ತೂರಿಜಾಜಿ ಎಂದು ಕೆಲವರೂ, ತಾವರೆ ಎಂದು ಕೆಲವರೂ - ಪರಿವರ್ತಿಸಿರುತ್ತಾರೆ.

† ವಾರ್ಷಿಕಿ ಎಂಬುದು ಒಂದು ಬಗೆಯ ಮಲ್ಲಿಗೆಯೆಂಬುದು ಕೆಲವರು ; ಬೇರೆಯಬಗೆಯ ಹೂವಾಗಿದ್ದರೂ ಇರಬಹುದು.

‡ ಮಿಕ್ಕವರು ಸಂಸಾರದಲ್ಲಿ ತೊಳಲುವಾಗ ಅವರ ಹೆಜ್ಜೆಯ ಗುರುತನ್ನು ಮಾರನು ಕಂಡುಹಿಡಿಯಬಲ್ಲನು, ಆದರೆ ಶೀಲವಂತನಾದ ಅರ್ಹಂತನು ಸತ್ತರೆ ಯಾವ ಗುರುತೂ ಉಳಿಯುವದಿಲ್ಲ ; ಎಂದರೆ ಮತ್ತೊಂದು ಜನ್ಮಕ್ಕೆ ಬೇಕಾಗುವ ಸ್ಕಂಧಗಳ ಸೆಲೆಯೇ ಉಳಿಯುವದಿಲ್ಲ.

**ಏವಜ್ ಸಂಕಾರ ಭೂತೇಸು ಅಂಧಭೂತೇ ಪುಥುಜ್ಜನೇ**
**ಅತಿರೋಚತಿ ಪಞ್ಞಾಯ ಸಮ್ಮಾಸಂಬುದ್ಧ ಸಾವಕೋ ||೫೮-೫೯||**

೫೮-೫೯. ಹೇಗೆ ಬೀದಿಯಲ್ಲಿ ಹಾಕಿದ ತಿಪ್ಪೆಯಲ್ಲಿ ಮನೋಹರವಾದ ಸುವಾಸನೆಯ ಪದ್ಮವು ಹುಟ್ಟಿ ಒಪ್ಪುತ್ತಿರುವದೋ, ಹಾಗೆ ತಿಪ್ಪೆಗಳಂತೆ ಕುರುಡರಾಗಿರುವ ಮೂಢರ ನಡುವೆ **ಸಮ್ಯಕ್ ಸಂಬುದ್ಧನ*** **ಶ್ರಾವಕನು** ತನ್ನ ಪ್ರಜ್ಞೆಯಿಂದ ಥಳಥಳಿಸುತ್ತಿರುವನು.

# ೫. ಬಾಲವರ್ಗ (ಬಾಲವಗ್ಗ)

**ದೀಘಾ ಜಾಗರತೋ ರತ್ತಿ ದೀಘಜ್ ಸಂತಸ್ಸ ಯೋಜನಜ್**
**ದೀಘೋ ಬಾಲಾನಜ್ ಸಂಸಾರೋ ಸದ್ಧಮ್ಮಜ್ ಅವಿಜಾನತಜ್ ||೬೦||**

೬೦. ಜಾಗರಣೆಮಾಡುವವನಿಗೆ ಒಂದು ರಾತ್ರಿಯೇ ಬಲುದೀರ್ಘವಾಗಿರುವದು, ಬಳಲಿದವನಿಗೆ ಯೋಜನವೇ ಎಷ್ಟೋ ದೂರವಾಗಿರುವದು. ಸದ್ಧರ್ಮವನ್ನು ಅರಿಯದ ತಿಳಿಗೇಡಿಗಳಿಗೆ **ಸಂಸಾರವು**† ಬಹುದೀರ್ಘವಾಗಿರುವದು.

**ಚರಞ್ಚೆನ್ನಾಧಿಗಚ್ಛೆಯ್ಯ ಸೆಯ್ಯಜ್ ಸದಿಸಮ್ ಅತ್ತನೋ**
**ಏಕಚರಿಯಜ್ ದಳ್ಹಜ್ ಕಯಿರಾ ನತ್ಥಿ ಬಾಲೇ ಸಹಾಯತಾ ||೬೧||**

೬೧. ಸಂಚರಿಸುವಾಗ ತನಗಿಂತ ಉತ್ತಮನು‡ ಅಥವಾ ತನಗೆ ಸಮಾನನು

* ಸಮ್ಯಕ್ಸಂಬುದ್ಧನ ಶ್ರಾವಕ - ಸರಿಯಾದ ಜ್ಞಾನವನ್ನು ಹೊಂದಿದ ಬುದ್ಧನ ಶಿಷ್ಯ.

† ಜನನಮರಣಗಳ ಚಕ್ರ ; ಬೌದ್ಧರು ಆತ್ಮನನ್ನು ಒಪ್ಪದಿದ್ದರೂ ಸಂಸಾರವನ್ನು ಒಪ್ಪುತ್ತಾರೆ. ಪರಿಶಿಷ್ಟವನ್ನು ನೋಡಿ.

‡ ಶೀಲ ಸಮಾಧಿ ಪ್ರಜ್ಞಾಗುಣಗಳಿಂದ ತನಗಿಂತಲೂ ಹೆಚ್ಚಿನ ಸ್ಥಿತಿಯಲ್ಲಿರುವಾತನು.

ದೊರಕದಿದ್ದರೆ ತಾನೊಬ್ಬನೇ ನಡೆಯುವದನ್ನೇ ಗಟ್ಟಿಮಾಡಿಕೊಳ್ಳಬೇಕು, ಏಕೆಂದರೆ ತಿಳಿಗೇಡಿಯು ಜೊತೆಗಾರನಾಗಲಾರನು.

**ಪುತ್ತಾ ಮತ್ಥಿ ಧನಂ ಮತ್ಥಿ ಇತಿ ಬಾಲೋ ವಿಹಣ್ಣತಿ**
**ಅತ್ತಾ ಹಿ ಅತ್ತನೋ ನತ್ಥಿ ಕುತೋ ಪುತ್ತಾ ? ಕುತೋ ಧನಜ್ ?** ||೬೨||

೬೨. ನನಗೆ ಮಕ್ಕಳಿರುವರು, ನನಗೆ ಹಣವಿರುವದು - ಎಂದುಕೊಂಡು ತಿಳಿಗೇಡಿಯು ಕೆಡುವನು. ತಾನೇ* ತನಗಿಲ್ಲ, ಹೀಗಿರುವಲ್ಲಿ ಎಲ್ಲಿಯ ಮಕ್ಕಳು, ಎಲ್ಲಿಯ ಹಣ ?

**ಯೋ ಬಾಲೋ ಮಣ್ಣತೀ ಬಾಲ್ಯಜ್ ಪಂಡಿತೋ ವಾ ಪಿ ತೇನ ಸೋ**
**ಬಾಲೋ ಚ ಪಂಡಿತಮಾನಿ ಸ ವೇ ಬಾಲೋ ತಿ ವುಚ್ಚತಿ** ||೬೩||

೬೩. ಯಾವ ತಿಳಿಗೇಡಿಗೆ ತನಗೇನೂ ತಿಳಿಯದೆಂದು ತಿಳಿದಿರುವದೋ ಅವನು ಅಷ್ಟರಮಟ್ಟಿಗೆ ಪಂಡಿತನೆ. ತಾನು ಅವಿವೇಕಿಯಾದರೂ ಪಂಡಿತನೆಂದು ಯಾವನು ತಿಳಿದುಕೊಂಡಿರುವನೋ ಅವನೇ ತಿಳಿಗೇಡಿಯೆನಿಸುವನು.

**ಯಾವಜೀವಂಪಿ ಚೆ ಬಾಲೋ ಪಂಡಿತಜ್ ಪಯಿರುಪಾಸತಿ**
**ನ ಸೋ ಧಮ್ಮಜ್ ವಿಜಾನಾತಿ ದಬ್ಬೀ ಸೂಪರಸಜ್ ಯಥಾ** ||೬೪||

೬೪. ತಿಳಿಗೇಡಿಯು ತನ್ನ ಜೀವಿತಕಾಲವೆಲ್ಲ ಪಂಡಿತನ ಸೇವೆಯಲ್ಲಿದ್ದರೂ, ಸೌಟಿಗೆ ತೊವೆಯ ಸವಿಯು ತಿಳಿಯದಿರುವಂತೆ, ಅವನಿಗೆ ಧರ್ಮವು ಒಂದಿಷ್ಟೂ ತಿಳಿಯದೆ ಇರುವದು.

**ಮುಹತ್ತಂ ಅಪಿ ಚೆ ವಿಞ್ಞೂ ಪಂಡಿತಜ್ ಪಯಿರುಪಾಸತಿ**
**ಖಿಪ್ಪಜ್ ಧಮ್ಮಜ್ ವಿಜಾನಾತಿ ಜಿಹ್ವಾ ಸೂಪರಸಜ್ ಯಥಾ** ||೬೫||

೬೫. ಜಾಣನು ಒಂದೇ ಮುಹೂರ್ತದವರೆಗೆ ಪಂಡಿತನ ಸೇವೆಯಲ್ಲಿದ್ದರೂ ಸಾಕು, ನಾಲಗೆಯು ತೊವೆಯ ಸವಿಯನ್ನರಿತುಕೊಳ್ಳುವಂತೆ ಅವನು ಬೇಗನೆ ಧರ್ಮವನ್ನು ಅರಿತುಕೊಳ್ಳುವನು.

**ಚರಂತಿ ಬಾಲಾ ದುಮ್ಮೇಧಾ ಅಮಿತ್ತೇನೇವ ಅತ್ತನಾ**
**ಕರೊಂತಾ ಪಾಪಕಜ್ ಕಮ್ಮಜ್ ಯಜ್ ಹೋತಿ ಕಟುಕಪ್ಫಲಜ್** ||೬೬||

೬೬. ತಿಳಿವಳಿಕೆಸಾಲದ ಮೂರ್ಖರು ಯಾವದರಿಂದ ಕಹಿಯಾದ ಫಲ

* ಮೂಲದಲ್ಲಿರುವ ಅತ್ತನೆಂಬ ಮಾತಿಗೆ ತಾನೇ, ತನ್ನ ದೇಹವೇ - ಎಂದರ್ಥ.

ವುಂಟಾಗುವದೋ ಅಂಥ ಪಾಪಕರ್ಮವನ್ನೇ ಮಾಡುತ್ತಾ ತಮಗೆ ತಾವೇ ಶತ್ರುಗಳಾಗಿ ನಡೆಯುತ್ತಿರುವರು.

**ನ ತಙ್ ಕಮ್ಮಙ್ ಕತಙ್ ಸಾಧು ಯಙ್ ಕತ್ವಾ ಅನುತಪ್ಪತಿ**
**ಯಸ್ಸ ಅಸ್ಸುಮುಖೋ ರೋದಙ್ ವಿಪಾಕಙ್ ಪಟಿಸೇವತಿ ||೬೭||**

೬೭. ಯಾವದನ್ನು ಮಾಡಿದರೆ ಅನುತಾಪವುಂಟಾಗದೋ, ಯಾವದರ ಫಲವನ್ನು ಕಣ್ಣೀರಿನ ಮೋರೆಯಿಂದ ಅಳುತ್ತಾ ಅನುಭವಿಸಬೇಕಾಗುವದೋ, ಆ ಕರ್ಮವನ್ನು ಮಾಡುವದು ಸರಿಯಲ್ಲ.

**ತಙ್ ಚ ಕಮ್ಮಙ್ ಕತಙ್ ಸಾಧು ಯಙ್ ಕತ್ವಾ ನಾನುತಪ್ಪತಿ**
**ಯಸ್ಸ ಪತೀತೋ ಸುಮನೋ ವಿಪಾಕಙ್ ಪಟಿಸೇವತಿ ||೬೮||**

೬೮. ಯಾವದನ್ನು ಮಾಡಿದರೆ ಅನುತಾಪವುಂಟಾಗುವದೋ, ಯಾವದರ ಫಲವನ್ನು ಹಿಗ್ಗುತ್ತಾ ಸೌಮನಸ್ಯದಿಂದ ಅನುಭವಿಸಬಹುದೋ, ಆ ಕರ್ಮವನ್ನು ಮಾಡುವದು ಸರಿಯಾದದ್ದು.

**ಮಧುಙ್ ವ ಮಣ್ಣತೀ ಬಾಲೋ ಯಾವ ಪಾಪಙ್ ನ ಪಚ್ಚತಿ**
**ಯದಾ ಚ ಪಚ್ಚತಿ ಪಾಪಙ್ ಅಥ ಬಾಲೋ ದುಕ್ಖಙ್ ನಿಗಚ್ಛತಿ ||೬೯||**

೬೯. ಎಲ್ಲಿಯವರೆಗೆ ಪಾಪವು ಪಕ್ವವಾಗುವದಿಲ್ಲವೋ ಅಲ್ಲಿಯವರೆಗೂ ತಿಳಿಗೇಡಿಯಾದವನು ಅದನ್ನು ಜೇನುತುಪ್ಪವೆಂದೇ ಎಣಿಸಿರುತ್ತಾನೆ. ಆದರೆ ಯಾವಾಗ ಪಾಪವು ಪಕ್ವವಾಗುವದೋ ಆಗ ದುಃಖವನ್ನು ಹೊಂದುವನು.

**ಮಾಸೇ ಮಾಸೇ ಕುಸಗ್ಗೇನ ಬಾಲೋ ಭುಂಜೇಥ ಭೋಜನಙ್**
**ನ ಸೋ ಸಂಖಾಟ - ಧಮ್ಮಾನಙ್ ಕಾಲಙ್ ಅಗ್ಘತಿ ಸೋಳಸಿಙ್ ||೭೦||**

೭೦. ತಿಳಿಗೇಡಿಯು ತಿಂಗಳುತಿಂಗಳೂ ಕುಶಾಗ್ರದಿಂದ ಭೋಜನ ಮಾಡಲಿ. ಅವನು ಧರ್ಮದ ಲೆಕ್ಕಾಚಾರವನ್ನು* ಬಲ್ಲವರ .ವೀಸಪಾಲನ್ನೂ ಸರಿಹೋಲಲಾರನು.

---

* ಸಂಖ್ಯಾತಧರ್ಮರು - ಎಂಬ ಮೂಲಕ್ಕೆ ಬುದ್ಧಧರ್ಮವನ್ನು ತಿಳಿದುಕೊಂಡವರು, ಅದರ ತೂಕವನ್ನು ಬಲ್ಲವರು ; ಸ್ರೋತಾಪನ್ನನಿಂದ ಹಿಡಿದು ಕ್ಷೀಣಾಸ್ರವನಾದ ಅರಹಂತನವರೆಗಿನ ಸ್ಥಿತಿಯ ಜ್ಞಾನಿಗಳು - ಎಂದು ವ್ಯಾ||. ಕುಶಾಗ್ರದಿಂದ ಭೋಜನ ಮಾಡುವದೆಂಬುದು ಒಂದು ಬಗೆಯ ತಪಸ್ಸೆಂದು ಬುದ್ಧನ ಕಾಲದಲ್ಲಿ ಕೆಲವರು ಭಾವಿಸುತ್ತಿದ್ದರೆಂದು ತೋರುತ್ತದೆ.

ನ ಹಿ ಪಾಪಜ್ ಕತಜ್ ಕಮ್ಮಜ್ ಸಜ್ಜು ಖೀರಜ್ ವ ಮುಚ್ಚತಿ
ದಹಜ್ ತಜ್ ಬಾಲಂ ಅನ್ವೇತಿ ಭಸ್ಮಚ್ಛನ್ನೋ ವ ಪಾವಕೋ ||೭೧||

೭೧. ಹೊಸ ಹಾಲು ಕೂಡಲೆ ಒಡೆಯದಿರುವಂತೆಯೇ ಪಾಪಕರ್ಮವೂ ಮಾಡಿದ ಕೂಡಲೆ ಪಕ್ವವಾಗುವದಿಲ್ಲ ; ಬೂದಿಮುಚ್ಚಿದ ಕೆಂಡದ ಹಾಗೆ ಆ ಅವಿವೇಕಿಯನ್ನು ಸುಡುವದಕ್ಕೆ ಹಿಂಬಾಲಿಸುತ್ತಿರುವದು.

ಯಾವದ್ ಏವ ಅನತ್ಥಾಯ ಞತ್ತಜ್ ಬಾಲಸ್ಸ ಜಾಯತಿ
ಹಂತಿ ಬಾಲಸ್ಸ ಸುಕ್ಕಜ್‌ಸಜ್ ಮುದ್ಧಂ ಅಸ್ಸ ವಿಪಾತಯಜ್ ||೭೨||

೭೨. ತಿಳಿಗೇಡಿಗೆ ಇರುವ ಜ್ಞಾನವೆಲ್ಲವೂ ಅವನ ಅನರ್ಥಕ್ಕಾಗಿಯೇ ಉಂಟಾಗಿರುವದು ; ಅದು ಆ ತಿಳಿಗೇಡಿಯ **ಶುಕ್ಲಾಂಶ**ವನ್ನು* ನಾಶಗೊಳಿಸುವದು, ಅವನ ತಲೆಯನ್ನು† ಕೆಡಹುವದು.

ಅಸತಜ್ ಭಾವನಜ್ ಇಚ್ಛೆಯ್ಯ ಪುರೇಕ್ಖಾರಞ್ ಚ ಭಿಕ್ಖೂಸು
ಆವಾಸೇಸು ಚ ಇಸ್ಸರಿಯಜ್ ಪೂಜಾ ಪರಕುಲೇಸು ಚ ||೭೩||
ಮಾಮೇವ ಕತಂ ಮಣ್ಣಂತು ಗಿಹೀ ಪಬ್ಬಜಿತಾ ಉಭೋ
ಮಾಮೇವ ಆತಿವಸಾ ಅಸ್ಸು ಕಿಚ್ಚಾಕಿಚ್ಚೇಸು ಕಿಸ್ಮಿಚಿ
ಇತಿ ಬಾಲಸ್ಸ ಸಂಕಪ್ಪೋ ಇಚ್ಛಾ ಮಾನೋ ಚ ವಡ್ಢತಿ ||೭೪||

೭೩-೭೪. ಇಲ್ಲದಿರುವ ಭಾವನೆಯನ್ನೂ‡ ಭಿಕ್ಷುಗಳಲ್ಲಿ ಪುರಸ್ಕಾರವನ್ನೂ ಮಠಗಳಲ್ಲಿ ಒಡೆತನವನ್ನೂ ಮತ್ತೊಬ್ಬರ ಮನೆಯಲ್ಲಿ ಪೂಜೆಯನ್ನೂ ಬಯಸುತ್ತಾನೆ. ''ಗೃಹಸ್ಥರೂ ಸಂನ್ಯಾಸಿಗಳೂ ನಾನು ಮಾಡಿದ್ದನ್ನೇ ಒಪ್ಪಲಿ, ಮಾಡತಕ್ಕದ್ದು ಮಾಡಬಾರದ್ದು - ಎಂಬ ವಿಷಯಕ್ಕೆ ಅವರಿಬ್ಬರೂ ನನ್ನ ವಶದಲ್ಲಿಯೇ ಇದ್ದುಕೊಂಡಿರಲಿ'' ಎಂದು ತಿಳಿಗೇಡಿಯ ಸಂಕಲ್ಪವಿರುವದು ; (ಅವನ) ಇಚ್ಛೆಯೂ ಅಭಿಮಾನವೂ ಬೆಳೆಯುತ್ತಿರುವವು.

* ಪುಣ್ಯಭಾಗ. † ತಲೆ ಎಂದರೆ ಪ್ರಜ್ಞೆ, ಸಾಂ ||

‡ ಇಲ್ಲಿರುವ 'ಭಾವನೆ' ಎಂಬುದಕ್ಕೆ ಬೇರೆಬೇರೆ ಅರ್ಥವನ್ನು ಮಾಡಿರುತ್ತಾರೆ. ತನಗೆ ಹೆಚ್ಚಿನ ಯೋಗ್ಯತೆಯಿಲ್ಲದಿದ್ದರೂ ಜನರು ಮನ್ನಣೆಮಾಡಬೇಕೆಂದು ಎಣಿಸುವನು (ವ್ಯಾ) ; ತಾನು ಮೈತ್ರೀ, ಕರುಣಾ ಮುಂತಾದ ಭಾವನೆಯನ್ನು ಮಾಡುತ್ತಿರುವನೆಂದು ಜನರು ಭಾವಿಸಲಿ ಎಂದು ಬಯಸುವನು ಪೂ|| ; ತನಗೆ ಅನವಶ್ಯಕವಾದ ವಸ್ತುಗಳನ್ನು ಕುರಿತು ಹಂಬಲಿಸುತ್ತಿರುವನು (ಸಾಂ).

ಅಞ್ಞಾ ಹಿ ಲಾಭೂಪನಿಸಾ ಅಞ್ಞಾ ನಿಬ್ಬಾಣಗಾಮಿನಿ
ಏವಂ ಏತಙ್ ಅಭಿಞ್ಞಾಯ ಭಿಕ್ಖು ಬುದ್ಧಸ್ಸ ಸಾವಕೋ
ಸಕ್ಕಾರಙ್ ನಾಭಿನಂದೆಯ್ಯ ವಿವೇಕಂ ಅನುಬ್ರೂಹಯೆ ॥೭೫॥

೭೫. ಲಾಭದ ಉಪನಿಷತ್ತು* ಬೇರೆ, **ನಿರ್ವಾಣ**ವನ್ನು ಮುಟ್ಟಿಸುವ ಉಪನಿಷತ್ತು ಬೇರೆ. ಹೀಗೆಂಬುದು ಬುದ್ಧನ **ಶ್ರಾವಕ**ನಾದ ಭಿಕ್ಷುವು ಅರಿತುಕೊಂಡು ಸತ್ಕಾರಕ್ಕೆ ಹಿಗ್ಗದಿರಬೇಕು, ವಿವೇಕವನ್ನು† ಹೆಚ್ಚಿಸಿಕೊಳ್ಳುತ್ತಿರಬೇಕು.

# ೬. ಪಂಡಿತವರ್ಗ (ಪಂಡಿತವಗ್ಗ)

ನಿಧೀನಙ್ ವ ಪವತ್ತಾರಙ್ ಯಙ್ ಪಸ್ಸೇ ವಜ್ಜದಸ್ಸಿನಙ್
ನಿಗ್ಗಯ್ಹವಾದಿಙ್ ಮೇಧಾವಿಙ್ ತಾದಿಸಙ್ ಪಂಡಿತಙ್ ಭಜೇ
ತಾದಿಸಙ್ ಭಜಮಾನಸ್ಸ ಸೆಯ್ಯೋ ಹೋತಿ ನ ಪಾಪಿಯೋ ॥೭೬॥

೭೬. ನಿಧಿಗಳನ್ನು ತಿಳಿದು ಹೇಳುವವನಂತೆ ಮಾಡಬಾರದ್ದನ್ನು‡ ಕಂಡು ಕಟ್ಟಪ್ಪಣೆಮಾಡುವ ಜಾಣನು ಯಾವನಾದರೂ ಕಂಡು ಬಂದರೆ, ಅಂಥ

* ಉಪನಿಸಾ - ಉಪನಿಷತ್ತು ಸಾಂ॥ ; ಉಪನಿಶ್ರೇಣೀ ಎಂದು ಪೂ (೨) ॥ ಬರೆದಿರುವದು ಸರಿಯಾದರೆ ನಿಚ್ಚಣಿಗೆ ಎಂದು ಅರ್ಥವನ್ನು ಮಾಡಬೇಕಾಗುವದು. ಉಪನಿಷತ್ತು ಎಂಬ ಮಾತನ್ನು ಬೇಕಾದಾಗ ಫಲದ ಬಳಿಗೆ ಕೊಂಡೂಯ್ಯುವ ಹಾದಿ ಎಂಬರ್ಥದಲ್ಲಿ ಉಪಯೋಗಿಸುತ್ತಿದ್ದರೆಂದು ತೋರುತ್ತದೆ ; ಸುರೇಶ್ವರಾಚಾರ್ಯರು 'ಸಂಬಂಧವಾರ್ತಿಕ' ದಲ್ಲಿ ಈ ಮಾತನ್ನು ವಿವರಿಸುವ ಬಗೆಯನ್ನು ನೋಡಿ, ಛಾಂದೋಗ್ಯದಲ್ಲಿ 'ಅಸುರಾಣಾಮುಪನಿಷತ್' (೮-೮-೫) ಎಂಬ ಪ್ರಯೋಗವಿದೆ.

† ವಿವೇಕವು ಕಾಯವಿವೇಕ (ಏಕಾಂತವಾಸ), ಚಿತ್ತವಿವೇಕ (ರಾಗದ್ವೇಷಾದಿಗಳಿಲ್ಲದಿರುವದು), ಉಪಾಧಿವಿವೇಕ (ನಿರ್ವಾಣ) ಎಂದು ಮೂರು ಬಗೆ ; ಇಲ್ಲಿ ಮೊದಲನೆಯ ಎರಡರ್ಥವನ್ನು ತೆಗೆದುಕೊಳ್ಳಬಹುದಾಗಿದೆ.

‡ ನಿಧಿಗಳು ಸಾಮಾನ್ಯರಿಗೆ ತಿಳಿಯದೆ ಇರುವಂತೆ ಯಾವದನ್ನು ಮಾಡಬಾರದೆಂಬುದು ಸಾಮಾನ್ಯರಿಗೆ ತಿಳಿದಿರುವದಿಲ್ಲ.

ಪಂಡಿತನನ್ನು ಸೇವಿಸಬೇಕು. ಅಂಥವನನ್ನು ಸೇವಿಸಿದವನಿಗೆ ಒಳ್ಳೆಯದಾಗುವದೇ ಹೊರತು ಕೆಡುಕಾಗುವದಿಲ್ಲ.

**ಓವದೆಯ್ಯನುಸಾಸೆಯ್ಯ ಅಸಬ್ಭಾ ಚ ನಿವಾರಯೆ,**
**ಸತಜ್ ಹಿ ಸೋ ಪಿಯೋ ಹೋತಿ ಅಸತಜ್ ಹೋತಿ ಅಪ್ಪಿಯೋ ||೭೭||**

೭೭. ಯಾವನು ಗದರಿಸಿ ತಿಳಿವಳಿಕೆಕೊಟ್ಟು ಕೆಟ್ಟ ನಡತೆಯನ್ನು ಬಿಡಿಸುವದಕ್ಕೆ ಹೋಗುವನೋ ಅಂಥವನು ಒಳ್ಳೆಯವರಿಗೆ ಪ್ರಿಯನಾಗುವನು, ಕೆಟ್ಟವರಿಗೆ ಅಪ್ರಿಯನಾಗುವನು.

**ನ ಭಜೇ ಪಾಪಕೇ ಮಿತ್ತೇ ನ ಭಜೇ ಪುರಿಸಾಧಮೇ**
**ಭಜೇಥಾ ಮಿತ್ತೆ ಕಲ್ಯಾಣೇ ಭಜೇಥಾ ಪುರಿಸುತ್ತಮೇ ||೭೮||**

೭೮. ಕೆಟ್ಟ ಮಿತ್ರರನ್ನು ಸೇರಬಾರದು, ಪುರುಷಾಧಮರನ್ನು ಸೇರಬಾರದು ; **ಕಲ್ಯಾಣಮಿತ್ರ**ರನ್ನು* ಸೇರಬೇಕು, ಪುರುಷೋತ್ತಮರನ್ನು ಸೇರಬೇಕು.

**ಧಮ್ಮಪೀತಿ ಸುಖಜ್ ಸೇತಿ ವಿಪ್ಪಸನ್ನೇನ ಚೇತಸಾ**
**ಅರಿಯಪ್ಪವೇದಿತೇ ಧಮ್ಮೇ ಸದಾ ರಮತಿ ಪಂಡಿತೋ ||೭೯||**

೭೯. ಪಂಡಿತನಾದವನಿಗೆ ಧರ್ಮದ ಪಾನವಿರುವದರಿಂದ† ಅವನು ಪ್ರಸನ್ನಚಿತ್ತದಿಂದ ಸುಖವಾಗಿ ನಿದ್ರಿಸುವನು. ಅವನು **ಆರ್ಯ**ರು ತೋರಿಸಿ ಕೊಟ್ಟ ಧರ್ಮದಲ್ಲಿ ಯಾವಾಗಲೂ ನಿರತನಾಗಿರುವನು.

**ಉದಕಜ್ ಹಿ ನಯಂತಿ ನೇತ್ತಿಕಾ ಉಸುಕಾರಾ ನಮಯಂತಿ ತೇಜನಜ್**
**ದಾರುಜ್ ನಮಯಂತಿ ತಚ್ಛಕಾ ಅತ್ತಾನಜ್ ದಮಯಂತಿ ಪಂಡಿತಾ ||೮೦||**

೮೦. ನೀರುಹಾಯಿಸುವವರು ನೀರನ್ನು ಬೇಕಾದ ಕಡೆಗೆ ಒಯ್ಯುತ್ತಾರೆ, ಬಾಣಗಳನ್ನು ಮಾಡುವವರು ಬಿದಿರನ್ನು ಬೇಕಾದಂತೆ ಬಗ್ಗಿಸಿಕೊಳ್ಳುತ್ತಾರೆ, ಬಡಗಿಗಳು ಮರವನ್ನು ಬೇಕಾದ ಮಾಟಕ್ಕೆ ಮಾಡಿಕೊಳ್ಳುತ್ತಾರೆ. ಇದರಂತೆ ಪಂಡಿತರು ತಮ್ಮನ್ನು ತಾವೇ ತಿದ್ದಿಕೊಳ್ಳುತ್ತಾರೆ.

* ಪ್ರಿಯವಾಗಿರುವ ಒಳ್ಳೆಯ ಭಾವನೆಗಳನ್ನು ಹೇಳಿಕೊಡುವವರು.

† ವ್ಯಾಖ್ಯಾನದಂತೆ ಮಾಡಿದ ಅರ್ಥವಿದು ; ಧರ್ಮದ ಪ್ರೀತಿಯೆಂದೂ ಅರ್ಥ ಮಾಡಬಹುದೆಂತ ತೋರುವದು.

ಸೇಲೋ ಯಥಾ ಏಕಘನೋ ವಾತೇನ ನ ಸಮೀರತಿ
ಏವಜ್ ನಿಂದಾ - ಪಸಜ್ಸಾಸು ನ ಸಮಿಂಜಂತಿ ಪಂಡಿತಾ ||೮೧||

೮೧. ಒಂದೇ ಗಟ್ಟಿಯಾಗಿರುವ ದೊಡ್ಡ ಬಂಡೆಯು ಹೇಗೆ ಗಾಳಿಗೆ ಅಲುಗಾಡದೆ ಇರುವದೋ ಅದರಂತೆ ಪಂಡಿತರು, ಜನರು ತಮ್ಮನ್ನು ನಿಂದಿಸಿದರೂ ಹೊಗಳಿದರೂ, ಅಲುಗಾಡದೆ ಇರುವರು.

ಯಥಾ ಪಿ ರಹದೋ ಗಂಭೀರೋ ವಿಪ್ಪಸನ್ನೋ ಅನಾವಿಲೋ
ಏವಜ್ ಧಮ್ಮಾನಿ ಸುತ್ವಾನಿ ವಿಪ್ಪಸೀದಂತಿ ಪಂಡಿತಾ ||೮೨||

೮೨. ಆಳವಾಗಿರುವ ಮಡುವು ಹೇಗೆ ತಿಳಿಯಾಗಿ ಬಗ್ಗಡವಿಲ್ಲದೆ ಇರುವದೋ ಹಾಗೆಯೇ ಧರ್ಮಗಳನ್ನು ಕೇಳಿ ತಿಳಿದುಕೊಂಡ ಪಂಡಿತರು ಸ್ವಚ್ಛವಾಗಿರುತ್ತಾರೆ.

ಸಬ್ಬತ್ಥಾ ವೇ ಸಪ್ಪುರಿಸಾ ಚ ಜಂತಿ
ನ ಕಾಮಕಾಮಾ ಲಪಯಂತಿ ಸಂತೋ
ಸುಖೇನ ಫುಟ್ಠಾ ಅಥ ವಾ ದುಕ್ಖೇನ
ನುಚ್ಚಾವಾಚಜ್ ಪಂಡಿತಾ ದಸ್ಸಯಂತಿ ||೮೩||

೮೩. ಸತ್ಪುರುಷರು ಮನಬಂದಂತೆ ನಡೆಯುವದನ್ನು ಯಾವಾಗಲೂ ತ್ಯಜಿಸುವರು.* ಸಂತರಾದವರು ಸುಖದಾಸೆಯಿಂದ ಯಾವ ಮಾತನ್ನೂ ಆಡರು. ಸುಖವು ಬಂದೊದಗಲಿ ದುಃಖವು ಬಂದೊದಗಲಿ, ಜಾಣರು ಏರುಪೇರುಗಳನ್ನು ಎಂದಿಗೂ ತೋರಿಸಿಕೊಳ್ಳುವದಿಲ್ಲ.

ನ ಅತ್ತಹೇತು ನ ಪರಸ್ಸಹೇತು
ನ ಪುತ್ತಂ ಇಚ್ಛೆ, ನ ಧನಜ್, ನ ರಟ್ಠಜ್
ನ ಇಚ್ಛೆಯ್ಯಾಧಮ್ಮೇನ ಸಮಿದ್ಧಿಂ ಅತ್ತನೋ
ಸ ಸೀಲವಾ ಪಞ್ಞವಾ ಧಮ್ಮಿಕೋ ಸಿಯಾ ||೮೪||

೮೪. ಯಾವನು ತನಗೋಸ್ಕರವಾಗಿ ಅಥವಾ ಮತ್ತೊಬ್ಬನಿಗಾಗಿ ಪುತ್ರನನ್ನು ಧನವನ್ನು ಅಥವಾ ರಾಷ್ಟ್ರವನ್ನು ಬಯಸುವದಿಲ್ಲವೋ, ಯಾವನು ಅಧರ್ಮ

* ಚಜನ್ತಿ - ಎಂಬ ಮೂಲಕ್ಕೆ ಇದು ಅರ್ಥ. 'ವಜನ್ತಿ' ಎಂಬ ಪಾಠವಾದರ ಎಲ್ಲೆಲ್ಲಿಯೂ ಸಂಚರಿಸುವರು ಎಂದರ್ಥವಾಗುವದು. ಸಾಂ ||

ದಿಂದ ತನ್ನ ಅನುಕೂಲಗಳು ಹೆಚ್ಚಬೇಕೆಂದು ಬಯಸುವದಿಲ್ಲವೊ, ಅವನೇ **ಶೀಲ**ವಂತನೂ **ಪ್ರಜ್ಞಾ**ವಂತನೂ ಧಾರ್ಮಿಕನೂ ಆಗಿರುವನು.

**ಅಪ್ಪಕಾ ತೇ ಮನುಸ್ಸೇಸು ಯೇ ಜನಾ ಪಾರಗಾಮಿನೋ**
**ಅಥಾಯಜ್ ಇತರಾ ಪಜಾ ತೀರಂ ಏವಾನುಧಾವತಿ** ||೮೫||

೮೫. ಜನರಲ್ಲಿ ಪಾರುಗಾಣಬೇಕೆನ್ನುವವರು ತೀರ ಕಡಿಮೆ ಉಳಿದ ಜನರೆಲ್ಲ ಈಚೆಯ ದಡದಲ್ಲಿಯೇ ಓಡಾಡುತ್ತಿರುವರು.

**ಯೇ ಚ ಖೋ ಸಮ್ಮದಕ್ಖಾತೇ ಧಮ್ಮೇ ಧಮ್ಮಾನುವತ್ತಿನೋ**
**ತೇ ಜನಾ ಪಾರಂ ಎಸ್ಸಂತಿ ಮಚ್ಚುಧೆಯ್ಯಜ್ ಸುದುತ್ತರಜ್** ||೮೬||

೮೬. ಯಾರಾದರೆ ಬಲ್ಲವರು ಧರ್ಮವನ್ನು ಸರಿಯಾಗಿ ತಿಳಿಸಿದ ಮೇಲೆ ಧರ್ಮವನ್ನೇ ಹಿಂಬಾಲಿಸುವರೋ, ಅವರು ದಾಟಲಸದಳವಾದ ಮೃತ್ಯುಸ್ಥಾನದ ಆಚೆಯ ದಡವನ್ನು ಸೇರುವರು.

**ಕಣ್ಹಜ್ ಧಮ್ಮಜ್ ವಿಪ್ಪಹಾಯ ಸುಖಜ್ ಭಾವೇತ ಪಂಡಿತೋ**
**ಓಕಾ ಅನೋಕಜ್ ಆಗಮ್ಮ ವಿವೇಕೇ ಯತ್ಥ ದೂರಮಜ್**
**ತತ್ರಾಭಿರತಿಂ ಇಚ್ಛೆಯ್ಯಾ ಹಿತ್ವಾ ಕಾಮೇ ಅಕಿಂಚನೋ**
**ಪರಿಯೋದಪೆಯ್ಯ ಅತ್ತಾನಜ್ ಚಿತ್ತಕ್ಲೇಸೇಹಿ ಪಂಡಿತೋ** ||೮೭-೮೮||

೮೭-೮೮. ಜ್ಞಾಣನಾದವನು **ಕೃಷ್ಣ**ಧರ್ಮವನ್ನು* ಕೈಬಿಟ್ಟು **ಶುಕ್ಲ** ಧರ್ಮವನ್ನು† ಭಾವನೆಮಾಡಬೇಕು. ಮನೆಯನ್ನು ಬಿಟ್ಟು ಮನೆಮಠವಿಲ್ಲದ ಬಯಲಿಗೆ ಬಂದು,‡ ಪ್ರೀತಿಯುಂಟಾಗುವದು ಕಷ್ಟವಾಗಿರುವ **ವಿವೇಕ**ವನ್ನು§ ಹೊಂದಿ, ಕಾಮಗಳನ್ನೆಲ್ಲ ಬಿಟ್ಟು, ತನ್ನದೆಂಬುದೇನೂ ಇಲ್ಲದೆ ಅಲ್ಲಿಯೇ ಅಭಿರತಿಯಿಂದಿರಲು ಬಯಸಬೇಕು. **ಚಿತ್ತಕ್ಲೇಶ**ಗಳು¶ ಯಾವವೂ ಇಲ್ಲದಂತೆ ತನ್ನನ್ನು ತಾನು ತೊಳೆದುಕೊಳ್ಳಬೇಕು.

* ಕೃಷ್ಣಧರ್ಮ - ಪಾಪಕರ್ಮ.

† ಶುಕ್ಲಧರ್ಮ - ಪುಣ್ಯಕರ್ಮ.

‡ ಭಿಕ್ಕುವಾಗಿ ; ಅನೋಕ (ಮನೆಯಿಲ್ಲದ ಸ್ಥಿತಿ) ಎಂಬುದು ಭಿಕ್ಷುತ್ವದ ಗುರುತು.

§ ಏಕಾಂತವಾಸವನ್ನು ; 'ವಿವಿಕ್ತದೇಶ' ಎಂಬ ಮಾತಿಗೆ ರೂಢಿಯಾಗಿ ವೈದಿಕ ಗ್ರಂಥಗಳಲ್ಲಿ ಈ ಅರ್ಥವಿರುವದು.

¶ ರಾಗದ್ವೇಷಾದಿಗಳು. ಐದು **ನೀವರಣ**ಗಳನ್ನು ಪರಿಹರಿಸಿಕೊಳ್ಳಬೇಕೆಂದರ್ಥ. ವ್ಯಾ||

ಯೇಸಜ್ ಸಂಬೋಧಿ - ಅಂಗೇಸು ಸಮ್ಮಾಚಿತ್ತಜ್ ಸುಭಾವಿತಜ್
ಆದಾನಪಟಿನಿಸ್ಸಗ್ಗೇ ಅನುಪಾದಾಯ ಯೇ ರತಾ
ಖೀನಾಸವಾ ಜುತಿಮಂತೋ ತೇ ಲೋಕೇ ಪರಿನಿಬ್ಬುತಾ ||೮೯||

೮೯. ಯಾರ ಚಿತ್ತವು **ಸಂಬೋಧಿ**ಯ* ಅಂಗಗಳಲ್ಲಿ ಚೆನ್ನಾಗಿ ನುರಿತಿರುವದೋ, ಯಾರು **ಉಪಾದಾನ**ವಿಲ್ಲದೆ† ಪರಿಗ್ರಹವನ್ನು ಬಿಟ್ಟಿರುವದರಲ್ಲಿಯೇ ರತರಾಗಿರುವರೋ, **ಆಸ್ರವ**ಗಳನ್ನೆಲ್ಲ‡ ಸವೆಯಿಸಿಕೊಂಡು ಕಾಂತಿಯುಕ್ತರಾಗಿರುವರೋ, ಅವರೇ ಈ ಲೋಕದಲ್ಲಿ **ಪರಿನಿರ್ವಾಣ**ವನ್ನು ಹೊಂದಿರುತ್ತಾರೆ.

# ೭. ಅರ್ಹನ್ತವರ್ಗ (ಅರಹಂತವಗ್ಗ)

ಗತದ್ಧಿನೋ ವಿಸೋಕಸ್ಸ ವಿಪ್ಪಮುತ್ತಸ್ಸ ಸಬ್ಬಧಿ
ಸಬ್ಬಗಂಥಪ್ಪಹಿಣ್ಣಸ್ಸ ಪರಿಳಾಹೋ ನ ವಿಜ್ಜತಿ ||೯೦||

೯೦. ದಾರಿಯನ್ನು ನಡೆದು ಮುಗಿಸಿ ಯಾವ ಶೋಕವೂ ಇಲ್ಲದೆ ಎಲ್ಲಾ ಬಗೆಯಿಂದಲೂ ಬಿಡುಗಡೆಹೊಂದಿ **ಸರ್ವಗ್ರಂಥ**ಗಳನ್ನೂ§ ಬಿಚ್ಚಿಕೊಂಡಿರುವವನಿಗೆ ಸಂತಾಪವಿಲ್ಲ.

ಸ್ಮೃತಿ, ಧರ್ಮವಿಚಯ - ಮುಂತಾದ ಏಳು ಅಂಗಗಳು. ಪರಿಶಿಷ್ಟವನ್ನು ನೋಡಿ.

† ವಿಷಯಗಳನ್ನು ತೆಗೆದುಕೊಳ್ಳುವ ಆಸೆ ; ಹಂಬಲು. **ಉಪಾದಾನ**ವೆಂಬುದು **ದ್ವಾದಶ ನಿದಾನ**ಗಳಲ್ಲಿ ಒಂದು.

‡ ಕಾಮ, ಭವ, ದೃಷ್ಟಿ, ಅವಿದ್ಯಾ - ಇವುಗಳಿಗೆ **ಆಸ್ರವ**ವೆಂದು ಹೆಸರು. ನಿರ್ವಾಣಕ್ಕೆ ಅರ್ಹನಾಗುವದಕ್ಕೆ ಇವು ಹೋಗಬೇಕು. ಪರಿಶಿಷ್ಟವನ್ನು ನೋಡಿ.

§ ಗ್ರಂಥಗಳು - ಅಭಿಧ್ಯಾ, ವ್ಯಾಪಾದ, ಶೀಲವ್ರತಪರಾಮರ್ಶ, ಇದಂಸತ್ಯಾಭಿನಿವೇಶ - ಎಂಬ ಗಂಟುಗಳು. ಇವಕ್ಕೆ ಕಾಯಗ್ರಂಥಗಳೆಂದೂ ಹೆಸರು. ಉಪನಿಷತ್ತುಗಳಲ್ಲಿರುವ ಗ್ರಂಥಿಶಬ್ದವನ್ನು ಇದಕ್ಕೆ ಹೋಲಿಸಬಹುದು.

**ಉಯ್ಯುಂಜಂತಿ ಸತಿಮಂತೋ ನ ನಿಕೇತೇ ರಮಂತಿ ತೇ**
**ಹಂಸ ವ ಪಲ್ಲಲಂ ಹಿತ್ವಾ ಓಕಮೋಕಜ್ ಜಹಂತಿ ತೇ** ||೯೦||

೯೧. ಯಾರು **ಸ್ಮೃತಿ**ಗಳನ್ನುಳ್ಳವರೋ ಅವರು ಉದ್ಯೋಗ ಮಾಡುತ್ತಿರುವರು, ಮನೆಯಲ್ಲಿ ಅಭಿರತಿಯುಳ್ಳವರಾಗಿರುವದಿಲ್ಲ. ಹಂಸಗಳು ಕ್ಷುದ್ರ ಜಲಾಶಯವನ್ನು ಬಿಟ್ಟು ಹೋಗುವಂತೆ ಮನೆಯನ್ನು ಬಿಟ್ಟು ಹೋಗುವರು.

**ಯೇಸಜ್ ಸನ್ನಿಚಯೋ ನತ್ಥಿ ಯೇ ಪರಿಞ್ಞಾತ ಭೋಜನಾ**
**ಸುಞ್ಞಾತೋ ಅನಿಮಿತ್ತೋ ಚ ವಿಮೊಕ್ಖೋ ಯೇಸ ಗೋಚರೋ**
**ಆಕಾಸೇವ ಸಕುಂತಾನಜ್ ಗತಿ ತೇಸಜ್ ದುರನ್ನಯಾ** ||೯೨||

೯೨. ಯಾರಿಗೆ ಕೂಡಿಹಾಕಿರುವ* ವಸ್ತುಗಳಿಲ್ಲವೋ, ಯಾರು ಭೋಜನವನ್ನರಿತಿರುವರೋ,† **ಶೂನ್ಯತಾ ಅನಿಮಿತ್ತ** ಎಂಬ ಮೋಕ್ಷವು‡ ಯಾರಿಗೆ ಗೋಚರವಾಗಿರುವದೋ, ಆಕಾಶದಲ್ಲಿ ಸಂಚರಿಸುವ ಹಕ್ಕಿಗಳ ಗತಿಯಂತೆ ಅವರ ಗತಿಯು ಊಹಿಸಲಸದಳವಾಗಿರುವದು.

**ಯಾಸ್ಸಾಸವಾ ಪರಕ್ಖೀಣಾ ಆಹಾರೇ ಚ ಅನಿಸ್ಸಿತೋ**
**ಸುಞ್ಞಾತೋ ಅನಿಮಿತ್ತೋ ಚ ವಿಮುಕ್ಖೋ ಯಸ್ಸ ಗೋಚರೋ**
**ಆಕಾಸೇವ ಸಕುಂತಾನಜ್ ಪದಜ್ ತಸ್ಸ ದುರನ್ನಯಜ್** ||೯೩||

೯೩. ಯಾವನ **ಆಸ್ರವ**ಗಳು ಸವೆದುಹೋಗಿರುವವೋ, ಯಾವನು ಆಹಾರದಲ್ಲಿ ಪರತಂತ್ರನಲ್ಲವೋ,§ **ಶೂನ್ಯತಾ ಅನಿಮಿತ್ತ** - ಎಂಬ ಮೋಕ್ಷವು ಯಾರಿಗೆ ಗೋಚರವಾಗಿರುವದೋ, ಆಕಾಶದಲ್ಲಿ ಹಕ್ಕಿಗಳ ಹೆಜ್ಜೆಯನ್ನು

* ಹಿಂದಿನ ಜನ್ಮದ ಕರ್ಮಗಳು, ಪ್ರತ್ಯಯಗಳು - ಇವುಗಳ ರಾಶಿಯೇ ಇಲ್ಲಿ 'ಸನ್ನಿಚಯ'ವೆಂಬ ಶಬ್ದದ ಅರ್ಥ. ವ್ಯಾ||

† ಆಹಾರವು ಶುದ್ಧವೆಂದೂ ಯೋಗ್ಯವೆಂದೂ ಅರಿತಿರುವರು ವ್ಯಾ|| ; ಮಿತಾಹಾರಿಗಳು ಎಂದರ್ಥವೂ ಆಗಬಹುದೆಂದು ತೋರುವದು.

‡ ಶೂನ್ಯತಾ ಎಂದರೆ ರಾಗದ್ವೇಷಮೋಹಗಳಿಲ್ಲದ್ದು ; ಅನಿಮಿತ್ತ - ಪದಾರ್ಥಗಳು ನಿತ್ಯವೆಂಬ ಬುದ್ಧಿಯನ್ನು ಬಿಟ್ಟಿದ್ದರಿಂದ ಮುಕ್ತಿ. ವ್ಯಾ ||

§ ಅನಿಸ್ಸಿತೋ - ಎಂಬುದು ಅನಿಶ್ರಿತಃ ಎಂಬುದರ ತದ್ಭವವಾದರೆ ಪರತಂತ್ರನಲ್ಲವೆಂದರ್ಥ ಸಾಂ|| ; ಅನಿಶ್ಚಿತಃ ಎಂಬುದಕ್ಕಾದರೆ ಆಹಾರವಿಷಯದಲ್ಲಿ ಉದಾಸೀನನಾಗಿರುವನು ಎಂದರ್ಥ. ಪೂ. (೨) ||. ಮೊದಲನೆಯ ವ್ಯಾಖ್ಯಾನವೇ ಸರಿಯೆಂದು ತೋರುವದು.

ಗುರುತಿಸುವದು ಅಸದಳವಾಗಿರುವಂತೆ, ಈತನ ಹೆಜ್ಜೆಯನ್ನು ಗುರುತಿಸುವದು ಅಸದಳವಾಗಿರುವದು.

**ಯಸ್ಸಿಂದ್ರಿಯಾನಿ ಸಮತಙ್ ಗತಾನಿ ಅಸ್ಸ ಯಥಾ ಸಾರಥಿನಾ ಸುದಂತಾ**
**ಪಹೀಣಮಾನಸ್ಸ ಅನಾಸವಸ್ಸ ದೇವ ಪಿ ತಸ್ಸ ಪಿ ಹಯಂತಿ ತಾದಿನೋ** ||೯೪||

೯೪. ಸಾರಥಿಯಿಂದ ಪಳಗಿಸಿದ ಕುದುರೆಗಳಂತೆ ಯಾವನ ಇಂದ್ರಿಯ ಗಳು ಶಾಂತಿಯನ್ನು ಹೊಂದಿರುವವೋ, ಯಾವನು ಅಭಿಮಾನವನ್ನು ತೊರೆದು **ಆಸ್ರವ**ಗಳಿಲ್ಲದೆ ಇರುವನೋ ಅಂಥ ಜ್ಞಾನಿ*ಯನ್ನು ಕಂಡರೆ ದೇವತೆಗಳಿಗೂ ಅವನಂತಿರಬೇಕೆಂಬ ಆಸೆಯಾಗುವದು.

**ಪಠವೀಸಮೋ ನೊ ವಿರುಜ್ಝತಿ ಇಂದಖೀಲುಪಮೋ ತಾದಿ ಸುಬ್ಬತೋ**
**ರಹದೋ ವ ಅವೇತಕದ್ದಮೋ ಸಂಸಾರ ನ ಭವಂತಿ ತಾದಿನೋ** ||೯೫||

೯೫. ಯಾವನು ಪೃಥ್ವಿಯಂತೆ ಕ್ಷಮಾವಂತನಾಗಿರುವನೋ, **ಇಂದ್ರಕೀಲ** ದಂತೆ† ಅಚಲನಾಗಿ ಸುವ್ರತದಲ್ಲಿ ನಿಂತಿರುವನೋ, ಮಡುವಿನಂತೆ ಬಗ್ಗಡವಿಲ್ಲದೆ ಇರುವನೋ, ಆ ಜ್ಞಾನಿಗೆ* ಸಂಸಾರಗಳು ಉಂಟಾಗುವದಿಲ್ಲ.

**ಸಂತಙ್ ತಸ್ಸ ಮನಙ್ ಹೋತಿ ಸಂತಾ ವಾಚಾ ಚ ಕಮ್ಮ ಚ**
**ಸಮ್ಮಾದಞ್ಞಾ ವಿಮುತ್ತಸ್ಸ ಉಪಸಂತಸ್ಸ ತಾದಿನೋ** ||೯೬||

೯೬. ಸಮ್ಯಗ್‌ಜ್ಞಾನದಿಂದ ಮುಕ್ತನಾಗಿ ಉಪಶಾಂತನಾಗಿರುವ ಜ್ಞಾನಿಗೆ* ಮನಸ್ಸು ಶಾಂತವಾಗಿರುವದು, ಮಾತು ಶಾಂತವಾಗಿರುವದು, ಕರ್ಮವೂ ಶಾಂತ ವಾಗಿರುವದು.

**ಅಸ್ಸದ್ಧೋ ಅಕತಞ್ಞೂ ಚ ಸಂಧಿಚ್ಛೇದೋ ಚ ಯೋ ನರೋ**
**ಹತಾವಕಾಸೋ ವಂತಾಸೋ ಸಾವೆ ಉತ್ತಮಪೋರಿಸೋ** ||೯೭||

೯೭. ಯಾವನು ಸುಮ್ಮಸುಮ್ಮನೆ ನಂಬುವನಲ್ಲವೋ **ಅಕೃತ**ವಾದ‡

* ತಾದಿನಃ - ಎಂಬುದು 'ತಾಯಿನಃ' ಎಂಬ ಮಾತಿಗೆ ತದ್ಭವವೆಂದು ತೋರುವದು. ಪರಿಶಿಷ್ಟವನ್ನು ನೋಡಿ.

† ಊರ ಬಾಗಿಲ ಬಳಿ ನೆಟ್ಟಿರುವ ಕಂಬ.

‡ ನಿತ್ಯಸಿದ್ಧವಾದ ಮುಕ್ತಿಯು ಯಾವದೊಂದರ ಕಾರ್ಯವೂ ಅಲ್ಲವೆಂದು ಅದ್ವೈತ ವೇದಾಂತಿಗಳ ನಂಬಿಕೆಯಿರುವಂತೆ ನಿರ್ವಾಣವು ಯಾವದೊಂದರ ಕಾರ್ಯವೂ ಅಲ್ಲವೆಂದು ಬೌದ್ಧರ ನಂಬಿಕೆ.

(ನಿರ್ವಾಣ)ವನ್ನು ಬಲ್ಲವನಾಗಿರುವನೋ, ಸಂಸಾರದ ಸಂಧಿಗಳನ್ನು ಕತ್ತರಿಸಿ ಕೊಂಡಿರುವನೋ, ಸಂಸಾರದ ಅವಕಾಶವನ್ನು ಹಾಳುಮಾಡಿಕೊಂಡಿರುವನೋ, ಆಶೆಗಳನ್ನೆಲ್ಲ ಕಕ್ಕಿರುವನೋ, ಅವನೇ ಉತ್ತಮಪುರುಷನು.

**ಗಾಮೇ ವಾ ಯದಿ ವಾರಞ್ಞೇ ನಿನ್ನೇ ವಾ ಯದಿ ವಾ ಥಾಲೇ**
**ಯತ್ಥಾರಹಂತೋ ವಿಹರಂತಿ ತಙ್ ಭೂಮಿ ರಾಮಣೆಯ್ಯಕಙ್** ||೯೮||

೯೮. ಊರಿನಲ್ಲಾಗಲಿ ಕಾಡಿನಲ್ಲಾಗಲಿ, ತಗ್ಗಿನಲ್ಲಾಗಲಿ ತಿಟ್ಟಿನ ನೆಲದಲ್ಲಾಗಲಿ, ಎಲ್ಲಿ **ಅರ್ಹಂತ**ರು ಓಡಾಡುತ್ತಿರುವರೋ, ಆ ಭೂಮಿಯೇ ರಮಣೀಯವು.

**ರಮಣೀಯಾನಿ ಅರಞ್ಞಾನಿ ಯತ್ಥ ನ ರಮತೀ ಜನೋ**
**ವೀತರಾಗಾ ರಮಿಸ್ಸಂತಿ ನ ತೇ ಕಾಮಗವೇಸಿನೋ** ||೯೯||

೯೯. ಯಾವ ಸ್ಥಳವನ್ನು ಕಂಡರೆ ಸಾಮಾನ್ಯಜನರಿಗೆ ಅಭಿರತಿಯುಂಟಾಗುವದಿಲ್ಲವೋ, ಅಂಥ ರಮಣೀಯವಾದ ಅರಣ್ಯವನ್ನು ಕಂಡರೆ ವೀತರಾಗರಿಗೆ ಬಲುಪ್ರೀತಿ, ಏಕೆಂದರೆ ಅವರು ಕಾಮವನ್ನು ಹುಡುಕಿಕೊಂಡು ಹೋಗುವವರಲ್ಲ.

# ೮. ಸಹಸ್ರವರ್ಗ (ಸಹಸ್ಸವಗ್ಗ)

**ಸಹಸ್ಸಂ ಅಪಿ ಚೆ ವಾಚಾ ಅನತ್ಥ ಪದಸಂಹಿತಾ**
**ಏಕಙ್ ಅತ್ಥಪದಙ್ ಸೆಯ್ಯೋ ಯಙ್ ಸುತ್ವಾ ಉಪಸಮ್ಮತಿ** ||೧೦೦||

೧೦೦. ವ್ಯರ್ಥವಾದ* ಸಾವಿರಾರು ಮಾತುಗಳ ರಾಶಿಗಿಂತಲೂ ಯಾವದನ್ನು ಕೇಳಿದರೆ ಉಪಶಾಂತಿಯುಂಟಾಗುವದೋ ಅಂಥ ಒಂದೇ ಒಂದು ಅರ್ಥಯುಕ್ತವಾದ ಮಾತು ಹೆಚ್ಚಿನದು.

---

* ಯಾವ ಅರ್ಥವೂ ಇಲ್ಲದ - ನಿಷ್ಪ್ರಯೋಜನವಾದ.

**ಸಹಸ್ಸಂ ಅಪಿ ಚೆ ಗಾಥಾ ಅನತ್ಥ ಪದಸಂಹಿತಾ**
**ಏಕಜ್ ಗಾಥಾಪದಜ್ ಸೆಯ್ಯೋ ಯಜ್ ಸುತ್ವಾ ಉಪಸಮ್ಮತಿ** ||೧೦೧||

೧೦೧. ವ್ಯರ್ಥವಾದ ಪದಗಳಿಂದ ಕೂಡಿದ ಸಾವಿರಾರು **ಗಾಥೆ**ಗಳ* ಗುಂಪಿಗಿಂತಲೂ ಯಾವದೊಂದನ್ನು ಕೇಳಿದರೆ ಉಪಶಾಂತಿಯುಂಟಾಗುವದೋ, ಅಂಥ ಒಂದೇ ಗಾಥಾಪದವೇ ಹೆಚ್ಚಿನದು.

**ಯೋ ಚ ಗಾಥಾಸತಜ್ ಭಾಸೆ ಅನತ್ಥ ಪದಸಂಹಿತಾ**
**ಏಕಜ್ ಧಮ್ಮಪದಜ್ ಸೆಯ್ಯೋ ಯಜ್ ಸುತ್ವಾ ಉಪಸಮ್ಮತಿ** ||೧೦೨||

೧೦೨. ವ್ಯರ್ಥವಾದ ಪದಗಳಿಂದ ಕೂಡಿದ ನೂರಾರು ಗಾಥೆಗಳನ್ನು ಕೇಳುವದಕ್ಕಿಂತಲೂ ಯಾವದನ್ನು ಕೇಳಿದರೆ ಉಪಶಾಂತಿಯುಂಟಾಗುವದೋ, ಅಂಥ ಒಂದು **ಧರ್ಮಪದ**ವನ್ನು† ಕೇಳುವದೇ ಶ್ರೇಯಸ್ಕರವು.

**ಯೋ ಸಹಸ್ಸಜ್ ಸಹಸ್ಸೇನ ಸಂಗಾಮೆ ಮಾನುಸೇ ಜಿನೇ**
**ಏಕಜ್ ಚ ಜೆಯ್ಯ ಅತ್ತಾನಜ್ ಸಾ ವೆ ಸಂಗಾಮಜುತ್ತಮೋ** ||೧೦೩||

೧೦೩. ಯಾವನು ಸಾವಿರಗಟ್ಟಲೆ ಜನರನ್ನು ಸಾವಿರಸಲ ಜಯಿಸುವನೋ, ಅವನಿಗಿಂತ ತನ್ನನ್ನೊಬ್ಬನನ್ನೇ ತಾನು ಜಯಿಸುವವನು ಕಾಳಗದಲ್ಲಿ ಹೆಚ್ಚಿನ ಜಯಶಾಲಿಯು.

**ಅತ್ತಾ ಹವೆ ಜಿತಜ್ ಸೆಯ್ಯೋ ಯಾ ಚಾಯಜ್ ಇತರಾ ಪಜಾ**
**ಅತ್ತದಂತಸ್ಸ ಪೋಸಸ್ಸ ನಿಚ್ಚಜ್ ಸಞ್ಞತಚಾರಿನೋ**
**ನೇವ ದೇವೋ ನ ಗಂಧಬ್ಬೋ ನ ಮಾರೋ ಸಹ ಬ್ರಹ್ಮನಾ**
**ಜಿತಜ್ ಅಪಜಿತಜ್ ಕಯಿರಾ ತಥಾರೂಪಸ್ಸ ಜಂತುನೋ** ||೧೦೪-೧೦೫||

೧೦೪-೧೦೫. ಉಳಿದ ಜನರನ್ನು ಜಯಿಸುವದಕ್ಕಿಂತ ತನ್ನನ್ನು ಜಯಿಸುವದೇ ಒಳ್ಳೆಯದು. ತನ್ನನ್ನು ತಾನು ದಮನಮಾಡಿಕೊಂಡಿರುವ ಪುರುಷನ, ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಂಡಿರುವ ಜೀವನ,‡ ಗೆಲವನ್ನು ಸೋಲುಮಾಡು

* ಶ್ಲೋಕಗಳು.

† ಇಲ್ಲಿಯೂ 'ಗಾಥಾಪದ' ವೆಂಬ ಪಾಠಾಂತರವುಂಟು.

‡ ಇಲ್ಲಿ ಮೂಲದಲ್ಲಿರುವ ಜಂತು ಎಂಬ ಮಾತನ್ನು ಜೀವ ಎಂದು ಕನ್ನಡಿಸಿದೆ ಯಾದರೂ ವೈದಿಕರು ಹೇಳುವ ಜೀವಾತ್ಮವೆಂಬ ಅರ್ಥವನ್ನು ಮಾಡಬಾರದು ; ಬೌದ್ಧರು ನಿತ್ಯನಾದ ಜೀವಾತ್ಮನನ್ನೇನೂ ಒಪ್ಪುವದಿಲ್ಲ.

ಪದಕ್ಕೆ ದೇವತೆಯಿಂದಾಗಲಿ **ಗಂಧರ್ವ**ನಿಂದಾಗಲಿ **ಮಾರ**ನಿಂದಾಗಲಿ **ಬ್ರಹ್ಮ**ನಿಂದಾಗಲಿ ಆಗಲಾರದು.

**ಮಾಸೇ ಮಾಸೇ ಸಹಸ್ಸೇನ ಯೋ ಯಜೇಥ ಸತಜ್ ಸಮಜ್**
**ಏಕಜ್ ಚ ಭಾವಿತತ್ತಾನಜ್ ಮುಹುತ್ತಮ್ ಅಪಿ ಪೂಜಯೇ**
**ಸಾ ಯೇವ ಪೂಜನಾ ಸೆಯ್ಯೋ ಯಜ್ ಚೆ ವಸ್ಸಸತಜ್ ಹುತಜ್** ||೧೦೬||

೧೦೬. ಒಂದೊಂದು ತಿಂಗಳೂ ಸಾವಿರದಂತೆ ನೂರು ವರ್ಷಗಳವರೆಗೂ ಒಬ್ಬನು ಯಾಗಮಾಡುತ್ತಾನೆ, ಇನ್ನೊಬ್ಬನು **ಭಾವಿತಾತ್ಮ**ನಾದವನನ್ನು* ಒಂದೇ ಮುಹೂರ್ತದವರೆಗೆ ಸೇವಿಸುತ್ತಾನೆ. ನೂರು ವರ್ಷ ಮೊದಲನೆಯವನು ಮಾಡಿದ ಹೋಮಕ್ಕಿಂತ ಎರಡನೆಯವನು ಮಾಡಿದ ಪೂಜೆಯೇ ಹೆಚ್ಚಿನದು.

**ಯೋ ಚೆ ವಸ್ಸಸತಜ್ ಜಂತು ಅಗ್ಗಿಜ್ ಪರಿಚರೇ ವನೇ**
**ಏಕಜ್ ಚ ಭಾವಿತತ್ತಾನಜ್ ಮುಹುತ್ತಜ್ ಅಪಿ ಪೂಜಯೇ**
**ಸಾ ಯೇವ ಪೂಜನಾ ಸೆಯ್ಯೋ ಯಜ್ ಚ ವಸ್ಸಸತಜ್ ಹುತಜ್** ||೧೦೭||

೧೦೭. ಒಬ್ಬ ಜೀವನು ನೂರು ವರ್ಷಗಳು ಕಾಡಿನಲ್ಲಿದ್ದು ಅಗ್ನಿಯ ಸೇವೆಯನ್ನು ಮಾಡಿಕೊಂಡಿರುತ್ತಾನೆ ; ಮತ್ತೊಬ್ಬನು ಭಾವಿತಾತ್ಮನನ್ನು ಒಂದೇ ಮುಹೂರ್ತದವರೆಗೆ ಸೇವಿಸುತ್ತಾನೆ. ನೂರು ವರ್ಷ ಮೊದಲನೆಯವನು ಮಾಡಿದ ಹೋಮಕ್ಕಿಂತ ಎರಡನೆಯವನು ಮಾಡಿದ ಪೂಜೆಯೇ ಹೆಚ್ಚಿನದು.

**ಯಜ್ ಕಿಂಚಿ ಯಿಟ್ಠಜ್ ವ ಹುತಜ್ ವ ಲೋಕೇ**
**ಸಂವಚ್ಛರಜ್ ಯಜೇಥ ಪುಞ್ಞಾಪೇಖೋ**
**ಸಬ್ಬಂ ಪಿ ತಜ್ ನ ಚತುಭಾಗಂ ಏತಿ**
**ಅಭಿವಾದನಾ ಉಜ್ಜುಗತೇಸು ಸೆಯ್ಯೋ** ||೧೦೮||

೧೦೮. ಈ ಲೋಕದಲ್ಲಿ ಒಬ್ಬನು ಪುಣ್ಯಾಪೇಕ್ಷೆಯಿಂದ ಒಂದು ವರ್ಷದವರೆಗೆ ಏನೇನು ಯಾಗಮಾಡಿದರೂ ಹೋಮಮಾಡಿದರೂ ಅದೆಲ್ಲವೂ **ಋಜುಗತ**ರನ್ನು† ನಮಸ್ಕಾರಮಾಡಿದ್ದರ ಹಾಗಪಾಲಿಗೂ ಸಮನಾಗಲರಿಯದು, ಆ ನಮಸ್ಕಾರವೇ ಹೆಚ್ಚಿನದು.

* ಸಂಬೋಧಿಯ ಅಂಗಗಳನ್ನು ಭಾವನೆಮಾಡಿಕೊಂಡಿರುವವನು.

† ಸ್ರೋತಾಪನ್ನರಿಂದ ಹಿಡಿದು ಕ್ಷೀಣಾಸ್ರವರವರೆಗಿನ ಜ್ಞಾನಿಗಳನ್ನು. ವ್ಯಾ||

**ಅಭಿವಾದನಸೀಲಸ್ಸ ನಿಚ್ಚಙ್ ವದ್ಧಾಪಿಚಾಯಿನೋ**
**ಚತ್ತಾರೋ ಧಮ್ಮಾ ವದ್ಧಂತಿ ಆಯು, ವಣ್ಣೋ, ಸುಖಙ್, ಬಲಙ್ ||೧೦೯||**

೧೦೯. ಯಾವನು ನಮಸ್ಕಾರಮಾಡುವ ಸ್ವಭಾವದವನೋ, ಯಾವನು ನಿತ್ಯವೂ ವೃದ್ಧರ ಸೇವೆಯನ್ನು ಮಾಡುತ್ತಿರುವನೋ, ಆತನಿಗೆ ಆಯುಸ್ಸು, ವರ್ಣ, ಸುಖ, ಬಲ - ಈ ನಾಲ್ಕು ಧರ್ಮಗಳೂ* ಹೆಚ್ಚುವವು.

**ಯೋ ಚೆ ವಸ್ಸಸತಙ್ ಜೀವೇ ದುಸ್ಸೀಲೋ ಅಸಮಾಹಿತೋ**
**ಏಕಾಹಙ್ ಜೀವಿತಙ್ ಸೆಯ್ಯೋ ಸೀಲವಂತಸ್ಸ ಝಾಯಿನೋ ||೧೧೦||**

೧೧೦. ಯಾವನು ದುಶ್ಶೀಲನಾಗಿ **ಸಮಾಧಿ**ಯಿಲ್ಲದವನಾಗಿ ನೂರು ವರ್ಷ ಬಾಳುವನೋ ಅವನ ಬಾಳಿಗಿಂತ **ಶೀಲ**ವಂತನಾಗಿ **ಧ್ಯಾನ**ಮಾಡುತ್ತಾ ಇರುವವನ ಒಂದು ದಿನದ ಬಾಳೇ ಉತ್ತಮ.

**ಯೋ ಚೆ ವಸ್ಸಸತಙ್ ಜೀವೇ ದುಪ್ಪಞ್ಞೋ ಅಸಮಾಹಿತೋ**
**ಏಕಾಹಙ್ ಜೀವಿತಙ್ ಸೆಯ್ಯೋ ಪಞ್ಞಾವಂತಸ್ಸ ಝಾಯಿನೋ ||೧೧೧||**

೧೧೧. ಯಾವನು **ಪ್ರಜ್ಞೆ**ಯಿಲ್ಲದವನಾಗಿ **ಸಮಾಧಿ**ಯಿಲ್ಲದವನಾಗಿ ನೂರು ವರ್ಷ ಬಾಳುವನೋ ಅವನ ಬಾಳಿಗಿಂತ ಪ್ರಜ್ಞಾವಂತನಾಗಿ ಧ್ಯಾನವನ್ನು ಮಾಡುತ್ತಾ ಇರುವವನ ಒಂದು ದಿನದ ಬಾಳೇ ಉತ್ತಮ.

**ಯೋ ಚೆ ವಸ್ಸಸತಙ್ ಜೀವೇ ಕುಸೀತೋ ಹೀನವೀರಿಯೋ**
**ಏಕಾಹಙ್ ಜೀವಿತಙ್ ಸೆಯ್ಯೋ ವಿರಿಯಙ್ ಆರಭತೋ ದಳ್ಹಙ್ ||೧೧೨||**

೧೧೨. ಯಾವನು ಅಲಸನಾಗಿ **ಹೀನವೀರ್ಯ**ನಾಗಿ† ನೂರು ವರ್ಷ ಬಾಳುವನೋ ಅವನ ಬಾಳಿಗಿಂತ ದೃಢವಾಗಿ **ವೀರ್ಯವನ್ನು ಪ್ರಾರಂಭ ಮಾಡಿರುವಾತನ** ಒಂದೇ ದಿನದ ಬಾಳು ಉತ್ತಮ.

**ಯೋ ಚೆ ವಸ್ಸಸತಙ್ ಜೀವೇ ಅಪಸ್ಸಙ್ ಉದಯವ್ಯಯಙ್**
**ಏಕಾಹಙ್ ಜೀವಿತಙ್ ಸೆಯ್ಯೋ ಪಸ್ಸತೋ ಉದಯಬ್ಬಯಙ್ ||೧೧೩||**

೧೧೩. ಯಾವನು ಹುಟ್ಟುಹೊಂದುಗಳನ್ನು‡ ಕಂಡುಕೊಳ್ಳದೆ ನೂರು

* ಇಲ್ಲಿ ಧರ್ಮಗಳೆಂದರೆ ವಿಷಯಗಳು.

† ಹೀನವೀರ್ಯ - ಸಾಧನೆಯಲ್ಲಿ ಉದ್ಯೋಗಶೀಲನಲ್ಲದವನು, ಆರಬ್ಧವೀರ್ಯ - ಪ್ರಯತ್ನವನ್ನು ಮಾಡುತ್ತಿರುವವನು. ‡ ಐದು ಸ್ಕಂದಗಳ ಉತ್ಪತ್ತಿನಾಶಗಳನ್ನು ವ್ಯಾ||

ವರ್ಷ ಬಾಳುವನೋ, ಅವನ ಬಾಳಿಗಿಂತ ಹುಟ್ಟುಹೊಂದುಗಳನ್ನು ಕಂಡು ಕೊಂಡವನ ಒಂದು ದಿನದ ಬಾಳೇ ಉತ್ತಮ.

**ಯೋ ಚ ವಸ್ಸಸತಜ್ ಜೀವೇ ಅಪಸ್ಸಜ್ ಅಮತಜ್ ಪದಜ್**
**ಏಕಾಹಜ್ ಜೀವಿತಜ್ ಸೆಯ್ಯೋ ಪಸ್ಸತೋ ಅಮತಜ್ ಪದಜ್ ||೧೧೪||**

೧೧೪. ಯಾವನು **ಅಮೃತಪದ**ವನ್ನು* ಕಾಣದೆ ನೂರು ವರ್ಷ ಬಾಳುವನೋ ಅವನ ಬಾಳಿಗಿಂತ ಅಮೃತಪದವನ್ನು ಕಂಡವನ ಒಂದು ದಿನದ ಬಾಳೇ ಉತ್ತಮ.

**ಯೋ ಚ ವಸ್ಸಸತಜ್ ಜೀವೇ ಅಪಸ್ಸಜ್ ಧಮ್ಮಮುತ್ತಮಮ್**
**ಏಕಾಹಜ್ ಜೀವಿತಜ್ ಸೆಯ್ಯೋ ಪಸ್ಸತೋ ಧಮ್ಮಮುತ್ತಮಜ್ ||೧೧೫||**

೧೧೫. ಯಾವನು ಉತ್ತಮವಾದ **ಧರ್ಮ**ವನ್ನು ಕಾಣದೆ ನೂರು ವರ್ಷ ಬಾಳುವನೋ ಅವನ ಬಾಳಿಗಿಂತ ಉತ್ತಮಧರ್ಮವನ್ನು ಕಂಡುಕೊಂಡವನ ಒಂದು ದಿನದ ಬಾಳೇ ಉತ್ತಮ.

# ೯. ಪಾಪವರ್ಗ (ಪಾಪವಗ್ಗ)

**ಅಭಿತ್ಥರೇಥ ಕಲ್ಯಾಣೇ ಪಾಪಾ ಚಿತ್ತಜ್ ನಿವಾರಯೇ**
**ದಂಡಜ್ ಹಿ ಕರೋತೋ ಪುಞ್ಞಜ್ ಪಾಪಸ್ಮಿಜ್ ರಮತೀ ಮನೋ ||೧೧೬||**

೧೧೬. ಪುಣ್ಯಕರ್ಮವನ್ನು ಮಾಡುವದಕ್ಕೆ ತ್ವರೆಮಾಡಬೇಕು, ಪಾಪವನ್ನು ಮಾಡದಂತೆ ಚಿತ್ತವನ್ನು ಇತ್ತೆಳೆಯಬೇಕು, ಏಕೆಂದರೆ ಪುಣ್ಯವನ್ನು ಮಾಡುವದಕ್ಕೆ ಅಲಸಿದರೆ ಮನಸ್ಸು ಪಾಪದಲ್ಲಿ ಆಸಕ್ತವಾಗುವದು.

**ಪಾಪಜ್ ಚ ಪುರಿಸೋ ಕಯಿರಾ ನ ತಜ್ ಕಯಿರಾ ಪುನಪ್ಪುನಜ್ ;**
**ನ ತಮ್ಹಿ ಚಂದಜ್ ಕಯಿರಾಥಾ ದುಕ್ಖೋ ಪಾಪಸ್ಸ ಉಚ್ಚಯೋ ||೧೧೭||**

---

* ನಿರ್ವಾಣವನ್ನು.

೧೧೭. ಒಬ್ಬ ಮನುಷ್ಯನು ಪಾಪವನ್ನು ಮಾಡಿಬಿಟ್ಟರೆ ಅದನ್ನು ಮತ್ತೆ ಮತ್ತೆ ಮಾಡಬಾರದು, ಅದರಲ್ಲಿ ಅಭಿಲಾಷೆಯನ್ನು ಮಾಡಬಾರದು. ಪಾಪವು ಬೆಳೆದರೆ ದುಃಖವುಂಟಾಗುವದು.

**ಪುಞ್ಞಂ ಚೆ ಪುರಿಸೋ ಕಯಿರಾ ಕಯಿರಾಥೇತಂ ಪುನಪ್ಪುನಂ**
**ತಮ್ಹಿ ಚಂದಂ ಕಯಿರಾಥಾ ಸುಖೋ ಪುಞ್ಞಸ್ಸ ಉಚ್ಚಯೋ ||೧೧೮||**

೧೧೮. ಒಬ್ಬ ಮನುಷ್ಯನು ಪುಣ್ಯವನ್ನು ಮಾಡಿದರೆ ಅದನ್ನು ಮತ್ತೆಮತ್ತೆ ಮಾಡಬೇಕು, ಅದರಲ್ಲಿ ಅಭಿಲಾಷೆಯನ್ನು ಮಾಡಬೇಕು. ಪುಣ್ಯವು ಬೆಳೆದರೆ ಸುಖವುಂಟಾಗುವದು.

**ಪಾಪೋ ಪಿ ಪಸ್ಸತಿ ಭದ್ರಂ ಯಾವ ಪಾಪಂ ನ ಪಚ್ಚತಿ**
**ಯದಾ ಚ ಪಚ್ಚತೀ ಪಾಪಂ ಅಥ ಪಾಪೋ ಪಾಪಾನಿ ಪಸ್ಸತಿ ||೧೧೯||**

೧೧೯. ಪಾಪಿಯು ಕೂಡ ತಾನು ಮಾಡುವ ಪಾಪವು ಪಕ್ವವಾಗುವವರೆಗೆ ಅದನ್ನು ಒಳ್ಳೆಯ ಕರ್ಮವೆಂದೇ ಎಣಿಸಿರುವನು ; ಆದರೆ ಯಾವಾಗ ಆ ಪಾಪವು ಪಕ್ವವಾಗುವದೋ ಆಗ ಪಾಪಗಳು ಅವನಿಗೆ ಕಾಣುವವು.

**ಭದ್ರೋ ಪಿ ಪಸ್ಸತಿ ಪಾಪಂ ಯಾವ ಭದ್ರಂ ನ ಪಚ್ಚತಿ**
**ಯದಾ ಚ ಪಚ್ಚತಿ ಭದ್ರಂ ಅಥ ಭದ್ರೋ ಭದ್ರಾನಿ ಪಸ್ಸತಿ ||೧೨೦||**

೧೨೦. ಪುಣ್ಯಕರ್ಮವನ್ನು ಮಾಡಿದವನು ಕೂಡ ಎಲ್ಲಿಯವರೆಗೆ ತನ್ನ ಪುಣ್ಯವು ಪಕ್ವವಾಗುವದಿಲ್ಲವೋ ಅಲ್ಲಿಯವರೆಗೆ ಪಾಪವನ್ನೇ ಕಾಣುತ್ತಿರುವನು ; ಆದರೆ ಯಾವಾಗ ಪುಣ್ಯವು ಪಕ್ವವಾಗುವದೋ ಆಗ ಪುಣ್ಯಗಳು ಗೋಚರ ವಾಗುವವು.

**ಮಾಪ್ಪಮಞ್ಞೇಥ ಪಾಪಸ್ಸ ನ ಮಂ ತಂ ಆಗಮಿಸ್ಸತಿ**
**ಉದಬಿಂದು - ನಿಪಾತೇನ ಉದಕುಂಭೋ ಪಿ ಪೂರತಿ**
**ಪೂರತಿ ಬಾಲೋ ಪಾಪಸ್ಸ ಥೋಕ - ಥೋಕಂ ಪಿ ಆಚಿನಂ ||೧೨೧||**

೧೨೧. 'ಇದೇನೂ ನನ್ನ ಬಳಿಗೆ ಬರುವದಿಲ್ಲ' ಎಂದು ಪಾಪವನ್ನು ಅಸಡ್ಡೆಮಾಡಬಾರದು. ಏಕೆಂದರೆ ಒಂದೊಂದು ತೊಟ್ಟಿನಂತೆ ನೀರು ಹನಿಯು ತ್ತಿದ್ದರೆ ದೊಡ್ಡ ಕೊಡವೂ ತುಂಬುವದು ; ಇದರಂತೆ ತಿಳಿಗೇಡಿಯು ಸ್ವಲ್ಪ ಸ್ವಲ್ಪವಾಗಿ ಕೂಡಿಹಾಕುತ್ತಿದ್ದರೂ ಪಾಪವನ್ನು ತುಂಬಿಕೊಳ್ಳುತ್ತಾನೆ.

ಮಾಪ್ಪಮಞ್ಞೇಥ ಪುಞ್ಞಸ್ಸ ನ ಮಜ್ ತಜ್ ಆಗಮಿಸ್ಸತಿ
ಉದಬಿಂದು ನಿಪಾತೇನ ಉದಕುಂಭೋ ಪಿ ಪೂರತಿ
ಪೂರತಿ ಧೀರೋ ಪುಞ್ಞಸ್ಸ ಥೋಕ - ಥೋಕಂ ಪಿ ಆಚಿನಜ್ ||೧೨೨||

೧೨೨. 'ಇದೇನೂ ನನ್ನ ಬಳಿಗೆ ಬರುವದಿಲ್ಲ' ಎಂದು ಪುಣ್ಯವನ್ನು ಅಸಡ್ಡೆಮಾಡಬಾರದು. ಏಕೆಂದರೆ ಒಂದೊಂದು ತೊಟ್ಟಿನಂತೆ ನೀರು ಹನಿಯುತ್ತಿದ್ದರೆ ದೊಡ್ಡ ಕೊಡವೂ ತುಂಬುವದು ; ಇದರಂತೆ ಜಾಣನಾದವನು ಸ್ವಲ್ಪಸ್ವಲ್ಪವಾಗಿ ಕೂಡಿಹಾಕುತ್ತಿದ್ದರೂ ಪುಣ್ಯವನ್ನು ತುಂಬಿಕೊಳ್ಳುತ್ತಾನೆ.

ವಾಣಿಜೋ ವ ಭಯಜ್ ಮಗ್ಗಜ್ ಅಪ್ಪಸತ್ಥೋ ಮಹದ್ಧನೋ
ವಿಸಜ್ ಜೀವಿತುಕಾಮೋ ವ ಪಾಪಾನಿ ಪರಿವಜ್ಜಯೇ ||೧೨೩||

೧೨೩. ಸ್ವಲ್ಪ ಸಾರ್ಥಗಳೊಡನೆ ಕೂಡಿರುವ ತುಂಬ ಹಣವಂತನಾದ ವರ್ತಕನು ಹೆದರಿಕೆಯ ದಾರಿಯನ್ನು ತ್ಯಜಿಸುವಂತೆಯೂ,* ಬದುಕಬೇಕೆಂದು ಬಯಸುವವನು ವಿಷವನ್ನು ತ್ಯಜಿಸುವಂತೆಯೂ, ಪಾಪಕರ್ಮಗಳನ್ನು ಪೂರ ಬಿಟ್ಟುಬಿಡಬೇಕು.

ಪಾಣಿಮ್ಹಿ ಚೆ ವಣೋ ನಸ್ಸ ಹರೆಯ್ಯ ಪಾಣಿನಾ ವಿಸಜ್
ನಾಬ್ಬಣಜ್ ವಿಸಂ ಅನ್ವೇತಿ ನತ್ಥಿ ಪಾಪಜ್ ಅಕುಬ್ಬತೋ ||೧೨೪||

೧೨೪. ಕೈಯಲ್ಲಿ ಹುಣ್ಣಿಲ್ಲದಿದ್ದರೆ ಕೈಯಲ್ಲಿ ವಿಷವನ್ನು ತೆಗೆದುಕೊಂಡು ಹೋಗಬಹುದು, ಹುಣ್ಣಿಲ್ಲದವನಿಗೆ ವಿಷವು ಏರುವದಿಲ್ಲ. ಇದರಂತೆ ಪಾಪವನ್ನು ಮಾಡದವನಿಗೆ ಅದರ ಫಲವು ಅಂಟುವದಿಲ್ಲ.

ಯೋ ಅಪ್ಪದುಟ್ಠಸ್ಸ ನರಸ್ಸ ದುಸ್ಸತಿ
ಸುದ್ಧಸ್ಸ ಪೋಸಸ್ಸ ಅನಂಗಣಸ್ಸ
ತಂ ಏವ ಬಾಲಜ್ ಪಚ್ಚೇತಿ ಪಾಪಜ್
ಸುಖುಮೋ ರಜೋ ಪಟಿವಾತಜ್ ವಖಿಟ್ಠೋ ||೧೨೫||

೧೨೫. ಯಾವನು, ದೋಷವಿಲ್ಲದೆ ಶುದ್ಧನಾಗಿ ನಿಷ್ಕಲ್ಮಷನಾದ ಮನುಷ್ಯನಿಗೆ ಕೇಡನ್ನು ಬಗೆಯುವನೋ ಅವನ ಪಾಪವು, ಗಾಳಿಗೆದುರಾಗಿ ಎರಚಿದ ಧೂಳಿಯ ಸಣ್ಣ ಹುಡಿಯಂತೆ, ತನ್ನ ಕಡೆಗೇ ಹಿಂತಿರುಗುವದು.

* ಸ್ವಲ್ಪವೇ ಗುಂಪನ್ನು ಕಟ್ಟಿಕೊಂಡಿರುವ ಹಣಗಾರನಾದ ವರ್ತಕನು ಕಳ್ಳಕಾಕರಿರುವ ದಾರಿಯಲ್ಲಿ ನಡೆಯುವದಕ್ಕೆ ಅಂಜುವಂತೆ.

ಗಬ್ಭಂ ಏಕೇ ಉಪ್ಪಜ್ಜಂತಿ ನಿರಯಜ್ ಪಾಪಕಮ್ಮಿನೋ
ಸಗ್ಗಜ್ ಸುಕತಿನೋ ಯಂತಿ ಪರಿನಿಬ್ಬಂತಿ ಅನಾಸವಾ ||೧೨೬||

೧೨೬. ಕೆಲವರು ಪಾಪಿಗಳು ಗರ್ಭದಲ್ಲಿ ಹುಟ್ಟುವರು, ಇನ್ನು ಕೆಲವರು **ನಿರಯ**ವನ್ನು* ಹೊಂದುವರು. ಪುಣ್ಯವಂತರು ಸ್ವರ್ಗವನ್ನು ಹೊಂದುತ್ತಾರೆ. ಯಾವ **ಆಸ್ರವ**ಗಳೂ ಇಲ್ಲದವರು **ಪರಿನಿರ್ವಾಣ**ವನ್ನು ಹೊಂದುವರು.

ನ ಅಂತಲಿಕ್ಖೆ ನ ಸಮುದ್ದಮಜ್ಝೆ
ನ ಪಬ್ಬತಾನಜ್ ವಿವರಜ್ ಪವಿಸ್ಸ
ನ ವಿಜ್ಜತೀ ಸೋ ಜಗತಿಪ್ಪದೇಸೋ
ಯತ್ಥಟ್ಠಿತೋ ಮುಚ್ಚೆಯ್ಯ ಪಾಪಕಮ್ಮಾ ||೧೨೭||

೧೨೭. ಅಂತರಿಕ್ಷದಲ್ಲಿಯೇ ಆಗಲಿ, ಕಡಲಿನ ನಡುವೆಯಲ್ಲಾಗಲಿ, ಬೆಟ್ಟಗಳ ಗವಿಯನ್ನು ಹೊಕ್ಕರಾಗಲಿ, ಇಲ್ಲಿದ್ದರೆ ಪಾಪವನ್ನು ಮಾಡಿದವರು ಅದರ ಫಲದಿಂದ ಬಿಡುಗಡೆಯಾಗಬಹುದೆಂಬ ಸ್ಥಳವು ಈ ಜಗತ್ತಿನಲ್ಲಿ ಯಾವದೂ ಇರುವದಿಲ್ಲ.

ನ ಅಂತಲಿಕ್ಖೆ ನ ಸಮುದ್ದಮಜ್ಝೆ ನ ಪಬ್ಬತಾನಜ್ ವಿವರಜ್ ಪವಿಸ್ಸ
ನ ವಿಜ್ಜತಿ ಸೋ ಜಗತಿಪ್ಪದೇಸೋ ಯತ್ಥಟ್ಠಿತಜ್ ನಪ್ಪಸಹೇಥ ಮಚ್ಚು ||೧೨೮||

೧೨೮. ಅಂತರಿಕ್ಷದಲ್ಲಿಯೇ ಆಗಲಿ, ಕಡಲಿನ ನಡುವೆಯಲ್ಲಾಗಲಿ, ಬೆಟ್ಟಗಳ ಗವಿಯನ್ನು ಹೊಕ್ಕರಾಗಲಿ, ಇಲ್ಲಿದ್ದರೆ ಮೃತ್ಯುವು ಬಂದು ಮೇಲೆ ಬೀಳದೆ ಇರುವದೆಂಬ ಸ್ಥಳವು ಈ ಜಗತ್ತಿನಲ್ಲಿ ಯಾವದೂ ಇರುವದಿಲ್ಲ.

* ವೈದಿಕಮತದವರಂತೆಯೇ ಬೌದ್ಧರೂ 'ನಿರಯ' ಗಳೆಂಬ ಅನೇಕನರಕಗಳನ್ನು ಅಂಗೀಕರಿಸಿರುತ್ತಾರೆ.

# ೧೦. ದಂಡವರ್ಗ (ದಂಡವಗ್ಗ)

**ಸಬ್ಬೇ ತಸಂತಿ ದಂಡಸ್ಸ ಸಬ್ಬೇ ಭಾಯಂತಿ ಮಚ್ಚುನೋ**
**ಅತ್ತಾನಙ್ ಉಪಮಙ್ ಕತ್ವಾ ನ ಹನೆಯ್ಯ ನ ಘಾತಯೇ** ||೧೨೯||

೧೨೯. ದಂಡಕ್ಕೆ ಎಲ್ಲರೂ ಹೆದರುತ್ತಾರೆ, ಸಾವಿಗೆ ಎಲ್ಲರೂ ಅಂಜುವರು. ತನ್ನಂತೆ ಹೆರರೆಂದರಿತು ಕೊಲ್ಲಬಾರದು, ಕೊಲ್ಲಿಸಲೂ ಬಾರದು.

**ಸಬ್ಬೇ ತಸಂತಿ ದಂಡಸ್ಸ ಸಬ್ಬೇಸಙ್ ಜೀವಿತಙ್ ಪಿಯಙ್**
**ಅತ್ತಾನಙ್ ಉಪಮಙ್ ಕತ್ವಾ ನ ಹನೆಯ್ಯ, ನ ಘಾತಯೇ** ||೧೩೦||

೧೩೦. ದಂಡಕ್ಕೆ ಎಲ್ಲರೂ ಹೆದರುತ್ತಾರೆ, ಎಲ್ಲರಿಗೂ ಬದುಕಿರ ಬೇಕೆಂಬ ಆಸೆಯಿರುವದು. ತನ್ನಂತೆ ಹೆರರೆಂದರಿತು ಕೊಲ್ಲಬಾರದು, ಕೊಲ್ಲಿಸಲೂ ಬಾರದು.

**ಸುಖಕಾಮಾನಿ ಭೂತಾನಿ ಯೋ ದಂಡೇನ ವಿಹಿಂಸತಿ**
**ಅತ್ತನೋ-ಸುಖಙ್ ಏಸಾನೋ ಪೆಚ್ಚ ಸೋ ನ ಲಭತೇ ಸುಖಙ್** ||೧೩೧||

೧೩೧. ಸುಖಕ್ಕಾಗಿ ಹಂಬಲಿಸುತ್ತಿರುವ ಪ್ರಾಣಿಗಳನ್ನು ಯಾವನು ತನಗೆ ಸುಖವಾಗಲೆಂದು ದಂಡಿಸಿ ಹಿಂಸಿಸುತ್ತಾನೋ ಅವನಿಗೆ ಸತ್ತಬಳಿಕ ಸುಖವು ದೊರಕದು.

**ಸುಖಮಾನಿ ಭೂತಾನಿ ಯೋ ದಂಡೇನ ನ ಹಿಂಸತಿ**
**ಅತ್ತನೋ ಸುಖಙ್ ಏಸಾನೋ ಪೆಚ್ಚ ಸೋ ಲಭತೇ ಸುಖಙ್** ||೧೩೨||

೧೩೨. ಸುಖಕ್ಕಾಗಿ ಹಂಬಲಿಸುತ್ತಿರುವ ಪ್ರಾಣಿಗಳನ್ನು ಯಾವನು ತನಗೆ ಸುಖವಾಗಲೆಂದು ದಂಡಿಸದೆ ಹಿಂಸಿಸದೆ ಇರುವನೋ ಅವನಿಗೆ ಸತ್ತಬಳಿಕ ಸುಖವು ದೊರಕುವದು.

**ಮಾವೋಚ ಫರುಸಙ್ ಕಂಚಿ ವುತ್ತಾ ಪತಿವದೆಯ್ಯು ತಙ್**
**ದುಕ್ಖಾ ಹಿ ಸಾರಂಭಕಥಾ ಪತಿದಂಡಾ ಫುಸೆಯ್ಯು ತಙ್** ||೧೩೩||

೧೩೩. ಯಾರನ್ನೂ ಬಿರುನುಡಿಯಿಂದ ನೋಯಿಸದಿರು. ನೀನು

ನುಡಿದದ್ದನ್ನು ಅವರು ಮಾರುನುಡಿದಾರು. ಸಿಟ್ಟಿನ ಮಾತುಗಳು ದುಃಖಕರವಾಗಿರುವವು, ನಿನಗೆ ಪ್ರತಿದಂಡಗಳು* ತಗಲಿಯಾವು.

**ಸಚೇ ನೇರೇಸಿ ಅತ್ತಾನಙ್ ಕಂಸೋ ಉಪಹತೋ ಯಥಾ**
**ಏಸ ಪತ್ತೋಸಿ ನಿಬ್ಬಾಣಙ್ ಸಾರಂಭೋ ತೆ ನ ವಿಜ್ಜತಿ** ||೧೩೪||

೧೩೪. ಒಡಕುಕಂಚು ಯಾವ ಶಬ್ದವನ್ನೂ ನುಡಿಯದೆ ಇರುವಂತೆ ನಿನ್ನನ್ನು ನೀನು ನಿಶ್ಶಬ್ದವಾಗಿ ಇಟ್ಟುಕೊಳ್ಳುವದಾದರೆ ಇಗೋ, ನಿನಗೆ **ನಿರ್ವಾಣ**ವು ದೊರೆತಂತೆಯೇ, ನಿನಗೆ ಜಗಳವಿಲ್ಲ.

**ಯಥಾ ದಂಡೇನ ಗೋಪಾಲೋ ಗಾವೋ ಪಾಜೇತಿ ಗೋಚರಙ್**
**ಏವಙ್ ಜರಾ ಚ ಮಚ್ಚೂ ಚ ಆಯುಙ್ ಪಾಜೆಂತಿ ಪಾಣಿನಙ್** ||೧೩೫||

೧೩೫. ದನಕಾಯುವವನು ಕೋಲಿನಿಂದ ದನಗಳನ್ನು ಹೇಗೆ ಕಾವಲಿಗೆ ಅಟ್ಟಿಕೊಂಡು ಹೋಗುವನೋ ಹಾಗೆಯೇ ಮುಪ್ಪುಸಾವುಗಳು ಪ್ರಾಣಿಗಳ ಆಯುಸ್ಸನ್ನು ಅಟ್ಟಿಕೊಂಡು ಹೋಗುವವು.

**ಅಥ ಪಾಪಾನಿ ಕಮ್ಮಾನಿ ಕರಙ್ ಬಾಲೋ ನ ಬುಜ್ಝತಿ**
**ಸೇಹಿ ಕಮ್ಮೇಹಿ ದುಮ್ಮೇಧೋ ಅಗ್ಗಿದಡ್ಢೋ ವ ತಪ್ಪತಿ** ||೧೩೬||

೧೩೬. ತಿಳಿಗೇಡಿಯಾದವನು ಪಾಪಕರ್ಮಗಳನ್ನು ಮಾಡುತ್ತಿರುವಾಗ ಎಚ್ಚರುವದಿಲ್ಲ. ಆ ಹೆಡ್ಡನು ಆಮೇಲೆ ತನ್ನ ಕರ್ಮಗಳಿಂದ ಬೆಂಕಿಯಿಂದ ಸುಡಿಸಿಕೊಂಡವನಂತೆ† ಸಂತಾಪಪಡುವನು.

**ಯೋ ದಂಡೇನ ಅದಂಡೇಸು ಅಪ್ಪದುಟ್ಠೇಸು ದುಸ್ಸತಿ**
**ದಸನ್ನಂ ಅಞ್ಞತರಙ್ ಠಾನಙ್ ಖಿಪ್ಪಂ ಏವ ನಿಗಚ್ಛತಿ**
**ವೇದನಙ್ ಫರುಸಙ್, ಜಾನಿಙ್ ಸರೀರಸ್ಸ ಚ ಭೇದನಙ್**
**ಗಾರುಕಙ್ ವಾ ಪಿ ಆಬಾದಙ್ ಚಿತ್ತಕ್ಖೇಪಙ್ ವಾ ಪಾಪುನೇ**
**ರಾಜತೋ ವಾ ಉಪಸ್ಸಗ್ಗಙ್ ಅಬ್ಭಕ್ಖಾನಙ್ ವಾ ದಾರುಣಙ್**
**ಪರಿಕ್ಖಯಙ್ ವ ಞಾತೀನಙ್ ಭೋಗಾನಙ್ ನ ಪಭಂಗುತಙ್**
**ಅಥ ವಸ್ಸ ಅಗಾರಾನಿ ಅಗ್ಗಿ ದಹತಿ ಪಾವಕೋ**
**ಕಾಯಸ್ಸ ಭೇದ ದುಪ್ಪಞ್ಞೋ ನಿರಯಙ್ ಸೋ ಉಪಪಜ್ಜತಿ** ||೧೩೭-೧೪೦||

* ಅದೇ ಬಗೆಯ ಪೆಟ್ಟುಗಳು.

† ಎತ್ತಲೋ ನೋಡುತ್ತ ಬೆಂಕಿಯನ್ನು ಮುಟ್ಟಿ ಸುಡಿಸಿಕೊಂಡವನಂತೆ.

೧೩೭-೧೪೦. ಯಾವನು ದಂಡಕ್ಕೆ ಅರ್ಹರಲ್ಲದೆ ನಿರ್ದುಷ್ಟರಾಗಿರುವವರನ್ನು ದಂಡಿಸಿ ದೂಷಿಸುವನೋ ಅವನು ಈ ಹತ್ತರಲ್ಲಿ ಒಂದು **ಗತಿ**ಯನ್ನು ಬೇಗನೆ ಹೊಂದುವನು : ಹೆಚ್ಚಿನ ನೋವು, ಹಾನಿ, ಶರೀರವನ್ನು ಬಿಟ್ಟಗಲುವಿಕೆ,* ಕೆಟ್ಟ ಬೇನೆ, ಹುಚ್ಚು, ಅರಸಿನಿಂದ ತೊಂದರೆ, ಭಾರಿಯ ಕೆಟ್ಟ ಹೆಸರಿಗೆ ಪಾತ್ರನಾಗುವದು, ಬಂಧುಗಳ ನಾಶ, ಭೋಗಗಳ ನಾಶ, ಅಥವಾ ಬೆಂಕಿಯು ಅವನ ಮನೆಗೆ ಹತ್ತುವದು. ಆ ಮೂಢನು ದೇಹವನ್ನು ಬಿಟ್ಟ ಮೇಲೆ **ನಿರಯ**ವನ್ನು ಹೊಂದುವನು.

**ನ ನಗ್ಗಚರಿಯಾ, ನ ಜಟಾ, ನ ಪಂಕ,**
**ನಾನಾಸಕಾ, ಥಂಡಿಲಸಾಯಿಕಾ ವಾ**
**ರಜೋ ಚ ಜಲ್ಲಜ್ ಉಕ್ಕುಟಿಕಪ್ಪಧನಜ್**
**ಸೋಧೆಂತಿ ಮಚ್ಚಜ್ ಅವಿತಿಣ್ಣಕಂಖಜ್** ||೧೪೧||

೧೪೧. ಬೆತ್ತಲೆ ಓಡಾಡುವದಾಗಲಿ,† ಜಟೆಗಳನ್ನು ಬಿಡುವದಾಗಲಿ, ಕೆಸರನ್ನು ಬಳಿದುಕೊಳ್ಳುವದರಿಂದಾಗಲಿ, ಉಪವಾಸವಿರುವದರಿಂದಾಗಲಿ, ಗಟ್ಟಿ ನೆಲದ ಮೇಲೆ ಮಲಗುವದಾಗಲಿ, ಧೂಳನ್ನು ನೀರುಬೆರಸಿ ಬಳಿದುಕೊಳ್ಳುವದರಿಂದಾಗಲಿ, ಕುಕ್ಕರುಗಾಲಲ್ಲಿ ಕೂಡುವದಾಗಲಿ, ಆಶೆಗಳನ್ನು ಮೀರದಾತನನ್ನು ಶುದ್ಧಿಗೊಳಿಸಲಾರವು.

**ಅಲಂಕಟೋ ಚೆ ಪಿ ಸಮಜ್ ಚರೆಯ್ಯ**
**ಸಂತೋ ದಂತೋ ನಿಯತೋ ಬ್ರಹ್ಮಚಾರೀ**
**ಸಬ್ಬೇಸು ಭೂತೇಸು ನಿಧಾಯ ದಂಡಜ್**
**ಸೋ ಬ್ರಾಹ್ಮಣೋ, ಸೋ ಸಮಣೋ, ಸಾ ಭಿಕ್ಕು** ||೧೪೨||

೧೪೨. ಯಾವನು ಅಲಂಕಾರವನ್ನು ಮಾಡಿಕೊಂಡಿದ್ದರೂ ಶಮವನ್ನು ಆಚರಣೆಯಲ್ಲಿಟ್ಟಿರುವನೋ, ಶಾಂತನಾಗಿ ದಾಂತನಾಗಿ ನಿಯಮವಂತನಾಗಿ ಬ್ರಹ್ಮಚಾರಿಯಾಗಿ ಯಾವ ಪ್ರಾಣಿಗಳನ್ನೂ ದಂಡಿಸದೆ ಇರುವನೋ, ಅವನೇ **ಬ್ರಾಹ್ಮಣ**ನು, ಅವನೇ **ಶ್ರಮಣ**ನು, ಅವನೇ **ಭಿಕ್ಷು**ವು.

---

* 'ಶರೀರಭೇವ' - ಎಂಬ ಮೂಲದ ಅರ್ಥ ; ಶರೀರಕ್ಕೆ ಏನಾದರೊಂದು ಪೆಟ್ಟು ಅಥವಾ ಅಪಾಯ. ಪೂ|| (೨) ಸಾಂ||.

† ತಾವು ವಿರಕ್ತರೆಂದೂ ದೇಹದಂಡನೆಯನ್ನು ಮಾಡುವವೆಂದೂ, ತೋರಿಸುವದಕ್ಕಾಗಿ ಕೆಲವರು ಹೀಗೆಲ್ಲ ಮಾಡುವರು.

**ಹಿರೀನಿಸೇಧೋ ಪುರಿಸೋ ಕೋಚಿ ಲೋಕಸ್ಮಿಜ್ ವಿಜ್ಜತಿ**
**ಯೋ ನಿಂದಜ್ ಅಪ್ಪಬೋಧತಿ ಅಸ್ಸೋ ಭದ್ರೋ ಕಸಂ ಇವ ?** ||೧೪೩||

೧೪೩. ಜಾತಿಯ ಕುದುರೆಯು ಕೊರಡೆಯ ಪೆಟ್ಟನ್ನು ತಿಳಿದು ತಪ್ಪಿಸಿಕೊಳ್ಳುವಂತೆ* ಯಾವನು ನಾಚಿಕೆಯಿಂದ ಕೆಟ್ಟಕೆಲಸವನ್ನು ತಡೆದುಕೊಳ್ಳುವನೊ, ನಿಂದೆಯನ್ನು ಬೇಗನೆ ತಿಳಿದುಕೊಳ್ಳುವನೋ,† ಅಂಥವನು ಈ ಲೋಕದಲ್ಲಿ ಯಾವನೋ ಒಬ್ಬನಿರುವನು.

**ಅಸ್ಸೋ ಯಥಾ ಭದ್ರೋ ಕಸಾ ನಿವಿಟ್ಠೋ**
**ಆತಾಪಿನೋ ಸಂವೇಗಿನೋ ಭವಾಥ**
**ಸದ್ಧಾಯ ಸೀಲೇನ ಚ ವಿರಿಯೇನ ಚ**
**ಸಮಾಧಿನ ಧಮ್ಮವಿನಿಚ್ಛಯೇನ ಚ**
**ಸಂಪನ್ನವಿಜ್ಜಾಚರಣ ಪತಿಸ್ಸತಾ**
**ಪಹಸ್ಸಥ ದುಕ್ಖಜ್ ಇದಜ್ ಅನಪ್ಪಕಜ್** ||೧೪೪||

೧೪೪. ಕೊರಡೆಯ ಪೆಟ್ಟುಬಿದ್ದ ಜಾತಿಯ ಕುದುರೆಯಂತೆ ಸಂತಾಪವುಳ್ಳವರೂ ವೇಗವಂತರೂ ಆಗಿರಿ ; **ಶ್ರದ್ಧೆ, ಶೀಲ, ವೀರ್ಯ, ಸಮಾಧಿ, ಧರ್ಮವಿನಿಶ್ಚಯ** - ಇವುಗಳಿಂದ ಯುಕ್ತರಾಗಿ ; ವಿದ್ಯೆ, ಆಚಾರ - ಇವುಗಳನ್ನು ಪಡೆದುಕೊಂಡು **ಸ್ಮೃತಿ**ಯನ್ನು ಹೊಂದಿ ಈ ಬಹುದುಃಖವಾದ ಸಂಸಾರವನ್ನು ತಪ್ಪಿಸಿಕೊಳ್ಳುವಿರಿ.

**ಉದಕಜ್ ಹಿ ನಿಯತ್ತಿ ನೇತ್ತಿಕಾ ಉಸುಕಾರಾ ನಮಯಂತಿ ತೇಜನಜ್**
**ದಾರುಜ್ ನಮಯಂತಿ ತಚ್ಛಕಾ ಅತ್ತಾನಜ್ ದಮಯಂತಿ ಸಬ್ಬತಾ** ||೧೪೫||

೧೪೫.‡ ನೀರುಹಾಯಿಸುವವರು ನೀರನ್ನು ಬೇಕಾದ ಕಡೆಗೆ ಒಯ್ಯುತ್ತಾರ, ಬಾಣವನ್ನು ಮಾಡುವವರು ಬಿದಿರನ್ನು ಬೇಕಾದಂತೆ ಬಗ್ಗಿಸಿಕೊಳ್ಳುತ್ತಾರೆ, ಬಡಗಿಯರು ಮರವನ್ನು ಬೇಕಾದ ಮಾಟಕ್ಕೆ ಮಾಡಿಕೊಳ್ಳುತ್ತಾ.ರ. ಇದರಂತೆ ಉತ್ತಮವ್ರತವುಳ್ಳವರು ತಮ್ಮನ್ನು ತಾವೇ ತಿದ್ದಿಕೊಳ್ಳುತ್ತಾರೆ.

* ಇದು ವ್ಯಾಖ್ಯಾನದಂತೆ ಅರ್ಥ ; 'ಬೇಗ ತಿಳಿದುಕೊಳ್ಳುವಂತೆ' ಪೂ||. ಸಹಿಸದಿರುವಂತೆ ಸಾಂ. - ಎಂದೂ ಅರ್ಥಮಾಡಿರುತ್ತಾರ. † 'ಅಪ್ಪಬೋಧತಿ' ಎಂಬುದನ್ನು 'ನ ಪ್ರಬುಧ್ಯತಿ' ಎಂದು ಕೆಲವರು ಅರ್ಥಮಾಡಿರುತ್ತಾರೆ ; 'ಅಪ್ರಬುಧ್ಯತೇ' ಎಂಬುದೇ ಪೂ || (೧) ಸರಿಯೆಂದು ತೋರುವದು. ‡ ೮೦ನೆಯ ಗಾಥೆಗೂ ಇದಕ್ಕೂ ಯಾವ ಭೇದವೂ ಇಲ್ಲ. ಅಲ್ಲಿರುವ 'ಪಂಡಿತಾಃ' ಎಂಬ ಮಾತಿಗ ಬದಲು ಇಲ್ಲಿ 'ಸುವ್ರತಾಃ' ಎಂದಿದ.

# ೧೧. ಜರಾವರ್ಗ (ಜರಾವಗ್ಗ)

**ಕೋ ನು ಹಾಸೋ ? ಕಿಮ್ ಆನಂದೋ ನಿಚ್ಚಜ್ ಪಜ್ಜಕಲಿತೇ ಸತಿ ?**
**ಅಂಧಕಾರೇನ ಓನದ್ಧಾ ಪದೀಪಜ್ ನ ಗವೆಸ್ಸಥ ?** ||೧೪೬||

೧೪೬. ಯಾವಾಗಲೂ ಬೆಂಕಿ ಹತ್ತಿಕೊಂಡು ಉರಿಯುತ್ತಿರುವಾಗ* ನಗೆಯೇನು, ಆನಂದವೇನು ? ಕತ್ತಲೆಯಲ್ಲಿ ಮುಂಗಾಣದೆ ಇದ್ದೂ ಬೆಳಕನ್ನು ಹುಡುಕದೆ ಇರುವಿರಲ್ಲ !

**ಪಸ್ಸ ಚಿತ್ತಕತಜ್ ಬಿಂಬಜ್ ಅರುಕಾಯಜ್ ಸಮುಸ್ಸಿತಜ್**
**ಆತುರಜ್ ಬಹುಸಂಕಪ್ಪಜ್ ಯಸ್ಸ ನತ್ಥಿ ಧುವಜ್ ಠಿತಿ** ||೧೪೭||

೧೪೭. ಚಿತ್ರಚಿತ್ರವಾಗಿರುವ† ಈ ಬಿಂಬವನ್ನು ನೋಡು ! ಈ ದೇಹವು ಹುಣ್ಣುಗಳಿಂದ‡ ಕೂಡಿ ನಿಂತಿರುವದು, ಬೇನೆಗಳಿಂದ ಬೇಯುತ್ತಿರುವದು, ಎಷ್ಟೋ ಸಂಕಲ್ಪಗಳಿಂದುಂಟಾಗಿರುವದು§ ; ಇದಕ್ಕೆ ಗೊತ್ತಾಗಿ ಒಂದು ಕಡೆ ನಿಲವೇ ಇರುವದಿಲ್ಲ !

**ಪರಿಜಿಣ್ಣಂ ಇದಜ್ ರೂಪಜ್ ರೋಗನಿಡ್ಡಜ್ ಪಭಂಗುರುಜ್**
**ಭಿಜ್ಜತಿ ಪೂತಿಸಂದೇಹೋ ಮರಣಂತಜ್ ಹಿ ಜೀವಿತಜ್** ||೧೪೮||

೧೪೮. ಈ ಆಕಾರವು ಜೀರ್ಣವಾಗಿ, ಬೇನೆಗಳ ಗೂಡಾಗಿ, ನಾಶವಾಗ ತಕ್ಕದ್ದಾಗಿರುವದು ; ನಾತದ ತಿಪ್ಪೆಯಾಗಿ ಬಿದ್ದುಹೋಗುವದು. ಬದುಕಿರುವದೆಂಬುದು ಸ್ಸಾವಿನಲ್ಲಿ ಕೊನೆಗಾಣಬೇಕಷ್ಟೆ.

**ಯಾನಿಮಾನಿ ಅಪತ್ಥಾನಿ ಅಲಾಪೂನೇವ ಸಾರದೆ**
**ಕಾಪೋತಕಾನಿ ಅಟ್ಠೀನಿ ತಾಗಿ ದಿಸ್ವಾನ ಕಾ ರತಿ** ||೧೪೯||

೧೪೯. ಶರತ್ಕಾಲದಲ್ಲಿ ಸೋರೆಕಾಯಿಗಳನ್ನೆಸೆಯುವಂತೆ ಆತ್ತೊಗೆದ ಈ ಬಿಳಿಯ ಮೂಳೆಗಳನ್ನು ನೋಡಿದವನಿಗೆ ಇವುಗಳಲ್ಲಿ ಏನು ಪ್ರೀತಿ ಇದ್ದೀತು ?

---

* ದುಃಖವು ಆವರಿಸಿರುವಾಗ.

† 'ವಸ್ತ್ರಾಭರಣಮಾಲಾಲಕ್ತಕಾದಿಗಳಿಂದ ವಿಚಿತ್ರವಾಗಿರುವ' ವ್ಯಾ ||

‡ ಒಂಬತ್ತು ಹುಣ್ಣುಗಳ ರಂಧ್ರಗಳಿಂದ ವ್ಯಾ||

§ 'ಒಬ್ಬೊಬ್ಬರು ಒಂದೊಂದು ಬಗೆಯಾಗಿ ಸಂಕಲ್ಪಮಾಡಿರುವರು. ವ್ಯಾ||

**ಅಟ್ಠಿನಜ್ ನಗರಜ್ ಕತಜ್ ಮಜ್ಸ - ಲೋಹಿತ - ಲೇಪನಜ್**
**ಯತ್ಥ ಜರಾ ಚ ಮಚ್ಚೂ ಚ ಮಾನೋ ಮಕ್ಖೋ ಚ ಓಹಿತೋ ||೧೫೦||**

೧೫೦. ಅಸ್ಥಿಗಳಿಂದ ಒಂದು ಕೋಟೆಯು ರಚಿತವಾಗಿರುವದು. ಇದಕ್ಕೆ ಮಾಂಸರಕ್ತಗಳನ್ನು ಮೇಲೆ ಬಳಿದಿರುತ್ತದೆ. ಇದರೊಳಗೆ ಮುಪ್ಪು, ಸಾವು, ಅಭಿಮಾನ, ಹೊಟ್ಟೆಕಿಚ್ಚು* - ಇವುಗಳೆಲ್ಲ ಅಡಗಿರುತ್ತವೆ.

**ಜೀರಂತಿ ವೇ ರಾಜರಥಾ ಸುಚಿತ್ತಾ**
**ಅಥೋ ಸರೀರಂ ಪಿ ಜರಜ್ ಉಪೇತಿ**
**ಸತಜ್ ಚ ಧಮ್ಮೋ ನ ಜರಜ್ ಉಪೇತಿ**
**ಸಂತೋ ಹವೇ ಸಬ್ಭಿ ಪವೇದಯಂತಿ ||೧೫೧||**

೧೫೧. ಒಳ್ಳೆಯ ಚಿತ್ರಾಲಂಕೃತವಾದ ರಾಜರಥಗಳೂ ಹಳೆಯವಾಗುವವು, ಇದರಂತೆ ಶರೀರವೂ ಮುಪ್ಪನ್ನು ಪಡೆಯುವದು. ಆದರೆ ಸತ್ಪುರುಷರ ಧರ್ಮವು ಮುಪ್ಪನ್ನು ಹೊಂದುವದಿಲ್ಲ. ಹೀಗೆಂದು ಸಜ್ಜನರು ಸಜ್ಜನರಿಗೆ ಹೇಳುತ್ತಾರೆ.

**ಅಪ್ಪಸುತ್ತಾಯಂ ಪುರಿಸೋ ಬಲಿವದ್ದೋ ವ ಜೀವತಿ**
**ಮಜ್‌ಸಾನಿ ತಸ್ಸ ವಡ್ಢಂತಿ ಪಞ್ಞಾ ತಸ್ಸ ನ ವಡ್ಢತಿ ||೧೫೨||**

೧೫೨. ಅಜ್ಞಾನಿಯಾದ ಈ ಪುರುಷನು ಎತ್ತಿನಂತೆ ಮುದಿಯಾಗುವನು. ಅವನ ಮಾಂಸಖಂಡಗಳು ಬೆಳೆಯುವವೇ ಹೊರತು ಅವನ ಪ್ರಜ್ಞೆಯು ಹೆಚ್ಚದು.

**ಅನೇಕಜಾತಿ - ಸಂಸಾರಜ್ ಸಂಧಾವಿಸ್ಸಜ್ ಅನಿಬ್ಬಿಸಜ್**
**ಗಹಕಾರಕಜ್ ಗವೇಸಂತೋ ದುಕ್ಖಾಜಾತಿ ಪುನಪ್ಪುನಜ್**
**ಗಹಕಾರಕಾ, ದಿಟ್ಠೋಸಿ ಪುನ ಗೇಹಜ್ ನ ಕಾಹಸಿ**
**ಸಬ್ಬಾ ತೇ ಫಾಸುಕಾ ಭಗ್ಗಾ ಗಹಕೂಟಜ್ ವಿಸಂಖಿತಜ್**
**ವಿಸಂಖಾರಗತಜ್ ಚಿತ್ತಜ್ ತನ್ಹಾನಜ್ ಖಯಜ್ ಅಜ್ಝಗಾ ||೧೫೩-೧೫೪||**

೧೫೩-೧೫೪.† ತಿಳಿವಳಿಕೆಯಿಲ್ಲದೆ‡ ಗೃಹಕಾರಕನನ್ನು ಹುಡುಕಿಕೊಂಡು ಮತ್ತೆಮತ್ತೆ ದುಃಖವನ್ನೂ ಜನ್ಮವನ್ನೂ ಹೊಂದುತ್ತಾ ಎಷ್ಟೋ ಜನ್ಮಗಳ

---

* 'ಕಾಪಟ್ಯ' ಪೂ||. (೧) † ಇವುಗಳು ಗೌತಮನು ಬುದ್ಧನಾದಾಗ ಹೇಳಿದ ಜಯಗಾಥೆಗಳೆಂದು ಬೌದ್ಧರು ನಂಬುತ್ತಾರೆ.

‡ ಇದು ವ್ಯಾಖ್ಯಾನದ ಅರ್ಥ ; 'ನಿಲುಗಡೆಯಲ್ಲದೆ' ಸಾಂ|| 'ಹಗಲೂ ಇರುಳೂ' ಪೂ||

ಸಂಸಾರದಲ್ಲಿ ಓಡಾಡಿ ತೊಳಲಿದೆನು. ಎಲೈ ಗೃಹಕಾರಕನೆ, ನಿನ್ನನ್ನು ಕಂಡು ಹಿಡಿದೆನು. ಇನ್ನು ಮತ್ತೆ ನೀನು ಮನೆಯನ್ನು ಕಟ್ಟಲಾರೆ. ನಿನ್ನ ತೊಲೆಜಂತೆಗಳೆಲ್ಲವೂ ಮುರಿದು ಹೋದವು, ಬೇಂಗಟೆಯ* ಮರವೂ ಹಾಳಾಯಿತು. ಯಾವ ಸಂಸ್ಕಾರವೂ ಇಲ್ಲದ **ನಿರ್ವಾಣ**ವನ್ನು ಹೊಂದಿ ಚಿತ್ತವು ಗಳ ಕ್ಷಯವನ್ನು ಪಡೆದಿರುತ್ತದೆ.

**ಅಚರಿತ್ವಾ ಬ್ರಹ್ಮಚರಿಯಙ್ ಅಲದ್ಧಾ ಯೊಬ್ಬನೇ ಧನಙ್**
**ಜಿಣ್ಣ - ಕೊಂಚಾ ವಾ ಝಾಯಂತಿ ಖೀಣಮಚ್ಛೇ ವ ಪಲ್ಲಲೇ** ||೧೫೫||

೧೫೫. ಬ್ರಹ್ಮಚರ್ಯವನ್ನು ಮಾಡದೆ ಯೌವನದಲ್ಲಿ ಹಣವನ್ನು ಸಂಪಾದಿಸದೆ ಇರುವವರು ಮೀನುಗಳು ಮುಗಿದುಹೋಗಿರುವ ಕುಂಟೆಯ ಬಳಿಯಲ್ಲಿರುವ ಮುದಿಬಕನಂತೆ ಕ್ಷೀಣವಾಗುವರು.

**ಅಚರಿತ್ವಾ ಬ್ರಹ್ಮಚರಿಯಙ್ ಅಲದ್ಧಾ ಯೊಬ್ಬನೇ ಧನಙ್**
**ಸೇಂತಿ ಚಾಪಾತಿಖೀಣಾವಾ ಪುರಾಣಾನಿ ಅನುತ್ಥುನಙ್** ||೧೫೬||

೧೫೬. ಬ್ರಹ್ಮಚರ್ಯವನ್ನು ಮಾಡದೆ ಯೌವನದಲ್ಲಿ ಹಣವನ್ನು ಸಂಪಾದಿಸದೆ ಇರುವವರು ತೀರ ಮುರಿದ ಬಿಲ್ಲಿನಂತೆ ಹಿಂದಿನ ಕೃತ್ಯಗಳಿಗೆ ಪಶ್ಚಾತ್ತಾಪಪಡುತ್ತಾ ಬಿದ್ದಿರುವರು.

# ೧೨. ಆತ್ಮವರ್ಗ (ಅತ್ತವಗ್ಗ)

**ಅತ್ತಾನಙ್ ಚೆ ಪಿಯಂ ಜಞ್ಞಾ ರಕ್ಖೆಯ್ಯ ನಙ್ ಸುರಕ್ಖಿತಙ್**
**ತಿಣ್ಣಂ ಅಞ್ಞತರಙ್ ಯಾಮಙ್ ಪತಿಜಗ್ಗೆಯ್ಯ ಪಂಡಿತೋ** ||೧೫೭||

೧೫೭. ತನಗೆ ತಾನು ಪ್ರಿಯನೆಂದು ಭಾವಿಸಿಕೊಂಡಿದ್ದರೆ, ತನ್ನನ್ನು ತಾನು

* ಅವಿದ್ಯೆ ; ಇದರಿಂದಲೇ ಸಂಸಾರವು ನಡೆದಿರುವದು.

ಚೆನ್ನಾಗಿ ಕಾಪಾಡಿಕೊಳ್ಳಬೇಕು. ಪಂಡಿತನಾದವನು ಮೂರು ಜಾವಗಳೊಳಗೆ* ಒಂದರಲ್ಲಿಯಾದರೂ ಎಚ್ಚರವಾಗಿರಬೇಕು.

**ಅತ್ತಾನಂ ಏವ ಪಠಮಜ್ ಪತಿರೂಪೇ ನಿವೇಸಯೇ**
**ಅಥಞ್ಞಾಂ ಅನುಸಾಸೆಯ್ಯ ನ ಕಿಲಿಸ್ಸೆಯ್ಯ ಪಂಡಿತೋ** ||೧೫೮||

೧೫೮. ಮೊದಲು ತಾನು ತನ್ನನ್ನು ಸರಿಯಾದ ಮಾರ್ಗಕ್ಕೆ ಹಚ್ಚಿಕೊಳ್ಳಬೇಕು, ಆಮೇಲೆ ಮತ್ತೊಬ್ಬರಿಗೆ ಬುದ್ಧಿ ಹೇಳಬೇಕು. ಹಾಗಾದರೆ ತಿಳಿದವನು ಕ್ಲೇಶಕ್ಕೆ ಒಳಗಾಗುವದಿಲ್ಲ.

**ಅತ್ತಾನಜ್ ಚೆ ತಥಾ ಕಯಿರಾ ಯಥಞ್ಞಾಂ ಅನುಸಾಸತಿ**
**ಸುದಂತೋ ವತ ಧಮ್ಮೇಥ ಅತ್ತಾ ಹಿ ಕಿರಾ ದುದ್ದಮೋ** ||೧೫೯||

೧೫೯. ಮತ್ತೊಬ್ಬರಿಗೆ ಹೇಳಿಕೊಡುವಂತೆ ತನ್ನನ್ನು ತಾನು ಮಾಡಿಕೊಳ್ಳುವದಾದರೆ, ತಾನು ಚೆನ್ನಾಗಿ ದಾಂತನಾಗಿ ಮತ್ತೊಬ್ಬನನ್ನೂ ನಿಜವಾಗಿ ದಮನಮಾಡಬಹುದು. ತನ್ನನ್ನು ತಾನು ದಮನ ಮಾಡಿಕೊಳ್ಳುವದೇ ಕಷ್ಟ.

**ಅತ್ತಾ ಹಿ ಅತ್ತನೋ ನಾಥೋ ಕೋ ಹಿ ನಾಥೋ ಪರೋ ಸಿಯಾ**
**ಅತ್ತನಾ ವಾ ಸುದಂತೇನ ನಾಥಜ್ ಲಭತಿ ದುಲ್ಲಭಜ್** ||೧೬೦||

೧೬೦. ತನಗೆ ತಾನೇ ನಾಥನು, ಮತ್ತೆ ಬೇರೆ ಯಾವನು ನಾಥನಾದಾನು ? ತನ್ನನ್ನು ತಾನು ದಮನಮಾಡಿಕೊಂಡರೆ ದುರ್ಲಭನಾದ ನಾಥನನ್ನು ಪಡೆದುಕೊಳ್ಳುವನು.

**ಅತ್ತನಾ ವ ಕತಜ್ ಪಾಪಜ್ ಅತ್ತಜಜ್ ಅತ್ತಸಂಭವಜ್**
**ಅಭೀಮಂಥತಿ ದುಮ್ಮೇಧಜ್ ವಜಿರಜ್ ವಸಮಯಜ್ ಮಣಿಜ್** ||೧೬೧||

೧೬೧. ತಾನೇ ಮಾಡಿದ ಪಾಪವು ತನ್ನಿಂದ ಹುಟ್ಟಿದ್ದು ತನ್ನಿಂದಲೇ ಬೆಳೆಯುವದಾಗಿ ವಜ್ರವು ಕಲ್ಲಿನ ರತ್ನವನ್ನು ಕೊರೆಯುವಂತೆ ಆ ಅವಿವೇಕಿಯನ್ನು ಕೊರೆಯುತ್ತದೆ.

**ಯಸ್ಸ ಅಚ್ಚಂತ ದುಸ್ಸೀಲಯಜ್ ಮಾಲುವಾ ಸಾಲಂ ಇವೋತ್ಥತಜ್**
**ಕರೋತಿ ಸೋ ತಥತ್ತಾನಜ್ ಯಥಾ ನಜ್ ಇಚ್ಛತಿ ದಿಸೋ** ||೧೬೨||

* ಪ್ರಥಮವಯಸ್ಸು, ಮಧ್ಯಮವಯಸ್ಸು, ಪಶ್ಚಿಮವಯಸ್ಸು - ಇವುಗಳೇ ಮೂರು ಯಾಮಗಳು. ಪೂ||

೧೬೨. **ಮಾಲುವಾ**ಲತೆಯು* ಸಾಲವೃಕ್ಷವನ್ನು ಸುತ್ತಿಕೊಂಡಿರುವಂತೆ ಯಾವನನ್ನು ದುಃಶೀಲವು ಮುತ್ತಿಕೊಂಡಿರುವದೋ ಅಂಥವನು, ಶತ್ರುಗಳು ತನ್ನನ್ನು ಹೇಗೆ ಇರಬೇಕೆಂದು ಬಯಸುವರೋ ಹಾಗೆಯೇ ಮಾಡಿಕೊಳ್ಳುತ್ತಾನೆ.

**ಸುಕರಾನಿ ಅಸಾಧೂನಿ ಅತ್ತನೋ ಅಹಿತಾನಿ ಚ**
**ಯಜ್ ವೇ ಹಿತಜ್ ಚ ಸಾಧೂಚ ತಜ್ ವೇ ಪರಮದುಕ್ಕರಜ್** ||೧೬೩||

೧೬೩. ಕೆಟ್ಟವೂ ತನಗೆ ಅಹಿತವಾದವೂ ಆಗಿರುವ ಕರ್ಮಗಳನ್ನು ಮಾಡುವದು ಸುಲಭವು. ಯಾವದು ಹಿತವೂ, ಒಳ್ಳೆಯದೂ ಆಗಿರುವದೋ ಅದನ್ನು ಮಾಡುವದೇ ಬಹಳ ಕಷ್ಟ.

**ಯೋ ಸಾಸನಜ್ ಅರಹತಜ್ ಅರಿಯಾನಜ್ ಧಮ್ಮಜೀವನಜ್**
**ಪಟಿಕ್ಕೋಸತಿ ದುಮ್ಮೇಧೋ ದಿಟ್ಠಿಜ್ ನಿಸ್ಸಾಯ ಪಾಪಿಕಜ್**
**ಫಲಾನಿ ಕಟ್ಠಕಸ್ಸೇವ ಅತ್ತಘನ್ನಾಯ ಫಲ್ಲತಿ** ||೧೬೪||

೧೬೪. ಯಾವನು ಪಾಪದೃಷ್ಟಿಯನ್ನವಲಂಬಿಸಿ ಧರ್ಮಜೀವಿಗಳೂ **ಆರ್ಯ**ರೂ ಆಗಿರುವ **ಅರಹಂತರ** ಶಾಸನವನ್ನು ಮೀರುವನೋ ಆತನು ಕಟ್ಟಕ(ವೆಂಬ ಬಿದಿರಿ)ನಂತೆ ತನ್ನ† ನಾಶಕ್ಕಾಗಿ ಹೂಬಿಡುವನು.

**ಅತ್ತನಾ ವ ಕತಜ್ ಪಾಪಜ್ ಅತ್ತನಾ ಸಂಕಿಲಿಸ್ಸತಿ**
**ಅತ್ತನಾ ಅಕತಜ್ ಪಾಪಜ್ ಅತ್ತನಾ ವ ವಿಸುಜ್ಝತಿ**
**ಸುದ್ಧಿ ಅಸುದ್ಧಿ ಪಚ್ಚತ್ತಜ್ ನಾಞ್ಞಜ್ ಅಞ್ಞೋ ವಿಸೋಧಯೇ** ||೧೬೫||

೧೬೫. ತಾನು ಮಾಡಿದ ಪಾಪವು ತನ್ನನ್ನೇ ಕ್ಲೇಶಗೊಳಿಸುವದು ; ತಾನು ಮಾಡದ ಪಾಪವು ತನ್ನನ್ನೇ ಶುದ್ಧಿಗೊಳಿಸುವದು ; ಶುದ್ಧಿ, ಅ. - ಇವು ಗಳೆರಡೂ ಅವರವರದೇ ಹೊರತು ಒಬ್ಬನು ಮತ್ತೊಬ್ಬನನ್ನು ಶುದ್ಧಿಗೊಳಿಸ ಲಾರನು.

**ಅತ್ತದತ್ತಜ್ ಪರತ್ಥೇನ ಬಹುನಾ ಪಿ ನ ಹಾಪಯೆ**
**ಅತ್ತದತ್ತಜ್ ಅಭಿಞ್ಞಾಯ ಸಕತ್ಥಪಸುತೋ ಸಿಯಾ** ||೧೬೬||

* ಮಾಲುವಾ ಎಂಬ ಬಳ್ಳಿಯು ಯಾವ ಮರವನ್ನು ಸುತ್ತಿಕೊಳ್ಳುವದೋ ಅದು ಮಳೆಗಾಲದಲ್ಲಿ ನೀರಿನ ಭಾರದಿಂದ ಕೆಳಕ್ಕೆ ಬೀಳುವದು.

† ಈ ಬಿದಿರು ಹೂಬಿಟ್ಟ ಮೇಲೆ ಒಣಗುತ್ತಾ ಹೋಗುವದು.

೧೬೬. ಮತ್ತೊಬ್ಬರಿಗೆ ತುಂಬ ಪ್ರಯೋಜನವಾಗುವ ಹಾಗಿದ್ದರೂ ತನ್ನ ಪ್ರಯೋಜನವನ್ನು ಕೆಡಿಸಿಕೊಳ್ಳಬಾರದು. ತನ್ನ ಹಿತವು ಯಾವದೆಂಬುದನ್ನು ತಿಳಿದುಕೊಂಡು ತನ್ನ* ಹಿತವಾಗುವ ಕಾರ್ಯದಲ್ಲಿಯೇ ಪ್ರವೃತ್ತನಾಗಿರಬೇಕು.

# ೧೩. ಲೋಕವರ್ಗ (ಲೋಕವಗ್ಗ)

**ಹೀನಙ್ ಧಮ್ಮಙ್ ನ ಸೇವೆಯ್ಯ ಪಮಾದೇನ ನ ಸಙ್‌ವಸೇ**
**ಮಿಚ್ಛಾದಿಟ್ಠಿಙ್ ನ ಸೇವೆಯ್ಯ ನ ಸಿಯಾ ಲೋಕವದ್ಧನೋ** ||೧೬೭||

೧೬೭. ಕೆಟ್ಟ ನಡತೆಯನ್ನು ಅನುಸರಿಸಬಾರದು, ಎಚ್ಚರಿಕೆಯಿಲ್ಲದೆ ಇರಬಾರದು ; **ಮಿಥ್ಯಾದೃಷ್ಟಿ**ಯನ್ನು† ಅನುಸರಿಸಬಾರದು, ಲೋಕವನ್ನು‡ ಬೆಳೆಯಿಸಬಾರದು.

**ಉತ್ತಿಟ್ಠೇ ನಪ್ಪಮಜ್ಜೆಯ್ಯ ಧಮ್ಮಙ್ ಸುಚರಿತಙ್ ಚರೆ**
**ಧಮ್ಮಚಾರೀ ಸುಖಙ್ ಸೇತಿ ಅಸ್ಮಿಙ್ ಲೋಕೇ ಪರಮ್ಹಿ ಚ** ||೧೬೮||

೧೬೮. ಏಳಬೇಕು, ಮೈಮರೆತಿರಬಾರದು, ಒಳ್ಳೆಯ ನಡತೆಯ ಧರ್ಮವನ್ನು ಆಚರಣೆಮಾಡಬೇಕು ; ಧರ್ಮವನ್ನು ಆಚರಣೆ ಮಾಡುವಾತನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವಾಗಿ ನಿದ್ರಿಸುವನು.

**ಧಮ್ಮಙ್ ಚರೇ ಸುಚರಿತಙ್ ನ ತಙ್ ದುಚ್ಚರಿತಙ್ ಚರೇ**
**ಧಮ್ಮಾಚಾರೀ ಸುಖಙ್ ಸೇತಿ ಅಸ್ಮಿಙ್ ಲೋಕೇ ಪರಮ್ಹಿ ಚ** ||೧೬೯||

೧೬೯. ಒಳ್ಳೆಯ ಧರ್ಮವನ್ನೇ ಆಚರಿಸಬೇಕು, ಕೆಟ್ಟ ನಡತೆಯನ್ನು

* 'ಸದತ್ಥ' ಎಂಬ ಮೂಲಕ್ಕೆ 'ಸ್ವಾರ್ಥ' ಎಂದು ಪೂ|| (೨) ದಲ್ಲಿ ಮಾಡಿರುವ ವ್ಯಾಖ್ಯಾನವೇ ಸರಿಯೆಂದು ತೋರುವದು ; 'ಸರಿಯಾದ ಹಿತ'ವೆಂದು ಸಾಂ ||ರು ಅರ್ಥ ಮಾಡಿರುತ್ತಾರೆ.

† ನಾಸ್ತಿಕ್ಯ, ಬೌದ್ಧಧರ್ಮಕ್ಕೆ ವಿರುದ್ಧವಾದ ದೃಷ್ಟಿ. ‡ ಸಂಸಾರವನ್ನು.

ಎಂದಿಗೂ ಅನುಸರಿಸಬಾರದು. ಧರ್ಮವನ್ನು ಆಚರಿಸುವಾತನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವಾಗಿ ನಿದ್ರಿಸುವನು.

**ಯಥಾ ಬಬ್ಬುಲಕಜ್ ಪಸ್ಸೇ ಯಥಾ ಪಸ್ಸೇ ಮರೀಚಿಕಜ್**
**ಏವಜ್ ಲೋಕಜ್ ಅವೆಕ್ಖಂತಜ್ ಮಚ್ಚುರಾಜಾ ನ ಪಸ್ಸತಿ** ||೧೭೦||

೧೭೦. ನೀರುಗುಳ್ಳೆಯನ್ನು ಕಾಣುವಂತೆಯೂ ಬಿಸಿಲುಟುದುರೆಯನ್ನು ಕಾಣುವಂತೆಯೂ ಲೋಕವನ್ನು ಕಾಣುವವನನ್ನು **ಮೃತ್ಯುರಾಜ**ನು ನೋಡಲಾರನು.

**ಏಥ ಪಸ್ಸಥಿಮಜ್ ಲೋಕಜ್ ಚಿತ್ತಜ್ ರಾಜರಥೂಪಮಜ್**
**ಯತ್ಥ ಬಾಲಾ ವಿಸೀದಂತಿ ನತ್ಥಿ ಸಂಗೋ ವಿಜಾನತಜ್** ||೧೭೧||

೧೭೧. ಬನ್ನಿ, ರಾಜನ ರಥದಂತೆ* ಚಿತ್ರವಿಚಿತ್ರವಾಗಿರುವ ಈ ಲೋಕವನ್ನು ನೋಡಿ ; ಇದರಲ್ಲಿ ತಿಳಿಗೇಡಿಗಳು ಸಿಕ್ಕಿ ಕಷ್ಟಪಡುವರು, ತಿಳಿದವರಿಗೆ ಇದರಲ್ಲಿ ಎಂದಿಗೂ ಆಸಕ್ತಿಯಿರುವದಿಲ್ಲ.

**ಯೋ ಚ ಪುಬ್ಬೇ ಪಮಜ್ಜಿತ್ವಾ ಪಚ್ಛಾ ಸೋ ನಪ್ಪಮಜ್ಜತಿ**
**ಸೋ ಇಮಜ್ ಲೋಕಜ್ ಪಭಾಸೇತಿ ಅಬ್ಭಾ ಮುತ್ತೊ ವ ಚಂದಿಮಾ** ||೧೭೨||

೧೭೨. ಯಾವನು ಮೊದಲು ಮೈಮರೆತಿದ್ದು ಆಮೇಲೆ ಎಚ್ಚತ್ತಿರುವನೋ ಅವನು ಮೋಡದಿಂದ ಬಿಡುಗಡೆಹೊಂದಿದ ಚಂದ್ರನಂತೆ ಈ ಲೋಕವನ್ನೆಲ್ಲ ಬೆಳಗುವನು.

**ಯಸ್ಸ ಪಾಪಜ್ ಕತಜ್ ಕಮ್ಮಜ್ ಕುಸಲೇನ ಪಿಥೀಯತಿ**
**ಸೋ ಇಮಜ್ ಲೋಕಜ್ ಪಭಾಸೇತಿ ಅಬ್ಭಾ ಮುತ್ತೋ ವ ಚಂದಿಮಾ** ||೧೭೩||

೧೭೩. ಯಾವನು ಮಾಡಿದ ಪಾಪವು ಪುಣ್ಯದಿಂದ ಮುಚ್ಚಿ ಹೋಗುವದೋ ಅವನು ಮೋಡದಿಂದ ಬಿಡುಗಡೆಹೊಂದಿದ ಚಂದ್ರನಂತೆ ಈ ಲೋಕವನ್ನೆಲ್ಲ ಬೆಳಗುವನು.

**ಅಂಧಭೂತೋ ಅಯಜ್ ಲೋಕೋ ತನುಕೆತ್ಥ ವಿಪಸ್ಸತಿ**
**ಸಕುಂತೋ ಜಾಲಮುತ್ತೋವ ಅಪ್ಪೋ ಸಗ್ಗಾಯ ಗಚ್ಛತಿ** ||೧೭೪||

* 'ರಾಜಪಥೂಪಮಂ' ಎಂಬ ಸಾಂ|| ಪಾಠಕ್ಕಿಂತ 'ರಾಜರಥೂಪಮಂ' ಎಂಬ ಪೂ|| ಪಾಠವೇ ಸರಿಯೆಂದು ತೋರುವದು ; 'ರತ್ನಾದಿಗಳಿಂದ ಖಚಿತವಾಗಿ ವಿಚಿತ್ರವಾಗಿರುವ ರಾಜರಥದಂತೆ' ಎಂದು ವ್ಯಾಖ್ಯಾನ.

೧೭೪. ಈ ಲೋಕವು ಕುರುಡರಂತಿರುವದು, ಇದರಲ್ಲಿ ಕಣ್ಣು ಕಾಣಿಸುವವರು ಕಡಿಮೆ. ಬಲೆಯಿಂದ ಬಿಡುಗಡೆಹೊಂದಿದ ಹಕ್ಕಿಯಂತೆ ಎಲ್ಲಿಯೋ ಕೆಲವರು ಸ್ವರ್ಗಕ್ಕೆ ಹೋಗುವರು.

**ಹಂಸಾದಿಚ್ಚಪಥೆ ಯಂತಿ ಅಕಾಸೇ ಯಂತಿ ಇದ್ಧಿಯಾ**
**ನಿಯಂತಿ ಧೀರಾ ಲೋಕಮ್ಹಾ ಜೆತ್ವಾ ಮಾರಜ್ ಸವಾಹಿನಿಜ್** ||೧೭೫||

೧೭೫. ಹಂಸಗಳು ಸೂರ್ಯಮಾರ್ಗದಲ್ಲಿ* ಸಂಚರಿಸುವವು, **ಋದ್ಧಿ**ಗಳನ್ನುಳ್ಳ† ಯೋಗಿಗಳು ಆಕಾಶಗಳು ಓಡಾಡುವರು ; ಧೀರರಾದವರು ಸೇನಾಸಹಿತನಾದ **ಮಾರ**ನನ್ನು ಗೆದ್ದು ಈ ಲೋಕದಿಂದಾಚೆಗೆ‡ ಒಯ್ಯಲ್ಪಡುವರು.

**ಏಕಜ್ ಧಮ್ಮಜ್ ಅತೀತಸ್ಸ ಮುಸಾವಾದಿಸ್ಸ ಜಂತುನೋ**
**ವಿತಿಣ್ಣ ಪರಲೋಕಸ್ಸ ನತ್ಥಿ ಪಾಪಜ್ ಅಕಾರಿಯಜ್** ||೧೭೬||

೧೭೬. ಇರುವ ಒಂದು ಧರ್ಮವನ್ನು ಬಿಟ್ಟು ಸುಳ್ಳನ್ನಾಡುತ್ತಾ ಪರಲೋಕದಾಸೆಯನ್ನೂ ದಾಟಿರುವ **ಜಂತು**ವಿಗೆ ಮಾಡಬಾರದಾದ ಪಾಪವೇ ಇರುವದಿಲ್ಲ.

**ನ ವೇ ಕದರಿಯಾ ದೇವಲೋಕಜ್ ವಜಂತಿ**
**ಬಾಲಾ ಹವೆ ನಪ್ಪಸಂಸತಿ ದಾನಜ್**
**ಧೀರೋ ಚ ದಾನಜ್ ಅನುಮೋದಮಾನೋ**
**ತೇನೇವ ಸೋ ಹೋತಿ ಸುಖೀ ಪರತ್ಥ** ||೧೭೭||

೧೭೭. ಜಿಪುಣರು ದೇವಲೋಕಕ್ಕೆ ಹೋಗರು ; ತಿಳಿಗೇಡಿಗಳು ದಾನವನ್ನು ಮೆಚ್ಚರು. ಧೀರನಾದವನು ದಾನವನ್ನು ಕೊಂಡಾಡುತ್ತಾ ಅದರಿಂದಲೇ ಪರಲೋಕದಲ್ಲಿ ಸುಖಿಯಾಗುವನು.

**ಪಠವ್ಯಾ ಏಕರಜ್ಜೇನ ಸಗ್ಗಸ್ಸ ಗಮಣೇನ ವಾ**
**ಸಬ್ಬಲೋಕಾಧಿಪಚ್ಚೇನ ಸೋತಪತ್ತಿಫಲಜ್ ವರಜ್** ||೧೭೮||

೧೭೮. ಪೃಥ್ವಿಯನ್ನೆಲ್ಲ ಏಕಾಧಿಪತ್ಯದಿಂದ ಆಳುವದಕ್ಕಿಂತಲೂ ಸ್ವರ್ಗ

† ಸಿದ್ಧಿಗಳನ್ನು ಪಡೆದಿರುವ ಯೋಗಿಗಳಿಗೆ ಬಗೆಬಗೆಯ ಸಿದ್ಧಿಗಳು ಉಂಟಾಗುವವೆಂಬುದು ಬೌದ್ಧರೂ ನಂಬುತ್ತಾರೆ.

‡ ನಿರ್ವಾಣಕ್ಕೆ.

ವನ್ನು ಪಡೆಯುವದಕ್ಕಿಂತಲೂ ಸರ್ವಲೋಕಗಳ ಒಡೆತನವನ್ನು ಗಳಿಸುವದಕ್ಕಿಂತಲೂ **ಸ್ರೋತ ಆಪತ್ತಿ**ಫಲವನ್ನು* ಪಡೆಯುವದೇ ಹೆಚ್ಚಿನದು.

# ೧೪. ಬುದ್ಧವರ್ಗ (ಬುದ್ಧವಗ್ಗ)

**ಯಸ್ಸ ಜಿತಙ್ ನಾವಜೀಯತಿ ಜಿತಂ ಅಸ್ಸ ನೋ ಯತಿ ಕೋಚಿಲೋಕೇ**
**ತಙ್ ಬುದ್ಧಙ್ ಅನಂತಗೋಚರಙ್ ಅಪದಙ್ ಕೇನ ಪದೇನ ನೆಸ್ಸಥ ||೧೭೯||**

೧೭೯. ಯಾವನ ಗೆಲವು ಸೋಲಾಗುವದೇ ಇಲ್ಲವೋ, ಯಾವನ ಗೆಲವನ್ನು ಈ ಲೋಕದಲ್ಲಿ ಯಾವನೂ ಹಿಂಬಾಲಿಸಲಾರನೋ, ಅಂಥ ಅನಂತಜ್ಞಾನವುಳ್ಳ ಹೆಜ್ಜೆಯ ಗುರುತಿಲ್ಲದ† ಬುದ್ಧನನ್ನು ಯಾವ ಹೆಜ್ಜೆಯ ಗುರುತಿನಿಂದ ಕೊಂಡೊಯ್ಯುವಿರಿ ?

**ಯಸ್ಸ ಜಾಲಿನಿ ವಿಸಟ್ಟಿಕಾ ತನ್ಹಾ ನತ್ಥಿ ಕುಹಿಂಚಿ ನೆತವೆ**
**ತಙ್ ಬುದ್ಧಙ್ ಅನಂತಗೋಚರಙ್ ಅಪದಙ್ ಕೇನ ಪದೇನ ನೆಸ್ಸಥ ||೧೮೦||**

೧೮೦. ಮನುಷ್ಯನನ್ನು ಎಲ್ಲಿಗಾದರೂ ಒಯ್ಯಬಲ್ಲ ತೃಷ್ಣೆಯೆಂಬ‡ ವಿಷಾತ್ಮಕವಾದ§ ಬಲೆಯು ಯಾವನಿಗೆ ಇರುವದಿಲ್ಲವೋ ಅಂಥ ಅನಂತ ಜ್ಞಾನವುಳ್ಳ¶ ಹೆಜ್ಜೆಯ ಗುರುತಿಲ್ಲದ ಬುದ್ಧನನ್ನು ಯಾವ ಹೆಜ್ಜೆಯ ಗುರುತಿನಿಂದ ಕೊಂಡೊಯ್ಯುವಿರಿ ?

* ನಿರ್ವಾಣಕ್ಕೆ ಹೋಗಿಮುಟ್ಟುವ ಹೊಳೆಗೆ ಬಿದ್ದವನು. ಇವನು ಮತ್ತೆ ಸಂಸಾರಕ್ಕೆ ಬೀಳುವದಿಲ್ಲವೆಂಬುದು ಬೌದ್ಧರ ನಂಬಿಕೆ.

† ರಾಗದ್ವೇಷ ಮುಂತಾದವುಗಳೇ ಹೆಜ್ಜೆಯ ಗುರುತುಗಳು. ವ್ಯಾ||

‡ ತೃಷ್ಣೆಯಿದ್ದರಲ್ಲವೆ, ತಪ್ಪುದಾರಿಗೆ ಹೋಗುವದು ? ಅದಿಲ್ಲದಿದ್ದರೆ ಕುಮಾರ್ಗಕ್ಕೆ ಹೋಗುವದೆಲ್ಲಿ ?

§ ರೂಪಾದಿಗಳಲ್ಲಿ ಆಸಕ್ತಿಯನ್ನು ಮಾಡಿ ಅವುಗಳನ್ನು ತೆಗೆದುಕೊಂಡು ಭೋಗಿಸುವದೆಂಬ ವಿಷರೂಪವಾದ ಕೆಟ್ಟ ಫಲವನ್ನು ಮಾಡುವದರಿಂದ ವಿಷಾತ್ಮಕವಾಗಿರುವದು. ವ್ಯಾ||

¶ ಬುದ್ಧನು ಸರ್ವಜ್ಞನೆಂದು ಬೌದ್ಧರ ನಂಬಿಕೆ.

**ಯೇ ಝಾನಪಸುತಾ ಧೀರಾ ನೆಕ್ಖಮ್ಮೂಪಸಮೇ ರತಾ**
**ದೇವಾ ಪಿ ತೇಸಜ್ ಪಿಹಯಂತಿ ಸಂಬುದ್ಧಾನಜ್ ಸತೀಮತಜ್** ||೧೮೧||

೧೮೧. ಯಾವ ಧೀರರು ಧ್ಯಾನದಲ್ಲಿಯೇ **ನೈಷ್ಕರ್ಮ್ಯ, ಉಪಶಮ** - ಇವುಗಳಲ್ಲಿ ನಿರತರಾಗಿರುವರೋ ಅಂಥ **ಸ್ಮೃತಿ**ವಂತರಾದ ಬುದ್ಧರಂತೆ ತಾವೂ ಆಗಲಿಲ್ಲವಲ್ಲ ! - ಎಂದು ದೇವತೆಗಳೂ ಎನ್ನುವರು.

**ಕಿಚ್ಛೋ ಮನುಸ್ಸಪಟಿಲಾಭೋ ಕಿಚ್ಛಜ್ ಮಚ್ಚಾನ ಜೀವಿತಜ್**
**ಕಿಚ್ಛಜ್ ಸದ್ಧಮ್ಮಸವಣಜ್ ಕಿಚ್ಛೋ ಬುದ್ಧಾನಜ್ ಉಪ್ಪಾದೋ** ||೧೮೨||

೧೮೨. ಮನುಷ್ಯಜನ್ಮವನ್ನು ಪಡೆಯುವದು ಕಷ್ಟವು, ಮನುಷ್ಯನಾಗಿ ಬದುಕಿರುವದು ಕಷ್ಟವು, **ಸದ್ಧರ್ಮ**ದ ಶ್ರವಣವು ದೊರೆಯುವದು ಕಷ್ಟವು, **ಬುದ್ಧ**ರಾಗುವದು ಕಷ್ಟವು.

**ಸಬ್ಬಪಾಪಸ್ಸ ಅಕರಣಜ್ ಕುಸಲಸ್ಸ ಉಪಸಂಪದಾ**
**ಸಚಿತ್ತ ಪರಿಯೋದಪನಜ್ ಏತಜ್ ಬುದ್ಧಾನ ಸಾಸನಜ್** ||೧೮೩||

೧೮೩. ಯಾವ ಪಾಪವನ್ನೂ ಮಾಡಬಾರದು, ಕುಶಲವನ್ನು ಸಂಪಾದಿಸಿ ಕೊಳ್ಳಬೇಕು, ತನ್ನ ಚಿತ್ತವನ್ನು ತೊಳೆದುಕೊಳ್ಳಬೇಕು.* ಇದೇ **ಬುದ್ಧನ ಅನುಶಾಸನವು.**†

**ಖಂತೀಪರಮಜ್ ತಪೋತಿತಿಕ್ಖಾ**
**ನಿಬ್ಬಾಣಜ್ ಪರಮಜ್ ವದಂತಿ ಬುದ್ಧಾ**
**ನ ಹಿ ಪಬ್ಬಜಿತೋ ಪರೂಪಘಾತಿ**
**ಸಮಣೋ ಹೋತಿ ಪರಜ್ ವಿಹೇಠಯಂತೋ** ||೧೮೪||

೧೮೪. ಕ್ಷಾಂತಿಯೇ ಹೆಚ್ಚಿನ ತಪಸ್ಸು, ತಿತಿಕ್ಷೆಯೇ ಹೆಚ್ಚಿನ **ನಿರ್ವಾಣ**ವೆಂದು‡ ತಿಳಿದವರು ಹೇಳುವರು. ಏಕೆಂದರೆ ಮತ್ತೊಬ್ಬರನ್ನು ಕೊಲ್ಲು

* ಐದು ನೀವರಣಗಳಿಂದ ಚಿತ್ತವನ್ನು ಶುದ್ಧಿಗೊಳಿಸಿಕೊಳ್ಳಬೇಕು. ವ್ಯಾ||

† ಈ ಶ್ಲೋಕದಲ್ಲಿ ಶೀಲ, ಪ್ರಜ್ಞಾ, ಸಮಾಧಿ - ಎಂಬ ಮೂರನ್ನು ಸಂಕ್ಷಿಪ್ತವಾಗಿ ಸೂಚಿಸಿರುತ್ತದೆ. ಆದ್ದರಿಂದ ಇದು ಬಹುಮುಖ್ಯವಾದ ಪದ್ಯವೆಂದು ಬೌದ್ಧರ ಭಾವನೆ.

‡ ಇದನ್ನು ಪೂ|| (೨)ನ್ನನುಸರಿಸಿ ಕನ್ನಡಿಸಿದೆ ; ತಿತಿಕ್ಷಾರೂಪವಾದ ಕ್ಷಾಂತಿಯೇ ಪರಮತಪಸ್ಸು ; ಬುದ್ಧರು ನಿರ್ವಾಣವೇ ಎಲ್ಲಕ್ಕೂ ಹೆಚ್ಚಿನದೆನ್ನುವರು ಎಂದು ಪೂ|| (೧) ರಂತೆ ತರ್ಜುಮೆ.

ವವನು **ಸಂನ್ಯಾಸಿ**ಯಲ್ಲ,* ಮತ್ತೊಬ್ಬರನ್ನು ಸಂಕಟಗೊಳಿಸುವವನು **ಶ್ರಮಣ**ನಲ್ಲ.

**ಅನೂಪವಾದೋ ಅನೂಪಘಾತೋ ಪಾತಿಮೊಕ್ಖೇ ಚ ಸಂವರೋ**
**ಮತ್ತಞ್ಞುತಾ ಚ ಭತ್ತಸ್ಮಿಜ್ ಪಂತಞ್ ಚ ಸಯನಾಸನಜ್**
**ಅಧಿಚಿತ್ತೇ ಚ ಆಯೋಗೋ ಏತಜ್ ಬುದ್ಧಾನ ಸಾಸನಜ್** ||೧೮೫||

೧೮೫. ಮತ್ತೊಬ್ಬರನ್ನು ನಿಂದಿಸದಿರುವದು, ಮತ್ತೊಬ್ಬರನ್ನು ಕೊಲ್ಲದಿರುವದು, **ಪ್ರಾತಿಮೋಕ್ಷ**ದಿಂದ† ತನ್ನನ್ನು ತಾನು ಕಾಪಾಡಿಕೊಳ್ಳುವದು, ಆಹಾರದಲ್ಲಿ ಮಿತವರಿತಿರುವದು, ಏಕಾಂತದಲ್ಲಿ ಮಲಗುವದು ಕೂರುವದು, ಉತ್ತಮವಾದ ಧ್ಯಾನದಲ್ಲಿಯೇ ನಿರತನಾಗಿರುವದು - ಇದೇ **ಬುದ್ಧರ** ಅನುಶಾಸನವು.

**ನ ಕಹಾಪಣ ವಸ್ಸೇನ ತಿತ್ತಿ ಕಾಮೇಸು ವಿಜ್ಜತಿ**
**ಅಪ್ಪಸ್ಸಾದಾ ದುಕ್ಖ ಕಾಮಾ ಇತಿ ವಿಞ್ಞಾಯ ಪಂಡಿತೋ** ||೧೮೬||

೧೮೬. ಕಾರ್ಷಾಪಣದ‡ ಮಳೆಯಿಂದಲೂ ಕಾಮಗಳಲ್ಲಿ ತೃಪ್ತಿಯುಂಟಾಗಲಾರದು. ಕಾಮಗಳ ರುಚಿಯು ಸ್ವಲ್ಪ, ಅವು ದುಃಖಮಯವಾಗಿರುವವು - ಎಂದು ತಿಳಿದರೆ ಅವನೇ ಪಂಡಿತನು.

**ಅಪಿ ದಿಬ್ಬೇಸು ಕಾಮೇಸು ರತಿಜ್ ಸೋ ನಾಧಿಗಚ್ಛತಿ**
**ತನ್ಹಕ್ಖಯರತೋ ಹೋತಿ ಸಮ್ಮಾಸಂಬುದ್ಧ ಸಾವಕೋ** ||೧೮೭||

೧೮೭. **ಸಮ್ಯಕ್ಸಂಬುದ್ಧನ ಶ್ರಾವಕನಿಗೆ** ದಿವ್ಯಭೋಗಗಳೂ ಬೇಕಾಗುವದಿಲ್ಲ ; ಅವನು **ತೃಷ್ಣೆ**ಯನ್ನು ಸವೆಸಿಕೊಳ್ಳುವದರಲ್ಲಿಯೇ ನಿರತನಾಗಿರುವನು.

**ಬಹೂ ವೆ ಸರಣಜ್ ಯಂತಿ ಪಬ್ಬತ್ತಾನಿ ವನಾನಿ ಚ**
**ಆರಾಮರುಕ್ಖ ಚೇತ್ಯಾನಿ ಮನುಸ್ಸಾ ಭಯ ತಜ್ಜಿತಾ**
**ನೇತಜ್ ಖೋ ಸರಣಜ್ ಖೇಮಜ್ ನೇತಜ್ ಸರಣಜ್ ಉತ್ತಮಜ್**
**ನೇತಜ್ ಸರಣಜ್ ಆಗಮ್ಮ ಸಬ್ಬದುಕ್ಖಾ ಪಮುಚ್ಚತಿ** ||೧೮೮-೧೮೯||

---

* ಮೂಲದಲ್ಲಿರುವ 'ಪ್ರವ್ರಜಿತ' ಎಂಬುದರ ಅರ್ಥವಿದು.

† ಭಿಕ್ಷುಗಳು ಹೀಗಿರಬೇಕೆಂಬ ನಿಯಮಕ್ಕೆ ಪ್ರಾತಿಮೋಕ್ಷವೆಂದು ಹೆಸರು.

‡ ಹಿಂದಿನ ಕಾಲದಲ್ಲಿದ್ದ ಒಂದಾನೊಂದು ಚಿನ್ನದ ನಾಣ್ಯ.

೧೮೮-೧೮೯. ಹೆದರಿಕೆಯಿಂದ ಬೆಚ್ಚು ಬಿದ್ದ ಜನರು ಬೆಟ್ಟಗಳನ್ನೂ ಕಾಡುಗಳನ್ನೂ ಉದ್ಯಾನಗಳನ್ನೂ ಮರಗಳನ್ನು **ಚೈತ್ಯ**ಗಳನ್ನೂ - ಇವನ್ನು ಬಹುವಾಗಿ ಮರೆಹೊಗುವರು. ಆದರೆ ಇವನ್ನು ಮರೆಹೊಕ್ಕರೆ ಕ್ಷೇಮವಿಲ್ಲ, ಇವು ಉತ್ತಮವಾದ ರಕ್ಷಣಸ್ಥಾನವೂ ಅಲ್ಲ. ಇವುಗಳನ್ನು ಮರೆಹೊಕ್ಕರೆ ಸರ್ವ ದುಃಖಗಳ ಬಿಡುಗಡೆಯಾಗುವದೂ ಇಲ್ಲ.

**ಯೋ ಚ ಬುದ್ಧಂ ಚ ಧಮ್ಮಂ ಚ ಸಂಘಂ ಚ ಸರಣಂ ಗತೋ**
**ಚತ್ತಾರಿ ಅರಿಯಸಚ್ಚಾನಿ ಸಮ್ಮಪ್ಪಞ್ಞಾಯ ಪಸ್ಸತಿ**
**ದುಕ್ಖಂ ದುಕ್ಖಸಮುಪ್ಪದಂ ದುಕ್ಖಸ್ಸ ಚ ಅತಿಕ್ಕಮಂ**
**ಅರಿಯಂ ಚಟ್ಠಂಗಿಕಂ ಮಗ್ಗಂ ದುಕ್ಖೂಪಸಮಗಾಮಿನಿಂ**
**ಏತಂ ಖೋ ಸರಣಂ ಖೇಮಂ ಏತಂ ಸರಣಂ ಉತ್ತಮಂ**
**ಏತಂ ಸರಣಂ ಆಗಮ್ಮ ಸಬ್ಬದುಕ್ಖಾ ಪಮುಚ್ಚತಿ** ||೧೯೦-೧೯೧-೧೯೨||

೧೯೦-೧೯೧-೧೯೨. ಯಾವನು **ಬುದ್ಧ**ನನ್ನೂ **ಧರ್ಮ**ವನ್ನೂ **ಸಂಘ**ವನ್ನೂ* ಮರೆಹೊಗುವನೋ ನಾಲ್ಕು **ಆರ್ಯಸತ್ಯ**ಗಳನ್ನೂ† ಪ್ರಜ್ಞೆಯಿಂದ ಚೆನ್ನಾಗಿ ಕಂಡುಕೊಳ್ಳುವನೋ - ಎಂದರೆ ದುಃಖ, ದುಃಖವುಂಟಾಗುವ ಕಾರಣ, ದುಃಖವನ್ನು ದಾಟುವ ಬಗೆ, ದುಃಖವನ್ನು ಉಪಶಮಗೊಳಿಸುವ ಆರ್ಯ **ಅಷ್ಟಾಂಗಿಕಮಾರ್ಗ**‡ - ಇದನ್ನು ಕಂಡುಕೊಳ್ಳುವನೋ - ಇದೇ ಕ್ಷೇಮಕರವಾದ ಶರಣವು, ಇದೇ ಉತ್ತಮವಾದ ಶರಣವು. ಇದನ್ನು ಮರೆಹೊಕ್ಕರೆ ಸರ್ವದುಃಖಗಳಿಂದಲೂ ಬಿಡುಗಡೆಹೊಂದುತ್ತಾನೆ.

**ದುಲ್ಲಭೋ ಪುರಿಸಾಜಞ್ಞೋ ನ ಸೋ ಸಬ್ಬತ್ಥ ಜಾಯತಿ**
**ಯತ್ಥ ಸೋ ಜಾಯತಿ ಧೀರೋ ತಂ ಕುಲಂ ಸುಖಂ ಏಧತಿ** ||೧೯೩||

೧೯೩. ಯೋಗ್ಯನಾದ ಪುರುಷನು ಸಿಕ್ಕುವದು ಕಷ್ಟ, ಅವನು ಎಲ್ಲೆಂದರೆ ಅಲ್ಲಿ ಹುಟ್ಟುವದಿಲ್ಲ. ಅವನು ಎಲ್ಲಿ ಹುಟ್ಟುವನೋ ಆ ಕುಲವು ಸುಖವನ್ನು ಪಡೆಯುವದು.

* ಬುದ್ಧ, ಧರ್ಮ, ಸಂಘ - ಇವುಗಳನ್ನು ಬೌದ್ಧರು ರತ್ನತ್ರಯವೆನ್ನುವರು.

† ಇವೇ ಬುದ್ಧನು ಕಂಡುಹಿಡಿದ ತತ್ತ್ವಗಳು.

‡ ಸಮ್ಯಗ್ದೃಷ್ಟಿ, ಸಮ್ಯಕ್ಸಂಕಲ್ಪ, ಸಮ್ಯಗ್ವಾಚಾ, ಸಮ್ಯಕ್ಕರ್ಮಾಂತ, ಸಮ್ಯಗಾಜೀವ, ಸಮ್ಯಗ್ವ್ಯಾಯಾಮ, ಸಮ್ಯಕ್‌ಸ್ಮೃತಿ, ಸಮ್ಯಕ್ಸಮಾಧಿ - ಎಂಬಿವೇ ಅಷ್ಟಾಂಗಗಳು. ಇವುಗಳನ್ನು ಪರಿಶಿಷ್ಟದಲ್ಲಿ ವಿವರಿಸಿದೆ

ಸುಖೋ ಬುದ್ಧಾನಙ್ ಉಪ್ಪಾದೋ ಸುಖಾ ಸದ್ಧಮ್ಮದೇಸನಾ
ಸುಖಾ ಸಂಘಸ್ಸ ಸಾಮಗ್ಗಿ ಸಮಗ್ಗಾನಙ್ ತಪೋ ಸುಖೋ ||೧೯೪||

೧೯೪. **ಬುದ್ಧರ** ಹುಟ್ಟು ಸುಖದಾಯಕವಾಗಿರುವದು, **ಸದ್ಧರ್ಮ**ದ ಉಪದೇಶವು ಸುಖದಾಯಕವಾಗಿರುವದು ; **ಸಂಘ**ವು ಒಟ್ಟು ಕೂಡಿರುವದು ಸುಖದಾಯಕವು, ಒಟ್ಟು ಕೂಡಿ ತಪಸ್ಸುಮಾಡುವದು ಸುಖದಾಯಕವು.

ಪೂಜಾರಹೆ ಪೂಜಾಯತೋ ಬುದ್ಧೇ ಯದಿ ವ ಸಾವಕೇ
ಪಪಂಚ ಸಮತಿಕ್ಕಂತೇ ತಿಣ್ಣಸೋಕ ಪರಿದ್ದವೇ
ತೇ ತಾದಿಸೇ ಪೂಜಾಯತೋ ನಿಬ್ಬುತೇ ಅಕುತೋಭಯೇ
ನ ಸಕ್ಕಾ ಪುಞ್ಞಙ್ ಸಂಖಾತುಙ್ ಇದಮತ್ತನ್ ತಿ ಕೇನ ಚಿ ||೧೯೫-೧೯೬||

೧೯೫-೧೯೬. ಪ್ರಪಂಚವನ್ನು ದಾಟಿ ಶೋಕವನ್ನೂ ದುಃಖವನ್ನೂ ಮೀರಿರುವ ಪೂಜ್ಯರಾದ **ಬುದ್ಧ**ರನ್ನಾಗಲಿ ಅವರ **ಶ್ರಾವಕ**ರನ್ನಾಲಿ ಪೂಜಿಸುವವನ, ನಿರ್ವಾಣವನ್ನು ಹೊಂದಿ ಏತಕ್ಕೂ ಅಂಜದ ಅಂಥವರನ್ನು ಪೂಜಿಸುವವನ, ಪುಣ್ಯವನ್ನು ಇಷ್ಟೇ ಎಂದು ಲೆಕ್ಕಮಾಡಿ ಹೇಳುವದು ಶಕ್ಯ ವಲ್ಲ.

# ೧೫. ಸುಖವರ್ಗ (ಸುಖವಗ್ಗ)

ಸುಸುಖಙ್ ವತ ಜೀವಾಮ ವೇರಿನೇಸು ಅವೇರಿನೋ
ವೇರಿನೇಸು ಮನುಸ್ಸೇಸು ವಿಹರಾಮ ಅವೇರಿನೋ ||೧೯೭||

೧೯೭. ಆಹಾ ! ವೈರಿಗಳಲ್ಲಿ ಅವೈರಿಗಳಾಗಿದ್ದರೆ ನಾವು ಎಷ್ಟು ಸುಖವಾಗಿ ಬಾಳುವೆವು ! ವೈರಿಗಳಾದ ಮನುಷ್ಯರಲ್ಲಿ ವೈರಿಗಳಾಗಿರದೆ ಹೇಗೆ ವಿಹರಿಸುವೆವು !

ಸುಸುಖಙ್ ವತ ಜೀವಾಮ ಆತುರೇಸು ಅನಾತುರಾ
ಆತುರೇಸು ಮನುಸ್ಸೇಸು ವಿಹರಾಮ ಅನಾತುರಾ ||೧೯೮||

೧೯೮. ಆಹಾ ! ಸಂಕಟಪಡುವವರ ನಡುವೆ ನಾವು ಸಂಕಟ ಪಡದೆ ಎಷ್ಟು ಸುಖವಾಗಿ ಬಾಳುವೆವು ! ಸಂಕಟಪಡುವವರ ಮಧ್ಯದಲ್ಲಿ ಸಂಕಟವಿಲ್ಲದೆ ಓಡಾಡುವೆವು !

**ಸುಸುಖಙ್ ವತ ಜೀವಾಮ ಉಸ್ಸುಕೇಸು ಅನುಸ್ಸುಕಾ**
**ಉಸ್ಸುಕೇಸು ಮನುಸ್ಸೇಸು ವಿಹರಾಮ ಅನುಸ್ಸುಕಾ** ||೧೯೯||

೧೯೯. ಆಹಾ ! ಆಸಕ್ತರಾದ ಜನರ ನಡುವೆ ನಾವು ಅನಾಸಕ್ತರಾಗಿ ಎಷ್ಟು ಸುಖವಾಗಿ ಬಾಳುವೆವು ! ಆಸಕ್ತರಾದ ಜನರ ಮಧ್ಯದಲ್ಲಿ ನಾವು ಅನಾಸಕ್ತರಾಗಿ ಓಡಾಡುವೆವು !

**ಸುಸುಖಙ್ ವತ ಜೀವಾಮ ಯೇಸಙ್ ನೋ ನತ್ಥಿ ಕಿಂಚನಙ್**
**ಪೀತಿಭಕ್ಖಾ ಭವಿಸ್ಸಾಮ ದೇವಾ ಆಭಸ್ಸರಾ ಯಥಾ** ||೨೦೦||

೨೦೦. ಆಹಾ ! ನಮಗೆ ನಮ್ಮದೆಂಬದು ಯಾವದೂ ಇಲ್ಲದ್ದರಿಂದ ಎಷ್ಟು ಸುಖವಾಗಿ ಬಾಳುವೆವು ! **ಆಭಾಸ್ವರ**ರೆಂಬ ದೇವತೆಗಳಂತೆ ಪ್ರೀತಿಯೇ ನಮಗೆ ಭಕ್ಷ್ಯವಾಗಿರುವದು !

**ಜಯಙ್ ವೇರಙ್ ಪಸವತಿ ದುಕ್ಖಙ್ ಸೇತಿ ಪರಾಜಿತೋ**
**ಉಪಸಂತೋ ಸುಖಙ್ ಸೇತಿ ಹಿತ್ವಾ ಜಯಪರಾಜಯಙ್** ||೨೦೧||

೨೦೧. ಗೆಲವು ವೈರವನ್ನು ಹಡೆಯುವದು, ಏಕೆಂದರೆ ಸೋತವನು ದುಃಖಪಡುತ್ತಾ ಮಲಗಿರುತ್ತಾನೆ. ಆದರೆ ಉಪಶಾಂತನಾದವನು ಸೋಲುಗೆಲವುಗಳೆರಡನ್ನೂ ಬಿಟ್ಟು ಸುಖವಾಗಿ ಮಲಗಿರುತ್ತಾನೆ.

**ನತ್ಥಿ ರಾಗಸಮೋ ಅಗ್ಗಿ ನತ್ಥಿ ದೋಸಸಮೋ ಕಲಿ**
**ನತ್ಥಿ ಖಂಧಾದಿಸಾ ದುಕ್ಖಾ ನತ್ಥಿ ಸಂತಿಪರಙ್ ಸುಖಙ್** ||೨೦೨||

೨೦೨. **ರಾಗ**ಕ್ಕೆ ಸಮನಾದ ಬೆಂಕಿಯಿಲ್ಲ, **ದ್ವೇಷ**ಕ್ಕೆ ಸಮನಾದ ದೋಷವಿಲ್ಲ, **ಸ್ಕಂಧ**ಗಳಿಗೆ ಸಮನಾದ ದುಃಖವಿಲ್ಲ, ಶಾಂತಿಗಿಂತ ಹೆಚ್ಚಿನ ಸುಖವಿಲ್ಲ.

**ಜಿಘಚ್ಛಾಪರಮಾ ರೋಗಾ ಸಂಖಾರಪರಮಾ ದುಕ್ಖಾ**
**ಏತಙ್ ಞತ್ವಾ ಯಥಾ ಭೂತಙ್ ನಿಬ್ಬಾಣಙ್ ಪರಮಙ್ ಸುಖಙ್** ||೨೦೩||

೨೦೩. ಹಸಿವೆಂಬುದು ಎಲ್ಲಕ್ಕೂ ಹೆಚ್ಚಿನ ರೋಗವು, **ಸಂಸ್ಕಾರ**ವು ಎಲ್ಲಕ್ಕೂ ಹೆಚ್ಚಿನ ದುಃಖವು ; ಇದನ್ನು ಇದ್ದದ್ದು ಇದ್ದಂತೆ ತಿಳಿದುಕೊಂಡರೆ ಆಗುವ **ನಿರ್ವಾಣ**ವೇ ಎಲ್ಲಕ್ಕೂ ಹೆಚ್ಚಿನ ಸುಖವು.

**ಆರೋಗ್ಯ ಪರಮಾ ಲಾಭಾ ಸಂತುಟ್ಠಿ ಪರಮಜ್ ಧನಜ್**
**ವಿಸ್ಸಾಸ ಪರಮಾ ಞಾತಿ ನಿಬ್ಬಾಣಜ್ ಪರಮಜ್ ಸುಖಮ್** ||೨೦೪||

೨೦೪. ಆರೋಗ್ಯವೇ ಎಲ್ಲಕ್ಕೂ ಹೆಚ್ಚಿನ ಲಾಭವು, ಸಂತೋಷವೇ ಹೆಚ್ಚಿನ ಧನವು, ವಿಶ್ವಾಸವೇ ಹೆಚ್ಚಿನ ನೆಂಟನು, **ನಿರ್ವಾಣ**ವೇ ಹೆಚ್ಚಿನ ಸುಖವು.

**ಪವಿವೇಕರಸಜ್ ಪಿತ್ವಾ ರಸಜ್ ಉಪಸಮಸ್ಸ ಚ**
**ನಿದ್ದರೋ ಹೋತಿ ನಿಪ್ಪಾಪೋ ಧಮ್ಮಪೀತಿರಸಜ್ ಪಿಬಜ್** ||೨೦೫||

೨೦೫. **ವಿವೇಕ**ದ* ರಸವನ್ನು ಕುಡಿದು **ಉಪಶಮ**ದ ರಸವನ್ನೂ ಕುಡಿದವನು ಅಂಜಿಕೆಯಿಲ್ಲದವನಾಗುತ್ತಾನೆ ಧರ್ಮಪ್ರೀತಿಯ ರಸವನ್ನು ಕುಡಿದವನು ಪಾಪವಿಲ್ಲದವನೂ ಆಗುತ್ತಾನೆ.

**ಸಾಧು ಧಸ್ಸನಮ್ ಅರಿಯಾನಜ್ ಸನ್ನಿವಾಸೋ ಸದಾ ಸುಖೋ**
**ಅದಸ್ಸನೇನ ಬಾಲಾನಜ್ ನಿಚ್ಚಂ ಏವ ಸುಖೀ ಸಿಯಾ** ||೨೦೬||

೨೦೬. **ಆರ್ಯರ** ದರ್ಶನವು ಒಳ್ಳೆಯದು, ಅವರ ಬಳಿಯಲ್ಲಿ ವಾಸ ಮಾಡುವದು ಯಾವಾಗಲೂ ಸುಖದಾಯಕವು ; ತಿಳಿಗೇಡಿಗಳನ್ನು ನೋಡದೆ ಇರುವದರಿಂದ ಯಾವಾಗಲೂ ಸುಖಿಯಾಗಿರಬಹುದು.

**ಬಾಲಸಂಗತಚಾರೀ ಹಿ ದೀಘಂ ಅದ್ಧಾನ ಸೋಚತಿ**
**ದುಕ್ಖೋ ಬಾಲೇಹಿ ಸಂವಾಸೋ ಅಮಿತ್ತೇನೇವ ಸಬ್ಬದಾ**
**ಧೀರೋ ಚ ಸುಖಸಂವಾಸೋ ಞಾತಿನಜ್ ವ ಸಮಾಗಮೋ** ||೨೦೭||

೨೦೭. ಏಕೆಂದರೆ ತಿಳಿಗೇಡಿಯ ಜೊತೆಯಲ್ಲಿ ನಡೆಯುವವನು ಬಹುದೂರದವರೆಗೂ ಶೋಕಿಸುವನು. ತಿಳಿಗೇಡಿಯೊಡನೆ ವಾಸವಾಗಿರುವದು ಶತ್ರುವಿನ ಸಹವಾಸದಂತೆ ದುಃಖದಾಯಕವಾಗಿ ಇರುವದು ತಿಳಿದವರೊಡನೆ ವಾಸವಾಗಿರುವದು ನೆಂಟರನ್ನು ಸೇರಿದಂತೆ ಸುಖದಾಯಕವಾಗಿರುವದು.

* ಏಕಾಂತದ.

ಧೀರಂ ಚ ಪಞ್ಞಂ ಚ ಬಹುಸ್ಸುತಂ ಚ
ಧೋರಯ್ಹಸೀಲಙ್ ವತವಂತಂ ಆರಿಯಙ್
ತಙ್ ತಾದಿಸಙ್ ಸಪ್ಪುರಿಸಙ್ ಸುಮೇಧಙ್
ಭಜೇಥ ನಕ್ಖತ್ತಪಥಙ್ ವ ಚಂದಿಮಾ ||೨೦೮||

೨೦೮. ಆದ್ದರಿಂದ ಧೀರನೂ ಪ್ರಾಜ್ಞನೂ ಬಹುಶ್ರುತನೂ ಉದ್ಯೋಗಿಯೂ ಸದಾಚಾರಿಯೂ **ಆರ್ಯ**ನೂ ಆಗಿರುವ - ಇಂಥ ಸತ್ಪುರುಷನಾದ ಜ್ಞಾನಿಯನ್ನೇ ನಕ್ಷತ್ರಮಾರ್ಗವನ್ನು ಚಂದ್ರನು ಸೇವಿಸುವಂತೆ ಸೇವಿಸಬೇಕು.

## ೧೬. ಪ್ರಿಯವರ್ಗ (ಪಿಯವಗ್ಗ)

ಆಯೋಗೇ ಯುಂಜಂ ಅತ್ತಾನಙ್ ಯೋಗಸ್ಮಿಙ್ ಚ ಅಯೋಜಯಙ್
ಅತ್ಥಙ್ ಹಿತ್ವಾ ಪಿಯಗ್ಗಾಹೀ ಪಿಹೇತತ್ತಾನುಯೋಗಿನಙ್ ||೨೦೯||

೨೦೯. **ಅಯೋಗ**ದಲ್ಲಿ* ಸೇರಿಕೊಳ್ಳುತ್ತಲೂ **ಯೋಗ**ದಲ್ಲಿ† ಒಲ್ಲ ಡದೆಯೂ ಪುರುಷಾರ್ಥವನ್ನು ಬಿಟ್ಟು ಪ್ರಿಯವನ್ನೇ ಯಾವನು ಹಿಡಿಯುವನೋ ಅವನು ಆತ್ಮಾನು**ಯೋಗಿ**ಯನ್ನು‡ ಕಂಡು ನಾನು ಅವನಂತಾಗಲಿಲ್ಲವಲ್ಲ ! - ಎಂದು ಕರುಬುವನು.

ಮಾ ಪಿಯೇಹಿ ಸಮಾಗಂಚಿ ಅಪ್ಪಿಯೇಹಿ ಕುದಾಚನಙ್
ಪಿಯಾನಙ್ ಅದಸ್ಸನಙ್ ದುಕ್ಖಙ್ ಅಪ್ಪಿಯಾನಙ್ ಚ ದಸ್ಸನಙ್ ||೨೧೦||

೨೧೦. ಪ್ರಿಯವಾದವುಗಳೊಡನೆ ಸೇರದಿರು, ಅಪ್ರಿಯವಾದವುಗಳೊಡನೆ ಎಂದಿಗೂ ಸೇರದಿರು. ಪ್ರಿಯವಾದವುಗಳನ್ನು ಕಾಣದಿದ್ದರೆ ದುಃಖವು.

ತಸ್ಮಾ ಪಿಯಙ್ ನ ಕಯಿರಾಥಾ ಪಿಯಾಪಾಯೋ ಹಿ ಪಾಪಕೋ
ಗಂಥಾ ತೇಸಙ್ ನ ವಿಜ್ಜಂತಿ ಯೇಸಙ್ ಪಿಯಪ್ಪಿಯಙ್ ||೨೧೧||

* ವಿಷಯಾಸಕ್ತಿಯಲ್ಲಿ. † ಉತ್ತಮವಾದ ಧರ್ಮಸಾಧನ. ‡ ಜಿತಾತ್ಮನನ್ನು.

೨೧೧. ಆದ್ದರಿಂದ ಪ್ರಿಯವೆಂಬುದನ್ನು ಮಾಡಿಕೊಳ್ಳಬಾರದು, ಏಕೆಂದರೆ ಪ್ರಿಯವಾದದ್ದರ ನಾಶವೆಂಬುದೇ ಕೆಟ್ಟದ್ದು. ಯಾರಿಗೆ ಪ್ರಿಯ, ಅಪ್ರಿಯ - ಎಂಬುದು ಇಲ್ಲವೋ ಅವರಿಗೆ **ಗ್ರಂಥಗಳು*** ಇರುವದಿಲ್ಲ.

**ಪಿಯತೋ ಜಾಯತೀ ಸೋಕೋ ಪಿಯತೋ ಜಾಯತೀ ಭಯಙ್.**
**ಪಿಯತೋ ವಿಪ್ಪಮುತ್ತಸ್ಸ ನತ್ಥಿ ಸೋಕೋ ಕುತೋ ಭಯಙ್** ||೨೧೨||

೨೧೨. ಪ್ರಿಯವಾದದ್ದರಿಂದ ಶೋಕವುಂಟಾಗುವದು, ಪ್ರಿಯದಿಂದ ಭಯವುಂಟಾಗುವದು ; ಪ್ರಿಯದಿಂದ ಬಿಡುಗಡೆಹೊಂದಿದಾತನಿಗೆ ಶೋಕವೇ ಇಲ್ಲ, ಇನ್ನು ಭಯವೆಂಬುದೆಲ್ಲಿ ಬಂತು ?

**ಪೇಮತೋ ಜಾಯತೀ ಸೋಕೋ ಪೇಮತೋ ಜಾಯತೀ ಭಯಙ್**
**ಪೇಮತೋ ವಿಪ್ಪಮುತ್ತಸ್ಸ ನತ್ಥಿ ಸೋಕೋ ಕುತೋ ಭಯಙ್** ||೨೧೩||

೨೧೩. **ಪ್ರೇಮ**ದಿಂದ† ಶೋಕವುಂಟಾಗುವದು, ಪ್ರೇಮದಿಂದ ಭಯವುಂಟಾಗುವದು, ಪ್ರೇಮದಿಂದ ಬಿಡುಗಡೆಹೊಂದಿದಾತನಿಗೆ ಶೋಕವೇ ಇಲ್ಲ, ಇನ್ನು ಭಯವೆಂಬುದೆಲ್ಲಿ ಬಂತು ?

**ರತಿಯಾ ಜಾಯತೀ ಸೋಕೋ ರತಿಯಾ ಜಾಯತೀ ಭಯಙ್**
**ರತಿಯಾ ವಿಪ್ಪಮುತ್ತಸ್ಸ ನತ್ಥಿ ಸೋಕೋ ಕುತೋ ಭಯಙ್** ||೨೧೪||

೨೧೪. **ರತಿ**ಯಿಂದ† ಶೋಕವುಂಟಾಗುವದು, ರತಿಯಿಂದ ಭಯವುಂಟಾಗುವದು ; ರತಿಯಿಂದ ಬಿಡುಗಡೆಹೊಂದಿದಾತನಿಗೆ ಶೋಕವೇ ಇಲ್ಲ, ಇನ್ನು ಭಯವೆಂಬುದೆಲ್ಲಿ ಬಂತು ?

* ಗಂಟುಗಳು ; ೨೫ನೆಯ ಪುಟದ § ಚಿಹ್ನೆಯ ಟಿಪ್ಪಣಿಯನ್ನು ನೋಡಿ. ಪ್ರಿಯಾಪ್ರಿಯಗಳಿಲ್ಲದವನೇ ಮುಕ್ತನೆಂದು ವೇದಾಂತಿಗಳೂ ಹೇಳುತ್ತಾರೆ ; ಆದರೆ ಈ ಮುಕ್ತಿಯ ಸ್ವರೂಪ ಸಾಧನಗಳು ಈ ಎರಡು ಮತಗಳಲ್ಲಿಯೂ ಬೇರೆಬೇರೆಯಾಗಿವೆ.

† ಪ್ರಿಯವಾಗಿರುವದೆಂಬುದು ವಸ್ತುವಿನ ಪ್ರೇಮದಿಂದ ಆಗುವದು ; ಪ್ರೇಮವು ಅದರಲ್ಲಿಯೇ ಮನಸ್ಸನ್ನಾಡಿಸುವ ರತಿಯಿಂದ ; ಈ ರತಿಯು ಅದು ಬೇಕೆಂಬ ಕಾಮದಿಂದ ; ಕಾಮವು ವಸ್ತುವಿನ ಹಂಬಲಿನ ರೂಪವಾದ ತೃಷ್ಣೆಯಿಂದ. ಆದ್ದರಿಂದ ಎಲ್ಲಕ್ಕೂ ತೃಷ್ಣೆಯೇ ಮೂಲ - ಎಂಬುದು ೨೧೩ರಿಂದ ೨೧೬ನೆಯವರೆಗಿನ ಗಾಥೆಗಳ ತಾತ್ಪರ್ಯವೆಂದು ತೋರುವದು.

**ಕಾಮತೋ ಜಾಯತೀ ಸೋಕೋ ಕಾಮತೋ ಜಾಯತೀ ಭಯಜ್**
**ಕಾಮತೋ ವಿಪ್ಪಮುತ್ತಸ್ಸ ನತ್ಥಿ ಸೋಕೋ ಕುತೋ ಭಯಜ್ ||೨೧೫||**

೨೧೫. **ಕಾಮ**ದಿಂದ* ಶೋಕವುಂಟಾಗುವದು, ಕಾಮದಿಂದ ಭಯವುಂಟಾಗುವದು ; ಕಾಮದಿಂದ ಬಿಡುಗಡೆಹೊಂದಿದಾತನಿಗೆ ಶೋಕವೇ ಇಲ್ಲ, ಇನ್ನು ಭಯವೆಂಬುದೆಲ್ಲಿ ಬಂತು ?

**ತನ್ಹಾಯ ಜಾಯತೀ ಸೋಕೋ ತನ್ಹಾಯ ಜಾಯತೀ ಭಯಜ್**
**ತನ್ಹಾಯ ವಿಪ್ಪಮುತ್ತಸ್ಸ ನತ್ಥಿ ಸೋಕೋ ಕತೋ ಭಯಜ್ ||೨೧೬||**

೨೧೬. **ತೃಷ್ಣೆ**ಯಿಂದ* ಶೋಕವುಂಟಾಗುವದು, ತೃಷ್ಣೆಯಿಂದ ಭಯವುಂಟಾಗುವದು ; ತೃಷ್ಣೆಯಿಂದ ಬಿಡುಗಡೆಹೊಂದಿದಾತನಿಗೆ ಶೋಕವೇ ಇಲ್ಲ, ಇನ್ನು ಭಯವೆಂಬುದೆಲ್ಲಿ ಬಂತು ?

**ಸೀಲದಸ್ಸನ ಸಂಪನ್ನಜ್ ಧಮ್ಮಟ್ಠಜ್ ಸಚ್ಚವೇದಿನಜ್**
**ಅತ್ತನೋ ಕಮ್ಮ ಕುಬ್ಬಾನಜ್ ತಜ್ ಜನೋ ಕುರುತೇ ಪಿಯಜ್ ||೨೧೭||**

೨೧೭. **ಶೀಲ, ದರ್ಶನ** - ಇವುಗಳಿಂದ ಕೂಡಿರುವಾತನಾಗಿ ಧರ್ಮಿಷ್ಠನೂ ಸತ್ಯವಾದಿಯೂ ಆಗಿದ್ದು ತನ್ನ ಕರ್ಮವನ್ನು ಮಾಡಿಕೊಂಡಿರುವಾತನು† ಯಾರೋ ಅವನು ಜನರಿಗೆ ಪ್ರಿಯನಾಗಿರುವನು.

**ಛಂದಜಾತೋ ಅನಕ್ಖಾತೇ ಮನಸಾ ಚ ಫುಟೋ ಸಿಯಾ**
**ಕಾಮೇಸು ಚ ಅಪ್ಪಟಿಬದ್ಧಚಿತ್ತೋ ಉದ್ಧಜ್ ಸೋತೋ ತಿ ವುಚ್ಚತಿ ||೨೧೮||**

೨೧೮. ಯಾವನಿಗೆ ಮಾತಿನಿಂದ ಹೇಳುವದಕ್ಕಾಗದ‡ ನಿರ್ವಾಣದಲ್ಲಿ ಅಭಿಲಾಷೆಯುಂಟಾಗಿರುವದೋ, ಮನಸ್ಸಿನಿಂದಲೂ ಅದನ್ನು ಸ್ಫುಟವಾಗಿ

* ಹಿಂದಿನ ಪುಟದ † ಟಿಪ್ಪಣಿಯನ್ನು ನೋಡಿ.

† ಮತ್ತೊಬ್ಬರಿಗೆ ಉಪದೇಶಮಾಡುವದಕ್ಕೆ ಹೋಗದೆ, ತಾನು ತನ್ನ ಸಾಧನವನ್ನು ಮಾಡಿಕೊಂಡಿರುವಾತನು.

‡ ಬ್ರಹ್ಮಪ್ರಾಪ್ತಿರೂಪವಾದ ಮುಕ್ತಿಯು ಮಾತುಗಳಿಂದ ವರ್ಣಿಸುವದಕ್ಕೆ ಬರುವ ಹಾಗಿಲ್ಲವೆಂದು ವೇದಾಂತಿಗಳೆನ್ನುವಂತ ಬೌದ್ಧರೂ ನಿರ್ವಾಣವನ್ನು ಬಣ್ಣಿಸಲಸದಳವಾದ ದ್ದೆನ್ನುವರು.

ತಿಳಿದಿರುವನೋ,* ಯಾವನ ಚಿತ್ತವು ಕಾಮಗಳಲ್ಲಿ ಕಟ್ಟುಬಿದ್ದಿರುವದಿಲ್ಲವೋ, ಅವನು **ಊರ್ಧ್ವಸ್ರೋತ**ನೆನಿಸುವನು.†

**ಚಿರಪ್ಪವಾಸಿಜ್ ಪುರಿಸಜ್ ದೂರತೋ ಸೊತ್ತಿಮ್ ಆಗತಮ್**
**ಞಾತಿಮತ್ತಾ ಸುಹಜ್ಜಾ ಚ ಅಭಿಮಂದಂತಿ ಆಗತಜ್**
**ತಥೇವ ಕಟಪುಞ್ಞಂ ಪಿ ಅಸ್ಮಾ ಲೋಕಾ ಪರಜ್ ಗತಮ್**
**ಪುಞ್ಞಾನಿ ಪತಿಗಣ್ಹಂತಿ ಪಿಯಜ್ ಞಾತಿಜ್ ವ ಆಗತಜ್** ॥೨೧೯-೨೨೦॥

೨೧೯-೨೨೦. ಬಹುಕಾಲ ಹೊರಗೆ ಹೋಗಿದ್ದು, ದೂರದೇಶದಿಂದ ಸುಖವಾಗಿ ಹಿಂತಿರುಗಿ ಬಂದವನನ್ನು ನೆಂಟರು, ಇಷ್ಟರು, ಗೆಳೆಯರು - ಎಲ್ಲರೂ ಆನಂದದಿಂದ ಬರಮಾಡಿಕೊಳ್ಳುವರು. ಇದರಂತೆಯ ಪುಣ್ಯವನ್ನು ಮಾಡಿ ಈ ಲೋಕದಿಂದ ಪರಲೋಕಕ್ಕೆ ಹೋದವನನ್ನು ಅವನ ಪುಣ್ಯಗಳು ಹಿಂದಕ್ಕೆ ಬಂದ ನೆಂಟನೆಂಬಂತೆ ಬರಮಾಡಿಕೊಳ್ಳುವವು.

## ೧೭. ಕ್ರೋಧವರ್ಗ (ಕೋಧವಗ್ಗ)

**ಕೋಧಜ್ ಜಹೇ ವಿಪ್ಪಜಹೇಯ್ಯ ಮಾನಜ್**
**ಸಂಞೋಜನಜ್ ಸಬ್ಬಂ ಅತಿಕ್ಕಮೇಯ್ಯ**
**ತಜ್ ನಾಮರೂಪಸ್ಮಿಜ್ ಅಸಜ್ಜಮಾನಜ್**
**ಅಕಿಂಚನಜ್ ನಾನುಪತಂತಿ ದುಕ್ಖಾ** ॥೨೨೧॥

೨೨೧. ಸಿಟ್ಟನ್ನು ಬಿಡಬೇಕು, ಅಭಿಮಾನವನ್ನು ಬಿಟ್ಟುಬಿಡಬೇಕು ;

* ಈ ವಾಕ್ಯದ ಅರ್ಥವನ್ನು ಬೇರೆಬೇರೆಯವರು ಬೇರೆಬೇರೆಯ ತೆರನಾಗಿ ಮಾಡಿರುತ್ತಾರ : 'ಯಾರ ಮನಸ್ಸನ್ನು ಅದು ಸೆರೆಹಿಡಿದಿರುವದೋ' (Woodward) ; 'ಅದರಲ್ಲಿಯೇ ಯಾರ ಮನಸ್ಸು ನಿಂತಿರುವದೋ' (ಸಾಂ) ; ಯಾರ ಮನಸ್ಸು ಪರಿಪಕ್ವ ವಾಗಿರುವದೋ' (ಪೂ.೨)

† ಹೊಳೆಗೆ ಎದುರಾಗಿ ಈಜುವವನು ; ಇದು ಪರಲೋಕದಲ್ಲಿ ನಿರ್ವಾಣವನ್ನು ಪಡೆಯುವ **ಅನಾಗಾಮಿ**ಯನ್ನು ಕುರಿತದ್ದು (Woodward).

**ಸಂಯೋಜನ**ವೆಲ್ಲವನ್ನೂ* ದಾಟಿಬಿಡಬೇಕು, ಅಂಥ **ನಾಮರೂಪ**ದಲ್ಲಿ† ಆಸಕ್ತಿಯಿಲ್ಲದ, ತನ್ನದೆಂಬುದೇನೂ ಇಲ್ಲದ, ಮನುಷ್ಯನಿಗೆ ದುಃಖಗಳು ಬೆನ್ನಟ್ಟುವದಿಲ್ಲ.

**ಯೋ ವೇ ಉಪ್ಪತಿತಜ್ ಕೋಧಜ್ ರಥಜ್ ಭಂತಜ್ ವ ಧಾರಯೇ**
**ತಮ್ ಅಹಜ್ ಸಾರಥಿಜ್ ಬ್ರೂಮಿ ರಸ್ಮಿಗ್ಗಾಹೋ ಇತರೋ ಜನೋ** ॥೨೨೨॥

೨೨೨. ಯಾವನು ಮೇಲಕ್ಕೆದ್ದ ಸಿಟ್ಟನ್ನು ತಿರುಗುವ ಗಾಡಿಯನ್ನು ಹಿಡಿದು ಜಗ್ಗುವಂತೆ ಹಿಡಿದು ನಿಲ್ಲಿಸುವನೋ, ಅವನನ್ನೇ ನಾನು ನಿಜವಾದ ಸಾರಥಿಯೆನ್ನುವೆನು ; ಮಿಕ್ಕವರೆಲ್ಲ ಸುಮ್ಮನೆ ಕಡಿವಾಣವನ್ನು ಹಿಡಿದವರು.

**ಅಕ್ಕೋಧೇನ ಜಿನೇ ಕೋಧಜ್ ಅಸಾಧುಜ್ ಸಾಧುನಾ ಜಿನೇ**
**ಜಿನೇ ಕದಿರಿಯಜ್ ದಾನೇನ ಸಚ್ಚೇನ ಅಲಿಕವಾದಿನಜ್** ॥೨೨೩॥

೨೨೩. ತಾಳ್ಮೆಯಿಂದ ಸಿಟ್ಟನ್ನು ಗೆಲ್ಲಬೇಕು, ಕೆಟ್ಟದ್ದನ್ನು ಒಳ್ಳೆಯದರಿಂದ ಗೆಲ್ಲಬೇಕು, ಜಿಪುಣನನ್ನು ದಾನದಿಂದ ಗೆಲ್ಲಬೇಕು, ಸುಳ್ಳುಹೇಳುವವನನ್ನು ಸತ್ಯದಿಂದ ಗೆಲ್ಲಬೇಕು.

**ಸಚ್ಚಜ್ ಭಣೆ ನ ಕುಜ್ಝೆಯ್ಯ ದಜ್ಜಾಪ್ಪಸ್ಮಿಂ ಪಿ ಯಾಚಿತೋ**
**ಏತೇಹಿ ತೀಹಿ ಠಾನೇಹಿ ಗಚ್ಛೇ ದೇವಾನ ಸಂತಿಕೇ** ॥೨೨೪॥

೨೨೪. ನಿಜವನ್ನು ಹೇಳಬೇಕು, ಸಿಟ್ಟುಮಾಡಬಾರದು, ಕೇಳಿದವರಿಗೆ ಇರುವ ಸ್ವಲ್ಪದರಲ್ಲಿಯೇ ಕೊಡಬೇಕು - ಈ ಮೂರು ಮಾರ್ಗಗಳಲ್ಲಿ ನಡೆದರೆ **ದೇವತೆಗಳ ಸಾಮೀಪ್ಯ**ವನ್ನು‡ ಹೊಂದುವನು.

**ಅಹಿಂಸಕಾ ಯೇ ಮುನಯೋ ನಿಚ್ಚಜ್ ಕಾಯೇನ ಸಂವುತಾ**
**ತೇ ಯಂತಿ ಅಚ್ಚುತುಜ್ ಠಾನಜ್ ಯತ್ಥ ಗಂತ್ವಾ ನ ಸೋಚರೇ** ॥೨೨೫॥

೨೨೫. ಯಾರು ಹಿಂಸೆಮಾಡದವರೂ ಮುನಿಗಳೂ ಕಾಯವನ್ನು

* ಅಡ್ಡಿಗಳು.

† ನಾಮರೂಪವು ಸಂಸಾರಕ್ಕೆ ಕಾರಣವಾಗಿರುವ **ನಿದಾನ**ಗಳಲ್ಲಿ ಒಂಬತ್ತನೆಯದು.

‡ ದೇವತೆಗಳ ಸಮೀಪಕ್ಕೆ ಹೋಗುವದೆಂದರೆ ದೇವತೆಗಳಾಗುವದೆಂದೇ ಅರ್ಥವೆಂದು ತೋರುವದು ; 'ನಿರ್ವಾಣಕ್ಕೆ ಹತ್ತಿರ' ಎಂಬ ಮಾತನ್ನು ೩೭ರಲ್ಲಿ ಉಪಯೋಗಿಸಿರುವದನ್ನು ಇದಕ್ಕೆ ಹೋಲಿಸಿ.

**ಹತೋಟಿ**ಯಲ್ಲಿಟ್ಟಿರುವರೂ* ಆಗಿರುವರೋ ಅವರು ಹಿಂದಕ್ಕೆ ಜಾರದ (ಸ್ಥಾನವನ್ನು ಪಡೆಯುವರು,) ಎಲ್ಲಿ ಹೋದರೆ ಶೋಕಿಸುವದಿಲ್ಲವೋ **ಅಂಥ ಸ್ಥಾನ**ವನ್ನು† ಪಡೆಯುವರು.

**ಸದಾ ಜಾಗರಮಾನಾನಙ್ ಅಹೋರತ್ತಾನುಸಿಕ್ಖತಙ್**
**ನಿಬ್ಬಾಣಙ್ ಅಧಿಮುತ್ತಾನಙ್ ಅತ್ಥಙ್ ಗಚ್ಛಂತಿ ಆಸವ** ||೨೨೬||

೨೨೬. ಯಾರು ಯಾವಾಗಲೂ ಎಚ್ಚರದಿಂದಿರುವರೋ, ಹಗಲೂ ಇರುಳೂ ಸಾಧನಮಾಡುತ್ತಿರುವರೋ, ನಿರ್ವಾಣವನ್ನು ಹೊಂದಿ ಮುಕ್ತರಾಗಿರುವರೋ,‡ ಅವರ **ಆಸ್ರವ**ಗಳು ಅಸ್ತವಾಗುವವು.

**ಪೋರಣಂ ಏತಙ್ ಅತುಲಾ ನೇತಂ ಅಜ್ಜತನಂ ಇವಾ**
**ನಿಂದಂತಿ ತುಣ್ಹೀಮಾಸೀನಙ್ ನಿಂದಂತಿ ಬಹುಭಾಣಿನಙ್**
**ಮಿತಭಾಣಿನಂ ಪಿ ನಿಂದಂತಿ ನತ್ಥಿ ಲೋಕೇ ಅನಿಂದಿತೋ** ||೨೨೭||

೨೨೭. **ಅತುಲನೆ,**§ ಇದು ಪುರಾತನವಾದ ಮಾತು, ಈಗಿನ ಮಾತೇ ಅಲ್ಲ ; ಸುಮ್ಮನಿರುವವನನ್ನೂ ಜನರು ನಿಂದಿಸುವರು, ಹೆಚ್ಚು ಮಾತನಾಡುವವನನ್ನೂ ನಿಂದಿಸುವರು, ಮಿತಭಾಷಿಯನ್ನೂ ನಿಂದಿಸುವರು ; ಲೋಕದಲ್ಲಿ ನಿಂದೆಗೆ ಒಳಗಾಗದವನೇ ಇಲ್ಲವು.

**ನ ಚಾಹು ನ ಚ ಭವಿಸ್ಸತಿ ನ ಚೇತರಹಿ ವಿಜ್ಜತಿ**
**ಏಕಂತಙ್ ನಿಂದಿತೋ ಪೋಸೋ ಏಕಂತಙ್ ವಾ ಪಸಙ್ಸಿತೋ** ||೨೨೮||

೨೨೮. ಯಾವಾಗಲೂ ನಿಂದಿತನೇ ಆಗಿರುವ ಮನುಷ್ಯನಾಗಲಿ ಯಾವಾಗಲೂ ಹೊಗಳಲ್ಪಟ್ಟ ಪುರುಷನೇ ಆಗಲಿ, ಹಿಂದೆಯೂ ಇರಲಿಲ್ಲ, ಮುಂದೆಯೂ ಇರುವದಿಲ್ಲ, ಈಗಲೂ ಇರುವದಿಲ್ಲ.

---

* ಮೂಲದಲ್ಲಿರುವ 'ಸಂವೃತ' - ಎಂಬ ಮಾತನ್ನು ಹತೋಟಿಯಲ್ಲಿಟ್ಟಿರುವ, ಸಂಯಮಿಯಾದ - ಎಂದು ಕನ್ನಡಿಸಿದೆ.

† ನಿರ್ವಾಣವನ್ನು.

‡ 'ನಿಬ್ಬಾಣಂ ಅಧಿಮುತ್ತಾನಂ' ಎಂಬುದರ ಅರ್ಥ ; ನಿರ್ವಾಣದಲ್ಲಿ ಆದರವುಳ್ಳ ಎಂದು ಪೂ|| (೧) ಮತ್ತು ಪೂ|| (೨) ಪರಿವರ್ತಿಸಿವೆ.

§ ಅತುಲನೆಂಬುದು ಒಬ್ಬ ಉಪಾಸಕನ ಶಿಷ್ಯನ ಹೆಸರೆಂದು ವ್ಯಾಖ್ಯಾನ ; ಈತನ ಹೆಸರು ಮತ್ತೆಲ್ಲಿಯೂ ಕಂಡುಬಂದಿಲ್ಲವಂತ.

ಯಞ್ ಚೆ ವಿಞ್ಞೂ ಪಸಞ್ಸಂತಿ ಅನುವಿಚ್ಚ ಸುವೇ ಸುವೇ
ಅಚ್ಛಿದ್ದವುತ್ತಿಞ್ ಮೇಧಾವಿಞ್ ಪಞ್ಞಾಸೀಲ ಸಮಾಹಿತಞ್
ನೆಕ್ಖಞ್ ಜಂಬೋನದಸ್ಸೇವ ಕೋತಞ್ ನಿಂದಿತುಂ ಅರಹತಿ
ದೇವಾ ಪಿ ನಞ್ ಪಸಞ್ಸಂತಿ ಬ್ರಾಹ್ಮಣಾ ಪಿ ಪಸಞ್ಸಿತೋ ||೨೨೯-೨೩೦||

೨೨೯-೨೩೦. ಯಾವನನ್ನು ತಿಳಿದವರು ಚೆನ್ನಾಗಿ ವಿವೇಚನೆಮಾಡಿ ದಿನದಿನವೂ "ಯಾವ ದೋಷವೂ ಇಲ್ಲದ ನಡತೆಯವನು, ಜಾಣನು, **ಪ್ರಜ್ಞಾಶೀಲಸಮಾಧಿ**ಗಳಿಂದ ಕೂಡಿದವನು" ಎಂದು ಹೊಗಳುವರೋ ಚಿನ್ನದ **ನಿಷ್ಕ**ದಂತಿರುವ* ಅಂಥ ಪುರುಷನನ್ನು ಯಾವನು ತಾನೆ ನಿಂದಿಸಿಯಾನು ? ಅವನನ್ನು ದೇವತೆಗಳು ಕೂಡ ಹೊಗಳುವರು, ಬ್ರಹ್ಮನಿಂದಲೂ ಅವನು ಕೊಂಡಾಡಲ್ಪಡುವನು.

ಕಾಯಪ್ಪಕೋಪಞ್ ರಕ್ಖೆಯ್ಯ ಕಾಯೇನ ಸಂವುತೋ ಸಿಯಾ
ಕಾಯದುಚ್ಚರಿತಞ್ ಹಿತ್ವಾ ಕಾಯೇನ ಸುಚರಿತಞ್ ಚರೇ ||೨೩೧||

೨೩೧. ಕಾಯವು ಪ್ರಕೋಪವಾಗದಂತೆ† ಕಾಪಾಡಿಕೊಳ್ಳಬೇಕು, ಕಾಯವನ್ನು ಹಿಡಿತದಲ್ಲಿಟ್ಟಿರಬೇಕು. ಶರೀರದಿಂದ ಕೆಟ್ಟನಡತೆಯನ್ನು ನಡೆಯದೆ ಶರೀರದಿಂದ ಒಳ್ಳೆಯ ನಡತೆಯನ್ನೇ ನಡೆಯಬೇಕು.

ವಾಚೀಪಕೋಪಞ್ ರಕ್ಖೆಯ್ಯ ವಾಚಾಯ ಸಂವುತೋ ಸಿಯಾ
ವಾಚೀದುಚ್ಚರಿತಞ್ ಹಿತ್ವಾ ವಾಚಾಯ ಸುಚರಿತಞ್ ಚರೇ ||೨೩೨||

೨೩೨. ಮಾತು ಪ್ರಕೋಪವಾಗದಂತೆ ಕಾಪಾಡಿಕೊಳ್ಳಬೇಕು, ಮಾತನ್ನು ಹಿಡಿತದಲ್ಲಿಟ್ಟಿರಬೇಕು. ಮಾತಿನಿಂದ ಕೆಟ್ಟ ನಡತೆಯನ್ನು ನಡೆಯದೆ ಮಾತಿನಿಂದ ಒಳ್ಳೆಯ ನಡತೆಯನ್ನೇ ನಡೆಯಬೇಕು.

ಮನೋಪಕೋಪಞ್ ರಕ್ಖೆಯ್ಯ ಮಾನಸಾ ಸಂವುತೋ ಸಿಯಾ
ಮನೋದುಚ್ಚರಿತಞ್ ಹಿತ್ವಾ ಮನಸಾ ಸುಚರಿತಞ್ ಚರೇ ||೨೩೩||

೨೩೩. ಮನಸ್ಸು ಪ್ರಕೋಪವಾಗದಂತೆ ಕಾಪಾಡಿಕೊಳ್ಳಬೇಕು, ಮನಸ್ಸನ್ನು

* ನಾಣ್ಯ.
† ಉಲ್ಬಣವಾಗದಂತೆ, ತಪ್ಪುಹಾದಿಗೆ ಹೋಗುವಂತೆ.

ಹಿಡಿತದಲ್ಲಿಟ್ಟಿರಬೇಕು. ಮನಸ್ಸಿನಿಂದ ಕೆಟ್ಟನಡತೆಯನ್ನು ನಡೆಯದೆ ಮನಸ್ಸಿನಿಂದ ಒಳ್ಳೆಯ ನಡತೆಯನ್ನೇ ನಡೆಯಬೇಕು.

**ಕಾಯೇನ ಸಂವುಕಾ ಧೀರಾ ಅಥೋ ವಾಚಾಯ ಸಂವುತೋ**
**ಮನಸಾ ಸಂವುತಾ ಧೀರಾ ತೇ ವೇ ಸುಪರಿಸಂವುತಾ** ||೨೩೪||

೨೩೪. ಕಾಯವನ್ನು ಬಿಗಿಹಿಡಿದುಕೊಂಡಿರುವ ಧೀರರು, ಮತ್ತು ವಾಕ್ಕನ್ನು ಬಿಗಿಹಿಡಿದುಕೊಂಡಿರುವ ಧೀರರು, ಮನಸ್ಸನ್ನೂ ಬಿಗಿಹಿಡಿದುಕೊಂಡಿರುವ ಧೀರರು ಯಾರೋ, ಅವರೇ ಉತ್ತಮ ಸಂಯಮಿಗಳು.

# ೧೮. ಮಲವರ್ಗ (ಮಲವಗ್ಗ)

**ಪಂಡುಪಲಾಸೋ ವ ದಾನಿಸಿ ಯಮಪುರಿಸಾ ಪಿ ಚ ತಜ್ ಉಪಟ್ಠಿತಾ**
**ಉಯ್ಯೋಗಮುಖೆ ಚ ತಿಟ್ಠಸಿ ಪಾಥೆಯ್ಯಂ ಪಿ ಚ ತೇ ನ ವಿಜ್ಜತಿ**
**ಸೋ ಕರೋಹಿ ದೀಪಂ ಅತ್ತನೋ ಖಿಪ್ಪಜ್ ವಾಯಮ ಪಂಡಿತೋ ಭವ**
**ನಿದ್ಧಂತಮಲೋ ಅನಂಗಣೋ ದಿಬ್ಬಜ್ ಅರಿಯಭೂಮಿಂ** [illegible] ||೨೩೫-೨೩೬||

೨೩೫-೨೩೬. ಈಗ ಬಿಳಿಚಿಕೊಂಡಿರುವ ಮುತ್ತುಗದೆಲೆಯಂತೆ ನೀನಿರುತ್ತೀಯೆ ; **ಯಮನಾಳು**ಗಳೂ ನಿನ್ನ ಬಳಿಗೆ ಬಂದಿರುವರು ; ಹೊರಡುವ ಉದ್ಯೋಗದಲ್ಲಿಯೇ ಇರುವೆ ; ನಿನಗೆ ಪಯಣದ ಬುತ್ತಿಯೂ* ಇಲ್ಲವಲ್ಲ ! ಆದ್ದರಿಂದ ನೀನು ನಿನಗಾಗಿ **ದ್ವೀಪ**ವನ್ನು† ಮಾಡಿಕೋ, ಬೇಗ ಉದ್ಯೋಗಶೀಲನಾಗು, ಪಂಡಿತನಾಗು. ಮಲವನ್ನು ತೊಳೆದುಕೊಂಡು, ಪಾಪರಹಿತನಾಗು. ದಿವ್ಯವಾದ **ಆರ್ಯಭೂಮಿ**ಯನ್ನು‡ ಸೇರುವೆ.

**ಉಪನೀತವಯೋ ಚ ದಾನಿಸಿ ಸಂಪಯಾತೋಸಿ ಯಮಸ್ಸ ಸಂತಿಕಜ್**
**ವಾಸೋ ಪಿ ಚ ತೇ ನತ್ಥಿ ಅಂತರಾ ಪಾಥೆಯ್ಯಂ ಪಿ ಚ ತೇ ನ ವಿಜ್ಜತಿ**

---

* ಪುಣ್ಯ ವ್ಯಾ|| † ೨೫ನೆಯ ಗಾಥೆಯನ್ನು ನೋಡಿ.

‡ ಆರ್ಯರ ದಿವ್ಯಸ್ಥಾನ. ಸಾಂ|| ; ನಿರ್ವಾಣವೆಂದರ್ಥ.

**ಸೋ ಕರೋಹಿ ದೀಪಂ ಅತ್ತನೋ ಖಿಪ್ಪಜ್ ವಾಯಾಮ ಪಂಡಿತೋ ಭವ**
**ನಿದ್ಧಂತಮಲೋ ಅನಂಗಣೋ ನ ಪುನ ಜಾತಿಜರಜ್ ಉಪೇಹಿಸಿ ||೨೩೭-೨೩೮||**

೨೩೭-೨೩೮. ಈಗ ನಿನಗೆ ವಯಸ್ಸು ಕಳೆಯುತ್ತಬಂದಿದೆ. **ಯಮನ** ಬಳಿಗೆ ಹೊರಟಿರುವೆ. ನಡುವೆ ನಿನಗೆ ವಾಸಕ್ಕೆ ಮನೆಯೇ* ಇಲ್ಲವಲ್ಲ ! ನಿನಗೆ ಬುತ್ತಿಯೂ ಇಲ್ಲವಲ್ಲ ! ಆದ್ದರಿಂದ ನೀನು ನಿನಗಾಗಿ **ದ್ವೀಪ**ವನ್ನು† ಮಾಡಿಕೊ, ಬೇಗ ಉದ್ಯೋಗಶೀಲನಾಗು, ಪಂಡಿತನಾಗು. ಮಲವನ್ನು ತೊಳೆದುಕೊಂಡು ಪಾಪರಹಿತನಾಗು, ಮತ್ತೆ **ಹುಟ್ಟುಮುಪ್ಪುಗಳನ್ನು**‡ ಹೊಂದುವದಿಲ್ಲ.

**ಅನುಪುಬ್ಬೇನ ಮೇಧಾವಿ ಥೋಕ ಥೋಕಜ್ ಖಣೇ ಖಣೇ**
**ಕಮ್ಮಾರೋ ರಜತಸ್ಸೇವ ನಿದ್ಧಮೇ ಮಲಂ ಅತ್ತನೋ ||೨೩೯||**

೨೩೯. ಜಾಣನಾದವನು ಕ್ಷಣಕ್ಷಣದಲ್ಲಿಯೂ ಸ್ವಲ್ಪಸ್ವಲ್ಪವಾಗಿ ಅಕ್ಕಸಾಲಿಗನು ಬೆಳ್ಳಿಯ ಮೇಲಿನ ಕೊಳೆಯನ್ನು ಊದಿ ಕರಗಿಸುವಂತೆ ತನ್ನಲ್ಲಿರುವ ಮಲವನ್ನು ಕರಗಿಸಬೇಕು.

**ಅಯಸಾ ವ ಮಲಜ್ ಸಮುಟ್ಠಿತಜ್ ತಜ್ ಉಟ್ಠಾಯ ತಮೇವ ಖಾದತಿ**
**ಏವಜ್ ಅತಿಧೋನಚಾರಿನಜ್ ಸಕಕಮ್ಮಾನಿ ನಯಂತಿ ದುಗ್ಗತಿಜ್ ||೨೪೦||**

೨೪೦. ಕಬ್ಬಿಣದಿಂದ ಹುಟ್ಟಿದ ತುಕ್ಕು ಅದರಿಂದ ಹುಟ್ಟಿ ಅದನ್ನೇ ಹೇಗೆ ತಿನ್ನುವದೋ, ಅದರಂತೆ ನೀತಿಯನ್ನು ಮೀರಿ ನಡೆಯುವಾತನನ್ನು ತನ್ನ ಕರ್ಮಗಳೇ ದುರ್ಗತಿಗೆಳೆದೊಯ್ಯುವವು.

**ಅಸಜ್ಝಾಯಮಲಾ ಮಂತಾ ಅನುಟ್ಠಾನಮಲಾ ಘರಾ**
**ಮಲಜ್ ವಣ್ಣಸ್ಸ ಕೋಸಜ್ಜಜ್ ಪಮಾದೋ ರಕ್ಖತೋ ಮಲಜ್ ||೨೪೧||**

೨೪೧. ಮತ್ತೆಮತ್ತೆ ಜಪಿಸದಿರುವದು **ಮಂತ್ರ**ಗಳಿಗೆ ಮಲವು ; ಮತ್ತೆ ಕೆಲಸಮಾಡದಿರುವದೇ ಮನೆಗಳಿಗೆ ಮಲವು ಆಲಸ್ಯವೇ ಮೈಬಣ್ಣಕ್ಕೆ ಮಲವು ; ಕಾವಲುಗಾರನಿಗೆ ಎಚ್ಚರದಪ್ಪುವದೇ ಮಲವು.

* ದಾರಿಯಲ್ಲಿ ತಂಗುವ ಸ್ಥಳ.

† ೨೫ನೆಯ ಗಾಥೆಯನ್ನು ನೋಡಿ.

‡ ಜಾತಿ, ಜರಾ - ಇವು ಹನ್ನೆರಡು **ನಿದಾನ**ಗಳಲ್ಲಿ ಎರಡು.

**ಮಲಿಟ್ಥಿಯಾ ದುಚ್ಚರಿತಙ್ ಮಚ್ಚೆರಙ್ ದದತೋ ಮಲಙ್**
**ಮಲಾವೇ ಪಾಪಕಾ ಧಮ್ಮಾ ಅಸ್ಮಿಙ್ ಲೋಕೇ ಪರಮ್ಹಿ ಚ ||೨೪೨||**

೨೪೨. ಹೆಂಗಸಿಗೆ ಕೆಟ್ಟನಡತೆಯೇ ಮಲವು ; ಕೊಡುಗೈಯುಳ್ಳವನಿಗೆ ಹೊಟ್ಟೆಯಕಿಚ್ಚೇ ಮಲವು ; ಪಾಪಕರ್ಮಗಳು ಈ ಲೋಕದಲ್ಲಿಯೂ ಪರ ಲೋಕದಲ್ಲಿಯೂ ಮಲಗಳೇ.

**ತತೋ ಮಲ ಮಲತರಙ್ ಅವಿಜ್ಜಾ ಪರಮಙ್ ಮಲಙ್**
**ಏತಙ್ ಮಲಙ್ ಪಹತ್ವಾನ ನಿಮ್ಮಲಾ ಹೋಥ ಬಿಕ್ಕವೋ ||೨೪೩||**

೨೪೩. ಈ ಮಲಗಳೆಲ್ಲಕ್ಕಿಂತಲೂ ಹೆಚ್ಚಿನ ಮಲವೆಂದರೆ **ಅವಿದ್ಯೆ*** ಎಂಬ ಮಲವು. ಆದ್ದರಿಂದ **ಭಿಕ್ಷು**ಗಳಿರ, ಈ ಮಲವನ್ನು ಕಳೆದುಕೊಂಡು ನಿರ್ಮಲ ರಾಗಿರಿ.

**ಸುಜೀವಙ್ ಅಹಿರೀಕೇನ ಕಾಕಸೂರೇನ ಧಂಸಿನಾ**
**ಪಕ್ಖಂದಿನಾ ಪಗಬ್ಭೇನ ಸಂಕಿಲಿಟ್ಠೇನ ಜೀವಿತಙ್ ||೨೪೪||**

೨೪೪. ನಾಚಿಕೆಯಿಲ್ಲದವನೂ, ಕಾಗೆಯಂತೆ ಸ್ವಾರ್ಥಶೂರನೂ, ಮತ್ತೊಬ್ಬರ ಕೆಲಸವನ್ನು ಕೆಡಿಸುವವನೂ, ಮತ್ತೊಬ್ಬರ ಕೆಲಸಕ್ಕೆ ಅಡ್ಡಬರು ವವನೂ, ದಿಟ್ಟನೂ, ಪಾಪಿಯೂ, ಆಗಿರುವವನಿಗೆ ಜೀವನವು ಸುಖಜೀವನ ವಾಗಿರುವದು.

**ಹಿರೀಮತಾ ಚ ದುಜ್ಜೀವಙ್ ನಿಚ್ಚಙ್ ಸುಚಿಗವೇಸಿನಾ**
**ಅಲೀನೇನಪ್ಪಗಬ್ಭೇನ ಸುದ್ಧಾ ಜೀವೇನ ಪಸ್ಸತಾ ||೨೪೫||**

೨೪೫. ನಾಚಿಕೆಯುಳ್ಳವನೂ ಯಾವಾಗಲೂ ಶುಚಿಯಾಗಿರುವದನ್ನೇ ಹುಡುಕುತ್ತಿರುವವನೂ ಆಸಕ್ತಿಯಿಲ್ಲದವನೂ,† ವಿನಯವುಳ್ಳವನೂ, ಶುದ್ಧವಾದ ಜೀವನವುಳ್ಳವನೂ ಆದ ವಿವೇಕಿಗೆ ಜೀವನವು ಯಾವಾಗಲೂ ಕಷ್ಟವು.

**ಯೋ ಪಾಣಂ ಅತಿಪಾತೇತಿ ಮುಸಾವಾದಙ್ ಚ ಭಾಸತಿ**
**ಲೋಕೇ ಅದಿನ್ನಙ್ ಆದಿಯತಿ ಪರದಾರಙ್ ಚ ಗಚ್ಛತಿ**

* ಆರ್ಯಸತ್ಯಗಳನ್ನು ಸರಿಯಾಗಿ ತಿಳಿಯದ ಇರುವದೇ ಅವಿದ್ಯೆ. ಇದು ವೇದಾಂತಿಗಳು ಹೇಳುವ ಅಧ್ಯಾಸರೂಪವಾದ ಅವಿದ್ಯೆಯಲ್ಲ.

† ಆಲಸ್ಯವಿಲ್ಲದವನೂ ಸಾಂ|| ; ಸರಳವರ್ತನೆಯವನೂ.

**ಸುರಮೇರಯ ಪಾನಙ್ ಚ ಯೋ ನರೋ ಅನುಯಂಜತಿ**
**ಇಧೇವಮೇಸೋ ಲೋಕಸ್ಮಿಙ್ ಮೂಲಙ್ ಖಣತಿ ಅತ್ತನೋ ||೨೪೬-೨೪೭||**

೨೪೬-೨೪೭. ಯಾವನು ಪ್ರಾಣವನ್ನು ಕಳೆಯುವನೋ, ಸುಳ್ಳು ಮಾತನ್ನೇ ಆಡುತ್ತಿರುವನೋ, ಒಬ್ಬರು ಕೊಡದೆ ಇರುವದನ್ನು ತೆಗೆದುಕೊಳ್ಳುವನೋ, ಪರಸ್ತ್ರೀಗಮನವನ್ನು ಮಾಡುವನೋ, ಹೆಂಡ ಮೈರೇಯ - ಇವುಗಳ ಪಾನವನ್ನು ಮಾಡುವನೋ, ಅವನು ಈ ಲೋಕದಲ್ಲಿ ತನ್ನ ಬೇರನ್ನು ತಾನೇ ಕಡಿದವನಾಗುವನು.*

**ಏವಂ ಭೋ ಪುರಿಸಾ ಜಾನಾಹಿ ಪಾಪಧಮ್ಮಾ ಅಸಞ್ಞತಾ**
**ಮಾ ತಙ್ ಲೋಭೋ ಅಧಮ್ಮೋ ಚ ಚಿರಙ್ ದುಕ್ಖಾಯ ರಂಧಯುಙ್ ||೨೪೮||**

೨೪೮. ಹೀಗೆ ಎಲೈ ಪುರುಷನೆ, ಪಾಪಕರ್ಮವನ್ನು ಮಾಡುತ್ತಾ, ಜಿತೇಂದ್ರಿಯರಲ್ಲದೆ ಇರುವ ಜನರನ್ನು ತಿಳಿದುಕೊ. ಲೋಭವೂ ಅಧರ್ಮವೂ ನಿನ್ನನ್ನು ಬಹುಕಾಲ ದುಃಖಪಡುವಂತೆ ಕುದಿಸದಿರಲಿ !

**ದದಾತಿ ವೆ ಯಥಾಸದ್ಧಙ್ ಯಥಾ ಪಸಾದನಙ್ ಜನೋ,**
**ತತ್ಥ ಚೆ ಮಂಕು ಯೋ ಹೋತಿ ಪರೇಸಙ್ ಪಾನಭೋಜನೆ**
**ನ ಸೋ ದಿವಾ ವಾ ರತ್ತಿಙ್ ವಾ ಸಮಾಧಿಙ್ ಅಧಿಗಚ್ಛತಿ**
**ಯಸ್ಸ ಚೇತಙ್ ಸಮುಚ್ಛಿನ್ನಙ್ ಮೂಲಘಚ್ಚಙ್ ಸಮೂಹತಙ್**
**ಸಾ ವೆ ದಿವಾ ವಾ ರತ್ತಿಙ್ ವಾ ಸಮಾಧಿಙ್ ಅಧಿಗಚ್ಛತಿ ||೨೪೯-೨೫೦||**

೨೪೯-೨೫೦. ಅವರವರ ಶ್ರದ್ಧೆಗೂ ಯೋಗ್ಯತೆಗೂ† ತಕ್ಕಂತೆ ಜನರು ದಾನಮಾಡುವರು. ಹೀಗಿರುವಲ್ಲಿ ಮತ್ತೊಬ್ಬರ ಅನ್ನಪಾನಗಳ ವಿಷಯದಲ್ಲಿ ಯಾವನು ಹೊಟ್ಟೆಕಿಚ್ಚುಪಡುವನೋ,‡ ಅವನಿಗೆ ಹಗಲಾಗಲಿ ಇರುಳಾಗಲಿ ಸಮಾಧಾನವು ದೊರಕದು. ಆದರೆ ಯಾರಿಗೆ ಆ ಹೊಟ್ಟೆಕಿಚ್ಚು ಬೇರುಮುಟ್ಟ ಕಿತ್ತುಹೋಗಿರುವದೋ ಅವನಿಗೇ ಹಗಲೂ ಇರಳೂ ಸಮಾಧಾನವು ದೊರಕುವದು.

---

* ಇಲ್ಲಿ ಪಂಚಶೀಲಗಳನ್ನು ಸೂಚಿಸಿರುತ್ತದೆ.

† 'ಪ್ರಸನ್ನತೆಗೂ' ಸಾಂ|| ; 'ಇಷ್ಟಕ್ಕೊ' ಪೂ|| (೨) ; 'ಪಸಾದನಂ' ಎಂಬುದು ಪ್ರಸಾಧನ ಎಂಬುದರ ತದ್ಭವವೆಂತ ತೋರುತ್ತದೆ.

‡ 'ಮಂಕು' ಎಂಬ ಮೂಲದ ಅರ್ಥವಿದು ; ಮೂಕ ಎಂದು ಸಾಂ|| ರು ಅರ್ಥ ಮಾಡಿರುತ್ತಾರೆ.

**ನತ್ಥಿ ರಾಗಸಮೋ ಅಗ್ಗಿ ನತ್ಥಿ ದೋಸಸಮೋ ಗಹೋ**
**ನತ್ಥಿ ಮೋಹಸಮಜ್ ಜಾಲಜ್ ನತ್ಥಿ ತನ್ಹಾಸಮಾ ನದೀ** ||೨೫೧||

೨೫೧. **ರಾಗ**ಕ್ಕೆ ಸಮನಾದ ಬೆಂಕಿಯಿಲ್ಲ, **ದ್ವೇಷ**ಕ್ಕೆ ಸಮನಾದ ಗ್ರಹವಿಲ್ಲ,* **ಮೋಹ**ಕ್ಕೆ ಸಮನಾದ ಬಲೆಯಿಲ್ಲ, **ತೃಷ್ಣೆ**ಗೆ ಸಮವಾದ ನದಿಯಿಲ್ಲ.

**ಸುದಸ್ಸಜ್ ವಜ್ಜಜ್ ಅಞ್ಞೇಸಜ್ ಅತ್ತನೋ ಪನ ದುದ್ದಸಜ್**
**ಪರೇಸಜ್ ಹಿ ಸೋ ವಜ್ಜಾನಿ ಓಪುಣಾತಿ ಯಥಾ ಭುಸಜ್**
**ಅತ್ತನೋ ಪನ ಛಾದೇತಿ ಕಲಿಜ್ ವಾ ಕಿತವಾ ಸಠೋ** ||೨೫೨||

೨೫೨. ಮತ್ತೊಬ್ಬರ ದೋಷವನ್ನು ಕಾಣುವದು ಬಹು ಸುಲಭವು, ಆದರೆ ತನ್ನ ತಪ್ಪನ್ನು ಕಾಣುವದು ಬಹುಕಷ್ಟ. ಏಕೆಂದರೆ ಮನುಷ್ಯನು ಮತ್ತೊಬ್ಬರ ದೋಷಗಳನ್ನು ಹೊಟ್ಟಿನಂತೆ ಒಂದರಿಯಾಡಿ ನಿಲ್ಲಿಸಿಕೊಳ್ಳುತ್ತಾನೆ, ತನ್ನ ದೋಷಗಳನ್ನು ಮಾತ್ರ ಮೋಸಗಾರನಾದ ಜೂಜುಗಾರನು ಮೋಸದ ದಾಳವನ್ನು ಕಾಣಿಸದಂತಿರುವಂತೆ ಬಚ್ಚಿಡುವನು.

**ಪರವಜ್ಜಾನುಪಸ್ಸಿಸ್ಸ ನಿಚ್ಚಜ್ ಉಜ್ಝಾನಸಞ್ಞಿನೋ**
**ಆಸವ ತಸ್ಸ ವಡ್ಢಂತಿ ಆರಾ ಸೋ ಆಸವಕ್ಖಯಾ** ||೨೫೩||

೨೫೩. ಮತ್ತೊಬ್ಬರ ದೋಷವನ್ನೇ ಕಾಣುತ್ತಾ, ಯಾವಾಗಲೂ ಹುಳುಕನ್ನೇ ಹುಡುಕುತ್ತಾ ಅವನ್ನೇ ಚಿಂತಿಸುತ್ತಿರುವವನಿಗೆ† ಆಸ್ರವಗಳು ಬೆಳೆಯುವವು - **ಆಸ್ರವ**ಗಳ ನಾಶಕ್ಕೆ ಅವನು ದೂರವಾಗಿರುವನು.

**ಆಕಾಸೇ ಪದಜ್ ನತ್ಥಿ ಸಮಣೋ ನತ್ಥಿ ಬಾಹಿರೇ**
**ಪಪಂಚಾಭಿರತಾ ಪಜಾ ನಿಪ್ಪಪಂಚ ತಥಾಗತಾ** ||೨೫೪||

೨೫೪. ಆಕಾಶದಲ್ಲಿ ಹೆಜ್ಜೆಯ ಗುರುತಿರುವದಿಲ್ಲ, ಹೊರಗೆ ಶ್ರಮಣನಿರುವದಿಲ್ಲ, ಜನರು ಪ್ರಪಂಚದಲ್ಲಿಯೇ ರತರಾಗಿರುವರು, **ತಥಾಗತರು** ನಿಷ್ಪ್ರಪಂಚರಾಗಿರುವರು.

**ಆಕಾಸೇ ಪದಜ್ ನತ್ಥಿ ಸಮಣೋ ನತ್ಥಿ ಬಾಹಿರೇ**
**ಸಂಖಾರಾ ಸಸ್ಸತಾ ನತ್ಥಿ ನತ್ಥಿ ಬುದ್ಧಾನಜ್ ಇಂಜಿತಜ್** ||೨೫೫||

* ಭೂತ ; ಯಕ್ಷ, ಅಜಗರ, ಮೊಸಳೆ - ಮುಂತಾದದ್ದು ವ್ಯಾ||

† ಇದು ವ್ಯಾಖ್ಯಾನದಂತೆ ಅರ್ಥ ; ಸಾಂ|| ರು ಯಾವಾಗಲೂ 'ಅಯ್ಯೋ ! ಎಂದು ಚಿಂತಿಸುತ್ತಿರುವವನಿಗೆ' ಎಂದು ಅರ್ಥಮಾಡಿರುತ್ತಾರೆ.

೨೫೫.* ಆಕಾಶದಲ್ಲಿ ಹೆಜ್ಜೆಯ ಗುರುತಿಲ್ಲ, ಹೊರಗೆ **ಶ್ರಮಣ**ನಿಲ್ಲ, ಶಾಶ್ವತವಾದ **ಸಂಸ್ಕಾರ**ಗಳಿಲ್ಲ, **ಬುದ್ಧ**ರಿಗೆ ಅಲುಗಾಟವಿಲ್ಲ.

# ೧೯. ಧರ್ಮಸ್ಥವರ್ಗ (ಧಮ್ಮಟ್ಠವಗ್ಗ)

**ನ ತೇನ ಹೋತಿ ಧಮ್ಮಟ್ಠೋ ಯೇನತ್ಥಙ್ ಸಹಸಾ ನಯೇ**
**ಯೋ ಚ ಅತ್ಥಙ್ ಅನತ್ಥಙ್ ಚ ಉಭೋ ನಿಚ್ಚೆಯ್ಯ ಪಂಡಿತೋ**
**ಅಸಾಹಸೇನ ಧಮ್ಮೇನ ಸಮೇನ ನಯತೀ ಪರೇ**
**ಧಮ್ಮಸ್ಸ ಗುಟ್ಟೋ ಮೇಧಾವಿ ಧಮ್ಮಟ್ಠೋ ತಿ ಪವುಚ್ಚತಿ** ||೨೫೬-೨೫೭||

೨೫೬-೨೫೭. ವಿಷಯವನ್ನು ಚಟ್ಟನೆ† ನಿರ್ಧರಿಸಿಬಿಡುವದರಿಂದ **ಧರ್ಮಸ್ಥ**ನಾಗುವದಿಲ್ಲ‡ ; ಯಾವನು ಅರ್ಥವನ್ನೂ ಅನರ್ಥವನ್ನೂ ಎರಡನ್ನೂ ನಿಶ್ಚಯಿಸಿ ಪಂಡಿತನಾಗಿ ಬಲಾತ್ಕಾರವಿಲ್ಲದೆ ಉಳಿದವರನ್ನು ಸಮವಾದ ಧರ್ಮದಿಂದ ತಿದ್ದುವನೋ ಧರ್ಮದಿಂದ ಕಾಪಾಡಲ್ಪಟ್ಟಿರುವ ಆ ಜಾಣನು ಧರ್ಮಸ್ಥನೆನಿಸುವನು.

**ನ ತೇನ ಪಂಡಿತೋ ಹೋತಿ ಯಾವತಾ ಬಹು ಭಾಸತಿ**
**ಖೇಮಿ ಅವೇರೀ ಅಭಯೋ ಪಂಡಿತೋತಿ ಪವುಚ್ಚತಿ** ||೨೫೮||

* ಬುದ್ಧನ ಮರಣಕಾಲದಲ್ಲಿ ಆತನನ್ನು ನೋಡಲಿಕ್ಕೆ ಬಂದ **ಸುಭದ್ರ**ನೆಂಬಾತನು "ಆಕಾಶದಲ್ಲಿ ಹೆಜ್ಜೆಯ ಗುರುತಿರುವದೆ ? ಬೌದ್ಧಧರ್ಮಕ್ಕೆ ಹೊರಗಿನ ಪ್ರಪಂಚದಲ್ಲಿ ನಿಜವಾದ ಸಂನ್ಯಾಸಿಗಳು ಇರುವರೆ ? ಸಂಸ್ಕಾರಗಳು (ಪದಾರ್ಥಗಳು) ನಿತ್ಯವೆ ?" ಎಂಬ ಮೂರು ಪ್ರಶ್ನೆಗಳನ್ನು ಕೇಳಿದನೆಂದೂ ಅದಕ್ಕೆ ಬುದ್ಧನು ಈ ಉತ್ತರವನ್ನು ಕೊಟ್ಟನೆಂದೂ ವ್ಯಾಖ್ಯಾನ. 'ಬುದ್ಧರಲ್ಲದವರಲ್ಲಿ' ನಿಜವಾದ ಜ್ಞಾನವುಂಟೆ ?" ಎಂದಿಷ್ಟೇ ಸುಭದ್ರನು ಕೇಳಿದನೆಂದೂ ಅವರಲ್ಲಿ ನಿಜವಾದ ಶ್ರಮಣನಿಲ್ಲವೆಂದಿಷ್ಟೇ ಉತ್ತರವು ಬಂದಿತೆಂದೂ **ದೀರ್ಘನಿಕಾಯ**ದಲ್ಲಿದೆ. (Woodward).

† ಬಲಾತ್ಕಾರದಿಂದ ಪೂ|| (೨), W. ; ಅರ್ಥವೆಂದರೆ ಕಾಮಿತವಸ್ತುವೆಂದು - **ಸಾಂ.**

‡ ನ್ಯಾಯಪಕ್ಷಪಾತಿ.

೨೫೮. ಬಹುವಾಗಿ ಮಾತಾಡಿದ ಮಾತ್ರದಿಂದ ಪಂಡಿತನಾಗುವದಿಲ್ಲ ; ಕ್ಷೇಮವನ್ನುಂಟುಮಾಡುವವನೂ* ವೈರಿಯಲ್ಲದವನೂ ಭಯವಿಲ್ಲದವನೂ† ಪಂಡಿತನೆನಿಸುತ್ತಾನೆ.

**ನ ತಾವತಾ ಧಮ್ಮಧಾರೋ ಯಾವತಾ ಬಹು ಭಾಸತಿ**
**ಯೋ ಚ ಅಪ್ಪಂ ಪಿ ಸುತ್ವಾನ ಧಮ್ಮಙ್ ಕಾಯೇನ ಪಸ್ಸತಿ**
**ಸ ವೆ ಧಮ್ಮಧರೋ ಹೋತಿ ಯೋ ಧಮ್ಮಙ್ ನಪ್ಪಮಜ್ಜತಿ** ||೨೫೯||

೨೫೯. ಬಹುವಾಗಿ ಮಾತಾಡಿದ ಮಾತ್ರದಿಂದ ಧರ್ಮಜ್ಞನೆನಿಸುವದಿಲ್ಲ. ಯಾವನು ಸ್ವಲ್ಪವೇ ಕೇಳಿ ಅರಿತಿದ್ದರೂ ಧರ್ಮವನ್ನು ಶರೀರದಲ್ಲಿ ಆಚರಣೆಗೆ ಇಟ್ಟುಕೊಂಡಿರುವನೋ, ಯಾವನು ಧರ್ಮದಿಂದ ವಿಷಯದಲ್ಲಿ ಮೈಮರೆಯದೆ ಇರುವನೋ, ಅವನೇ ಧರ್ಮಜ್ಞನೆನಿಸುವನು.

**ನ ತೇನ ಥೇರೋ ಹೋತಿ ಯೇನಸ್ಸ ಪಲಿತಙ್ ಸಿರೋ**
**ಪರಿಪಕ್ಕೋ ವಯೋ ತಸ್ಸ ಮೋಘಜಿಣ್ಣೋ ತಿ ವುಚ್ಚತಿ** ||೨೬೦||

೨೬೦. ತಲೆಯು ನರೆತ ಮಾತ್ರದಿಂದ **ಸ್ಥವಿರ**ನಾಗುವದಿಲ್ಲ‡ ; ಅವನ ವಯಸ್ಸು ಹೆಚ್ಚಾಗಿರಬಹುದು, ಆದರೂ ವ್ಯರ್ಥವಾಗಿ ಮುದಿಯಾದವನು ಎನಿಸಿಕೊಳ್ಳುತ್ತಾನೆ.

**ಯಮ್ಹಿ ಸಚ್ಚಂ ಚ ಧಮ್ಮೋ ಚ ಅಹಿಂಸಾ ಸಞ್ಞಮೋ ದಮೋ**
**ಸವೇ ವಂತಮಲೋ ಧೀರೋ ಥೇರೋ ಇತಿ ಪವುಚ್ಚತಿ** ||೨೬೧||

೨೬೧. ಯಾವನಲ್ಲಿ ಸತ್ಯ, ಧರ್ಮ, ಅಹಿಂಸೆ, ಸಂಯಮ, ದಮ - ಇವುಗಳಿರುವವೋ ಅಂಥ ಮಲವನ್ನು ಕಕ್ಕಿರುವ ಧೀರನೇ ನಿಜವಾಗಿ **ಸ್ಥವಿರ**ನೆನಿಸಿಕೊಳ್ಳುವನು.

* ಯಾವ ಬಗೆಯ ವೈರವೂ ಇಲ್ಲದ್ದರಿಂದ ಕ್ಷೇಮವನ್ನುಂಟುಮಾಡುವವನು. ವ್ಯಾ.

† ಯಾರೊಬ್ಬರೂ ಅಂಜುವದಕ್ಕೆ ಕಾರಣವಿಲ್ಲದವನು ; ಸರ್ವಭೂತಗಳಿಗೂ ಸಂನ್ಯಾಸಿಯು ಅಭಯವನ್ನು ಕೊಡುವನೆಂದು ವೈದಿಕರೂ ನಂಬುತ್ತಾರೆ.

‡ ಥೇರೋ - ಸ್ಥವಿರ ಎಂದರೆ ಬುದ್ಧರ ಸಂಘದಲ್ಲಿ ಹತ್ತನೆಯ ವರ್ಷದಿಂದ ಭಿಕ್ಷುವಾಗಿರುವವನು.

**ನ ವಾಕ್ಕರಣಮತ್ತೇನ ವಣ್ಣಪೋಕ್ಖರತಾಯ ವಾ**
**ಸಾಧುರೂಪೋ ನರೋ ಹೋತಿ ಇಸ್ಸುಕೀ ಮಚ್ಛರೀ ಸಠೋ ||೨೬೨||**

೨೬೨. ಕರುಬುತನವೂ ಹೊಟ್ಟೆಕಿಚ್ಚೂ ಇರುವ ಶಠನು ಒಳ್ಳೆಯ ವಕ್ತ್ರವಾದ ಮಾತ್ರದಿಂದಲಾಗಲಿ ಮೈಬಣ್ಣದಿಂದಲಾಗಲಿ **ಸಾಧುರೂಪ**ನೆನಿಸಿಕೊಳ್ಳುವದಿಲ್ಲ.

**ಯಸ್ಸ ಚೇತಜ್ ಸಮುಚ್ಛಿನ್ನಜ್ ಮೂಲಘಚ್ಚಜ್ ಸಮೂಹತಜ್**
**ಸ ವಂತದೋಸೋ ಮೇಧಾವಿ ಸಾಧುರೂಪೋ ನಿ ವುಚ್ಚತಿ ||೨೬೩||**

೨೬೩. ಯಾವನಲ್ಲಿ ಈ ದೋಷಗಳು ಬೇರುಮುಟ್ಟ ನಾಶವಾಗಿರುವವೋ, ದೋಷಗಳನ್ನು ಕಕ್ಕಿರುವ ಆ ಜಾಣನೇ **ಸಾಧುರೂಪ**ನೆನಿಸುವನು.

**ನ ಮುಂಡಕೇನ ಸಮಣೋ ಅಬ್ಬತೋ ಅಲಿಕಂ ಭಣಜ್**
**ಇಚ್ಛಾಲೋಭ ಸಮಾಪನ್ನೋ ಸಮಣೋ ಕಿಂ ಭವಿಸ್ಸತಿ ||೨೬೪||**

೨೬೪. **ವ್ರತ**ಗಳನ್ನು ಪಾಲಿಸದೆ ಸುಳ್ಳಾಡುತ್ತಿರುವವನು, ತಲೆಬೋಳಿಸಿಕೊಂಡ ಮಾತ್ರದಿಂದ **ಶ್ರಮಣ**ನಾಗನು. ಇಚ್ಛೆ, ಲಾಭ - ಇವುಗಳಿಂದಲೇ ತುಂಬಿರುವವನು **ಶ್ರಮಣ**ನಾದಾನೇನು ?

**ಯೋ ಚ ಸಮೇತಿ ಪಾಪಾನಿ ಅಣುಜ್ ಥೂಲಾನಿ ಸಬ್ಬಸೋ**
**ಸಮಿತತ್ತಾ ಹಿ ಪಾಪಾನಜ್ ಸಮಣೋ ತಿ ಪವುಚ್ಚತಿ ||೨೬೫||**

೨೬೫. ಯಾವನು ಸಣ್ಣದೊಡ್ಡ ಪಾಪಗಳನ್ನೆಲ್ಲ ಶಮನಮಾಡಿಕೊಂಡಿರುವನೋ ಅಂಥವನು ಪಾಪಗಳು ಶಮನವಾಗಿರುವದರಿಂದ **ಶ್ರಮಣ**ನೆನಿಸಿರುವನು.

**ನ ತೇನ ಭಿಕ್ಖು ಹೋತಿ ಯಾವತಾ ಭಿಕ್ಖತೇ ಪರೇ**
**ವಿಸ್ಸಜ್ ಧಮ್ಮಜ್ ಸಮಾದಾಯ ಭಿಕ್ಖು ಹೋತಿ ನ ತಾವತಾ ||೨೬೬||**

೨೬೬. ಮತ್ತೊಬ್ಬರನ್ನು ತಿರಿದು ತಿಂದ ಮಾತ್ರದಿಂದ **ಭಿಕ್ಷು**ವಾಗಲಾರನು ; ಎಲ್ಲಾ ಧರ್ಮ(ನಿಯಮಗಳನ್ನೂ) ಅನುಸರಿಸಿರಲಿ,* ಅಷ್ಟುಮಾತ್ರದಿಂದಲೂ ಭಿಕ್ಷುವಾಗುವದಿಲ್ಲ.

* 'ತಿಳಿದಿರಲಿ' (ಪೂ||) ; 'ಎಲ್ಲಾ ಕೆಟ್ಟಕಾಮಗಳನ್ನೂ' ಸಾಂ|| ; 'ಕೆಟ್ಟ ಧರ್ಮವನ್ನು' (Woodward).

ಯೋಧ ಪುಣ್ಣಂಚ ಪಾಪಂಚ ಬಾಹೆತ್ವಾ ಬ್ರಹ್ಮಚರಿಯವಾ
ಸಂಖಾಯ ಲೋಕೇ ಚರತಿ ಸ ವೇ ಭಿಕ್ಖೂ ತಿ ವುಚ್ಚತಿ ||೨೬೭||

೨೬೭. ಯಾವನು ಪುಣ್ಯವನ್ನೂ ಪಾಪವನ್ನೂ ಬದಿಗಿಟ್ಟು ಬ್ರಹ್ಮಚಾರಿಯಾಗಿ ಜ್ಞಾನದಿಂದೊಡಗೂಡಿ ಈ ಲೋಕದಲ್ಲಿ ಸಂಚರಿಸುತ್ತಿರುವನೋ ಅವನೇ **ಭಿಕ್ಷು**ವೆನಿಸಿರುವನು.

ನ ಮೊನೇನ ಮುನೀ ಹೋತಿ ಮೂಳ್ಹರೂಪೋ ಅವಿದ್ದಸು
ಯೋ ಚ ತುಲಙ್ ವ ಪಗ್ಗಯ್ಹ ವರಂ ಆದಾಯ ಪಂಡಿತೋ
ಪಾಪಾನಿ ಪರಿವಜ್ಜೇತಿ ಸ ಮುನೀ ತೇನ ಸೋ ಮುನಿ
ಯೋ ಮುನಾತಿ ಉಭೋ ಲೋಕೇ ಮುನಿ ತೇನ ಪವುಚ್ಚತಿ ||೨೬೮-೨೬೯||

೨೬೮-೨೬೯. ಮೂಢನೂ ಅವಿದ್ವಾಂಸನೂ ಆದವನು ಮೌನದಿಂದ **ಮುನಿ**ಯಾಗುವದಿಲ್ಲ ; ಯಾವ ಪಂಡಿತನು ತಕ್ಕಡಿಯನ್ನು ಹಿಡಿದವನಂತೆ, ಉತ್ತಮವಾದದ್ದನ್ನು ಗ್ರಹಿಸಿ ಪಾಪಗಳನ್ನು ಬಿಡುತ್ತಾನೋ, ಅವನೇ ಮುನಿಯು ; ಆದರಿಂದಲೇ ಅವನು ಮುನಿಯು. ಯಾವನು ಎರಡು ಲೋಕಗಳನ್ನೂ ಮನನಮಾಡಬಲ್ಲನೋ ಅವನು ಅದರಿಂದ **ಮುನಿ**ಯೆನಿಸುವನು.

ನ ತೇನ ಅರಿಯೋ ಹೋತಿ ಯೇನ ಪಾಣಾನಿ ಹಿಂಸತಿ
ಅಹಿಂಸಾ ಸಬ್ಬ ಪಾಣಾನಙ್ ಅರಿಯೋ ತಿ ಪವುಚ್ಚತಿ ||೨೭೦||

೨೭೦. ಪ್ರಾಣಿಗಳನ್ನು ಹಿಂಸಿಸುವದರಿಂದ* **ಆರ್ಯ**ನಾಗುವದಿಲ್ಲ ; ಯಾವ ಜಂತುಗಳನ್ನೂ ಕೊಲ್ಲದಿರುವದರಿಂದಲೇ **ಆರ್ಯ**ನೆನಿಸುತ್ತಾನೆ.

ನ ಸೀಲಬ್ಬತ ಮತ್ತೇನ ಬಾಹುಸಚ್ಚೇನ ವಾ ಪುನ
ಅಥ ವಾ ಸಮಾಧಿಲಾಭೇನ ವಿವಿಚ್ಚಸಯನೇನ ವಾ
ಫುಸಾಮಿ ನೆಕ್ಖಮ್ಮ ಸುಖಙ್ ಅಪುತುಜ್ಜನ ಸೇವಿತಙ್
ಭಿಕ್ಖು ವಿಸ್ಸಾಸಂ ಆಪಾದಿ ಅಪ್ಪತ್ತೋ ಆಸವಕ್ಖಯಙ್ ||೨೭೧-೨೭೨||

೨೭೧-೨೭೨. ಬರಿಯ **ಶೀಲವ್ರತ**ದಿಂದಲಾಗಲಿ ಬಹಳವಾಗಿ ಓದಿರುವದರಿಂದಲಾಗಲಿ,† **ಸಮಾಧಿ**ಯನ್ನು ಹೊಂದುವದರಿಂದಲಾಗಲಿ, ಏಕಾಂತ

* ಇದು ಯಜ್ಞಯಾಗಾದಿಗಳ ಸೂಚನೆಯಾಗಿರಬಹುದು ?

† ಬೌದ್ಧಧರ್ಮಗ್ರಂಥಗಳ ಅಧ್ಯಯನದಿಂದಲಾಗಲಿ.

ದಲ್ಲಿ ಮಲಗುವದರಿಂದಲಾಗಲಿ, ಮಹಾತ್ಮರಿಗೆ ದೊರಕುವ **ನೈಷ್ಕರ್ಮ್ಯ**ಸುಖ ವನ್ನು ಪಡೆದೆನೆಂದು ಎಲೈ ಭಿಕ್ಷುವೆ, ನಂಬಬೇಡ. **ಆಸ್ರವ**ಗಳು ಸವೆಯುವ ವರೆಗೂ (ನೈಷ್ಕರ್ಮ್ಯವನ್ನು ಪಡೆದೆನೆನ್ನದಿರು.)

# ೨೦. ಮಾರ್ಗವರ್ಗ (ಮಗ್ಗವಗ್ಗ)

**ಮಗ್ಗನಟ್ಠಂಗಿಕೋ ಸೆಟ್ಠೋ ಸಚ್ಚಾನಜ್ ಚತುರೋ ಪದಾ**
**ವಿರಾಗೋ ಸೆಟ್ಠೋ ಧಮ್ಮಾನಜ್ ದಿಪದಾನಜ್ ಚ ಚಕ್ಖುಮಾ** ॥೨೭೩॥

೨೭೩. ಮಾರ್ಗಗಳಲ್ಲಿ **ಅಷ್ಟಾಂಗಿಕ**ಮಾರ್ಗವು ಹೆಚ್ಚಿನದು, ಸತ್ಯಗಳಲ್ಲಿ ನಾಲ್ಕು ಪದಗಳು* ಹೆಚ್ಚಿನವು, ಧರ್ಮಗಳಲ್ಲಿ ವೈರಾಗ್ಯವೇ ಹೆಚ್ಚಿನದು, ಮನುಷ್ಯರಲ್ಲಿ ಕಣ್ಣುಳ್ಳವನೇ† ಶ್ರೇಷ್ಠನು.

**ಏಸೋ ವ ಮಗ್ಗೋ ನತ್ಥಞ್ಞೋ ದಸ್ಸನಸ್ಸ ವಿಸುದ್ಧಿಯಾ**
**ಏತಮ್ಹಿ ತುಮ್ಹೇ ಪಟಿಪಜ್ಜಥ ಮಾರಸ್ಸೇತಜ್ ಪಮೋಹನಜ್** ॥೨೭೪॥

೨೭೪. ದರ್ಶನವು ಶುದ್ಧಿಯಾಗುವದಕ್ಕೆ ಇದೇ ಮಾರ್ಗವು, ಬೇರೆ ಯಿಲ್ಲ‡; ಇದನ್ನು ನೀವು ಪಡೆದುಕೊಳ್ಳಿರಿ, ಇದು **ಮಾರ**ನನ್ನು ಮೋಹನ ಗೊಳಿಸುವದು.

**ಏತಮ್ಹಿ ತುಮ್ಹೇ ಪಟಿಪನ್ನಾ ದುಕ್ಖಸ್ಸಂತಜ್ ಕರಿಸ್ಸಥ**
**ಅಕ್ಖಾತೋ ವೆ ಮಯಾಮಗ್ಗೋ ಅಞ್ಞಾಯ ಸಲ್ಲಸತ್ಥನಜ್** ॥೨೭೫॥

೨೭೫. ಇದನ್ನು ನೀವು ಹೊಂದಿದರೆ ದುಃಖವನ್ನು ಕೊನೆಗಾಣಿಸಿಕೊಳ್ಳುವಿರಿ.

* ಆರ್ಯಸತ್ಯಗಳು ; ೫೧ನೆಯ ಪುಟದ † ಚಿಹ್ನೆಯ ಟಿಪ್ಪಣಿಯನ್ನು ನೋಡಿ.

† ಜ್ಞಾನನೇತ್ರವುಳ್ಳ ಬುದ್ಧ ಸಾಂ॥.

‡ ಆತ್ಮಜ್ಞಾನವೇ ಮುಕ್ತಿಗೆ ಮಾರ್ಗವೆಂದು ವೈದಿಕರು ಅನ್ನುವಂತೆ ಅಷ್ಟಾಂಗಿಕ ಮಾರ್ಗವೊಂದೇ ನಿರ್ವಾಣಕ್ಕೆ ಮಾರ್ಗವೆಂದು ಬೌದ್ಧರು ಅನ್ನುತ್ತಾರೆ.

ಮುಳ್ಳನ್ನು* ಕಿತ್ತುಹಾಕುವದೆಂದು ಇದನ್ನು ತಿಳಿದು ನಿಮಗೆ ಪ್ರಸಿದ್ಧವಾದ ಈ ಮಾರ್ಗವನ್ನು ನಾನು ಹೇಳಿರುವೆನು.

**ತುಮ್ಹೇಹಿ ಕಿಚ್ಚಂ ಆತಪ್ಪಂ ಅಕ್ಖಾತಾರೋ ತಥಾಗತಾ**
**ಪಟಿಪನ್ನಾ ಪಮೋಕ್ಖಂತಿ ಝಾಯಿನೋ ಮಾರಬಂಧನಾ** ||೨೭೬||

೨೭೬. ನೀವೇ ಸಾಧನವನ್ನು ಮಾಡಬೇಕು, **ತಥಾಗತರು** ಮಾರ್ಗವನ್ನು ಉಪದೇಶಮಾಡುವವರು, ಅಷ್ಟೆ. ಅದನ್ನನುಸರಿಸಿ ಧ್ಯಾನಮಾಡುವವರು **ಮಾರ ಬಂಧನ**ದಿಂದ ಬಿಡುಗಡೆಹೊಂದುತ್ತಾರೆ.

**ಸಬ್ಬೇ ಸಂಖಾರಾ ಅನಿಚ್ಚಾತಿ ಯದಾ ಪಞ್ಞಾಯ ಪಸ್ಸತಿ**
**ಅಥ ನಿಬ್ಬಿಂದತಿ ದುಕ್ಖೇ ಏಸ ಮಗ್ಗೋ ವಿಸುದ್ಧಿಯಾ** ||೨೭೭||

೨೭೭. ಸರ್ವ**ಸಂಸ್ಕಾರ**ಗಳೂ **ಅನಿತ್ಯ**ವೆಂದು† ಯಾವಾಗ **ಪ್ರಜ್ಞೆ**ಯಿಂದ ಕಂಡುಕೊಳ್ಳುವನೋ ಆಗ ದುಃಖಗಳಲ್ಲಿ ವಿರಕ್ತನಾಗುವನು ; **ವಿಶುದ್ಧಿ**ಗೆ ಇದೇ ಮಾರ್ಗವು.

**ಸಬ್ಬೇ ಸಂಖಾರಾ ದುಕ್ಖಾತಿ ಯದಾ ಪಞ್ಞಾಯ ಪಸ್ಸತಿ**
**ಅಥ ನಿಬ್ಬಿಂದತಿ ದುಕ್ಖೇ ಏಸ ಮಗ್ಗೋ ವಿಸುದ್ಧಿಯಾ** ||೨೭೮||

೨೭೮. ಸರ್ವ**ಸಂಸ್ಕಾರ**ಗಳೂ **ದುಃಖ**ಮಯವೆಂದು† ಯಾವಾಗ ಪ್ರಜ್ಞೆಯಿಂದ ಕಂಡುಕೊಳ್ಳುವನೋ ಆಗ ದುಃಖಗಳಲ್ಲಿ ವಿರಕ್ತನಾಗುವನು, **ವಿಶುದ್ಧಿ**ಗೆ ಇದೇ ಮಾರ್ಗವು.

**ಸಬ್ಬೇ ಧಮ್ಮಾ ಅನತ್ತಾತಿ ಯದಾ ಪಞ್ಞಾಯ ಪಸ್ಸತಿ**
**ಅಥ ನಿಬ್ಬಿಂದತಿ ದುಕ್ಖೇ ಏಸ ಮಗ್ಗೋ ವಿಸುದ್ಧಿಯಾ** ||೨೭೯||

೨೭೯. ಸರ್ವ**ಧರ್ಮ**ಗಳೂ **ಅನಾತ್ಮ**ಗಳೆಂದು† ಯಾವಾಗ ಪ್ರಜ್ಞೆಯಿಂದ ಕಂಡುಕೊಳ್ಳುವನೋ ಆಗ ದುಃಖಗಳಲ್ಲಿ ವಿರಕ್ತನಾಗುವನು, **ವಿಶುದ್ಧಿ**ಗೆ‡ ಇದೇ ಮಾರ್ಗವು.

---

* ರಾಗಾದಿಗಳನ್ನು ವ್ಯಾ||.

† ಸರ್ವವೂ ಅನಿತ್ಯ, ದುಃಖ, ಅನಾತ್ಮ - ಎಂಬುದೇ ಬೌದ್ಧಮತದ ಸಾರ. ಪರಿಶಿಷ್ಟ ವನ್ನು ನೋಡಿ.

‡ ಯಾವ ಮಲವೂ ಇಲ್ಲದ ಅತ್ಯಂತ ಪರಿಶುದ್ಧವಾದ ನಿರ್ವಾಣಕ್ಕೆ.

**ಉಟ್ಠಾನಕಾಲಮ್ಹಿ ಅನುಟ್ಠಹಾನೋ**
**ಯುವಾ ಬಲೀ ಆಲಸಿಯಜ್ ಉಪೇತೋ**
**ಸಂಸನ್ನ ಸಂಕಪ್ಪ ಮನೋ ಕುಸೀತೋ**
**ಪಞ್ಞಾಯ ಮಗ್ಗಜ್ ಅಲಸೋ ನ ವಿಂದತಿ** ||೨೮೦||

೨೮೦. ಯಾವನು ಮೇಲಕ್ಕೇಳುವ ಕಾಲದಲ್ಲಿ ಏಳದೆ ಯೌವನವಂತನೂ ಬಲಿಷ್ಠನೂ ಆಗಿದ್ದರೂ ಅಲಸನಾಗಿರುವನೋ, ಕೆಟ್ಟ ಸಂಕಲ್ಪಗಳಲ್ಲಿ ಆಸಕ್ತಿಯುಳ್ಳ ಮನಸ್ಸಿನವನೂ* ಸೋಮಾರಿಯೂ ಆಗಿರುವನೋ, ಅಂಥ ಪಾಲುಮಾರಿಕೆ ಯುಳ್ಳವನಿಗೆ **ಪ್ರಜ್ಞೆಯ** ಮಾರ್ಗವು ಸಿಕ್ಕುವದಿಲ್ಲ.

**ವಾಚಾನುರಕ್ಖೀ ಮನಸಾ ಸುಸಂವುತೋ ·**
**ಕಾಯೇನ ಚ ಅಕುಸಲಜ್ ನ ಕಯಿರಾ**
**ಏತೇ ತಯೋ ಕಮ್ಮಪಥೇ ವಿಸೋಧಯೇ**
**ಆರಾಧಯೇ ಮಗ್ಗಜ್ ಇಸಿಪ್ಪವೇದಿತಜ್** ||೨೮೧||

೨೮೧. ಮಾತನ್ನು ಹಿಡಿತದಲ್ಲಿಟ್ಟು ಮನಸ್ಸನ್ನು ತಡೆಗಟ್ಟಿ ಶರೀರದಿಂದ ಪಾಪಕರ್ಮವನ್ನು ಮಾಡದೆ, ಈ ಮೂರು ಕರ್ಮಪಥಗಳನ್ನು ಯಾವನು ಶುದ್ಧವಾಗಿಟ್ಟುಕೊಂಡಿರುವನೋ, ಅವನು **ಋಷಿ**ಯು (ಬುದ್ಧನು) ತೋರಿಸಿದ ಮಾರ್ಗವನ್ನು ಸೇವಿಸುತ್ತಾನೆ.

**ಯೋಗಾ ವೇ ಜಾಯತೀ ಭೂರೀ ಅಯೋಗಾ ಭೂರಿಸಂಖಯೋ**
**ಏತಜ್ ದ್ವೇಧಾಪಥಜ್ ಞತ್ವಾ ಭವಾಯ ವಿಭವಾಯ ಚ**
**ತಥಾತ್ತಾನಜ್ ನಿವೇಸೆಯ್ಯಾ ಯಥಾ ಭೂರಿ ಪವಡ್ಢತಿ** ||೨೮೨||

೨೮೨. ಯೋಗದಿಂದಲೇ **ಭೂರಿ**(ಜ್ಞಾನವು)† ಉಂಟಾಗುತ್ತದೆ, ಅಯೋಗ ದಿಂದ **ಭೂರಿ**ಯು ಕ್ಷಯವಾಗುತ್ತದೆ. **ಭವ** (ಲಾಭ), **ವಿಭವ** (ನಷ್ಟ) - ಇವುಗಳನ್ನುಂಟುಮಾಡುವ ಈ ಎರಡು ಬಗೆಯ ಹಾದಿಯನ್ನು ತಿಳಿದುಕೊಂಡು ಯಾವದರಿಂದ ಭೂರಿಯು ಹೆಚ್ಚುವದೋ ಆ ದಾರಿಯಲ್ಲಿಯೇ ತನ್ನನ್ನು ತಾನು ಇಟ್ಟುಕೊಳ್ಳಬೇಕು.

* 'ಸಂಸತ್ತಸಂಕಲ್ಪಮನೋ' ಎಂಬ (ಪೂ||) ಪಾಠವನ್ನನುಸರಿಸಿದ ಅನುವಾದ ವಿದು ; ಯಾವನ ಸಂಕಲ್ಪಗಳೂ ಮನಸ್ಸೂ ಕುದಿಯುತ್ತಿರುವವೋ (ಪೂ|| ೨).

† 'ವಿಸ್ತೃತವಾದ ಪ್ರಜ್ಞೆಗೆ ಭೂರಿಯೆಂದು ಪೆಸರು' ವ್ಯಾ||

**ವನಙ್ ಛಿಂದಥ ಮಾ ರುಕ್ಖಙ್ ವನತೋ ಜಾಯತಿ ಭಯಙ್**
**ಛೇತ್ವಾ ವನಙ್ ಚ ವನತಙ್ ಚ ನಿಬ್ಬನಾ ಹೋಥ ಭಿಕ್ಖವೋ ||೨೮೩||**

೨೮೩. ಎಲೈ ಭಿಕ್ಷುಗಳಿರ, ವನವನ್ನು* ಕತ್ತರಿಸಿ, ಮರವನ್ನು ಕತ್ತರಿಸ ಬೇಡಿ ; ವನದಿಂದಲೇ ಭಯವುಂಟಾಗುತ್ತದೆ. ವನವನ್ನೂ ವನದಲ್ಲಿರುವ ಕುರುಚಲುಗಿಡವನ್ನೂ ಕತ್ತರಿಸಿಹಾಕಿ ವನವಿಲ್ಲದವರಾಗಿರಿ.

**ಯಾವಙ್ ಹಿ ವನಥೋ ನ ಛಿಜ್ಜತಿ ಅಣುಮತ್ತೋ ಪಿ ನರಸ್ಸ ನಾರಿಸು**
**ಪಟಿಬದ್ಧಮ್ಮನೋ ವ ತಾವ ಸೋ ವಚ್ಛೋ ಖೀರಪಾಕೋ ವ ಮಾತರಿ ||೨೮೪||**

೨೮೪. ಎಲ್ಲಿಯವರೆಗೆ ಮನುಷ್ಯನಿಗೆ ಸ್ತ್ರೀಯರಲ್ಲಿ ಕಾಮನೆಯು ಅಣು ಮಾತ್ರವಾದರೂ ಕತ್ತರಿಸದೆ ಉಳಿದಿರುವದೋ ಅಲ್ಲಿಯವರೆಗೆ ಹಾಲುಕುಡಿಯುವ ಕರುವು ತಾಯಿಗೆ ಕಟ್ಟುಬಿದ್ದಿರುವಂತೆ ಮನಸ್ಸಿನಲ್ಲಿ ಕಟ್ಟುಬಿದ್ದಿರುವನು.

**ಉಚ್ಛಿಂದ ಸಿನೇಹಂ ಅತ್ತನೋ ಕುಮುದಙ್ ಸಾರದಿಕಙ್ ಪಾಣಿನಾ**
**ಸಂತಿಮಗ್ಗಮ್ ಏವ ಬ್ರೂಹಯ ನಿಬ್ಬಾಣಙ್ ಸುಗತೇನ ದೇಸಿತಙ್ ||೨೮೫||**

೨೮೫. ಶರತ್ಕಾಲದಲ್ಲಿ ನೈದಿಲೆಯನ್ನು ಕೈಯಿಂದ ಕಿತ್ತುಹಾಕುವಂತೆ ಆತ್ಮಸ್ನೇಹವನ್ನು ಕಿತ್ತುಹಾಕು. **ಸುಗತ**ನು ಉಪದೇಶ ಮಾಡಿರುವ ಶಾಂತಿ ಮಾರ್ಗದ ನಿರ್ವಾಣಮಾರ್ಗವನ್ನೇ ಅನುಸರಿಸು.

**ಇಧ ವಸ್ಸಙ್ ವಸಿಸ್ಸಾಮಿ ಇಧ ಹೇಮಂತಗಿಂಹಿಸು**
**ಇಧಿ ಬಾಲೋ ವಿಚಿಂತೇತಿ ಅಂತರಾಯಙ್ ನ ಬುಜ್ಝತಿ ||೨೮೬||**

೨೮೬. 'ಮಳೆಗಾಲದಲ್ಲಿ ಇಲ್ಲಿರುವೆನು, ಚಳಿಗಾಲಬೇಸಗೆಯ ಕಾಲ ಗಳಲ್ಲಿ ಇಲ್ಲಿರುವೆನು' ಎಂದು ತಿಳೀಗೇಡಿಯು ಯೋಚಿಸಿಕೊಳ್ಳುತ್ತಿರುವನು ; ಅದಕ್ಕಿರುವ ಅಡ್ಡಿಯನ್ನು ಅರಿಯನು.

**ತಙ್ ಪುತ್ತ ಪಸುಸಮ್ಮ ತಙ್ ವ್ಯಾಸತ್ತಮನಸಙ್ ನರಙ್**
**ಸುತ್ತಙ್ ಗಾಮಙ್ ಮಹೋಘೋ ವ ಮಚ್ಚು ಆದಾಯ ಗಚ್ಛತಿ ||೨೮೭||**

೨೮೭. ಮಕ್ಕಳಲ್ಲಿಯೂ ದನಕರುಗಳಲ್ಲಿಯೂ ಅಭಿಮಾನವುಳ್ಳವ ನಾಗಿ ಎಲ್ಲಿಯೋ ಮನಸ್ಸಿಟ್ಟಿರುವಂಥ ಮನುಷ್ಯನನ್ನು, ನಿದ್ರಿಸುತ್ತಿರುವ ಹಳ್ಳಿಯ

---

* ವನ, ವನಥ - ಇವುಗಳು ರಾಗಾದಿಗಳನ್ನು ಸೂಚಿಸುವ ಮಾತುಗಳು

ವರನ್ನು ಹರಿಯುವ ದೊಡ್ಡ ಹೊಳೆಯು ಕೊಂಡೊಯ್ಯುವಂತೆ, ಮೃತ್ಯುವು ಕೊಂಡೊಯ್ಯುವದು.

ನ ಸಂತಿ ಪುತ್ತಾ ತಾಣಾಯ ನ ಪಿತಾ ನ ಪಿ ಬಾಂಧವಾ
ಅಂತಕೇನಾಧಿಪನ್ನಸ್ಸ ನತ್ಥಿ ಞಾತೀಸು ತಾಣತಾ ||೨೮೮||

೨೮೮. ಮಕ್ಕಳು ಕಾಪಾಡಲಾರರು, ತಂದೆಯು ಕಾಪಾಡಲಾರನು, ನೆಂಟರೂ ಕಾಪಾಡಲಾರರು ; ಯಮನು ಹಿಡಿದುಕೊಂಡಿರುವಾತನನ್ನು ಯಾವ ಬಂಧುಗಳೂ ಕಾಪಾಡಲಾರರು.

ಏತಜ್ ಅತ್ಥವಸಜ್ ಞತ್ವಾ ಪಂಡಿತೋ ಸೀಲಸಂವುತೋ
ನಿಬ್ಬಾಣ ಗಮನಜ್ ಮಗ್ಗಜ್ ಖಿಪ್ಪಜ್ ಏವ ವಿಸೋಧಯೇ ||೨೮೯||

೨೮೯. ಜಾಣನಾದವನು ಈ ವಿಷಯವನ್ನು ತಿಳಿದುಕೊಂಡು ಶೀಲದಿಂದ ಕೂಡಿದವನಾಗಿ ನಿರ್ವಾಣಕ್ಕೆ ಹೋಗುವ ಮಾರ್ಗವನ್ನು ಬೇಗನೆ ಹುಡುಕಿ ಕೊಳ್ಳಬೇಕು.

# ೨೧. ಪ್ರಕೀರ್ಣಕವರ್ಗ (ಪಕಿಣ್ಣಕವಗ್ಗ)

ಮತ್ತಾಸುಖ ಪರಿಚ್ಚಾಗಾ ಪಸ್ಸೇ ಚೆ ವಿಪುಲಜ್ ಸುಖಜ್
ಚಜೆ ಮತ್ತಾ ಸುಖಜ್ ಧೀರೋ ಸಂಪಸ್ಸಜ್ ವಿಪುಲಜ್ ಸುಖಜ್ ||೨೯೦||

೨೯೦. ಸಣ್ಣ ಸುಖವನ್ನು ಬಿಟ್ಟ ಮಾತ್ರದಿಂದ ಹೆಚ್ಚಿನ ಸುಖವಾಗುವದೆಂದು ಕಂಡುಬಂದರೆ, ಜಾಣನಾದವನು ಹೆಚ್ಚಿನ ಸುಖವನ್ನು ಲಕ್ಷ್ಯದಲ್ಲಿಟ್ಟು ಅಲ್ಪ ಸುಖವನ್ನು ಬಿಟ್ಟುಬಿಡಬೇಕು.

ಪರದುಕ್ಖೂಪದಾನೇನ ಯೋತ್ತನೋ ಸುಖಂ ಇಚ್ಛತಿ
ವೇರಸಂಸಗ್ಗ ಸಂಸಟ್ಠೋ ವೇರಾ ಸೊ ನ ಪರಿಮುಚ್ಚತಿ ||೨೯೧||

೨೯೧. ಮತ್ತೊಬ್ಬರಿಗೆ ದುಃಖವನ್ನುಂಟುಮಾಡುವದರಿಂದ ತನಗೆ ಸುಖ

ವಾಗಬೇಕೆಂದು ಯಾವನು ಇಚ್ಛಿಸುವನೋ ವೈರದ ಸಂಬಂಧದಲ್ಲಿಯೇ ಇರುವ ಅವನು ವೈರದಿಂದ ಮುಕ್ತನಾಗುವದಿಲ್ಲ.

**ಯಜ್ ಹಿ ಕಿಚ್ಚಜ್ ತದ್ ಅಪವಿದ್ಧಜ್ ಅಕಿಚ್ಚಂ ಪನ ಕಯಿರತಿ**
**ಉನ್ನಳಾನಜ್ ಪಮತ್ತನಜ್ ತೇಸಜ್ ವಡ್ಢಂತಿ ಆಸವಾ** ||೨೯೨||

೨೯೨. ಯಾವದು ಮಾಡತಕ್ಕದ್ದೋ ಅದನ್ನು ಬಿಟ್ಟು, ಮಾಡಬಾರದ್ದನ್ನು ಯಾರು ಮಾಡುತ್ತಿರುವರೋ, ಮೇರೆದಪ್ಪಿ ಮದಿಸಿರುವ ಅಂಥವರ **ಆಸ್ರವ**ಗಳು* ಹೆಚ್ಚುವವು.

**ಯೇಸಜ್ ಚ ಸುಸಮಾರದ್ಧಾ ನಿಚ್ಚಜ್ ಕಾಯಗತಾ ಸತೀ**
**ಅಕಿಚ್ಚಜ್ ತೇ ನ ಸೇವಂತಿ ಕಿಚ್ಚೇ ಸಾತಚ್ಚಕಾರಿನೋ**
**ಸತಾನಜ್ ಸಂಪಜಾನಾನಜ್ ಅತ್ಥಜ್ ಗಚ್ಛಂತಿ ಆಸವಾ** ||೨೯೩||

೨೯೩. ಯಾರಿಗೆ **ಕಾಯಗತವಾದ ಸ್ಮೃತಿಯು**† ಯಾವಾಗಲೂ ಸಿದ್ಧವಾಗಿರುವದೋ ಅವರು ಅಕೃತ್ಯವನ್ನು ಮಾಡರು, ಕರ್ತವ್ಯವನ್ನು ಯಾವಾಗಲೂ ಮಾಡುವರು. **ಸ್ಮೃತಿ**ಯೂ **ಸಂಪ್ರಜನ್ಯ**ವೂ‡ ಉಳ್ಳ ಅವರ **ಆಸ್ರವ**ಗಳು ಅಸ್ತವಾಗುವವು(ಇಲ್ಲವಾಗುವವು).

**ಮಾತಾರಜ್ ಪಿತರಜ್ ಹಂತ್ವಾ ರಾಜಾನೋ ದ್ವೇ ಚ ಖತ್ತಿಯೇ**
**ರಟ್ಠಜ್ ಸಾನಚೂರಜ್ ಹಂತ್ವಾ ಅನೀಘೋ ಯಾತಿ ಬ್ರಾಹ್ಮಣೋ** ||೨೯೪||¶

೨೯೪. ತಾಯಿಯನ್ನೂ ತಂದೆಯನ್ನೂ ಕೊಂದು, ಇಬ್ಬರು ಕ್ಷತ್ರಿಯ ರಾಜರನ್ನು ಕೊಂದು, ಅನುಜರ ಸಹಿತವಾದ ರಾಷ್ಟ್ರವನ್ನು ಕೊಂದು **ಬ್ರಾಹ್ಮಣನು** ದುಃಖರಹಿತನಾಗುವನು.

* ಕಾಮ, ಭವ, ಅವಿದ್ಯೆ, ದೃಷ್ಟಿ - ಮುಂತಾದ ಮಲಗಳು.

† ಶರೀರವು ಕ್ಷಣಭಂಗುರವಾದದ್ದು, ಮಲಿನವಾದದ್ದು, ದುಃಖಮಯವಾದದ್ದು. ಎಂದು ಮುಂತಾಗಿ ತಿಳಿದಿರುವದು **ಕಾಯಗಳ ಸ್ಮೃತಿ**ಯೆನಿಸುವದು. ಮಧ್ಯಮನಿಕಾಯದಲ್ಲಿ ಕಾಯಗತಸ್ಮೃತಿಯನ್ನು ವಿಸ್ತಾರವಾಗಿ ವರ್ಣಿಸಿರುವ ಸೂತ್ರವೊಂದಿದೆ.

‡ ಸರಿಯಾದ ಎಚ್ಚರಿಕೆಯ ತಿಳಿವು.

§ ಆಸ್ರವಗಳೆಲ್ಲ ಕ್ಷಯವಾಗುವ ಬಗೆಯನ್ನು ಮಧ್ಯಮನಿಕಾಯದ **ಸರ್ವಾಸವ ಸೂತ್ರಾಂತ**ದಲ್ಲಿ ವರ್ಣಿಸಿರುತ್ತದೆ.

¶ ಈ ಗಾಥೆಯಲ್ಲಿರುವ ಮಾತುಗಳಿಗೆ ಅಕ್ಷರಾರ್ಥವನ್ನು ಮಾಡಬಾರದು.

ಮಾತಾರಜ್ ಪಿತರಜ್ ಹಂತ್ವಾ ರಾಜಾನೋ ದ್ವೇ ಚ ಸೊತ್ಥಿಯೇ
ವೆಯ್ಯಗ್ಘಪಂಚಮಜ್ ಹಂತ್ವಾ ಅನೀಘೋ ಯಾತಿ ಬ್ರಾಹ್ಮಣೋ ||೨೯೫||*

೨೯೫. ತಾಯಿಯನ್ನು ತಂದೆಯನ್ನೂ ಕೊಂದು, ಇಬ್ಬರು ಶ್ರೋತ್ರಿಯ ರಾಜರನ್ನು ಕೊಂದು, ಐದನೆಯದಾದ ಹುಲಿಯನ್ನು ಕೊಂದು, **ಬ್ರಾಹ್ಮಣನು** ದುಃಖರಹಿತನಾಗುವನು.

ಸುಪ್ಪಬುದ್ಧಜ್ ಪಬುಜ್ಝಂತಿ ಸದಾ ಗೋತಮಸಾವಕಾ
ಯೇಸಜ್ ದಿವಾ ಚ ರತ್ತೋ ಚ ನಿಚ್ಚಜ್ ಬುದ್ಧಗತಾ ಸತಿ ||೨೯೬||

೨೯೬. **ಗೌತಮನ ಶ್ರಾವಕರು**† ಯಾವಾಗಲೂ ಪೂರ ಎಚ್ಚರವಾಗಿಯೇ ಇರುವರು ; ಅವರಿಗೆ ಹಗಲೂ ಇರುಳೂ ನಿತ್ಯವಾಗಿ **ಬುದ್ಧನಲ್ಲಿಯೇ ಸ್ಮೃತಿ**‡ ಇರುವದು.

ಸುಪ್ಪಬುದ್ಧಜ್ ಪಬುಜ್ಝಂತಿ ಸದಾ ಗೋತಮಸಾವಕಾ
ಯೇಸಜ್ ದಿವಾ ಚ ರತ್ತೋ ಚ ನಿಚ್ಚಜ್ ಧಮ್ಮಗತಾ ಸತಿ ||೨೯೭||

೨೯೭. **ಗೌತಮನ ಶ್ರಾವಕರು** ಯಾವಾಗಲೂ ಪೂರ ಎಚ್ಚರವಾಗಿಯೇ ಇರುವರು ; ಅವರಿಗೆ ಹಗಲೂ ಇರುಳೂ ನಿತ್ಯವಾಗಿ **ಧರ್ಮದಲ್ಲಿಯೇ ಸ್ಮೃತಿ**‡ ಇರುವದು.

ನಿಸ್ತ್ರೈಗುಣ್ಯರಾದವರು ವಿಧಿನಿಷೇಧಗಳನ್ನು ಮೀರುವರೆಂದು ವೇದಾಂತಿಗಳು ಹೇಳುವಂತೆ ಬೌದ್ಧರು ಅರ್ಹಂತರ ವಿಷಯವಾಗಿ ಹೇಳುವದಿಲ್ಲ. ಇಲ್ಲಿ ತಾಯಿಯೆಂದರೆ **ತೃಷ್ಣೆ,** ತಂದೆಯೆಂದರೆ **ಅಸ್ಮಿಮಾನ** (ಅಹಂಕಾರ) **ಶಾಶ್ವತದೃಷ್ಟಿ, ಉಚ್ಛೇದದೃಷ್ಟಿ** - ಇವುಗಳೇ ರಾಜರು, **ದ್ವಾದಶಾಯತನ**ಗಳೇ ರಾಷ್ಟ್ರ, **ನಂದೀರಾಗವೇ** (ವಿಷಯೋಪಭೋಗದ ಇಚ್ಛೆಯೇ) ಅನುಚರನು, **ವಿಚಿಕಿತ್ಸಾ** ಎಂಬ ಐದನೇ **ನೀವರಣವೇ** ಹುಲಿಯು. ಬ್ರಾಹ್ಮಣನೆಂದರೆ ಅರಹಂತನ ಹಿಂದಿನ ಪುಟದ ¶ ಟಿಪ್ಪಣಿಯನ್ನು ನೋಡಿ.

† ೨೯೬ರಿಂದ ೩೦೧ರವರೆಗಿನ ಗಾಥೆಗಳಲ್ಲಿ ಗೌತಮಬುದ್ಧನ ಶಿಷ್ಯರು ಹೇಗೆ ಸಾಧನ ಮಾಡುತ್ತಿರಬೇಕೆಂಬುದನ್ನು ತಿಳಿಸಿದೆ.

‡ ಬುದ್ಧಾನುಸ್ಮೃತಿ, ಧರ್ಮಾನುಸ್ಮೃತಿ, ಸಂಘಾನುಸ್ಮೃತಿ - ಮುಂತಾದ ಹತ್ತು ಅನುಸ್ಮೃತಿಗಳನ್ನು ಭಿಕ್ಷುವು ಸಾಧನಮಾಡಬೇಕೆಂದು ಬೌದ್ಧರ ಉಪದೇಶವು. ಬುದ್ಧನ ಕಲ್ಯಾಣಗುಣಗಳನ್ನು ಚಿಂತಿಸುವದು ಬುದ್ಧಾನುಸ್ಮೃತಿಯು ; ಬೌದ್ಧಧರ್ಮದ ಉತ್ತಮ ಸ್ವಭಾವವನ್ನು ಚಿಂತಿಸುತ್ತಿರುವದು ಧರ್ಮಾನುಸ್ಮೃತಿಯು ; ಸಂಘದ ಉತ್ತಮಗುಣಗಳನ್ನು ಸ್ಮರಣ ಮಾಡುವದು ಸಂಘಾನುಸ್ಮೃತಿಯು.

ಸುಪ್ಪಬುದ್ಧಙ್ ಪಬುಜ್ಝಂತಿ ಸದಾ ಗೋತಮಸಾವಕಾ,
ಯೇಸಙ್ ದಿವಾ ಚ ರತ್ತೋ ಚ ನಿಚ್ಚಙ್ ಸಂಘಗತಾ ಸತಿ ॥೨೯೮॥

೨೯೮. **ಗೌತಮನ ಶ್ರಾವಕರು** ಯಾವಾಗಲೂ ಪೂರ ಎಚ್ಚರವಾಗಿಯೇ ಇರುವರು ; ಅವರಿಗೆ ಹಗಲೂ ಇರುಳೂ ನಿತ್ಯವಾಗಿ **ಸಂಘದಲ್ಲಿಯೇ ಸ್ಮೃತಿ*** ಇರುವದು.

ಸುಪ್ಪಬುದ್ಧಙ್ ಪಬುಜ್ಝಂತಿ ಸದಾ ಗೋತಮಸಾವಕಾ
ಯೇಸಙ್ ದಿವಾ ಚ ರತ್ತೋ ಚ ನಿಚ್ಚಙ್ ಕಾಯಗತಾ ಸತಿ ॥೨೯೯॥

೨೯೯. **ಗೌತಮನ ಶ್ರಾವಕರು** ಯಾವಾಗಲೂ ಪೂರ ಎಚ್ಚರವಾಗಿಯೇ ಇರುವರು ; ಅವರಿಗೆ ಹಗಲೂ ಇರಳೂ ನಿತ್ಯವಾಗಿ **ಕಾಯದಲ್ಲಿಯೇ ಸ್ಮೃತಿ** ಇರುವದು.†

ಸುಪ್ಪಬುದ್ಧಙ್ ಪಬುಜ್ಝಂತಿ ಸದಾ ಗೋತಮಸಾವಕಾ
ಯೇಸಙ್ ದಿವಾ ಚ ರತ್ತೋ ಚ ಅಹಿಂಸಾಯ ರತೋ ಮನೋ ॥೩೦೦॥

೩೦೦. **ಗೌತಮನ ಶ್ರಾವಕರು** ಯಾವಾಗಲೂ ಪೂರ ಎಚ್ಚರವಾಗಿಯೇ ಇರುವರು ; ಅವರಿಗೆ ಹಗಲೂ ಇರುಳೂ **ಅಹಿಂಸೆ**ಯಲ್ಲಿಯೇ ಮನಸ್ಸು ನಿರತವಾಗಿರುವದು.

ಸುಪ್ಪಬುದ್ಧಙ್ ಪಬುಜ್ಝಂತಿ ಸದಾ ಗೋತಮಸಾವಕಾ
ಯೇಸಙ್ ದಿವಾ ಚ ರತ್ತೋ ಚ ಭಾವನಾಯ ರತೋ ಮನೋ ॥೩೦೧॥

೩೦೧. **ಗೌತಮನ ಶ್ರಾವಕರು** ಯಾವಾಗಲೂ ಪೂರ ಎಚ್ಚರವಾಗಿಯೇ ಇರುವರು ; ಅವರಿಗೆ ಹಗಲೂ ಇರುಳೂ **ಭಾವನೆ**ಯಲ್ಲಿಯೇ‡ ಮನಸ್ಸು ನಿರತವಾಗಿರುವದು.

ದುಪ್ಪಬ್ಬಜ್ಜಙ್ ದಿರಭಿರಮಙ್ ದುರಾವಾಸಾ ಘರಾ ದುಕ್ಖಾ
ದುಕ್ಖೋಸಮಾನಸಂವಾಸೋ ದುಕ್ಖಾನುಪತಿತದ್ಧಗೂ
ತಸ್ಮಾ ನ ಚದ್ಧಗೂ ಸಿಯಾ ದುಕ್ಖಾನುಪತಿತೋ ಸಿಯಾ ॥೩೦೨॥

* ಹಿಂದಿನ ಪುಟದ ‡ ಟಿಪ್ಪಣಿಯನ್ನು ನೋಡಿ.

† ಶರೀರವು ಅನಿತ್ಯವೆಂದೂ ದುಃಖದಾಯಕವೆಂದೂ ಮಾಯಿಕವೆಂದೂ ತಿಳಿಸುವ ಸ್ಮೃತಿ.

‡ ಮೈತ್ರೀಭಾವನೆಯೆಂದು ವ್ಯಾ॥.

೩೦೨.* ಬಿಟ್ಟು ಹೋಗುವದೂ ಕಷ್ಟ, ಪ್ರೀತಿಮಾಡುವದೂ ಕಷ್ಟ, ಅಲ್ಲಿಯೇ ವಾಸವಾಗಿರುವದೂ ಕಷ್ಟ - ಮನೆಯೆಂಬುದೇ ದುಃಖವು. ಸಮಾನರಲ್ಲದವರೊಡನೆ ವಾಸವಾಗಿರುವದು ದುಃಖವು. ದಾರಿಹೋಕನು† ಯಾವಾಗಲೂ ದುಃಖದಲ್ಲಿಯೇ ಬಿದ್ದಿರುವನು. ಆದ್ದರಿಂದ ದಾರಿಹೋಕನಾಗಬಾರದು, ದುಃಖದಲ್ಲಿ ಬೀಳಬಾರದು.

**ಸದ್ಧೋ ಸೀಲೇನ ಸಂಪನ್ನೋ ಯಸೋ ಭೋಗಸಮಪ್ಪಿತೋ**
**ಯಙ್ ಯಙ್ ಪದೇಸಙ್ ಭಜತಿ ತತ್ಥ ತತ್ಥೇವ ಪೂಜಿತೋ** ||೩೦೩||

೩೦೩. ಶ್ರದ್ಧೆಯಳ್ಳವನೂ ಶೀಲವಂತನೂ ಕೀರ್ತಿಯ ಭೋಗವುಳ್ಳವನೂ ಆಗಿರುವಾತನು ಯಾವ ಯಾವ ಸ್ಥಳಕ್ಕೆ ಹೋದರೆ ಅಲ್ಲಲ್ಲಿಯೇ ಪೂಜಿತನಾಗಿರುವನು.

**ದೂರೇ ಸಂತೊ ಪಕಾಸಂತಿ ಹಿಮವಂತೋ ವ ಪಬ್ಬತೋ**
**ಅಸಂತೆತ್ಥ ನ ದಿಸ್ಸಂತಿ ರತ್ತಿಖಿತ್ತಾ ಯಥಾ ಸರಾ** ||೩೦೪||

೩೦೪. ಸತ್ಪುರುಷರು ದೂರದಲ್ಲಿದ್ದರೂ ಹಿಮವತ್ಪರ್ವತದಂತೆ ಬೆಳಗುತ್ತಿರುವರು. ಕೆಟ್ಟವರು ಇಲ್ಲಿಯೇ ಇದ್ದರೂ ಇರುಳಿನಲ್ಲಿ ಎಸೆದ ಬಾಣಗಳಂತೆ ಕಣ್ಣಿಗೆ ಬೀಳುವದಿಲ್ಲ.

**ಏಕಾಸನಙ್ ಏಕಸೆಯ್ಯಙ್ ಏಕೋ ಚರಂ ಅತಂದಿತೋ**
**ಏಕೋ ದಮಯಂ ಅತ್ತಾನಙ್ ವನಂತೇ ರಮಿತೋ ಸಿಯಾ** ||೩೦೫||

೩೦೫. ಒಂಟಿಯಾಗಿ ಕುಳಿತು, ಒಂಟಿಯಾಗಿ ಮಲಗುತ್ತಾ ಒಂಟಿಯಾಗಿ ಸಂಚರಿಸುತ್ತಾ, ಆಲಸ್ಯರಹಿತನಾಗಿ ತನ್ನನ್ನು ತಾನೇ ತಿದ್ದಿಕೊಳ್ಳುತ್ತಾ ವನಪ್ರದೇಶದಲ್ಲಿ ರತಿಯುಳ್ಳವನಾಗಿರಬೇಕು.

* ಈ ಗಾಥೆಯನ್ನು ಕನ್ನಡಿಸುವದು ಕಷ್ಟವಾಗಿದೆ. ಒಬ್ಬೊಬ್ಬರು ಒಂದೊಂದು ಅರ್ಥವನ್ನು ಕೊಟ್ಟಿರುತ್ತಾರೆ. ಮೇಲೆ ಕೊಟ್ಟಿರುವ ಪರಿವರ್ತನೆಯಲ್ಲಿ ದುಪ್ಪವ್ವಜ್ಜಂ ದುರಭಿರಮಂ ದುರಾವಾಸಂ - ಎಂಬ ಮಾತುಗಳನ್ನು ಗೃಹವೆಂಬ ಮಾತಿಗೆ ವಿಶೇಷಣವಾಗಿಟ್ಟುಕೊಂಡಿರುತ್ತದೆ 'ದುಃಖೋಽಸಮಾನಸಂವಾಸೋ ದುಃಖಾನುಪತಿತೋಽಧ್ವಗ ಎಂದೇ ಎರಡನೆಯ ಪಾದವನ್ನು ಇಟ್ಟುಕೊಂಡಿದೆ. † ಸಂಸಾರಿಯ ಹಾದಿಯಲ್ಲಿ ನಡೆಯುವವನು.

# ೨೨. ನಿರಯವರ್ಗ (ನಿರಯವಗ್ಗ)

**ಅಭೂತವಾದೀ ನಿರಯಙ್ ಉಪೇತಿ**
**ಯೋ ಚಾ ಪಿ ಕತ್ವಾನ ಕರೋಮಿ ಚಾಹ**
**ಉಭೋ ಪಿ ತೇ ಪೆಚ್ಚ ಸಮಾ ಭವಂತಿ**
**ನಿಹೀನಕಮ್ಮಾ ಮನುಜಾ ಪರತ್ಥ** ॥೩೦೬॥

೩೦೬. ಇಲ್ಲದ್ದನ್ನು ಹೇಳುವವನು* ನರಕಕ್ಕೆ ಹೋಗುವವನು† ಯಾವನು ತಾನು ಮಾಡಿದ್ದನ್ನು ಮಾಡಿಲ್ಲವೆನ್ನುವನೋ ಅವನೂ (ನರಕಕ್ಕೆ ಹೋಗುವನು,) ನೀಚಕರ್ಮವನ್ನು ಮಾಡಿದ ಅವರಿಬ್ಬರೂ ಸತ್ತಮೇಲೆ ಪರಲೋಕದಲ್ಲಿ ಸಮಾನರಾಗುವರು.

**ಕಾಸಾವಕಂಥಾ ಬಹವೋ ಪಾಪಧಮ್ಮಾ ಅಸಞ್ಞತಾ**
**ಪಾಪಾ ಪಾಪೇಹಿ ಕಮ್ಮೇಹಿ ನಿರಯಙ್ ತೇ ಉಪಪಜ್ಜರೇ** ॥೩೦೭॥

೩೦೭. ಕುತ್ತಿಗೆಯವರೆಗೆ ಕಾಷಾಯವನ್ನು ಧರಿಸಿ ಪಾಪವನ್ನೇ ಮಾಡುತ್ತಾ ಅಸಂಯಮಿಗಳಾಗಿರುವವರು ಅನೇಕರುಂಟು. ಆ ಪಾಪಿಗಳು ತಮ್ಮ ಪಾಪಗಳಿಂದ ನರಕದಲ್ಲಿ ಹುಟ್ಟುವರು.

**ಸೆಯ್ಯೋ ಅಯೋಗುಳೋ ಭುತ್ತೋ ತತ್ತೋ ಅಗ್ಗಿಸಿಖೂಪಮೋ**
**ಯಞ್ ಚೆ ಭುಂಜೆಯ್ಯ ದುಸ್ಸೀಲೋ ರಟ್ಠಪಿಂಡಙ್ ಅಸಞ್ಞತೋ** ॥೩೦೮॥

೩೦೮. ದುಃಶೀಲನಾಗಿ ಸಂಯಮವಿಲ್ಲದೆ ರಾಷ್ಟ್ರದವರು ಕೊಟ್ಟ ಅನ್ನವನ್ನು ಉಣ್ಣುವದಕ್ಕಿಂತಲೂ ಬೆಂಕಿಯ ಜ್ವಾಲೆಯಂತೆ ಕೆಂಪಗೆ ಕಾದಿರುವ ಕಬ್ಬಿಣದ ಗುಂಡನ್ನು ನುಂಗುವದು ಮೇಲು.

**ಚತ್ತಾರಿ ಠಾನಾನಿ ನರೋ ಪಮತ್ತೋ**
**ಆಪಜ್ಜತೀ ಪರದಾರೂಪಸೇವೀ**

* ಇಲ್ಲದ ತಪ್ಪನ್ನು ಪರರ ಮೇಲೆ ಹೊರಿಸುವವನು.

† ಭಿಕ್ಷಾನ್ನವನ್ನು ತಿಂದು ದುಃಶೀಲನಾಗಿ ನಡೆಯುವ ಭಿಕ್ಷುವು ನರಕದಲ್ಲಿ ಕಾದ ಕಬ್ಬಿಣವನ್ನು ನುಂಗಬೇಕಾಗುವದೆಂಬ ಸೂಚನೆಯೆಂದು ತೋರುವದು. ನಿರಯವೆಂಬ ನರಕಗಳು ವೈದಿಕಮತದಲ್ಲಿ ಹೇಗೋ ಹಾಗೆ ಬೌದ್ಧಮತದಲ್ಲಿಯೂ ಅನಿತ್ಯವೇ ; ಮಾಡಿದ ಪಾಪಕ್ಕೆ ಫಲವನ್ನುಂಡ ಮೇಲೆ ಅವು ಮುಗಿದುಬಿಡುವವು. ಸ್ವರ್ಗವಾಗಲಿ ನರಕವಾಗಲಿ ನಿತ್ಯವೆಂದು ಬೌದ್ಧರು ಹೇಳುವದಿಲ್ಲ.

**ಅಪುಞ್ಞಲಾಭಞ್ ನ ನಿಕಾಮಸೆಯ್ಯಞ್**
**ನಿಂದಞ್ ತತೀಯಞ್ ನಿರಯಞ್ ಚತುತ್ಥಞ್** ||೩೦೯||

೩೦೯. ಮದಾಂಧನಾಗಿ ಮತ್ತೊಬ್ಬನ ಹೆಂಡತಿಯನ್ನು ಗಮಿಸುವಾತನು ನಾಲ್ಕು ಗತಿಗಳನ್ನು ಪಡೆಯುವನು : ಪಾಪದ ಪ್ರಾಪ್ತಿ, ಸುಖನಿದ್ರೆಯಿಲ್ಲದೆ ಇರುವದು, ನಿಂದೆಯೆಂಬ ಮೂರನೆಯ ಗತಿ, ನರಕವೆಂಬ ನಾಲ್ಕನೆಯ ಗತಿ.

**ಅಪುಞ್ಞಲಾಭೊ ಚ ಗತೀ ಚ ಪಾಪಿಕಾ**
**ಭೀತಸ್ಸ ಭೀತಾಯ ರತೀ ಚ ಥೋಕಿಕಾ**
**ರಾಜಾ ಚ ದಂಡಞ್ ಗರುಕಞ್ ಪಣೇತಿ**
**ತಸ್ಮಾ ನರೋ ಪರದಾರಞ್ ನ ಸೇವೇ** ||೩೧೦||

೩೧೦. ಪಾಪವು ಬರುವದು, ಕೆಟ್ಟಗತಿಯಾಗುವದು, ಹೆದರಿಕೊಂಡಿರುವಾಕೆಯಲ್ಲಿ ಹೆದರಿಕೊಂಡಿರುವಾತನು ಅನುಭವಿಸುವ ರತಿಯು ಅಲ್ಪವಾಗಿರುವದು, ಅರಸರು ಮಾಡುವ ಭಾರಿಯ ದಂಡವೂ ಅವನಿಗಾಗುವದು. ಆದ್ದರಿಂದ ಮನುಷ್ಯನು ಮತ್ತೊಬ್ಬರ ಹೆಂಡತಿಯನ್ನು ಸೇರಬಾರದು.

**ಕುಸೋ ಯಥಾ** ದುಗ್ಗಹಿತೋ ಹತ್ಥಂ ಏವಾನುಕಂತತಿ
**ಸಾಮಞ್ಞಞ್ ದುಪ್ಪರಾಮಟ್ಠಞ್ ನಿರಯಾಯುಪಕಡ್ಢತಿ** ||೩೧೧||

೩೧೧. ಸರಿಯಾಗಿ ಹಿಡಿದುಕೊಳ್ಳದೆ ಇದ್ದರೆ ಕುಶವು ಹೇಗೆ ಕೈಯನ್ನೇ ಕೊಯ್ಯುವದೋ, ಆದರಂತೆ **ಶ್ರಾಮಣ್ಯ**ವನ್ನು* ಸರಿಯಾಗಿ ಅನುಸರಿಸದೆ ಇದ್ದರೆ ಅದು ನರಕಕ್ಕೆಳೆದೊಯ್ಯುವದು.

**ಯಞ್ ಕಿಂಚಿ ಸಿಥಿಲಞ್ ಕಮ್ಮಞ್**
**ಸಂಕಿಲಿಟ್ಠಞ್ ಚ ಯಞ್ ವತಞ್**
**ಸಂಕಸ್ಸರಞ್ ಬ್ರಹ್ಮಚರಿಯಞ್**
**ನ ತಞ್ ಹೋತಿ ಮಹಪ್ಫಲಞ್** ||೩೧೨||

೩೧೨. ಯಾವ ಕರ್ಮವು ಶಿಥಿಲವಾಗಿರುವದೋ, ಯಾವ ವ್ರತವು ಕ್ಲೇಶಗಳಿಂದೊಡಗೂಡಿರುವದೋ, ಯಾವ ಬ್ರಹ್ಮಚರ್ಯವು ಮತ್ತೊಬ್ಬರಿಗೆ ಅಂಜಿ ಮಾಡಿದ್ದೋ -* ಈ ಯಾವದಕ್ಕೂ ಹೆಚ್ಚಿನ ಫಲವಾಗಲಾರದು.

ಸಂಸ್ಕಾ: † 'ಸಂಘದವರು ನನ್ನ ಚರ್ಯೆಯನ್ನು ಕಂಡು ನನ್ನನ್ನೆಲ್ಲಿ ಹೊರಗೆ ಹಾಕುವರೋ ಎಂಬ ಶಂಕೆಯಿಂದ ಮಾಡಿದ ಬ್ರಹ್ಮಚರ್ಯೆ'. ವ್ಯಾ

**ಕಯಿರಾ ಚೆ ಕರಿರಾಥೇತಜ್ ದಳ್ಹಂ ಏನಂ ಪರಕ್ಕಮೆ**
**ಸಠಿಲೋ ಹಿ ಪರಿಬ್ಬಾಜೋ ಭೀಯೋ ಆತಿರತೆ ರಜಜ್** ||೩೧೩||

೩೧೩. ಮಾಡಿದರೆ ಇದನ್ನು ಚೆನ್ನಾಗಿ ಮಾಡಬೇಕು, ದೃಢಪರಾಕ್ರಮದಿಂದ ಇದನ್ನು ಅನುಸರಿಸಬೇಕು. ಯಾವ **ಪರಿವ್ರಾಜಕ**ನು* ಸಡಿಲವಾಗುವನೋ ಅವನು ಮತ್ತೂ ಧೂಳನ್ನೇ† ಮೈಮೇಲೆ ಹಾಕಿಕೊಳ್ಳುವನು.

**ಅಕತಜ್ ದುಕ್ಕತಜ್ ಸೆಯ್ಯೋ ಪಚ್ಛಾ ತಪತಿ ದುಕ್ಕತಜ್**
**ಕತಜ್ ಚ ಸುಕತಜ್ ಸೆಯ್ಯೋ ಯಜ್ ಕತ್ವಾ ನಾನುತಪ್ಪತಿ** ||೩೧೪||

೩೧೪. ದುಷ್ಕೃತ್ಯವನ್ನು ಮಾಡದಿದ್ದರೆ ಒಳ್ಳೆಯದು, ದುಷ್ಕೃತ್ಯವು ಆಮೇಲೆ ಪಶ್ಚಾತ್ತಾಪವನ್ನುಂಟುಮಾಡುವದು ; ಸುಕೃತವನ್ನು ಮಾಡುವದೊಳ್ಳೆಯದು, ಅದನ್ನು ಮಾಡಿದರೆ ಪಶ್ಚಾತ್ತಾಪ ಪಡಬೇಕಾದದ್ದಿರುವದಿಲ್ಲ.

**ನಗರಜ್ ಯಥಾ ಪಚ್ಚಂತಜ್ ಗುತ್ತಜ್ ಸಂತರ ಬಾಹಿರಜ್**
**ಏವಜ್ ಗೋಪೆಥಾ ಅತ್ತಾನಜ್ ಖಣೋ ವೆ ಮಾ ಉಪಚ್ಚಗಾ**
**ಖಣಾತೀತಾ ಹಿ ಸೋಚಂತಿ ನಿರಯಂಹಿ ಸಮಪ್ಪಿತಾ** ||೩೧೫||

೩೧೫. ದೇಶದ ಕೊನೆಯಲ್ಲಿರುವ ಕೋಟೆಯನ್ನು ಹೇಗೆ ಒಳಗೂ ಹೊರಗೂ ಕಾವಲಿಟ್ಟು ನೋಡಿಕೊಳ್ಳುವರೋ ಅದರಂತೆ ತನ್ನನ್ನು ತಾನು ಕಾಪಾಡಿಕೊಳ್ಳಬೇಕು. **ಕ್ಷಣ**ವನ್ನು‡ ಕಳೆದುಕೊಳ್ಳಬಾರದು. ಕ್ಷಣವನ್ನು ಕಳೆದುಕೊಂಡವರು **ನಿರಯ**ಕ್ಕೆ ಪಕ್ಕಾಗಿ ಶೋಕಿಸುವರು.

* ಸಂನ್ಯಾಸಿ.

† ರಾಗಾದಿಮಲವನ್ನು.

‡ ಬುದ್ಧೋಪದೇಶವನ್ನು ಪಡೆದು ಕೃತಕೃತ್ಯನಾಗುವ ಕ್ಷಣವು. ಮನುಷ್ಯನು ನರಕ, ಪ್ರೇತ, ತಿರ್ಯಕ್ಪ್ರಾಣಿ, ಮ್ಲೇಚ್ಛ - ಮುಂತಾದ ಜನ್ಮಗಳನ್ನೇ ಪಡೆಯುತ್ತಿರುವದರಿಂದ ಮನುಷ್ಯನಾಗಿ ಬುದ್ಧೋಪದೇಶವನ್ನು ಪಡೆಯುವದಕ್ಕೆ ಬೇಕಾದ ಕರ್ಮವನ್ನು ಮಾಡುವ ಕ್ಷಣವು ದೊರೆಯುವದು ಬಲುಕಷ್ಟ. ಎಷ್ಟೋ ವರ್ಷಗಳಾದ ಮೇಲೆ ಒಂದು ಸಲ ಒಂದು ಆಮೆಯು ಸಮುದ್ರದ ಮೇಲಕ್ಕೆ ಬರುವದಾಗಿದ್ದರೆ, ಅದು ಸಮುದ್ರದ ಮೇಲೆ ತೇಲಾಡುತ್ತಿರುವ ನೊಗದ ಕಣ್ಣಿನಲ್ಲಿ ತನ್ನ ತಲೆಯನ್ನು ಹಾಕಿ ಹೊರಕ್ಕೆ ನೋಡುವ ಸಂಭವವು ಎಷ್ಟು ಕಡಿಮೆಯೋ ಬುದ್ಧೋಪದೇಶವನ್ನು ಪಡೆದು ಕೃತಕೃತ್ಯನಾಗುವ ಸಂಭವವೂ ಅಷ್ಟು ಕಡಿಮೆಯೆಂದು ಬೌದ್ಧರು ಹೇಳುತ್ತಾರೆ.

**ಅಲಜ್ಜಿತಾಯೆ ಲಜ್ಜಂತಿ ಲಜ್ಜಿತಾಯೆ ನ ಲಜ್ಜರೆ**
**ಮಿಚ್ಛಾದಿಟ್ಠಿಸಮಾದಾನಾ ಸತ್ತಾ ಗಚ್ಛಂತಿ ದುಗ್ಗತಿಙ್** ||೩೧೬||

೩೧೬. ಯಾರು ನಾಚಿಕೆಪಡಬೇಕಾದದ್ದಿಲ್ಲದ್ದಕ್ಕೆ ನಾಚಿಕೆ ಪಡುತ್ತಾ ನಾಚಿಕೆ ಪಡಬೇಕಾದ್ದಕ್ಕೆ ನಾಚಿಕೆಪಡದೆ ಇರುವರೋ **ಮಿಥ್ಯಾದೃಷ್ಟಿ**ಯಿಂದ ಕೂಡಿದ ಆ ಪ್ರಾಣಿಗಳು ದುರ್ಗತಿಯನ್ನು ಹೊಂದುವರು.

**ಅಭಯೇ ಚ ಭಯದಸ್ಸಿನೋ ಭಯೇ ಚಾಭಯದಸ್ಸಿನೋ**
**ಮಿಚ್ಛಾದಿಟ್ಠಿಸಮಾದಾನಾ ಸತ್ತಾ ಗಚ್ಛಂತಿ ದುಗ್ಗತಿಙ್** ||೩೧೭||

೩೧೭. ಯಾರು ಭಯರಹಿತವಾದದ್ದಕ್ಕೆ ಅಂಜುತ್ತಲೂ ಭಯಪಡ ಬೇಕಾದದ್ದಕ್ಕೆ ಅಂಜದೆಯೂ ಇರುವರೋ **ಮಿಥ್ಯಾದೃಷ್ಟಿ**ಯಿಂದ ಕೂಡಿದ ಆ ಪ್ರಾಣಿಗಳು ದುರ್ಗತಿಯನ್ನು ಹೊಂದುವರು.

**ಅವಜ್ಜೇ ವಜ್ಜಮಾತಿನೋ ವಜ್ಜೇ ಚಾವಜ್ಜದಸ್ಸಿನೋ**
**ಮಿಚ್ಛಾದಿಟ್ಠಿಸಮಾದಾನಾ ಸತ್ತಾ ಗಚ್ಛಂತಿ ದುಗ್ಗತಿಙ್** ||೩೧೮||

೩೧೮. ಯಾರು ಕೆಟ್ಟದ್ದಲ್ಲದ್ದನ್ನು ಕೆಟ್ಟದ್ದೆಂದು* ಎಣಿಸಿರುವರೋ ಕೆಟ್ಟದ್ದನ್ನು ಕೆಟ್ಟದ್ದಲ್ಲವೆಂದು ಎಣಿಸಿರುವರೋ **ಮಿಥ್ಯಾದೃಷ್ಟಿ**ಯಿಂದ ಕೂಡಿದ ಆ ಪ್ರಾಣಿಗಳು ದುರ್ಗತಿಯನ್ನು ಹೊಂದುವರು.

**ವಜ್ಜಞ್ ಚ ವಜ್ಜತೋ ಞತ್ವಾ ಅವಜ್ಜಞ್ ಚ ಅವಜ್ಜತೋ**
**ಸಮ್ಮಾದಿಟ್ಠಿಸಮಾದಾನಾ ಸತ್ತಾ ಗಚ್ಛಂತಿ ಸುಗ್ಗತಿಙ್** ||೩೧೯||

೩೧೯. ಯಾರು ಕೆಟ್ಟದ್ದನ್ನು ಕೆಟ್ಟದ್ದೆಂದೂ ಒಳ್ಳೆಯದನ್ನು ಒಳ್ಳೆಯ ದೆಂದೂ ತಿಳಿದುಕೊಂಡಿರುವರೋ **ಸಮ್ಯಗ್ದೃಷ್ಟಿ**ಯಿಂದ ಕೂಡಿದ ಆ ಪ್ರಾಣಿಗಳು ಸದ್ಗತಿಯನ್ನು ಹೊಂದುವರು.

* ೩೧೮, ೩೧೯ - ಈ ಮಾತನ್ನು ಗಾಥೆಗಳಲ್ಲಿಯೂ ಇರುವ ವಜ್ಜ, ಅವಜ್ಜ - ಎಂಬ ಮಾತುಗಳನ್ನು ವದ್ಯ, ಅವದ್ಯ - ಎಂಬಿವುಗಳ ತದ್ಭವವೆಂತ ಭಾವಿಸಿರುತ್ತದೆ ; ವರ್ಜ್ಯ, ಅವರ್ಜ್ಯ - ಎಂಬಿವುಗಳ ತದ್ಭವಗಳೆಂದು ಇಟ್ಟುಕೊಳ್ಳುವದಾದರೆ ಬಿಡಬೇಕಾದದ್ದು, ಬಿಡತಕ್ಕದ್ದಲ್ಲದ್ದು - ಎಂದು ಕನ್ನಡಿಸಬೇಕಾಗುವದು.

# ೨೩. ನಾಗವರ್ಗ (ನಾಗವಗ್ಗ)

**ಅಹಜ್ ನಾಗೋ ವ ಸಂಗಾಮೇ ಚಾಪಾತೋ ಪತಿತಜ್ ಸರಜ್**
**ಅತಿವಾಕ್ಯಜ್ ತಿತಿಕ್ಖಿಸ್ಸಜ್ ದುಸ್ಸೀಲೋ ಹಿ ಬಹುಜ್ಜನೋ ||೩೨೦||**

೩೨೦. ಆನೆಯು* ಯುದ್ಧದಲ್ಲಿ ಬಿಲ್ಲಿನಿಂದ ಬಿಟ್ಟಬಾಣವನ್ನು ಸಹಿಸಿ ಕೊಳ್ಳುವಂತೆ ನಾನು ಕೆಟ್ಟ ಮಾತನ್ನು ಸಹಿಸಿಕೊಳ್ಳುವೆನು · ಏಕೆಂದರೆ ದುಃಶೀಲರಾಗಿರುವ ಜನರೇ ಬಹಳ.

**ದಂತಜ್ ನಯಂತಿ ಸಮಿತಿಜ್ ದಂತಜ್ ರಾಜಾಭಿರೂಹತಿ**
**ದಂತೋ ಸೆಟ್ಠೋ ಮನುಸ್ಸೇಸು ಯೋತಿವಾಕ್ಯಜ್ ತಿತಿಕ್ಖತಿ ||೩೨೧||**

೩೨೧. ದಾಂತವಾದ ಆನೆಯನ್ನು ಯುದ್ಧಕ್ಕೊಯ್ಯುವರು, ದಾಂತವಾದ ಆನೆಯನ್ನೇ ಅರಸನು ಏರುವನು ; ಯಾವನು ಕೆಟ್ಟ ಮಾತನ್ನು ಸಹಿಸಿಕೊಳ್ಳ ಬಲ್ಲನೋ ಅಂಥ ದಾಂತನೇ ಮನುಷ್ಯರಲ್ಲಿ ಶ್ರೇಷ್ಠನು.

**ವರಂ ಅಸ್ಸತರಾ ದಂತಾ ಆಜನೀಯಾ ಚ ಸಿಂಧವಾ**
**ಕುಂಜರಾ ಮಹಾನಾಗಾ ಅತ್ತದಂತೋ ತತೋ ವರಜ್**
**ನ ಹಿ ಏತೇಹಿ ಯಾನೇಹಿ ಗಚ್ಛೆಯ್ಯ ಅಗತಜ್ ದಿಸಜ್**
**ಯಥಾತ್ತನಾ ಸುದಂತೇನ ದಂತೋ ದಂತೇನ ಗಚ್ಛತಿ ||೩೨೨-೩೨೩||**

೩೨೨-೩೨೩. ಹೇಸರುಗತ್ತೆಗಳಾಗಲಿ, ಜಾತಿಯ ಕುದುರೆಗಳಾಗಲಿ, ಮಹಾನಾಗಗಳೆನಿಸಿದ ಆನೆಗಳಾಗಲಿ ಸಾಧುಮಾಡಿದ ಮೇಲೆ ಶ್ರೇಷ್ಠವೆನಿಸುವವು. ತನ್ನನ್ನು ತಾನು ತಿದ್ದಿಕೊಂಡವನು ಇವೆಲ್ಲಕ್ಕಿಂತಲೂ ಮೇಲು. ಏಕೆಂದರೆ **ಹೋಗಿ ಪಡೆಯುವದಲ್ಲದ ದಿಕ್ಕನ**† (ನಿರ್ವಾಣವನ್ನು) ಈ ವಾಹನಗಳಿಂದ ಪಡೆಯುವ ದಕ್ಕೆ ಆಗಲಾರದು. ತನ್ನನ್ನು ತಾನು ಚೆನ್ನಾಗಿ ದಮನಮಾಡಿಕೊಂಡರೆ ದಾಂತನಾದ ತಾನು ದಾಂತನಾದ ತನ್ನಿಂದಲೇ ಅದನ್ನು ಪಡೆಯಬಹುದು.

* ಆನೆಯು ಇಂದ್ರಿಯನಿಗ್ರಹದ ಮತ್ತು ತಾಳ್ಮೆಯ ಗುರುತೆಂದು ಬೌದ್ಧರು ಭಾವಿಸುವರು. ಬುದ್ಧನನ್ನು 'ಮಹಾನಾಗ'ನೆಂದು ಕರೆಯುವ ರೂಢಿಯುಂಟು.

† ಮೋಕ್ಷವು ಉತ್ತರದಕ್ಷಿಣಯಾನಗಳಂತೆ ಹೋಗಿ ಪಡೆಯುವ ಗತಿಯಲ್ಲ ವೆಂದು ವೈದಿಕರು ಹೇಳುವಂತೆ ಬೌದ್ಧರೂ ನಿರ್ವಾಣವನ್ನು ಹೋಗಿ ಪಡೆಯುವ ಗತಿಯಲ್ಲವೆನ್ನುವರು.

**ಧನಪಾಲಕೋ ನಾಮ ಕುಂಜರೋ**
**ಕಟುಕಪ್ಪ ಭೇದನೋ ದುನ್ನಿವಾರಯೋ**
**ಬುದ್ಧೋ ಕಬಲಜ್ ನ ಭುಂಜತಿ**
**ಸುಮರತಿ ನಾಗವನಜ್ ಸ ಕುಂಜರೋ** ||೩೨೪||

೩೨೪. **ಧನಪಾಲಕ**ನೆಂಬ* ಆನೆಯು ಸೇನೆಯನ್ನು ಚದರಿಸುತ್ತಾ ತಡೆಯುವದಕ್ಕಾಗದೆ ಇದ್ದದ್ದು ಈಗ ಕಟ್ಟಿಬಿದ್ದು ಆಹಾರವನ್ನು ತಿನ್ನುವದಿಲ್ಲ, ಈ ಆನೆಯು ನಾಗವನವನ್ನೇ (ಆನೆಗಳ ಕಾಡನ್ನೇ) ನೆನಸಿಕೊಳ್ಳುತ್ತಿರುವದು.

**ಮಿದ್ಧಿ ಯದಾ ಹೋತಿ ಮಹಗ್ಘಸೋ ಚ**
**ನಿದ್ದಾಯಿತಾ ಸಂಪರಿವತ್ತಸಾಯೀ**
**ಮಹಾವರಾಹೋ ವ ನಿವಾಪಪುಟ್ಠೋ**
**ಪುನಪ್ಪುನಜ್ ಗಬ್ಭಂ ಉಪೇತಿ ಮಂದೋ** ||೩೨೫||

೩೨೫. ಯಾವಾಗ ಹಿಡಿದು ಧಾನ್ಯವನ್ನು ಹಾಕಿ ಮೇಯಿಸಿದ ಪಂದಿಯಂತೆ ಆಲಸ್ಯವುಳ್ಳವನೂ ಅತ್ಯಾಹಾರಿಯೂ ನಿದ್ರಾಲುವೂ ಹೊರಳಾಡುತ್ತಾ ಮಲಗಿರುವವನೂ ಆಗುತ್ತಾನೋ, ಆಗ ಆ ಮೂಢನು ಮತ್ತೆ ಮತ್ತೆ ಗರ್ಭವನ್ನು ಸೇರುತ್ತಿರುವನು.

**ಇದಜ್ ಪುರೆ ಚಿತ್ತಮಚಾರಿ ಚಾರಿಕಜ್**
**ಯೇನಿಚ್ಛಕಜ್ ಯತ್ಥಕಾಮಜ್ ಯಥಾಸುಖಜ್**
**ತದ್ ಅಜ್ಜಹಜ್ ನಿಗ್ಗಹೆಸ್ಸಾಮಿ ಯೋನಿಸೋ**
**ಹತ್ಥಿಜ್ ಪಭಿನ್ನಜ್ ವಿಯ ಅಂಕುಸಗ್ಗಹೋ** ||೩೨೬||

೩೨೬. ಈ ಚಿತ್ತವು ಹಿಂದೆ ತನ್ನಿಚ್ಛೆಬಂದಂತೆ ಕಂಡ ಕಡೆಯಲ್ಲಿ ಸುಖವಾಗಿ ಹರಿದಾಡುತ್ತಿತ್ತು ; ಈಗ ನಾನು ಮಾವುತನು ಅಂಕುಶದಿಂದ ತಿವಿದು ಆನೆಯನ್ನು ನಿಗ್ರಹಿಸುವಂತೆ ಅದನ್ನು ಸಂಪೂರ್ಣವಾಗಿ ನಿಗ್ರಹಿಸುವೆನು.

**ಅಪ್ಪಮಾದರತಾ ಹೋಥ ಸಚಿತ್ತಂ ಅನುರಕ್ಖಥ**
**ದುಗ್ಗಾ ಉದ್ಧರಥತ್ತಾನಜ್ ಪಂಕೇ ಸತ್ತೋ ವ ಕುಂಜರೋ** ||೩೨೭||

* ಇದು ವಾರಾಣಸಿಯ ರಾಜನ ಆನೆಯಂತೆ. ನಾಗವನವನ್ನು ಧನಪಾಲಕನು ಸ್ಮರಿಸುತ್ತಿದ್ದಂತೆ ಭಿಕ್ಷುವು ನಿರ್ವಾಣವನ್ನು ಸ್ಮರಿಸುತ್ತಿರಬೇಕೆಂದು ಇಲ್ಲಿ ಹೇಳಿದಂತೆ ಇದೆ.

೩೨೭. ಎಚ್ಚರಿಕೆಯಿಂದಿರುವದರಲ್ಲಿಯೇ ರತರಾಗಿರಿ, ನಿಮ್ಮ ಚಿತ್ತವನ್ನು ಕಾಪಾಡಿಕೊಳ್ಳಿ ; ಕೆಸರಿನಲ್ಲಿ ಸಿಕ್ಕಿಕೊಂಡಿರುವ ಆನೆಯಂತೆ ಬಿಡಿಸಿಕೊಳ್ಳಲಾಗದ ಸಂಸಾರದಿಂದ ನಿಮ್ಮನ್ನು ನೀವು ಉದ್ಧಾರಮಾಡಿಕೊಳ್ಳಿರಿ.

**ಸಚೆ ಲಭೇಥ ನಿಪಕಜ್ ಸಹಾಯಜ್**
**ಸದ್ಧಿಜ್ ಚರಜ್ ಸಾಧುವಿಹಾರಿ ಧೀರಜ್**
**ಅಭಿಭುಯ್ಯ ಸಬ್ಬಾನಿ ಪರಿಸ್ಸಯಾನಿ**
**ಚರೆಯ್ಯ ತೇನತ್ತಮನೋ ಸತೀಮಾ** ||೩೨೮||

೩೨೮. ಪರಿಪಕ್ವಬುದ್ಧಿಯುಳ್ಳವನಾಗಿಯೂ* ಜೊತೆಯಲ್ಲಿ ನಡೆಯುವವನಾಗಿಯೂ ಚೆನ್ನಾಗಿ ನಡೆಯುವವನಾಗಿಯೂ ಇರುವ ಧೀರನು ಜೊತೆಗೆ ಸಿಕ್ಕಿದರೆ, ಎಲ್ಲಾ ಅಡ್ಡಿಗಳನ್ನೂ ತಪ್ಪಿಸಿಕೊಂಡು ಪ್ರಸನ್ನಚಿತ್ತನಾಗಿ ಅವನೊಡನೆ **ಸ್ಮೃತಿ**ವಂತನಾಗಿ ನಡೆಯಬೇಕು.

**ನೋ ಚೆ ಲಭೇಥ ನಿಪಕಜ್ ಸಹಾಯಜ್**
**ಸದ್ಧಿಜ್ ಚರಜ್ ಸಾಧುವಿಹಾರಿ ಧೀರಜ್**
**ರಾಜಾ ವ ರಟ್ಠಜ್ ವಿಜಿತಜ್ ಸಹಾಯ**
**ಏಕೋ ಚರೇ ಮಾತಂಗರಞ್ಞೇ ವ ನಾಗೋ** ||೩೨೯||

೩೨೯. ಪರಿಪಕ್ವಬುದ್ಧಿಯುಳ್ಳವನಾಗಿಯೂ ಜೊತೆಯಲ್ಲಿ ನಡೆಯುವವನಾಗಿಯೂ ಚೆನ್ನಾಗಿ ನಡೆಯುವವನಾಗಿಯೂ ಇರುವ ಧೀರನು ಜೊತೆಗೆ ಸಿಕ್ಕದೆ ಇದ್ದರೆ, ಶತ್ರುಗಳು ಗೆದ್ದುಕೊಂಡ ರಾಷ್ಟ್ರವನ್ನು ಬಿಟ್ಟು ಹೋಗುವ ಅರಸಿನಂತೆಯೂ ಕಾಡಿನಲ್ಲಿ ಸಂಚರಿಸುವ ಆನೆಯಂತೆಯೂ ತಾನೊಬ್ಬನೇ ಸಂಚರಿಸಬೇಕು.

**ಏಕಸ್ಸ ಚರಿತಜ್ ಸೆಯ್ಯೋ**
**ನತ್ಥಿ ಬಾಲೇ ಸಹಾಯತಾ**
**ಏಕೋ ಚರಜ್ ನ ಚ ಪಾಪಾನಿ ಕಯಿರಾ**
**ಅಪ್ಪೊಸ್ಸುಕ್ಕೋ ಮಾತಂಗರಞ್ಞೇ ವ ನಾಗೋ** ||೩೩೦||

೩೩೦. ಒಬ್ಬನೇ ಸಂಚರಿಸುವದು ಮೇಲು, ತಿಳಿಗೇಡಿಯು ಜೊತೆಗಾರ

* 'ಜಾಣನಾಗಿಯೂ' ಪೂ||.

ನಾಗಲಾರನು. ಕಾಡಿನಲ್ಲಿ ಸಂಚರಿಸುವ ಆನೆಯಂತೆ ತಾನೊಬ್ಬನೇ ಸಂಚರಿಸಬೇಕು, ಪಾಪಗಳನ್ನು ಮಾಡಬಾರದು. ಅನಾಸಕ್ತನಾಗಿರಬೇಕು.

**ಅತ್ಥಮ್ಹಿ ಜಾತಮ್ಹಿ ಸುಖಾ ಸಹಾಯ**
**ತುಟ್ಠೀ ಸುಖಾ ಯಾ ಇತರೀತರೇನ**
**ಪುಞ್ಞಂ ಸುಖಂ ಜೀವಿತಸಂಖಯಮ್ಹಿ**
**ಸಬ್ಬಸ್ಸ ದುಕ್ಖಸ್ಸ ಸುಖಂ ಪಹಾಣಂ** ||೩೩೧||

೩೩೧. ಕೆಲಸವಾದರೆ* ಸ್ನೇಹಿತರು ಸುಖಕರರಾಗುವರು ; ಒಬ್ಬರಿಂದೊಬ್ಬರಿಗೆ ಉಂಟಾಗುವ ಸಂತೋಷವೂ ಸುಖಕರವಾಗಿರುವದು ; ಜೀವವು ಹೋದ ಮೇಲೆ ಪುಣ್ಯವು ಸುಖಕರವಾಗುವುದು. ಸರ್ವದುಃಖವನ್ನೂ ನಾಶಗೊಳಿಸುವದು† ಈ ಎಲ್ಲಕ್ಕಿಂತಲೂ ಸುಖಕರವು.

**ಸುಖಾ ಮತ್ತೆಯ್ಯತಾ ಲೋಕೇ ಅಥೋ ಪತ್ತೆಯ್ಯತಾ ಸುಖಾ**
**ಸುಖಾ ಸಾಮಞ್ಞತಾ ಲೋಕೇ ಅಥೋ ಬ್ರಹ್ಮಞ್ಞತಾ ಸುಖಾ** ||೩೩೨||

೩೩೨. ಲೋಕದಲ್ಲಿ ಮಾತೃಸೇವೆಯು‡ ಸುಖಕರವಾಗಿರುವದು ; ಪಿತೃಸೇವೆಯೂ ಸುಖಕರವಾಗಿರುವದು. ಲೋಕದಲ್ಲಿ **ಶ್ರಮಣ**ನಾಗಿರುವದು ಸುಖಕರವು, ಮತ್ತು **ಬ್ರಾಹ್ಮಣ**ನಾಗಿರುವದೂ§ ಸುಖಕರವು.

**ಸುಖಂ ಯಾವ ಜರಾ ಸೀಲಂ ಸುಖಾ ಸದ್ಧಾ ಪತಿಟ್ಠಿತಾ**
**ಸುಖೋ ಪಞ್ಞಾಯ ಪತಿಲಾಭೋ ಪಾಪಾನಂ ಅಕರಣಂ ಸುಖಂ** ||೩೩೩||

೩೩೩. ಮುಪ್ಪಿನವರೆಗೂ ಶೀಲವಿರುವದು ಸುಖಕರವು ; **ಶ್ರದ್ಧೆ**ಯು ನೆಲೆನಿಲ್ಲುವದು ಸುಖಕರವು ; **ಪ್ರಜ್ಞೆ**ಯನ್ನು ಪಡೆದುಕೊಳ್ಳುವದು ಸುಖಕರವು, ಪಾಪಗಳನ್ನು ಮಾಡದೆ ಇರುವದು ಸುಖವು.

* ಕೆಲಸಬಿದ್ದಾಗ ಸಾಂ||.

† ಅರ್ಹಂತನಾಗುವದು.

‡ ತಾಯಿಯಾಗಿರುವದು

§ ನಿಷ್ಪಾಪ.

# ೨೪. ತೃಷ್ಣಾವರ್ಗ (ತಣ್ಹಾವಗ್ಗ)

ಮನುಜಸ್ಸ ಪಮತ್ತ ಚಾರಿನೋ
ತಣ್ಹಾ ವಡ್ಢತಿ ಮಾಲುವಾ ವಿಯಾ
ಸೋ ಪ್ಲವತಿ ಹುರಾಹುರಂ
ಫಲಂ ಇಚ್ಛಂ ವ ವನಸ್ಮಿ ವಾನರೋ ||೩೩೪||

೩೩೪. ಮತ್ತನಾಗಿ ನಡೆಯುತ್ತಿರುವ ಮನುಷ್ಯನ **ತೃಷ್ಣೆ**ಯು **ಮಾಲುವಾ** ಬಳ್ಳಿಯಂತೆ ಹಬ್ಬುತ್ತಿರುವದು. ಕಾಡಿನಲ್ಲಿ ಹಣ್ಣಿನ ಬಯಕೆಯಿಂದ ನೆಗೆಯುತ್ತಿರುವ ಕಪಿಯಂತೆ ಅದು ದಿನದಿನವೂ ನೆಗೆಯುತ್ತಿರುವದು.

ಯಂ ಏಸಾ ಸಹತೀ ಜಮ್ಮೀ ತಣ್ಹಾ ಕೋಲೇ ವಿಸತ್ತಿಕಾ
ಸೋಕಾ ತಸ್ಸ ಪವಡ್ಢಂತಿ ಅಭಿವಟ್ಠಂ ವ ಬೀರಣಂ ||೩೩೫||

೩೩೫. ಈ ಕೆಟ್ಟ* ವಿಷರೂಪವಾದ **ತೃಷ್ಣೆ**ಯು ಲೋಕದಲ್ಲಿ ಯಾರನ್ನು ವಶಗೊಳಿಸಿಕೊಳ್ಳುವದೋ ಅವನ ಶೋಕಗಳು ಬೆಳೆಯುವ ಆಪಿನಂತೆ ಹೆಚ್ಚುವವು.

ಯೋ ಚೇತಂ ಸಹತೀ ಜಮ್ಮಿಂ ತಣ್ಹಂ ಲೋಕೇ ದುರಚ್ಚಯಂ
ಸೋಕಾ ತಮ್ಹಾ ಪಪತಂತಿ ಉದಬಿಂದೂ ವ ಪೊಕ್ಖರಾ ||೩೩೬||

೩೩೬. ಯಾವನು ಈ ಕೆಟ್ಟ ಮೀರಲಸದಳವಾದ **ತೃಷ್ಣೆ**ಯನ್ನು ವಶಗೊಳಿಸಿಕೊಂಡಿರುವನೋ, ಅವನ ಶೋಕಗಳು ಕಮಲಪತ್ರದಿಂದ ನೀರಿನ ಬಿಂದುಗಳು ಜಾರಿಬೀಳುವಂತೆ ಆಚೆಗೆ ಬೀಳುವವು.

ತಂ ವೋ ವದಾಮಿ ಭದ್ದಂ ವೊ ಯಾವಂತೆತ್ಥ ಸಮಾಗತಾ
ತಣ್ಹಾಯ ಮೂಲಂ ಖಣಥ ಉಸೀರತ್ಥೋವ ಬೀರಣಂ
ಮಾ ವೊ ನಳಂ ವ ಸೋತೋ ವ ಮಾರೋ ಭಂಜಿ ಪುನಪ್ಪುನಂ ||೩೩೭||

೩೩೭. ಆದ್ದರಿಂದ ಇಲ್ಲಿ ಬಂದು ನೆರೆದಿರುವ ನಿಮಗೆಲ್ಲ ಒಂದು ಮಂಗಳವಿಚಾರವನ್ನು† ಹೇಳುವೆನು. ಲಾಮಂಚವು ಬೇಕೆನ್ನುವವನು ಆಪನ್ನು

* ಜಮ್ಮಿ - ಜಾಲ್ಮಾ ಎಂಬುವದರ ತದ್ಭವ (ಪೂ|| ೨) ಎಂದು ಇಟ್ಟುಕೊಂಡು ಕನ್ನಡಿಸಿದೆ. 'ಜನ್ಮದಿಂದ ಇರುವ' ಎಂದು ಸಾಂ|| ರು ಪರಿವರ್ತನೆಮಾಡಿದ್ದಾರೆ.

† 'ನಿಮಗೆಲ್ಲ ಮಂಗಳವಾಗಲಿ' ಸಾಂ|| ; ಈ ಅನುವಾದದಲ್ಲಿ 'ಮಾ ವೋ ನಲಂವ ಸೋತೋವ ಮಾರೋ ಭಞ್ಜಿ ಪುನಪ್ಪುನಂ ||' ಎಂಬ ಭಾಗವು ಬಿಟ್ಟುಹೋಗಿದೆ.

ಕಿತ್ತುಹಾಕುವಂತೆ **ತೃಷ್ಣೆ**ಯ ಬೇರನ್ನು ಅಗಿದು ಕಿತ್ತುಹಾಕಿರಿ. ಪ್ರವಾಹವು ಆಪನ್ನು ಮುರಿದು ಹಾಕುವಂತೆ **ಮಾರ**ನು ನಿಮ್ಮನ್ನು ಮತ್ತೆಮತ್ತೆ ಮುರಿದುಹಾಕದೆ ಇರಲಿ.

**ಯಥಾ ಪಿ ಮೂಲೇ ಅನುಪ್ಪದವೆ ದಳ್ಹೇ**
**ಛಿನ್ನೋ ಪಿ ರುಕ್ಖೋ ಪುನಪೇವ ರೂಹತಿ**
**ಏವಂ ಪಿ ತನ್ಹಾನುಸಯೆ ಅನೂಹತೇ**
**ನಿಬ್ಬತ್ತತಿ ದುಕ್ಖಂ ಇದಙ್ ಪುನಪ್ಪುನಙ್** ||೩೩೮||

೩೩೮. ಬೇರು ಗಾಯವಾಗದೆ ಗಟ್ಟಿಯಾಗಿರುವವರೆಗೆ ಹೇಗೆ ಮರವು ಕಡಿದುಹಾಕಿದರೂ ಮತ್ತೂ ಚಿಗುರಿಕೊಳ್ಳುವದೋ, ಇದರಂತೆ ತೃಷ್ಣೆಯ **ಅನುಶಯವು*** ನಾಶವಾಗದಿದ್ದರೆ ಈ ದುಃಖವು ಮತ್ತೆಮತ್ತೆ ಉಂಟಾಗುತ್ತಿರುವದು.

**ಯಸ್ಸ ಛತ್ತಿಂಸತಿ ಸೋತಾ ಮನಾಪಸ್ಸವಣಾ ಭೂಸಾ**
**ವಾಹಾ ವಹಂತಿ ದುದ್ದಿಟ್ಠಿಙ್ ಸಂಕಪ್ಪಾ ರಾಗಣಿಸ್ಸಿತಾ** ||೩೩೯||

೩೩೯. ಯಾವನಿಗೆ **ಮೂವತ್ತು ಮೂರು ಹೊನಲು**ಗಳು† ಮನಸ್ಸಿಗೆ ವಿಷಯಗಳಾದ ರೂಪಾದಿಗಳಲ್ಲಿ ಹರಿಯುತ್ತಿರುವವೋ, ಆ ದುರ್ದೃಷ್ಟಿಯನ್ನು‡ ರಾಗದಿಂದ ಉಂಟಾದ ಸಂಕಲ್ಪಗಳೆಂಬ ಸೆಳವುಗಳು ಕೊಚ್ಚಿಕೊಂಡು ಹೋಗುವವು.

**ಸವಂತಿ ಸಬ್ಬಧಿ ಸೋತಾ ಲತಾ ಉಬ್ಭಿಜ್ಜ ತಿಟ್ಠತಿ**
**ತಙ್ ಚ ದಿಸ್ವಾ ಲತಙ್ ಜಾತಙ್ ಮೂಲಙ್ ಪಞ್ಞಾಯ ಛಿಂದಥ** ||೩೪೦||

೩೪೦. ಹೊನಲುಗಳು ಎಲ್ಲಾ ಕಡೆಯಲ್ಲಿಯೂ ಹರಿಯುತ್ತಿರುವವು ; (ತೃಷ್ಣೆಯ) ಬಳ್ಳಿಯು ಮೊಳಕೆಯಾಗುತ್ತಿರುವದು. ಆ ಬಳ್ಳಿಯು ಹುಟ್ಟಿದ್ದನ್ನು ಕಂಡುಕೊಂಡು **ಪ್ರಜ್ಞೆ**ಯಿಂದ ಅದರ ಮೂಲವನ್ನು ಕತ್ತರಿಸಿರಿ.

* ವಾಸನೆಯೆಂಬರ್ಥವಿರಬಹುದೆ ?

† (ಅ) ಚಕ್ಷು, ಶ್ರೋತ್ರ, ಘ್ರಾಣ, ಜಿಹ್ವಾ, ಕಾಯ (= ಚರ್ಮ), ಮನ ಎಂಬ ಆರು ಇಂದ್ರಿಯಗಳು ; ರೂಪ, ಶಬ್ದ, ಗಂಧ, ರಸ, ಸ್ಪರ್ಶ (= ಮನಸ್ಸಿನ ವಿಷಯ) ಎಂಬ ಆರು ವಿಷಯಗಳು ; ಚಕ್ಷುರಾದಿಗಳ ಆರು ವಿಜ್ಞಾನಿಗಳು - ಈ ಹದಿನೆಂಟೂ ಅಂತರಬಾಹ್ಯವೆಂಬ ಭೇದದಿಂದ ೩೬ ಸ್ರೋತಗಳಾಗುವವು (ಸಾಂ||). (ಆ) ಆರು ಇಂದ್ರಿಯಗಳು, ಆರು ವಿಷಯಗಳು -, ಈ ಹನ್ನೆರಡು ಕಾಮ, ಭವ, ವಿಭವ — ಎಂಬ ಫಲವುಳ್ಳವಾದರೆ ೩೬ ಆಗುವವು (ಪೂ||).

‡ 'ರಾಗದಿಂದುಂಟಾದ ಸಂಕಲ್ಪವೆಂಬ ವಾಹನಗಳು ಕೆಟ್ಟಧಾರಣೆಗಳನ್ನು ಹೊತ್ತು ಕೊಂಡು ಹೋಗುವವು' - ಸಾಂ||.

**ಸರಿತಾನಿ ಸಿನೇಹಿತಾನಿ ಚ ಸೋಮನಸ್ಸಾನಿ ಭವಂತಿ ಜಂತುನೋ**
**ತೇ ಸಾತಸಿತಾ ಸುಖೇಸಿನೋ ತೇ ವೇ ಜಾತಿಜರೂಪಗಾ ನರಾ** ||೩೪೧||

೩೪೧. ಹಿಂದಿನ ನೆನಪುಗಳು* ಪ್ರಾಣಿಗಳಿಗೆ ಪ್ರಿಯವಾಗಿಯೂ ಸೌಮನಸ್ಯ ಕರವಾಗಿಯೂ ಇರುವವು. ಅವುಗಳ ಆಸೆಗೆ ಕಟ್ಟು ಬಿದ್ದು ಯಾರು ಸುಖವನ್ನು ಬಯಸುವರೋ ಆ ಜನರೇ ಹುಟ್ಟನ್ನೂ ಮುಪ್ಪನ್ನೂ ಹೊಂದುವರು.

**ತಸಿಣಾಯ ಪುರಕ್ಖತಾ ಪಜಾ ಪರಿಸಪ್ಪಂತಿ ಸಸೋ ವ ಬಾಧಿತೋ**
**ಸಂಯೋಜನ ಸಂಗಸತ್ತಾ ದುಕ್ಖಮ್ ಉಪೆಂತಿ ಪುನಪ್ಪುನಮ್ ಚಿರಾಯ** ||೩೪೨||

೩೪೨. ತೃಷ್ಣೆಯನ್ನು ಮುಂದುಮಾಡಿಕೊಂಡಿರುವ ಪ್ರಾಣಿಗಳು ಬಲೆಗೆ ಬಿದ್ದು ಮೊಲದಂತೆ ತಿರುಗುತ್ತಿರುವವು ; **ಸಂಯೋಜನ**ಗಳ ಸಂಬಂಧದ ಸಕ್ತಿಯಿಂದ ಬಹುಕಾಲದವರೆಗೆ ಮತ್ತೆಮತ್ತೆ ದುಃಖವನ್ನು ಹೊಂದುವವು.

**ತಸಿಣಾಯ ಪುರಕ್ಖತಾ ಪಜಾ ಪರಿಸಪ್ಪಂತಿ ಸಸೋ ವ ಬಾಧಿತೋ**
**ತಸ್ಮಾ ತಸಿನಮ್ ವಿನೋದಯೇ ಭಿಕ್ಕು ಆಕಂಖಿ ವಿರಾಗಂ ಅತ್ತನೋ** ||೩೪೩||

೩೪೩. ತೃಷ್ಣೆಯನ್ನು ಮುಂದುಮಾಡಿಕೊಂಡಿರುವ ಪ್ರಾಣಿಗಳು ಬಲೆಗೆ ಬಿದ್ದ ಮೊಲದಂತೆ ತಿರುಗುತ್ತಿರುವವು. ಆದ್ದರಿಂದ ತನಗೆ ವೈರಾಗ್ಯವು ಬೇಕೆಂಬ ಭಿಕ್ಷುವು ತೃಷ್ಣೆಯನ್ನು ಹೋಗಲಾಡಿಸಿಕೊಳ್ಳಬೇಕು.

**ಯೋ ನಿಬ್ಬನಥೋ ವನಾಧಿಮುತ್ತೋ ವನಮುತ್ತೋ ವನಮೇವ ಧಾವತಿ**
**ತಮ್ ಪುಗ್ಗಲಮೇವ ಪಸ್ಸಥ ಮುತ್ತೋ ಬಂಧನಮೇವ ಧಾವತಿ** ||೩೪೪||

೩೪೪. ಯಾವನು (ತೃಷ್ಣೆಯ) ಕುರುಚಲುಗಿಡಗಳಿಲ್ಲದವನಾಗಿ† ವನ ದಿಂದ ಬಿಡುಗಡೆಯನ್ನು ಹೊಂದಿದವನಾಗಿರುವನೋ ವನದಿಂದ ಮುಕ್ತ ನಾಗಿಯೂ ವನದ ಕಡೆಗೇ ಓಡುತ್ತಿರುವನೋ ಆ **ಪುದ್ಗಲ**ನೇ‡ ಮುಕ್ತನಾಗಿಯೂ ಬಂಧನದ ಕಡೆಗೇ ಓಡುತ್ತಿರುವನೆಂದು ಕಂಡುಕೊಳ್ಳಿರಿ.

---

* ಸರಿತಾನಿ - ಎಂಬ ಮಾತನ್ನು ಸ್ಮೃತಾನಿ ಎಂಬುದರ ತದ್ಭವವೆಂದು ಭಾವಿಸಿದೆ ; 'ತೃಷ್ಣಾರೂಪ'ವಾದ ನದಿಗಳು (ಸರಿತಃ) ಎಂದು ಸಾಂ||.

† ನಿಬ್ಬನಥ - ಎಂಬುದು ನಿರ್ವನಥ ಎಂಬುದರ ತದ್ಭವವೆಂದು ಇಟ್ಟುಕೊಂಡಿದೆ ; ನಿರ್ವಾಣಾರ್ಥೀ (ನಿರ್ವಾಣವನ್ನು ಬಯಸುವವನು) ಎಂದು ಸಾಂ||.

‡ ಪುದ್ಗಲನೆಂದರೆ ಪುರುಷನು, ವ್ಯಕ್ತಿಯು ; ಸ್ಕಂಧಗಳ ಗುಂಪನ್ನೇ ಇಲ್ಲಿ ಪುದ್ಗಲನೆಂದು ಕರೆದಿದೆಯೆಂದು ತೋರುವದು.

ನ ತಙ್ ದಳ್ಹಙ್ ಬಂಧನಂ ಆಹು ಧೀರಾ
ಯದ್ ಆಯಸಙ್ ದಾರುಜಙ್ ಬಬ್ಬಜಞ್ ಚ
ಸಾರತ್ತರತ್ತ ಮಣಿಕುಂಡಲೇಸು
ಪುತ್ತೇಸು ದಾರೇಸು ಚ ಯಾ ಅಪೇಕ್ಖಾ ||೩೪೫||

೩೪೫. ಕಬ್ಬಿಣದಿಂದಾಗಲಿ ಕಟ್ಟಿಗೆಯಿಂದಾಗಲಿ ಆಪಿನಿಂದ* ಮಾಡಿದ್ದಾಗಲಿ ಗಟ್ಟಿಯಾದ ಬಂಧನವೆಂದು ತಿಳಿದವರು ಹೇಳರು ; ರತ್ನದ ಹತ್ತೊಂಟಿಗಳು, ಮಕ್ಕಳು, ಹೆಂಡಿರು - ಇವುಗಳಲ್ಲಿ ಇವೇ ಸಾರವೆಂದು ರಾಗವುಳ್ಳ ಆಶೆಯೇ (ಗಟ್ಟಿಯಾದ ಬಂಧನವು).

ಏತಙ್ ದಳ್ಹಙ್ ಬಂಧನಂ ಆಹು ಧೀರಾ
ಓಹಾರಿನಙ್ ಸಿಥಿಲಙ್ ದಿಪ್ಪಮುಂಚಙ್
ಏತಂ ಪಿ ಚೆತ್ವಾನ ಪರಿಬ್ಬಜಂತಿ
ಅನಪೆಕ್ಖಿನೋ ಕಾಮಸುಖಙ್ ಪಹಾಯ ||೩೪೬||

೩೪೬. ಇದನ್ನೇ ದೃಢವಾದ ಬಂಧನವೆಂದು ತಿಳಿದವರು ಕರೆಯುತ್ತಾರೆ ; (ಇದು) ಹಿಡಿದೆಳೆಯುವದು, ಸಡಿಲವಾಗಿರುವದಾದರೂ ಬಿಡಿಸಿಕೊಳ್ಳುವದಕ್ಕೆ ಆಗದು. ಆಸೆಯಿಲ್ಲದವರು ಇದನ್ನು ಕೂಡ ಕತ್ತರಿಸಿ, ಕಾಮಸುಖವನ್ನು ಬಿಟ್ಟು, ಪರಿವ್ರಾಜಕರಾಗುವರು.

ಯೇ ರಾಗರತ್ತಾನುಪತಂತಿ ಸೋತಙ್
ಸಯಙ್ ಕತಙ್ ಮಕ್ಕಟಕೋ ವ ಜಾಲಙ್
ಏತಂ ಪಿ ಚೆತ್ವಾನಿ ವಜಂತಿ ಧೀರಾ
ಅನಪೇಕ್ಖಿನೋ ಸಬ್ಬದುಕ್ಖಙ್ ಪಹಾಯ ||೩೪೭||

೩೪೭. ಯಾರು ರಾಗರಕ್ತರಾಗಿರುವರೋ ಅವರು ಜೇಡರ ಹುಳುವು ತನ್ನ ಬಲೆಗೆ ತಾನೆ ಬೀಳುವಂತೆ ತಾವೇ ಮಾಡಿರುವ ಈ **ಸ್ರೋತ**ದ (ಹೊನಲಿನ)ಲ್ಲಿ ಇಳಿಯಬೀಳುವವರು. ಇದನ್ನು ನಿರಪೇಕ್ಷರಾದ ಧೀರರು ಕತ್ತರಿಸಿ ದುಃಖವನ್ನೆಲ್ಲ ಬಿಟ್ಟು ಪರಿವ್ರಾಜಕರಾಗುವರು.

ಮುಂಚ ಪುರೇ ಮುಂಚ ಪಚ್ಛತೋ ಮಜ್ಝೇ ಮುಂಚ ಭವಸ್ಸ ಪಾರಗೂ
ಸಬ್ಬತ್ಥ ವಿಮುತ್ತಮಾನಸೋ ನ ಪುನ ಜಾತಿಜರಙ್ ಉಪೇಹಿಸಿ ||೩೪೮||

ಬಬ್ಬಜಂ - ಬಲ್ಬಜಂ ಎಂಬುದರ ತದ್ಭವವಿರಬಹುದು.

೩೪೮. ಮುಂದಿನದನ್ನು* ಬಿಡು, ಹಿಂದಿನದನ್ನು ಬಿಡು, ನಡುವೆ ಇರುವದನ್ನು ಬಿಡು, ಭವದ ಪಾರವನ್ನು ಕಂಡುಕೊ. ಎಲ್ಲೆಲ್ಲಿಯೂ (ತೃಷ್ಣೆಯಿಂದ) ವಿಮುಕ್ತನಾದರೆ ಜನ್ಮವನ್ನೂ ಮುಪ್ಪನ್ನೂ ಮತ್ತೆ ಪಡೆಯದೆ ಇರುವೆ.

**ವಿತಕ್ಕಪಮಥಿತಸ್ಸ ಜಂತುನೋ ತಿಬ್ಬರಾಗಸ್ಸ ಸುಭಾನುಪಸ್ಸಿನೋ**
**ಭಿಯ್ಯೋ ತಣ್ಹಾ ಪವಡ್ಢತಿ ಏಸ ಖೋ ದಳ್ಹಂ ಕರೋತಿ ಬಂಧನಂ ||೩೪೯||**

೩೪೯. ಯಾವ ಜಂತುವು **ವಿತರ್ಕ**(ಸಂದೇಹ)ದಿಂದ ತಳಮಳಗುಟ್ಟುತ್ತಿರುವನೋ ತೀವ್ರರಾಗವುಳ್ಳವನಾಗಿ **ಶುಭಾನುಪಶ್ಯ**ನಾಗಿರುವನೋ† ಅವನ **ತೃಷ್ಣೆ**ಯು ಮತ್ತೆ ಹೆಚ್ಚುವದು. ಇದೇ ಬಂಧನವನ್ನು ಗಟ್ಟಿಗೊಳಿಸುವದು.

**ವಿತಕ್ಕೂಪಸಾಮೆ ಚ ಯೋ ರತೋ ಅಸುಭಂ ಭಾವಯತಿ ಸದಾ ಸತೋ**
**ಏಸ ಖೋ ವ್ಯಂತಿಕಾಹಿತಿ ಏಸಚ್ಛೇಚ್ಛತಿ ಮಾರಬಂಧನಂ ||೩೫೦||**

೩೫೦. **ವಿತರ್ಕ**(ಸಂದೇಹ)ವನ್ನು ಶಾಂತಿಗೊಳಿಸುವದರಲ್ಲಿ ಯಾವನು ನಿರತನಾಗಿರುವನೋ, ಯಾವಾಗಲೂ ಸ್ಮೃತಿಯುಳ್ಳವನಾಗಿ ಅಶುಭಭಾವನೆಯನ್ನೇ ಮಾಡುತ್ತಿರುವನೋ ಅವನೇ **ಮಾರಬಂಧನ**ವನ್ನು ಕತ್ತರಿಸುವನು, ಅವನೇ ಅದನ್ನು ಕೊನೆಗಾಣಿಸುವನು.

**ನಿಟ್ಠಂಗತೋ ಅಸಂತಾಸೀ ವೀತತಣ್ಹೋ ಅನಂಗಣೋ**
**ಅಚ್ಛಿಂದಿ ಭವಸಲ್ಲಾನಿ ಅಂತಿಮೋಯಂ ಸಮುಸ್ಸಯೋ ||೩೫೧||**

೩೫೧. ಯಾವನು **ನಿಷ್ಠೆ**ಯನ್ನು‡ ಹೊಂದಿರುವನೋ, ಅಂಜದೆ ಇರುವನೋ, ತೃಷ್ಣೆಯನ್ನು ಕಳೆದುಕೊಂಡು **ಅಂಗಣ**ವಿಲ್ಲದೆ§ ಇರುವನೋ ಅವನು ಸಂಸಾರದ ಮುಳ್ಳುಗಳನ್ನು ಕಿತ್ತುಹಾಕುವನು. ಅವನಿಗೆ ಇದೇ ಕೊನೆಯ ದೇಹವು.

**ವೀತತಣ್ಹೋ ಅನಾದಾನೋ ನಿರುತ್ತಿಪದ ಕೋವಿದೋ**
**ಅಕ್ಖರಾನಂ ಸನ್ನಿಪಾತಂ ಜಞ್ಞಾ ಪುಬ್ಬಾಪರಾಣಿ ಚ**

---

* ಹಿಂದೆ, ಮುಂದೆ, ಈಗ - ಎಂಬ ಮೂರು ಕಾಲದ ಸಂಬಂಧವಾದ ತೃಷ್ಣೆಯನ್ನು ಬಿಡು.

† ಶುಭಾನುಪಶ್ಯ, ಅಶುಭಾನುಪಶ್ಯ - ಎಂಬ ಮಾತನ್ನು ೩೪೦, ೩೪೧ನೆ ಗಾಥೆಗಳಲ್ಲಿ ನೋಡಿ.

‡ ಪರಿಪೂರ್ಣತೆಯನ್ನು 'ಪಾಪಪುಣ್ಯಗಳ ಕೊನೆಯನ್ನು (ಸಾಂ||)'.

§ ಅಂಗಣ - ಎಂದರೆ ಪಾಪಕರ್ಮವನ್ನು ಮಾಡುವ ಇಚ್ಛೆಗೆ ಪರತಂತ್ರನಾಗಿರುವದು.

ಸಾ ವೇ ಅಮತಿಮಸಾರೀರೋ
ಮಹಾಪಞ್ಞೋ ಮಹಾಪುರಿಸೋ ತಿ ವುಚ್ಚತಿ ||೩೫೨||

೩೫೨. ಯಾವನು ತೃಷ್ಣೆಯನ್ನು ಹೋಗಲಾಡಿಸಿಕೊಂಡು, ವಿಷಯವನ್ನು ಸ್ವೀಕರಿಸದೆ, (ತತ್ತ್ವವನ್ನು) ನಿರ್ವಚನಮಾಡಿ ಹೇಳುವವರಲ್ಲಿ ನಿಪುಣನಾಗಿ ಅಕ್ಷರಗಳ ಕೂಟವನ್ನೂ ಪೂರ್ವಾಪರ ಸಂಬಂಧವನ್ನೂ* ಬಲ್ಲವನಾಗಿರುವನೋ ಅವನೇ ಅಂತಿಮಶರೀರನು, **ಮಹಾಪ್ರಾಜ್ಞನು** - ಎನಿಸುವನು.

ಸಬ್ಬಾಭೀಭೂ ಸಬ್ಬವಿದೂಹಮಸ್ಮಿ
ಸಬ್ಬೇಸು ಧಮ್ಮೇಸು ಅನೂಪಲಿತ್ತೋ
ಸಬ್ಬಂಜಹೋ ತಣ್ಹಕ್ಖಯೇ ವಿಮುತ್ತೋ
ಸಯಙ್ ಅಭಿಞ್ಞಾಯ ಕಂ ಉದ್ದಿಸೆಯ್ಯಙ್ ||೩೫೩||

೩೫೩.† ನಾನು (ರಾಗಾದಿ)ಸರ್ವವನ್ನೂ ತಿರಸ್ಕರಿಸುವವನೂ ಸರ್ವವನ್ನೂ ಬಲ್ಲವನೂ ಆಗಿರುವೆನು. ಸರ್ವ**ಧರ್ಮ**(ಪದಾರ್ಥ)ಗಳಿಂದಲೂ ಅಲಿಪ್ತನಾಗಿರು ವೆನು, ಎಲ್ಲವನ್ನೂ ಬಿಟ್ಟಿರುವೆನು, ತೃಷ್ಣೆಯನ್ನು ನಾಶಗೊಳಿಸಿಕೊಂಡು ಮುಕ್ತ ನಾಗಿರುವೆನು, ನಾನೇ ತಿಳಿದುಕೊಂಡು ಯಾರನ್ನು (ಗುರುವೆಂದು) ತೋರಿಸಲಿ ?

ಸಬ್ಬದಾನಙ್ ಧಮ್ಮದಾನಙ್ ಜಿನಾತಿ
ಸಬ್ಬಙ್ ರಸಙ್ ಧಮ್ಮರಸೋ ಜಿನಾತಿ
ಸಬ್ಬಙ್ ರತಿಙ್ ಧರ್ಮರತೀ ಜಿನಾತಿ
ತಣ್ಹಕ್ಖಯೋ ಸಬ್ಬದುಕ್ಖಙ್ ಜಿನಾತಿ ||೩೫೪||

೩೫೪. ಎಲ್ಲಾ ದಾನವನ್ನೂ ಧರ್ಮದಾನವು ಗಲ್ಲುವದು ; ಎಲ್ಲಾ ರಸವನ್ನೂ ಧರ್ಮರಸವು ಗೆಲ್ಲುವದು ; ಎಲ್ಲದರ ಪ್ರೀತಿಯನ್ನೂ ಧರ್ಮ ಪ್ರೀತಿಯು ಗೆಲ್ಲುವದು **ತೃಷ್ಣೆ**ಯ ನಾಶವು ಎಲ್ಲಾ ದುಃಖವನ್ನೂ ಗೆಲ್ಲುವದು.

ಹನಂತಿ ಭೋಗಾ ದುಮ್ಮೇಧಙ್ ನೋ ಚ ಪಾರಗವೇಸಿನೋ
ಭೋಗತಣ್ಹಾಯ ದುಮ್ಮೇಧೋ ಹಂತಿ ಅಞ್ಞೇವ ಅತ್ತನಙ್ ||೩೫೫||

* ಬೌದ್ಧಗ್ರಂಥಗಳನ್ನು ಚೆನ್ನಾಗಿ ವಿವರಿಸಿಹೇಳಬಲ್ಲ ವಿರಕ್ತನು ಮಹಾಪ್ರಾಜ್ಞನು ಎಂಬ ಭಾವವಿರಬಹುದು.

† **ಉಪಕ**ನೆಂಬ ಆಜೀವಕನು ಬುದ್ಧನ ಪ್ರಸನ್ನತೆಯನ್ನು ಕಂಡು 'ನಿನ್ನ ಗುರುವು ಯಾರು ?' ಎಂಬ ಕೇಳಿದ ಪ್ರಶ್ನೆಗ ಬುದ್ಧನು ಕೊಟ್ಟ ಉತ್ತರವಿದು

೩೫೫. (ಸಂಸಾರದ) ಆಚೆಯ ದಡವನ್ನು ಹುಡುಕದೆ ಇರುವನಾದರೆ ಅಂಥ ದುರ್ಬುದ್ಧಿಯನ್ನು ಭೋಗಗಳು ಹಾಳುಮಾಡುವವು. ಭೋಗಗಳ ತೃಷ್ಣೆಯಿಂದ ಬುದ್ಧಿಹೀನನು ಮತ್ತೊಬ್ಬರು ಹೇಗೋ ಹಾಗೆ ತಾನೇ ತನ್ನನ್ನು ಹಾಳುಮಾಡಿಕೊಳ್ಳುವನು.

**ತಿಣದೋಸಾನಿ ಖೆತ್ತಾನಿ ರಾಗದೋಸಾ ಅಯಜ್ ಪಜಾ**
**ತಸ್ಮಾ ಹಿ ವೀತರಾಗೇಸು ದಿನ್ನಜ್ ಹೋತಿ ಮಹಪ್ಫಲಜ್** ||೩೫೬||

೩೫೬. ಹೊಲಗಳಲ್ಲಿ ಹುಲ್ಲು ಬೆಳೆಯುವುದು ದೋಷವು, ಈ ಪ್ರಜೆಗಳಲ್ಲಿ ರಾಗವಿರುವದು ದೋಷವು ; ಆದ್ದರಿಂದಲೇ **ರಾಗ**ವಿಲ್ಲದವರಿಗೆ ಕೊಟ್ಟರೆ ಹೆಚ್ಚಿನ ಫಲವಾಗುವದು.

**ತಿಣದೋಸಾನಿ ಖೆತ್ತಾನಿ ದೋಸದೋಸಾ ಅಯಜ್ ಪಜಾ**
**ತಸ್ಮಾ ಹಿ ವೀತದೋಸೇಸು ದಿನ್ನಜ್ ಹೋತಿ ಮಹಪ್ಫಲಜ್** ||೩೫೭||

೩೫೭. ಹೊಲಗಳಲ್ಲಿ ಹುಲ್ಲುಬೆಳೆಯುವದು ದೋಷವು, ಈ ಪ್ರಜೆಗಳಲ್ಲಿ ದ್ವೇಷವಿರುವದು ದೋಷವು ; ಆದ್ದರಿಂದಲೇ **ದ್ವೇಷ**ವಿಲ್ಲದವರಿಗೆ ಕೊಟ್ಟರೆ ಹೆಚ್ಚಿನ ಫಲವಾಗುವದು.

**ತಿಣದೋಸಾನಿ ಖೆತ್ತಾನಿ ಮೋಹದೋಸಾ ಅಯಜ್ ಪಜಾ**
**ತಸ್ಮಾ ಹಿ ವೀತಮೋಹೇಸು ದಿನ್ನಜ್ ಹೋತಿ ಮಹಪ್ಫಲಜ್** ||೩೫೮||

೩೫೮. ಹೊಲಗಳಲ್ಲಿ ಹುಲ್ಲು ಬೆಳೆಯುವದು ದೋಷವು, ಈ ಜನರಲ್ಲಿ ಮೋಹವಿರುವದು ದೋಷವು ; ಆದ್ದರಿಂದಲೇ **ಮೋಹ**ವಿಲ್ಲದವರಿಗೆ ಕೊಟ್ಟರೆ ಹೆಚ್ಚಿನ ಫಲವಾಗುವದು.

**ತಿಣದೋಸಾನಿ ಖೆತ್ತಾನಿ ಇಚ್ಛಾದೋಸಾ ಅಯಜ್ ಪಜಾ**
**ತಸ್ಮಾ ಹಿ ವಿಗತಿಚ್ಛೇಸು ದಿನ್ನಜ್ ಹೋತಿ ಮಹಪ್ಫಲಜ್** ||೩೫೯||

೩೫೯. ಹೊಲಗಳಲ್ಲಿ ಹುಲ್ಲು ಬೆಳೆಯುವದು ದೋಷವು, ಈ ಜನರಲ್ಲಿ ಇಚ್ಛೆಯಿರುವದು ದೋಷವು ; ಆದ್ದರಿಂದಲೇ **ಇಚ್ಛೆ**ಯಿಲ್ಲದವರಿಗೆ ಕೊಟ್ಟರೆ ಹೆಚ್ಚಿನ ಫಲವಾಗುವದು.

# ೨೫. ಭಿಕ್ಖುವರ್ಗ (ಭಿಕ್ಖುವಗ್ಗ)

**ಚಕ್ಖುನಾ ಸಂವರೋ ಸಾಧು ಸಾಧು ಸೋತೇನ ಸಂವರೋ**
**ಘಾಣೇನಾ ಸಂವರೋ ಸಾಧು ಸಾಧು ಜಿಹ್ವಾಯ ಸಂವರೋ** ||೩೬೦||

೩೬೦. ಕಣ್ಣಿನ **ಸಂವರ**ವು* ಒಳ್ಳೆಯದು, ಕಿವಿಯ **ಸಂವರ**ವು ಒಳ್ಳೆಯದು, ಮೂಗಿನ **ಸಂವರ**ವು ಒಳ್ಳೆಯದು, ನಾಲಗೆಯ **ಸಂವರ**ವು ಒಳ್ಳೆಯದು.

**ಕಾಯೇನ ಸಂವರೋ ಸಾಧು ಸಾಧು ವಾಚಾಯ ಸಂವರೋ**
**ಮನಸಾ ಸಂವರೋ ಸಾಧು ಸಾಧು ಸಬ್ಬತ್ಥ ಸಂವರೋ**
**ಸಬ್ಬತ್ಥ ಸಂವುತೋ ಭಿಕ್ಖು ಸಬ್ಬದುಕ್ಖಾ ಪಮುಚ್ಚತಿ** ||೩೬೧||

೩೬೧. ಕಾಯದ **ಸಂವರ**ವು ಒಳ್ಳೆಯದು, ವಚನದ **ಸಂವರ**ವು ಒಳ್ಳೆಯದು, ಮನಸ್ಸಿನ **ಸಂವರ**ವು ಒಳ್ಳೆಯದು, ಎಲ್ಲಾ (ಇಂದ್ರಿಯಗಳ) **ಸಂವರ**ವು ಒಳ್ಳೆಯದು. ಎಲ್ಲಾ **ಸಂವರ**ವನ್ನೂ ಉಳ್ಳ ಭಿಕ್ಷುವು ಎಲ್ಲಾ ದುಃಖದಿಂದಲೂ ಬಿಡುಗಡೆಹೊಂದುವನು.

**ಹತ್ಥಸಞ್ಞತೋ ಪಾದಸಞ್ಞತೋ ವಾಚಾಸಞ್ಞತೋ ಸಞ್ಞತುತ್ತಮೋ**
**ಅಜ್ಝತ್ತರತೋ ಸಮಾಹಿತೋ ಏಕೋ ಸಂತುಸಿತೋ ತಂ ಆಹು ಭಿಕ್ಖುಙ್** ||೩೬೨||

೩೬೨. ಕೈಯನ್ನು ಬಿಗಿಯಲ್ಲಿಟ್ಟುಕೊಂಡು, ಕಾಲನ್ನು ಬಿಗಿಯಲ್ಲಿಟ್ಟುಕೊಂಡು, ಮಾತನ್ನು ಬಿಗಿಯಲ್ಲಿಟ್ಟುಕೊಂಡು, **ಸಂಯಮ**ವುಳ್ಳವರಲ್ಲೆಲ್ಲ ಉತ್ತಮನೆನಿಸಿ, **ಅಧ್ಯಾತ್ಮ**ದಲ್ಲಿಯೇ ನಿರತನಾಗಿ, ಸಮಾಹಿತನಾಗಿ, ಒಂಟಿಗನಾಗಿ, ಸಂತುಷ್ಟನಾಗಿರುವನು ಯಾರೋ ಅವನನ್ನು **ಭಿಕ್ಷು**ವೆಂದು ಕರೆಯುತ್ತಾರೆ.

**ಯೋ ಮುಖಸಞ್ಞತೋ ಭಿಕ್ಖು ಮತ್ತಭಾಣೀ ಅನುದ್ಧತೋ**
**ಅತ್ಥಙ್ ಧಮ್ಮಙ್ ಚ ದೀಪೇತಿ ಮಧುರಙ್ ತಸ್ಸ ಭಾಸಿತಙ್** ||೩೬೩||

೩೬೩. ಯಾವ ಭಿಕ್ಷುವು ಬಾಯಿಯನ್ನು ಬಿಗಿಯಲ್ಲಿಟ್ಟುಕೊಂಡು, ಯೋಚನೆಮಾಡಿ ಮಾತನಾಡುವನೋ,† ಹೆಮ್ಮೆಯಿಲ್ಲದೆ ಅರ್ಥವನ್ನೂ ಧರ್ಮವನ್ನೂ ಬೆಳಗುವನೋ ಅವನ ಮಾತು ಇಂಪಾಗಿರುವದು.

---

* ಸಂವರ ಎಂದರೆ ಬಿಗಿಯಲ್ಲಿಟ್ಟುಕೊಳ್ಳುವದು ; ಈ ವರ್ಗದ ೩೬೨, ೩೬೩ನೆಯ ಗಾಥೆಗಳಲ್ಲಿರುವ ಸಂಯಮಶಬ್ದಕ್ಕೆ ಇದೇ ಅರ್ಥ.

† 'ಮಂತ್ರವನ್ನು ಹೇಳುವವನು' ಪೂ||.

ಧಮ್ಮಾರಾಮೋ ಧಮ್ಮರತೋ ಧಮ್ಮಜ್ ಅನುವಿಚಿಂತಯಜ್
ಧಮ್ಮಜ್ ಅನುಸ್ಸರಜ್ ಭಿಕ್ಖು ಸದ್ಧಮ್ಮಾ ನ ಪರಿಹಾಯತಿ ||೩೬೪||

೩೬೪. ಧರ್ಮದಲ್ಲಿಯೇ ಆಡುತ್ತಾ, ಧರ್ಮದಲ್ಲಿ ನಿರತನಾಗಿ, ಧರ್ಮವನ್ನು ಕುರಿತು ಚಿಂತನೆಮಾಡುತ್ತಾ, ಧರ್ಮವನ್ನು ಅನುಸ್ಮರಣೆ ಮಾಡುತ್ತಾ ಇರುವ ಭಿಕ್ಷುವು ಉತ್ತಮವಾದ ಧರ್ಮವನ್ನು ಎಂದಿಗೂ ಬಿಟ್ಟುಹೋಗುವದಿಲ್ಲ.

ಸಲಾಭಜ್ ನಾತಿಮಞ್ಞೇಯ್ಯ ನಾಞ್ಞೇಸಜ್ ಪಿಹಯಜ್ ಚರೆ
ಅಞ್ಞೇಸಜ್ ಪಿಹಯಜ್ ಭಿಕ್ಖು ಸಮಾಧಿಜ್ ನಾಧಿಗಚ್ಛತಿ ||೩೬೫||

೩೬೫. ತನಗೆ ಸಿಕ್ಕಿದ್ದನ್ನು ಅಸಡ್ಡೆಯಿಂದ ಕಾಣಬಾರದು, ಮತ್ತೊಬ್ಬರದ್ದಕ್ಕೆ ಆಸೆಪಡಬಾರದು ; ಮತ್ತೊಬ್ಬರದ್ದಕ್ಕೆ ಆಸೆಪಡುವ ಭಿಕ್ಷುವಿಗೆ ಸಮಾಧಾನವು ದೊರಕಲಾರದು.

ಅಪ್ಪಲಾಭೋ ಪಿ ಚೆ ಭಿಕ್ಖು ಸಲಾಭಜ್ ನಾತಿಮಞ್ಞತಿ
ತಜ್ ವೆ ದೇವಾ ಪಸಜ್ಸಂತಿ ಸುದ್ಧಾಜೀವಜ್ ಅತಂದಿತಜ್ ||೩೬೬||

೩೬೬. ತನಗೆ ದೊರಕಿದ್ದು ಅಲ್ಪವಾದರೂ ಅದನ್ನು ಭಿಕ್ಷುವು ಅಸಡ್ಡೆ ಮಾಡದೆ ಇದ್ದರೆ, **ಶುದ್ಧಜೀವಿಕೆಯುಳ್ಳ**ವನೂ* ಆಲಸ್ಯರಹಿತನೂ ಆಗಿರುವ ಅವನನ್ನೇ ದೇವತೆಗಳು ಕೊಂಡಾಡುವರು.

ಸಬ್ಬಸೋ ನಾಮರೂಪಸ್ಮಿಜ್ ಯಸ್ಸ ನತ್ಥಿ ಮಮಾಯಿತಜ್
ಅಸತಾ ಚ ನ ಸೋಚತಿ ಸ ವೆ ಭಿಕ್ಖೂ ತಿ ವುಚ್ಚತಿ ||೩೬೭||

೩೬೭. ಯಾವನಿಗೆ **ನಾಮರೂಪ**ದಲ್ಲಿ† ಯಾವದರಲ್ಲಿಯೂ ನನ್ನದೆಂಬುದು ಇಲ್ಲವೋ, ಯಾವನು (ಅದು) ಇಲ್ಲದಿದ್ದರೆ ಶೋಕಿಸುವದಿಲ್ಲವೋ ಅವನೇ ಭಿಕ್ಷುವೆನಿಸುವನು.

ಮೆತ್ತಾವಿಹಾರಿ ಯೋ ಭಿಕ್ಖು ಪಸನ್ನೋ ಬುದ್ಧಸಾಸನೋ
ಅಧಿಗಚ್ಛೆ ಪದಜ್ ಸಂತಜ್ ಸಂಖಾರೂಪಸಮಜ್ ಸುಖಜ್ ||೩೬೮||

* ಇದು ಅಷ್ಟಾಂಗಗಳಲ್ಲಿ ಒಂದಾದ ಸಮ್ಯಗಾಜೀವ ಎಂಬುದರ ಸೂಚನೆಯಿರಬಹುದು.

† 'ಜಗತ್ತಿನಲ್ಲಿ' ಸಾಂ|| ನಾಮವೆಂದರ ಜ್ಞಾನರೂಪವಾದದ್ದು, ರೂಪವೆಂದರ ಜ್ಞೇಯ ರೂಪವಾದದು .

೩೬೮. ಯಾವ ಭಿಕ್ಷುವು **ಮೈತ್ರೀ**ಭಾವನೆಯಿಂದ* ವಿಹರಿಸುತ್ತಾ ಬುದ್ಧನ ಉಪದೇಶದಲ್ಲಿ ಮನಸ್ಸನ್ನು ತಿಳಿಗೊಳಿಸಿಕೊಂಡಿರುವನೋ, ಅವನು ಶಾಂತ ವಾಗಿಯೂ **ಸಂಸ್ಕಾರ**ಗಳನ್ನೆಲ್ಲ ನಾಶಗೊಳಿಸುವದಾಗಿಯೂ ಸುಖಮಯ ವಾಗಿಯೂ ಇರುವ (ನಿರ್ವಾಣ)ಪದವನ್ನು ಹೊಂದುವನು.

**ಸಿಂಚಾ ಭಿಕ್ಖು ಇಮಜ್ ನಾವಜ್ ಸಿತ್ತಾ ತೆ ಲಹುಂ ಎಸ್ಸತಿ**
**ಚೆತ್ವಾ ರಾಗಂ ಚ ದೋಸಂ ಚ ತತೋ ನಿಬ್ಬಾನಮೇಗಿಸಿ** ||೩೬೯||

೩೬೯. ಎಲೈ ಭಿಕ್ಷುವೆ, ಈ ದೋಣಿಯಲ್ಲಿನ ನೀರನ್ನು ತೆಗೆದುಹಾಕು,† ನೀರು ತೆಗೆದು ಚೆಲ್ಲಿದರೆ ಇದು ಹಗುರವಾಗಿ ಚಲಿಸುವದು. ರಾಗವನ್ನೂ ದ್ವೇಷವನ್ನೂ ಕತ್ತರಿಸಿದರೆ ಆಮೇಲೆ ನೀನು **ನಿರ್ವಾಣ**ವನ್ನು ಹೊಂದುವೆ.

**ಪಂಚ ಚಿಂದೆ ಪಂಚ ಜಹೆ ಪಂಚ ಚುತ್ತರಿ ಭಾವಯೆ**
**ಪಂಚ ಸಂಗಾತಿಗೋ ಭಿಕ್ಖು ಓಘತಿಣ್ಣೋ ತಿ ವುಚ್ಚತಿ** ||೩೭೦||

೩೭೦. ಐದನ್ನು‡ ಕತ್ತರಿಸಬೇಕು, ಐದನ್ನು ಬಿಡಬೇಕು, ಇನ್ನು ಐದನ್ನು ಭಾವನೆಮಾಡಬೇಕು ; ಐದರ ಸಂಗವನ್ನು ಮೀರಬೇಕು. ಅಂಥ ಭಿಕ್ಷುವು **'ಪ್ರವಾಹವನ್ನು ದಾಟಿದವನು'**§ ಎನಿಸುವನು.

**ಝಾಯ ಭಿಕ್ಖು ಮಾ ಚ ಪಮಾದೋ**
**ಮಾ ತೇ ಕಾಮಗುಣೇ ಭಮಸ್ಸು ಚಿತ್ತಜ್**
**ಮಾ ಲೋಹಗುಳಜ್ ಗಿಲೀ ಪಮುತ್ತೋ**
**ಮಾ ಕಂದೀ ದುಕ್ಖಂ ಇದಂ ತಿ ಡಯ್ಹಮಾನೋ** ||೩೭೧||

* ಮೈತ್ರೀ, ಕರುಣಾ, ಮುದಿತಾ, ಉಪೇಕ್ಷಾ - ಎಂಬ ಈ ನಾಲ್ಕು ಭಾವನೆಗಳಿಗೆ ಬ್ರಹ್ಮವಿಹಾರವೆಂದು ಹೆಸರು. † ನಾನೆಂಬ ಭಾವನೆಯೇ ದೋಣಿ ; ಮಿಥ್ಯಾವಿತರ್ಕವೆಂಬ ನೀರನ್ನು ಎತ್ತಿ ಚೆಲ್ಲಬೇಕು. ವ್ಯಾ||

‡ ಸತ್ಕಾಯದೃಷ್ಟಿ, ವಿಚಿಕಿತ್ಸಾ, ಶೀಲವ್ರತಪರಾಮರ್ಶ, ಕಾಮರಾಗ, ಪ್ರತಿಘ - ಎಂಬ ಐದು ಸಂಯೋಜನೆಗಳನ್ನು ಕತ್ತರಿಸಬೇಕು ; ರೂಪರಾಗ, ಅರೂಪರಾಗ, ಮಾನ, ಔದ್ಧತ್ಯ, ಅವಿದ್ಯಾ - ಎಂಬ ಐದು ಸಂಯೋಜನೆಗಳನ್ನು ಬಿಡಬೇಕು ; ಶ್ರದ್ಧಾ, ಸ್ಮೃತಿ, ವೀರ್ಯ, ಸಮಾಧಿ, ಪ್ರಜ್ಞಾ - ಎಂಬ ಐದು ಇಂದ್ರಿಯಗಳನ್ನು ಭಾವಿಸಬೇಕು ; ರಾಗ, ದ್ವೇಷ, ಮೋಹ, ಮಾನ, ದೃಷ್ಟಿ - ಎಂಬ ಐದರ ಸಂಗವನ್ನು ಮೀರಬೇಕು. ವ್ಯಾ||

§ ಇವನು **ಓಘತೀರ್ಣನು** - ಎಂದರೆ ಕಾಮ, ಭವ, ದೃಷ್ಟಿ, ಅವಿದ್ಯಗಳು ಅವನಿಗೆ ಇಲ್ಲ.

೩೭೧. ಭಿಕ್ಷುವೆ, ಧ್ಯಾನಮಾಡು. ಎಚ್ಚರದಪ್ಪಬೇಡ, ನಿನ್ನ ಚಿತ್ತವು ಕಾಮಗುಣದಲ್ಲಿ ಸುತ್ತಾಡದೆ ಇರಲಿ ; ಪ್ರಮತ್ತನಾಗಿ (ಕಾದ) ಕಬ್ಬಿಣದ ಗುಂಡನ್ನು (ನರಕದಲ್ಲಿ) ತಿನ್ನದಿರು, ಅದು ನಿನ್ನನ್ನು ಸುಡುವಾಗ 'ಅಯ್ಯೋ, ಇದು ದುಃಖವು !' ಎಂದು ಕೂಗುವಂತೆ ಮಾಡಿಕೊಳ್ಳದಿರು.

**ನತ್ಥಿ ಝಾನಜ್ ಅಪಞ್ಞಸ್ಸ ಪಞ್ಞಾ ನತ್ಥಿ ಅಝಾಯತೋ**
**ಯಮ್ಹಿ ಝಾನಜ್ ಚ ಪಞ್ಞಾ ಚ ಸ ವೇ ನಿಬ್ಬಾಣಸಂತಿಕೇ** ||೩೭೨||

೩೭೨. ಪ್ರಜ್ಞೆಯಿಲ್ಲದವನಿಗೆ ಧ್ಯಾನವಿಲ್ಲ. ಧ್ಯಾನಮಾಡದವನಿಗೆ ಪ್ರಜ್ಞೆಯಿಲ್ಲ ; ಯಾವನಿಗೆ **ಧ್ಯಾನ**ವೂ **ಪ್ರಜ್ಞೆ**ಯೂ ಇರುವವೋ, ಅವನೇ ನಿರ್ವಾಣಕ್ಕೆ ಹತ್ತಿರವಿರುವನು.

**ಸುಞ್ಞಾಗಾರಜ್ ಪವಿಟ್ಠಸ್ಸ ಸಂತ ಚಿತ್ತಸ್ಸ ಭಿಕ್ಖುನೋ**
**ಅಮಾನುಸೀ ರತೀ ಹೋತಿ ಸಮ್ಮಾ ಧಮ್ಮಜ್ ವಿಪಸ್ಸತೋ** ||೩೭೩||

೩೭೩. ಶೂನ್ಯಾಗಾರವನ್ನು ಹೊಕ್ಕು ಚಿತ್ತವನ್ನು ಶಾಂತಿಗೊಳಿಸಿಕೊಂಡು ಸರಿಯಾಗಿ **ಧರ್ಮ**ವನ್ನು ಕಂಡುಕೊಂಡ ಭಿಕ್ಷುವಿಗೆ ಮನುಷ್ಯರಿಗೆ ಯಾರಿಗೂ ದೊರಕದ ಆನಂದವು ದೊರಕುವದು.

**ಯತೋ ಯತೋ ಸಮ್ಮಸತಿ ಖಂಧಾನಜ್ ಉದಯಬ್ಬಯಜ್**
**ಲಭತೀ ಪೀತಿಪಾಮೊಜ್ಜಜ್ ಅಮತಜ್ ತಜ್ ವಿಜಾನತಜ್** ||೩೭೪||

೩೭೪. **ಸ್ಕಂಧ**ಗಳ ಹುಟ್ಟನ್ನೂ ಹೊಂದನ್ನೂ ಹೇಗೆಹೇಗೆ ಆಲೋಚನೆ ಮಾಡುವನೋ, ಅಷ್ಟುಮಟ್ಟಿಗೆ ಪ್ರೀತಿಯ ಪ್ರಮೋದವನ್ನು ಪಡೆಯುವನು ; ಬಲ್ಲವರಿಗೆ ಅದು ಅಮೃತವಾಗಿರುವದು.

**ತತ್ರಾಯಂ ಆದಿ ಭವತಿ ಇಧಾ ಪಞ್ಞಸ್ಸ ಭಿಕ್ಖುನೋ**
**ಇಂದ್ರಿಯಗುತ್ತಿ ಸಂತುಟ್ಠೀ ಪಾತಿಮೊಕ್ಖೇ ಚ ಸಂವರೋ**
**ಮಿತ್ತೆ ಭಜಸ್ಸು ಕಲ್ಯಾಣೆ ಸುದ್ಧಜೀವೇ ಅತಂಡಿತೇ** ||೩೭೫||

೩೭೫. ಪ್ರಾಜ್ಞನಾದ ಭಿಕ್ಷುವಿಗೆ ಇಲ್ಲಿ ಇದು ಮೊದಲನೆಯ (ಕರ್ತವ್ಯವು) : ಇಂದ್ರಿಯವನ್ನು ಕಾಪಾಡಿಕೊಳ್ಳುವದು, ತೃಪ್ತನಾಗಿರುವುದು, **ಪ್ರಾತಿಮೋಕ್ಷ**ವನ್ನು* ಕಾಪಾಡಿಕೊಳ್ಳುವದು, (ಇದಕ್ಕಾಗಿ) **ಶುದ್ಧಜೀವನ**ವುಳ್ಳವ

---

* ಭಿಕ್ಷುಗಳ ಆಚಾರ.

ರಾಗಿಯೂ ಸೋಮಾರಿಗಳಲ್ಲದವರಾಗಿಯೂ ಇರುವ **ಕಲ್ಯಾಣಮಿತ್ರ**ರನ್ನು ಸೇರಿರುವದು.

**ತ್ಯಸ್ಸ ಆಚಾರ ಕುಸಲೋ ಸಿಯಾ**
**ತತೋ ಪಾಮುಜ್ಜಬಹುಳೋ ದುಕ್ಖಸ್ಸಂತಙ್ ಕರಿಸ್ಸಸಿ** ||೩೭೬||

೩೭೬. ಮತ್ತೊಬ್ಬರ ವಿಷಯದಲ್ಲಿ ಸತ್ಕಾರಬುದ್ಧಿಯಿಂದ ನಡೆದುಕೊಳ್ಳಬೇಕು, ಆಚಾರದಲ್ಲಿ ಕುಶಲನಾಗಿರಬೇಕು ; ಹಾಗಿದ್ದರೆ ಬೇಕಾದಷ್ಟು ಪ್ರಮೋದದಿಂದ ಕೂಡಿ ದುಃಖವನ್ನು ಕೊನೆಗಾಣಿಸಿಕೊಳ್ಳುವನು.

**ವಸ್ಸಿಕಾ ವಿಯ ಪುಪ್ಫಾಣಿ ಮದ್ದವಾಣಿ ಪಮುಂಚತಿ**
**ಏವಙ್ ರಾಗಙ್ ಚ ದೋಸಙ್ ಚ ವಿಪ್ಪಮುಂಚೇಥ ಭಿಕ್ಖವೋ** ||೩೭೭||

೩೭೭. ಎಲೈ ಭಿಕ್ಷುಗಳೆ, **ವರ್ಷಿಕೆ*** ಎಂಬ ಗಿಡವು ಬಾಡಿದ ಹೂಗಳನ್ನು ಕೆಳಕ್ಕೆ ಉದುರಿಸುವ ಹಾಗೆ ರಾಗವನ್ನೂ ದ್ವೇಷವನ್ನೂ ಕೆಳಕ್ಕೆ ಉದುರಿಸಿರಿ.

**ಸಂತಕಾಯೋ ಸಂತವಾಚೋ ಸಂತವಾ ಸುಸಮಾಹಿತೋ**
**ವಂತಲೋಕಾಮಿಸೋ ಭಿಕ್ಖು ಉಪಸಂತೋ ತಿ ವುಚ್ಚತಿ** ||೩೭೮||

೩೭೮. ಶರೀರದಲ್ಲಿ ಶಾಂತನಾಗಿ, ಮಾತಿನಲ್ಲಿ ಶಾಂತನಾಗಿ, ಮನಸ್ಸಿನಲ್ಲಿ ಶಾಂತನಾಗಿ, ಚೆನ್ನಾಗಿ ಸಮಾಧಾನವನ್ನು ಹೊಂದಿ ಲೋಕದ ಸುಖವೆಂಬ ಮಾಂಸವನ್ನು ಕಕ್ಕಿರುವ ಭಿಕ್ಷುವು 'ಉಪಶಾಂತ'ನೆನಿಸುವನು.

**ಅತ್ತನಾ ಚೋದಯತ್ತಾನಙ್ ಪಟಿಮಾಸೇಥ ಅತ್ತನಾ**
**ಸೋ ಅತ್ತಗುತ್ತೋ ಸತಿಮಾ ಸುಖಙ್ ಭಿಕ್ಖು ವಿಹಾಹಿಸಿ** ||೩೭೯||

೩೭೯. ಎಲೈ, ಭಿಕ್ಷುವೆ, ನಿನ್ನನ್ನು ನೀನೇ ಹುರಿದುಂಬಿಸಿಕೊ, ನಿನ್ನನ್ನು ನೀನು ಪರೀಕ್ಷೆ ಮಾಡಿಕೊ† ; ಹೀಗೆ ನಿನ್ನನ್ನು ಕಾಪಾಡಿಕೊಂಡು ಸ್ಮೃತಿಯುಳ್ಳವನಾಗಿದ್ದರೆ ಸುಖವಾಗಿ ವಿಹರಿಸುವೆ.

**ಅತ್ತಾಹಿ ಅತ್ತನೋ ನಾಥೋ ಕೋ ಹಿ ನಾಥೋ ಪರೋ ಸಿಯಾ**
**ತಸ್ಮಾ ಸಞ್ಞಮಯತ್ತಾನಙ್ ಅಸ್ಸಙ್ ಭದ್ರಙ್ ವ ವಾಣಿಜೋ** ||೩೮೦||

* ಇದು ಪಾದರಿಯಿರಬಹುದೆ ?

† ಪಟಿಮಾಸೇ (ಪರಿಮೀಮಾಂಸೇತ್) ಎಂಬ ಪಾ|| ಪಾಠವನ್ನೇ ಇಟ್ಟುಕೊಂಡಿದೆ.

೩೮೦. ತನಗೆ ತಾನೇ ನಾಥನು, ತನಗೆ ತಾನೇ ಗತಿಯು. ಆದ್ದರಿಂದ ಒಳ್ಳೆಯ ಕುದುರೆಯನ್ನು ವರ್ತಕನು ಹಿಡಿತದಲ್ಲಿಟ್ಟುಕೊಳ್ಳುವಂತೆ ನಿನ್ನನ್ನು ನೀನೇ ಹಿಡಿತದಲ್ಲಿಟ್ಟುಕೊ.

**ಪಾಮೋಜ್ಜಬಹುಳೋ ಭಿಕ್ಕು ಪಸನ್ನೋ ಬುದ್ಧಸಾಸನೇ**
**ಅಧಿಗಚ್ಛೆ ಪದಙ್ ಸಂತಙ್ ಸಂಖಾರೂಪಸಮಙ್ ಸುಖಙ್** ||೩೮೧||

೩೮೧. ಯಾವ ಭಿಕ್ಷುವು ಹೆಚ್ಚಿನ ಪ್ರಮೋದದಲ್ಲಿರುವನೋ, ಬುದ್ಧನ ಉಪದೇಶದಲ್ಲಿ ಮನಸ್ಸನ್ನು ತಿಳಿಯಾಗಿರಿಸಿಕೊಂಡಿರುವನೊ, ಅವನು ಶಾಂತ ವಾಗಿಯೂ **ಸಂಸ್ಕಾರ**ಗಳ* ನಾಶವನ್ನು ಮಾಡುವದಾಗಿಯೂ ಸುಖಮಯ ವಾಗಿಯೂ ಇರುವ ಪದವನ್ನು ಹೊಂದುವನು.

**ಯೋ ಹವೆ ದಾಹರೋ ಭಿಕ್ಖು ಯುಂಜತಿ ಬುದ್ಧಸಾಸನೆ**
**ಸೋ ಇಮಙ್ ಲೋಕಙ್ ಪಭಾಸೇತಿ ಅಬ್ಭಾ ಮುತ್ತೋ ವ ಚಂದಿಮಾ** ||೩೮೨||

೩೮೨. ಇನ್ನೂ ಚಿಕ್ಕವನಾಗಿರುವಾಗಲೇ ಯಾವ ಭಿಕ್ಷುವು ಬುದ್ಧನ ಉಪದೇಶದಲ್ಲಿ ತೊಡಗಿದ ಮನಸ್ಸುಳ್ಳವನಾಗಿರುವನೋ ಅವನು ಮೋಡದಿಂದ ಬಿಡುಗಡೆಯಾದ ಚಂದ್ರನಂತೆ ಈ ಲೋಕವನ್ನು ಬೆಳಗುವನು.

# ೨೬. ಬ್ರಾಹ್ಮಣವರ್ಗ (ಬ್ರಾಹ್ಮಣವಗ್ಗ)

**ಛಿಂದ ಸೋತಙ್ ಪರಕ್ಕಮ್ಮ ಕಾಮೇ ಪನುದ ಬ್ರಾಹ್ಮಣ**
**ಸಂಖಾರಾನಙ್ ಖಯಙ್ ಞತ್ವಾ ಅಕತಞ್ಞೂಸಿ ಬ್ರಾಹ್ಮಣ** ||೩೮೩||

೩೮೩. ಎಲೈ ಬ್ರಾಹ್ಮಣನೆ, ಪ್ರವಾಹವನ್ನು† ನಿಲ್ಲಿಸು, ಪರಾಕ್ರಮದಿಂದ ಕಾಮಗಳನ್ನು ಹೋಗಲಾಡಿಸಿಕೊ. **ಸಂಸ್ಕಾರ**ಗಳು ನಾಶವಾಗುವ ರೀತಿಯನ್ನು

* ಮಾಡಲ್ಪಟ್ಟ ವಸ್ತುಗಳು, ಐದು ಸ್ಕಂಧಗಳು.

† ಸ್ರೋತ - ೮೯ನೆಯ ಪುಟದ † ಚಿಹ್ನೆಯ ಟಿಪ್ಪಣಿಯನ್ನು ನೋಡಿ.

ಅರಿತುಕೊಂಡರೆ, ಎಲೈ ಬ್ರಾಹ್ಮಣನೆ, ಒಂದರ ಕಾರ್ಯವಲ್ಲದ (ನಿರ್ವಾಹವನ್ನು) ತಿಳಿದುಕೊಳ್ಳುವೆ.

**ಯದಾ ದ್ವಯೇಸು ಧಮ್ಮೇಸು ಪಾರಗು ಹೋತಿ ಬ್ರಾಹ್ಮಣೋ**
**ಅಥಸ್ಸ ಸಬ್ಬೇ ಸಂಯೋಗಾ ಅತ್ಥಙ್ ಗಚ್ಛಂತಿ ಜಾನತೋ ||೩೮೪||**

೩೮೪. ಯಾವಾಗ ಎರಡು ಧರ್ಮಗಳಲ್ಲಿಯೂ* ಬ್ರಾಹ್ಮಣನು ಪಾರಂಗತವಾಗುವನೋ, ಆಗ ಆ ಜ್ಞಾನಿಯ ಎಲ್ಲಾ ಬಗೆಯ **ಸಂಯೋಗ**ಗಳೂ† ಮರೆಯಾಗುವವು.

**ಯಸ್ಸ ಪಾರಙ್ ಅಪಾರಙ್ ವಾ ಪಾರಾಪಾರಙ್ ನ ವಿಜ್ಜತಿ**
**ವೀತದ್ದರಙ್ ವಿಸಂಯುತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೩೮೫||**

೩೮೫. ಯಾವನಿಗೆ ಆಚೆಯ ದಡವಾಗಲಿ,‡ ಈಚೆಯ ದಡವಾಗಲಿ, ಆಚೆಯ ದಡ ಈಚೆಯ ದಡ - ಎಂಬೀ ಎರಡೂ ಆಗಲಿ - ಇರುವದಿಲ್ಲವೋ, ಯಾವ ಹೆದರಿಕೆಯೂ ಇಲ್ಲದೆ **ಸಂಯೋಗ**ವೂ ಇಲ್ಲದೆ ಇರುವ ಅವನನ್ನು ನಾನು ಬ್ರಾಹ್ಮಣನೆಂದು ಕರೆಯುವೆನು.

**ಝಾಯಿಙ್ ವಿರಜಂ ಆಸೀನಙ್ ಕಟಕಿಚ್ಚಙ್ ಅನಾಸವಙ್**
**ಉತ್ತಮತ್ಥಙ್ ಅನುಪ್ಪತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೩೮೬||**

೩೮೬. ಯಾವನು ಧ್ಯಾನಮಾಡುವವನೂ ನಿರ್ಮಲನೂ ದೋಷವಿಲ್ಲದವನೂ ಆಗಿ ಆಸನದಲ್ಲಿ ಕುಳಿತಿರುವನೋ, ಯಾವನು ಕೃತಕೃತ್ಯನಾಗಿ ಯಾವ **ಆಸ್ರವ**ಗಳೂ ಇಲ್ಲದೆ, ಉತ್ತಮಾರ್ಥವನ್ನು ಪಡೆದುಕೊಂಡಿರುವನೋ ಆತನನ್ನು ನಾನು ಬ್ರಾಹ್ಮಣನೆಂದು ಕರೆಯುವೆನು.

* ಶಮಥ, ವಿಪಶ್ಯನಾ - ಎಂಬ ಎರಡು ಸಾಧನಗಳು. ಪ್ರೊ|| , ಇದನ್ನೇ 'ಚಿತ್ತ ಸಂಯಮ ಮತ್ತು ಭಾವನಾ' ಎಂದು ಸಾಂ||ರು ಸರಳಾನುವಾದಮಾಡಿರುತ್ತಾರೆ. ಚೀಣ ಧಮ್ಮಪದದಲ್ಲಿ ನೈರಾತ್ಮ್ಯದ್ವಯ, ಶೂನ್ಯದ್ವಯ - ಎಂಬ ಅರ್ಥವು ಹೊರಡುತ್ತದೆ.

† ಬಂಧನಗಳು, ಸಂಯೋಜನಗಳು.

‡ ಈ ಶ್ಲೋಕದಲ್ಲಿ ಪಾರ (ಆಚೆಯ ದಡ), ಅಪಾರ (ಈಚೆಯ ದಡ) - ಎಂಬ ಮಾತುಗಳ ಅರ್ಥವು ಸರಿಯಾಗಿ ತಿಳಿಯುವಂತಿಲ್ಲ ; ಒಳಗಿನ ಆರು ಆಯತನಗಳು (ಇಂದ್ರಿಯಗಳು), ಹೊರಗಿನ ರೂಪಾದಿಗಳು ಎಂದು ವ್ಯಾ||

**ದಿವಾ ತಪತಿ ಆದಿಚ್ಚೋ ರತ್ತಿಜ್ ಆಭಾತಿ ಚಂದಿಮಾ**
**ಸನ್ನದ್ಧೋ ಖತ್ತಿಯೋ ತಪತಿ ಝಾಯೀ ತಪತಿ ಬ್ರಾಹ್ಮಣೋ**
**ಅಥಾ ಸಬ್ಬಂ ಅಹೋರತ್ತಜ್ ಬುದ್ಧೋ ತಪತಿ ತೇಹಸಾ** ॥೩೮೭॥

೩೮೭. ಸೂರ್ಯನು ಹಗಲು ಬೆಳಗುತ್ತಾನೆ ; ಚಂದ್ರನು ಇರುಳಿನಲ್ಲಿ ಬೆಳಗುತ್ತಾನೆ ; ಕ್ಷತ್ರಿಯನು ಯುದ್ಧಸನ್ನದ್ಧನಾದಾಗ ಬೆಳಗುತ್ತಾನೆ ; ಬ್ರಾಹ್ಮಣನು ಧ್ಯಾನಮಾಡುವಾಗ ಬೆಳಗುತ್ತಾನೆ. ಆದರೆ **ಬುದ್ಧನು** ಹಗಲೂ ಇರುಳೂ ಯಾವಾಗಲೂ ತನ್ನ ತೇಜಸ್ಸಿನಿಂದ ಬೆಳಗುತ್ತಿರುವನು.

**ಬಾಹಿತಪಾಪೋ ತಿ ಬ್ರಾಹ್ಮಣೋ ಸಮಚರಿಯಾ ಸಮಣೋ ತಿ ವುಚ್ಚತಿ**
**ಪಬ್ಬಾಜಯತ್ತನೋ ಮಲಜ್ ತಸ್ಮಾ ಪಬ್ಬಜಿತೋ ತಿ ವುಚ್ಚತಿ** ॥೩೮೮॥

೩೮೮. ಪಾಪಗಳನ್ನು ಬಹಿಷ್ಕರಿಸಿದವನು ಬ್ರಾಹ್ಮಣನು* ; ಸಮತ್ವವನ್ನಾಚರಿಸುವವನು **ಸಮಣ**(ಶ್ರವಣ)ನೆನಿಸುವನು ; ತನ್ನ ಚಿತ್ತದ ಮಲವನ್ನು ಹೋಗಲಾಡಿಸಿಕೊಂಡವನು **ಪ್ರವ್ರಜಿತ**ನೆನಿಸಿಕೊಳ್ಳುತ್ತಾನೆ.

**ನ ಬ್ರಾಹ್ಮಣಸ್ಸ ಪಹರೆಯ್ಯ ನಾಸ್ಸ ಮುಂಚೇಥ ಬ್ರಾಹ್ಮಣೋ**
**ಧೀ ಬ್ರಾಹ್ಮಣಸ್ಸ ಹಂತಾರಜ್ ತತೋ ಧಿ ಯಸ್ಸ ಮುಂಚತಿ** ॥೩೮೯॥

೩೮೯. ಬ್ರಾಹ್ಮಣನನ್ನು ಹೊಡೆಯಬಾರದು ಬ್ರಾಹ್ಮಣನು ಹಾಗೆ ಹೊಡೆದವನ ಮೇಲೆ ಕೋಪಮಾಡಬಾರದು. ಬ್ರಾಹ್ಮಣನನ್ನು ಹೊಡೆಯುವವನಿಗೆ ಧಿಕ್ಕಾರವಿರಲಿ, ಹಾಗೆ ಹೊಡೆದವನ ಮೇಲೆ ಯಾವ ಬ್ರಾಹ್ಮಣನು ಕೋಪಮಾಡುವನೋ ಅವನಿಗೆ ಮತ್ತೂ ದಿಕ್ಕಾರವಿರಲಿ.

**ನ ಬ್ರಾಹ್ಮಣಸ್ಸೇತದ್ ಅಕಿಂಚಿ ಸೆಯ್ಯೋ**
**ಯದ್ ಆನಿಸೆಧೋ ಮನಸೋ ಪಿಯೇಹಿ**
**ಯತೊ ಯತೋ ಹಿಂಸಮನೋ ನಿವೃತ್ತತಿ**
**ತತೋ ತತೋ ಸಮ್ಮತಿ ಯೇವ ದುಕ್ಖಜ್** ॥೩೯೦॥

೩೯೦. ಯಾವ ಬ್ರಾಹ್ಮಣನು ತನಗೆ ಪ್ರಿಯವಾದ ಪದಾರ್ಥಗಳನ್ನು ಮನಸ್ಸಿನಿಂದ ನಿಷೇಧಿಸುವನೋ ಆಗ ಅವನಿಗೆ ಕಡಿಮೆ ಶ್ರೇಯಸ್ಸಾಗುವದಿಲ್ಲ.

* ಇದು ಕಲ್ಪನಾತ್ಮಕವಾದ ; ಈ ಬಗೆಯಲ್ಲಿ ಪದಗಳಿಗೆ ಅವಯವಾರ್ಥವನ್ನು ಕಲ್ಪಿಸಿ ಅರ್ಥಸ್ವಾರಸ್ಯವನ್ನು ತೆಗೆಯುವದು ವೇದದಲ್ಲಿಯೂ ಉಂಟು.

ಹಿಂಸೆಮಾಡಬೇಕೆಂಬ ಮನಸ್ಸು ಯಾವಯಾವದರಿಂದ ಹಿಂಜರಿಯುವದೋ ಅದದರಿಂದ ದುಃಖವು ಶಾಂತಿಯಾಗಿಯೇ ತೀರುವದು.

**ಯಸ್ಸ ಕಾಯೇನ ವಾಚಾಯ ಮನಸಾ ನತ್ಥಿ ದುಕ್ಕತಙ್**
**ಸಂವುತಙ್ ತೀಹಿ ಠಾಣೇಹಿ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೩೯೧||

೩೯೧. ಯಾವನು ಕಾಯದಿಂದಲಾಗಲಿ ಮಾತಿನಿಂದಲಾಗಲಿ ಮನಸ್ಸಿನಿಂದಲಾಗಲಿ ದುಷ್ಕೃತ್ಯವನ್ನು ಮಾಡಿಲ್ಲವೋ, ಯಾವನು ಈ ಮೂರು ಸ್ಥಾನಗಳನ್ನೂ **ಸಂವರ**ಮಾಡಿರುವನೋ* - ಅವನನ್ನು ನಾನು ಬ್ರಾಹ್ಮಣನೆಂದು ಕರೆಯುವೆನು.

**ಯಮ್ಹಾ ಧಮ್ಮಙ್ ವಿಜಾನೆಯ್ಯ ಸಮ್ಮಾ ಸಂಬುದ್ಧದೇಸಿತಙ್**
**ಸಕ್ಕಚ್ಚಙ್ ತಙ್ ನಮಸ್ಸೆಯ್ಯ ಅಗ್ಗಿಹುತ್ತಙ್ ವ ಬ್ರಾಹ್ಮಣೋ** ||೩೯೨||

೩೯೨. ಯಾವನಿಂದ **ಸಮ್ಯಕ್ಸಂಬುದ್ಧನು** ಉಪದೇಶಿಸಿರುವ ಧರ್ಮವನ್ನು ತಿಳಿದುಕೊಳ್ಳಬಹುದೋ ಆತನನ್ನು, **ಅಗ್ನಿಹೋತ್ರ**ವನ್ನು ಬ್ರಾಹ್ಮಣನು ನಮಸ್ಕರಿಸುವಂತೆ, ಸತ್ಕಾರಪೂರ್ವಕವಾಗಿ† ನಮಸ್ಕರಿಸಬೇಕು.

**ನ ಜಟಾಹಿ ನ ಗೋತ್ತೇಮ ನ ಜಚ್ಚಾ ಹೋತಿ ಬ್ರಾಹ್ಮಣೋ**
**ಯಮ್ಹಿ ಸಚ್ಚಙ್ ಚ ಧಮ್ಮೋ ಚ ಸೊ ಸುಚೀ ಸೊ ಚ ಬ್ರಾಹ್ಮಣೋ** ||೩೯೩||

೩೯೩. ಜಟೆಗಳಿಂದಲಾಗಲಿ ಗೋತ್ರಗಳಿಂದಾಗಲಿ ಜಾತಿಯಿಂದಲಾಗಲಿ ಬ್ರಾಹ್ಮಣನಾಗುವದಿಲ್ಲ ; ಯಾವನಲ್ಲಿ ಸತ್ಯವೂ ಧರ್ಮವೂ ಇರುವದೋ - ಅವನೇ ಶುಚಿಯು, ಅವನೇ ಬ್ರಾಹ್ಮಣನು.

**ಕಿಙ್ ತೇ ಜಟಾಹಿ ದುಮ್ಮೇಧ ಕಿಙ್ ತೇ ಅಜಿನಸಾಟಿಯಾ**
**ಅಬ್ಭಂತರಙ್ ತೇ ಗಹಣಙ್ ಬಾಹಿರಙ್ ಪರಿಮಜ್ಜಸಿ** ||೩೯೪||

೩೯೪. ಎಲಾ ಮೂಢನೆ, ನಿನಗೆ ಜಟೆಗಳಿಂದಾಗಬೇಕಾದದ್ದೇನು ? ಕೃಷ್ಣಾಜಿನದಿಂದಲೂ ಶಾಟಿಯಿಂದಲೂ ಆಗಬೇಕಾದದ್ದೇನು ನಿನ್ನೊಳಗೆ (ರಾಗಾದಿ ಮಲವು) ತುಂಬಿದೆ, ಹೊರಗನ್ನು ಶ್ರ ತೊಳೆದುಕೊಳ್ಳುತ್ತಿರುವೆಯಲ್ಲ !

* ಬಿಗಿಹಿಡಿದಿರುವನೋ.

† ಸತ್ಕೃತ್ಯ ಎಂಬ ಸಾಂ || ಪಾಠದಂತೆ ಇದು ಅನುವಾದ ; ಸತ್ಕೃತ್ಯಂ ಎಂಬ (ಪೂ||) ಪಾಠದಲ್ಲಿ 'ಪುಣ್ಯಶಾಲಿಯಾದ ಆತನನ್ನು' ಎಂದು ಕನ್ನಡಿಸಬೇಕಾಗುವದು.

**ಪಜ್ಸುಕೂಲಧರಙ್ ಜಂತುಙ್ ಕಿಸಙ್ ಧಮ್ಮನಿಸಂಥತಙ್**
**ಏಕಙ್ ವನಸ್ಮಿಙ್ ಝಾಯಂತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೩೯೫||**

೩೯೫. ಯಾವನು ಮಾಸಲುಚಿಂದಿಯನ್ನು ಧರಿಸಿ, ಮೈಯೆಲ್ಲ ಬಡಕಲಾಗಿ, ನಾಡಿಗಳು ನುಡಿದುಕೊಂಡಿರುವ ಮೈಯುಳ್ಳವನಾಗಿ, ಒಬ್ಬನೇ ಕಾಡಿನಲ್ಲಿ ಧ್ಯಾನಮಾಡುತ್ತಿರುವನೋ - ಅವನನ್ನು ನಾನು ಬ್ರಾಹ್ಮಣನೆಂದು ಕರೆಯುವೆನು.

**ನ ಚಾಹಙ್ ಬ್ರಾಹ್ಮಣಙ್ ಬ್ರೂಮಿ ಯೋನಿಜಙ್ ಮತ್ತಿ ಸಂಭವಙ್**
**ಭೋವಾದಿ ನಾಮ ಸೊ ಹೋತಿ ಸಚೆ ಹೋತಿ ಸಕಿಂಚನೋ**
**ಅಕಿಂಚನಙ್ ಅನಾದಾನಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೩೯೬||**

೩೯೬. ಬ್ರಾಹ್ಮಣಯೋನಿಯಲ್ಲಿ ಬ್ರಾಹ್ಮಣಮಾತೃವಿನಿಂದ ಹುಟ್ಟಿದ ಮಾತ್ರದಿಂದ ಯಾರನ್ನೂ ನಾನು ಬ್ರಾಹ್ಮಣನೆನ್ನಲಾರೆ ; ಅವನು 'ಭೋವಾದಿ' ಯೆನಿಸಿಕೊಳ್ಳುವನು,* ಅವನು ವಿಷಯಗಳ ಸಂಗ್ರಹವುಳ್ಳವನಾಗುವನು. ತನ್ನದೆಂಬುದು ಯಾವದೂ ಇಲ್ಲದೆ, ಯಾವದೊಂದನ್ನೂ ತೆಗೆದುಕೊಳ್ಳುವ ಇಚ್ಛೆಯಿಲ್ಲದಿರುವನೋ - ಅವನನ್ನು ನಾನು ಬ್ರಾಹ್ಮಣನೆಂದು ಕರೆಯುವನು.

**ಸಬ್ಬಸಞ್ಞೋಜನಙ್ ಚಿತ್ವಾ ಯೋ ವೆ ನ ಪರಿತಸ್ಸತಿ**
**ಸಂಗಾತಿಗಙ್ ವಿಸಙ್ಯುತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೩೯೭||**

೩೯೭. ಸಂಯೋಜನೆಗಳನ್ನೆಲ್ಲ ಕತ್ತರಿಸಿ, ಏತಕ್ಕೂ ಹೆದರದವನಾಗಿ, ಸಂಗವನ್ನು ಮೀರಿ, ಒಂದರಲ್ಲಿಯೂ ಸಂಯೋಗವಿಲ್ಲದೆ ಯಾವನು ಇರುವನೋ - ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಚಿತ್ವಾ ನದ್ಧಿಙ್ ವರತ್ತಂಚ ಸಂದಾಮಙ್ ಸಹನುಕ್ಕಮಙ್**
**ಉಕ್ಖಿತ್ತಾಪಳಿಘಙ್ ಬುದ್ಧಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೩೯೮||**

೩೯೮. ಯಾವನು ತನ್ನ ಮೂಗುದಾಣ, ಹಗ್ಗ, ಕಟ್ಟು, ಹುರಿ† - ಎಲ್ಲವನ್ನೂ ಒಂದೊಂದಾಗಿ ಕತ್ತರಿಸಿಕೊಂಡು ಗೂಟವನ್ನು ಕಿತ್ತುಹಾಕಿ **ಬುದ್ಧ**ನಾಗಿರುವನೋ - ಅವನನ್ನು ನಾನು ಬ್ರಾಹ್ಮಣನೆಂದು ಕರೆಯುವೆನು.

* ಬ್ರಾಹ್ಮಣರು ಸಂಸ್ಕೃತದಲ್ಲಿ ಮಾತನಾಡುವಾಗ ಒಬ್ಬರನ್ನೊಬ್ಬರು 'ಭೋ' ಎಂದು ಸಂಬೋಧಿಸುವರು.

† ರಾಗದ್ವೇಷಾದಿಗಳನ್ನು ಅಜ್ಞಾನವನ್ನೂ ಕಳೆದುಕೊಂಡವನು ಎಂದು ಒಟ್ಟರ್ಥ.

ಅಕ್ಕೋಸಙ್ ವಧಬಂಧಂಚ ಅದಿಟ್ಠೋ ಯೋ ತಿತಿಕ್ಖತಿ
ಖಂತಿಬಲಙ್ ಬಲಾನೀಕಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೩೯೯||

೩೯೯. ಒಬ್ಬನು ತನ್ನ ಮೇಲೆ ಮಾಡುವ ನಿಂದೆಯನ್ನೂ ವಧಬಂಧಗಳನ್ನೂ ಯಾವನು ಚಿತ್ತದಲ್ಲಿ ದುಷ್ಟವೃತ್ತಿಯನ್ನು ಮಾಡಿಕೊಳ್ಳದೆ ತಡೆದು ಕೊಳ್ಳುವನೋ, ಕ್ಷಮಾಗುಣದ ಬಲವುಳ್ಳ ಬಲಗಳ ಸೇನೆಗಳುಳ್ಳ* ಆತನನ್ನು ನಾನು ಬ್ರಾಹ್ಮಣನೆನ್ನುವೆನು.

ಅಕ್ಕೋಧನಙ್ ವತವಂತಙ್ ಸೀಲವಂತಙ್ ಅನುಸ್ಸುತಙ್
ದಂತಙ್ ಅಂತಿಮಸಾರೀರಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೪೦೦||

೪೦೦. ಯಾವನು ಸಿಟ್ಟಿಲ್ಲದೆ, ವ್ರತಿಯಾಗಿ, ಶೀಲವಂತನಾಗಿ, ಬಹುಶ್ರುತನಾಗಿ† ದಾಂತನಾಗಿರುವನೋ, ಈ ಶರೀರವೇ ಕೊನೆಯದಾಗಿರುವ ಆತನನ್ನು ನಾನು ಬ್ರಾಹ್ಮಣನೆನ್ನುವೆನು.

ವಾರಿ ಪೊಕ್ಖರಪತ್ತೇ ವ ಆರಗ್ಗೇ ರಿವ ಸಾಸಪೋ
ಯೋ ನ ಲಿಪ್ಪತಿ ಕಾಮೇಸು ತಮಹಙ್ ಬ್ರೂಮಿ ಬ್ರಾಹ್ಮಣಙ್ ||೪೦೧||

೪೦೧. ಕಮಲದೆಲೆಯಲ್ಲಿರುವ ನೀರಿನಂತೆಯೂ ದಬ್ಬಳದ ತುದಿಯಲ್ಲಿರುವ ಸಾಸಿವೆಯಂತೆಯೂ ಯಾವನು ಕಾಮಗಳಿಗೆ ಅಂಟದೆ ಇರುವನೋ - ಅವನನ್ನು ನಾನು ಬ್ರಾಹ್ಮಣನೆಂದು ಕರೆಯುವೆನು.

ಯೋ ದುಕ್ಖಸ್ಸ ಪಜಾನಾತಿ ಇಧೇನ ಖಯಂ ಅತ್ತನೋ
ಪನ್ನಭಾರಙ್ ವಿಸಙ್ಯುತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೪೦೨||

೪೦೨. ಯಾವನು ಇಲ್ಲಿಯೇ ತನ್ನ ದುಃಖದ ನಾಶವನ್ನು ಕೊಳ್ಳುವನೋ, ಯಾವನು ತನ್ನ ಹೊರೆಯನ್ನು ಇಳಿಸಿಕೊಂಡಿರುವನೋ ಯಾವನು ಆಸಕ್ತಿಯಿಲ್ಲದೆ ಇರುವನೋ, ಅವನನ್ನು ನಾನು ಬ್ರಾಹ್ಮಣನೆಂದು ಕರೆಯುವೆನು.

ಗಂಭೀರಪಞ್ಞಙ್ ಮೇಧಾವಿಙ್ ಮಗ್ಗಾಮಗ್ಗಸ್ಸ ಕೋವಿದಙ್
ಉತ್ತಮತ್ಥಙ್ ಅನುಪ್ಪತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೪೦೩||

* ಐದು ಅಥವಾ ಹತ್ತು ಬಲಗಳು ಬುದ್ಧನಿಗಿರುವವೆಂದು ಬೌದ್ಧರ ಮತವು.

† ಶಾಸ್ತ್ರವನ್ನು ಚೆನ್ನಾಗಿ ಓದಿ ತಿಳಿದುಕೊಂಡು.

೪೦೩. ಯಾವನು ಗಂಭೀರವಾದ **ಪ್ರಜ್ಞೆ**ಯುಳ್ಳವನೋ, ಜಾಣನೂ ಮಾರ್ಗಾಮಾರ್ಗವನ್ನು ತಿಳಿದಿರುವವನೂ ಆಗಿರುವನೋ, **ಉತ್ತಮಾರ್ಥ**ವನ್ನು ಪಡೆದಿರುವನೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಅಸಙ್ ಸಟ್ಠಙ್ ಗಹಟ್ಠೇಹಿ ಅನಾಗಾರೇಹಿ ಚೂಭಯಙ್**
**ಅನೋಕಸಾರಿಙ್ ಅಪ್ಪಿಚ್ಛಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೦೪||

೪೦೪. ಯಾವನು ಗೃಹಸ್ಥರು, ಮನೆಗಳಿಲ್ಲದ (ಭಿಕ್ಷುಗಳು) - ಈ ಇಬ್ಬರ ಸಂಸರ್ಗವೂ ಇಲ್ಲದೆ ಇರುವನೋ, ಮನೆಮನೆಗೆ ಸಂಚರಿಸದಿರುವನೋ ಅಲ್ಪೇಚ್ಛೆಯುಳ್ಳವನಾಗಿರುವನೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ನಿಧಾಯ ದಂಡಙ್ ಭೂತೇಸು ತಸೇಸು ಥಾವರೇಸು ಚ**
**ಯೋ ನ ಹಂತಿ ನ ಘಾತೇತಿ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೦೫||

೪೦೫. ಚರಾಚರಪ್ರಾಣಿಗಳಲ್ಲಿ ಯಾರೊಬ್ಬರನ್ನೂ ದಂಡಿಸದವನಾಗಿ ಯಾವನು ಕೊಲ್ಲದೆಯೂ ಕೊಲ್ಲಿಸದೆಯೂ ಇರುವನೋ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಅವಿರುದ್ಧಙ್ ವಿರುದ್ಧೇಸು ಅತ್ತದಂಡೇಸು ನಿಬ್ಬುತಙ್**
**ಸಾದಾನೇಸು ಅನಾದಾನಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೦೬||

೪೦೬. ತನಗೆ ವಿರೋಧಿಗಳಾದವರಲ್ಲಿ ವಿರೋಧಿಯಲ್ಲದೆಯೂ, ದಂಡಿಸ ಬರುವವರಲ್ಲಿ ಸುಮ್ಮನಿರುವವನಾಗಿಯೂ, ವಿಷಯಗಳನ್ನು ಸಂಗ್ರಹಿಸುವವರಲ್ಲಿ ಸಂಗ್ರಹಿಸದವನಾಗಿಯೂ ಯಾವನಿರುವನೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಯಸ್ಸ ರಾಗೋ ಚ ದೋಸೋ ಚ ಮಾನೋ ಮಕ್ಖೋ ಚ ಪಾತಿತೋ**
**ಸಾಸಪೋ ರಿವ ಆರಗ್ಗಾ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೦೭||

೪೦೭. ಯಾವನ ರಾಗವೂ ದ್ವೇಷವೂ ಅಭಿಮಾನವೂ ಮಾತ್ಸರ್ಯವೂ ದಬ್ಬಳದ ತುದಿಯಿಂದ ಸಾಸುವೆಕಾಳು ಜಾರಿಬೀಳುವಂತೆ ಜಾರಿಬೀಳುವವೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಅಕಕ್ಕಸಙ್ ವಿಞ್ಞಾಪನಿಙ್ ಗಿರಙ್ ಸಚ್ಚಙ್ ಉದೀರಯೇ**
**ಯಾಯ ನಾಭಿಸಜೆ ಕಂಚಿ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೦೮||

೪೦೮. ಯಾವನು ಕರ್ಕಶವಲ್ಲದೆ ಬಿನ್ನಹದ ರೂಪವಾಗಿ ಸತ್ಯವಾದ ಮಾತನ್ನೇ ಆಡುವನೋ, ಯಾವನ ಮಾತಿನಿಂದ ಯಾವದಕ್ಕೂ ತೊಂದರೆ ಯಾಗುವಂತಿರುವದಿಲ್ಲವೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಯೋಧ ದೀಘಙ್ ವಾ ರಸ್ಸಙ್ ವಾ ಅಣುಙ್ ಥೂಲಙ್ ಸುಭಾಸುಭಙ್**
**ಲೋಕೇ ಅದಿನ್ನಙ್ ನಾದಿಯತಿ ತಮಹಙ ಬ್ರೂಮಿ ಬ್ರಾಹ್ಮಣಙ್ ||೪೦೯||**

೪೦೯. ಯಾವನು ಈ ಲೋಕದಲ್ಲಿ ಉದ್ದವಾಗಿರಲಿ ಮೋಟಾಗಿರಲಿ, ಸಣ್ಣದಾಗಿರಲಿ ದೊಡ್ಡದಾಗಿರಲಿ, ಒಳ್ಳೆಯದಾಗಿರಲಿ ಕೆಟ್ಟದಾಗಿರಲಿ, ತನಗೆ ಮತ್ತೊಬ್ಬರು ಕೊಡದೆ ಇರುವದನ್ನು ತೆಗೆದುಕೊಳ್ಳುವದಿಲ್ಲವೋ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಆಸಾ ಯಸ್ಸ ನ ವಿಜ್ಜಂತಿ ಅಸ್ಮಿಙ್ ಲೋಕೇ ಪರಮ್ಹಿ ಚ**
**ನಿರಾಸಯಙ್ ವಿಸಙ್ಞುತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೪೧೦||**

೪೧೦. ಈ ಲೋಕದಲ್ಲಿಯಾಗಲಿ ಪರಲೋಕದಲ್ಲಿಯಾಗಲಿ ಯಾವನಿಗೆ ಆಶೆಯಿರುವದಿಲ್ಲವೋ, ಯಾವನು ವಾಸನಾರಹಿತನಾಗಿಯೂ ಆಸಕ್ತಿಯಿಲ್ಲದವ ನಾಗಿಯೂ ಇರುವನೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಯಸ್ಸಾಲಯಾ ನ ವಿಜ್ಜಂತಿ ಅಞ್ಞಾಯ ಅಕತಂಕಥಿ**
**ಅಮತೋಗಧಙ್ ಅನುಪ್ಪತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್||೪೧೧||**

೪೧೧. ಯಾವನಿಗೆ **ಆಲಯಗಳು*** ಇರುವದಿಲ್ಲವೋ, ಯಾವನು ತತ್ತ್ವವನ್ನು ಬಲ್ಲವನಾದ್ದರಿಂದ "ಹೇಗೆ ? ಹೇಗೆ ?" ಎಂದು ಕೇಳುವ ದಿಲ್ಲವೋ,† ಅಮೃತದ ಅವಗಾಹನವು ಯಾವನಿಗೆ ದೊರಕಿರುವದೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಯೋಧ ಪುಞ್ಞಂ ಚ ಪಾಪ ಞ್ ಚ ಉಭೋ ಸಂಗಙ್ ಉಪಚ್ಚಗಾ**
**ಅಸೋಕಙ್ ವಿರಜಙ್ ಸುದ್ಧಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್ ||೪೧೨||**

೪೧೨. ಯಾವನು ಈ ಲೋಕದಲ್ಲಿ ಪುಣ್ಯ, ಪಾಪ - ಈ ಎರಡರ

* ಆಶೆಗಳು.

† ಇದು ಪೂ|| ೧ ರಂತೆ ಅನುವಾದ (ಅಕಥಂ) ನಿರ್ವಾಣವನ್ನು ನೋಡಿ ಹೇಳುವವನು' ಎಂದು ಸಾಂ.

ಸಂಗವನ್ನೂ ಮೀರಿರುವನೋ, ಶೋಕವಿಲ್ಲದೆ ನಿಷ್ಕಲ್ಮಷನಾಗಿ ಶುದ್ಧನಾಗಿರುವನೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಚಂದಙ್ ವ ವಿಮಲಙ್ ಸುದ್ಧಙ್ ವಿಪ್ಪಸನ್ನಂ ಅನಾವಿಲಙ್**
**ನಂದೀಭವಪರಿಕ್ಖೀಣಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೧೩||

೪೧೩. ಯಾವನು ಚಂದ್ರನಂತೆ ನಿರ್ಮಲನೂ ಶುದ್ಧನೂ ವಿಶೇಷವಾಗಿ ಮಸುಕಿಲ್ಲದೆ **ನಂದೀಭವ**ವನ್ನು* ನಾಶಪಡಿಸಿಕೊಂಡಿರುವನೋ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಯೋ ಇಮಙ್ ಪಳಿಪಥಙ್ ದುಗ್ಗಙ್ ಸಂಸಾರಙ್ ಮೋಹಂ ಅಚ್ಚಗಾ**
**ತಿಣ್ಣೋ ಪಾರಗತೋ ಝಾಯೀ ಅನೇಜೋ ಅಕಥಂಕಥೀ**
**ಅನುಪಾದಾಯ ನಿಬ್ಬುತೋ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೧೪||

೪೧೪. ಯಾವನು ಒಂದೊಂದು ದಾರಿಯಲ್ಲಿಯೂ ದಾಟುವದಕ್ಕೆ ಕಷ್ಟವಾಗಿರುವ ಸಂಸ್ಕಾರಕ್ಕೆ ಕಾರಣವಾಗಿರುವ ಮೋಹವನ್ನು ದಾಟಿರುವನೋ, ಸಂಸಾರವನ್ನು ದಾಟಿ ಆಚೆಯ ದಡವನ್ನು ಸೇರಿ ಧ್ಯಾನಮಾಡುತ್ತಾ ಏತಕ್ಕೂ ಅಂಜಿ ನಡುಗದೆ, 'ಹೇಗೆ ? ಹೇಗೆ' ಎಂದು ಹೇಳುವ ಕೇಳುವ ಗೋಜಿಲ್ಲದ ಆಸಕ್ತಿಯನ್ನು ಬಿಟ್ಟು ಸುಖಿಯಾಗಿರುವನೋ, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಯೋಧ ಕಾಮೇ ಪಹತ್ವಾನ ಅನಾಗಾರೋ ಪರಿಬ್ಬಜೇ**
**ಕಾಮಭವ ಪರಿಕ್ಖೀಣಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೧೫||

೪೧೫. ಯಾವನು ಈ ಲೋಕದಲ್ಲಿ ಕಾಮಗಳನ್ನು ಬಿಟ್ಟು ಮನೆಯಿಲ್ಲದವನಾಗಿ ಪರಿವ್ರಾಜಕನಾಗಿರುವನೋ, **ಕಾಮಭವ**ವನ್ನು* ನಾಶಪಡಿಸಿಕೊಂಡಿರುವ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಯೋಧ ತನ್ಹಙ್ ಪಹತ್ವಾನ ಅನಾಗರೋ ಪರಿಬ್ಬಜೇ**
**ತನ್ಹಾಭವ ಪರಿಕ್ಖೀಣಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೧೬||

೪೧೬. ಯಾವನು ಈ ಲೋಕದಲ್ಲಿ ತೃಷ್ಣೆಯನ್ನು ಬಿಟ್ಟು ಮನೆಯಿಲ್ಲದವನಾಗಿ ಪರಿವ್ರಾಜಕನಾಗಿರುವನೋ, **ತೃಷ್ಣಾಭವ***ವನ್ನು ನಾಶಗೊಳಿಸಿಕೊಂಡಿರುವ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

* ನಂದೀಭವ, ಕಾಮಭವ, ತೃಷ್ಣಾಭವ - ಇವು ಜನ್ಮಕ್ಕೆ ಹೇತುವಾಗಿರುವವು. ಅವು ಇಲ್ಲದವನೇ ಬ್ರಾಹ್ಮಣನು ಎಂಬುದು ಅಭಿಪ್ರಾಯವಾಗಿರಬಹುದು.

**ಹಿತ್ವಾ ಮಾನುಸಕಙ್ ಯೋಗಙ್ ದಿಬ್ಬಙ್ ಯೋಗಙ್ ಉಪಚ್ಚಗಾ**
**ಸಬ್ಬಯೋಗ ವಿಸಙ್ಯುತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೧೭||

೪೧೭. ಯಾವನು **ಮಾನುಷಯೋಗ**ವನ್ನು ಬಿಟ್ಟು **ದಿವ್ಯಯೋಗ**ವನ್ನೂ ಮೀರಿರುವನೋ, ಯಾವ ಯೋಗದಲ್ಲಿಯೂ ಆಸಕ್ತಿಯಿಲ್ಲದಿರುವ ಆತನನ್ನು ನಾನು ಬ್ರಾಹ್ಮಣನೆನ್ನುವೆನು.

**ಹಿತ್ವಾ ರತಿಙ್ ಚ ಆರತಿಞ್ ಚ ಸೀತಿ ಭೂತಙ್ ನಿರೂಪಧಿಙ್**
**ಸಬ್ಬಲೋಕಾಭಿಭುಙ್ ವೀರಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೧೮||

೪೧೮. ಯಾವನು ಬೇಕೆಂಬುದನ್ನೂ ಬೇಡವೆಂಬುದನ್ನೂ ಬಿಟ್ಟು ಶೀತಲಸ್ವಭಾವನಾಗಿ ಕ್ಲೇಶರಹಿತನಾಗಿರುವನೋ, ಸರ್ವಲೋಕವನ್ನೂ ಜಯಿಸಿರುವ ವೀರನಾದ ಅಂಥವನನ್ನು ನಾನು ಬ್ರಾಹ್ಮಣನೆನ್ನುವೆನು.

**ಚುತಿಙ್ ಯೋ ವೇದಿ ಸತ್ತಾನಙ್ ಉಪಸತ್ತಿಞ್ ಚ ಸಬ್ಬಸೋ**
**ಆಸತ್ತಙ್ ಸುಗತಙ್ ಬುದ್ಧಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೧೯||

೪೧೯. ಯಾವನು ಪ್ರಾಣಿಗಳು ಮೃತಿಹೊಂದುವದನ್ನೂ ಹುಟ್ಟುವ ರೀತಿಯನ್ನೂ ಎಲ್ಲಾ ರೀತಿಯಿಂದಲೂ ಬಲ್ಲವನಾಗಿರುವನೋ, ಆಸಕ್ತಿರಹಿತನಾಗಿ **ಸುಗತ**ನಾಗಿರುವ† ಬುದ್ಧನಾದ ಅಂಥವನನ್ನು ನಾನು ಬ್ರಾಹ್ಮಣನೆನ್ನುವೆನು.

**ಯಸ್ಸ ಗತಿಙ್ ನ ಜಾನತಿ ದೇವ ಗಂಧಬ್ಬ ಮಾನುಸ**
**ಖೀನಾಸವಙ್ ಅರಹಂತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೨೦||

೪೨೦. ಯಾವನ ಗತಿಯನ್ನು ದೇವತೆಗಳಾಗಲಿ ಗಂಧರ್ವರಾಗಲಿ ಮನುಷ್ಯರಾಗಲಿ ಅರಿಯರೋ **ಆಸ್ರವ**ಗಳೆಲ್ಲ ನಾಶವಾಗಿರುವ ಆ **ಅರಹಂತ**ನನ್ನು ನಾನು ಬ್ರಾಹ್ಮಣನೆನ್ನುವೆನು.

**ಯಸ್ಸ ಪುರೇ ಚ ಪಚ್ಛಾ ಚ ಮಜ್ಝೇ ಚ ನತ್ಥಿ ಕಿಂಚನಙ್**
**ಅಕಿಂಚನಙ್ ಅನಾದಾನಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್** ||೪೨೧||

೪೨೧. ಯಾವನು ಮುಂದುಗಡೆಯೂ ಹಿಂದುಗಡೆಯೂ ತನ್ನದೆಂಬುದು ಯಾವದೊಂದು ಇಲ್ಲವೋ ತನ್ನದೆಂಬುದು ಯಾವದೂ ಇಲ್ಲದೆ ಪರಿಗ್ರಹರಹಿತನಾಗಿರುವ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

---

* ಸುಂದರಗತಿಯನ್ನು ಪಡೆದ.

**ಉಸಭಜ್ ಪವರಜ್ ವೀರಜ್ ಮಹೇಸಿಜ್ ವಿಜಿತಾವಿನಜ್**
**ಅನೇಜಜ್ ನಹಾತಕಜ್ ಬುದ್ಧಜ್ ತಮಹಂ ಬ್ರೂಮಿ ಬ್ರಾಹ್ಮಣಜ್** ||೪೨೨||

೪೨೨. ಯಾವನು ವೃಷಭನಾಗಿ, ಪ್ರವರನಾಗಿ, ವೀರನಾಗಿ, ಮಹರ್ಷಿಯಾಗಿ, ಜಯಶೀಲನಾಗಿ, ಏತಕ್ಕೂ ಹೆದರದೆ, **ಸ್ನಾತಕ**ನಾಗಿ, ಬುದ್ಧನಾಗಿರುವನೋ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

**ಪುಬ್ಬೇನಿವಾಸಜ್ ಯೋ ವೇದೀ ಸಗ್ಗಾಪಾಯಜ್ ಚ ಪಸ್ಸತಿ**
**ಅಥೋ ಜಾತಿಕ್ಖಯಜ್ ಪತ್ತೋ ಅಭಿಞ್ಞಾವೋಸಿತೋ ಮುನಿ**
**ಸಬ್ಬವೋಸಿತ ವೋಸಾನಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್** ||೪೨೩||

೪೨೩. ಯಾವನಿಗೆ **ಹಿಂದೆ ಇದ್ದ ಸ್ಥಳವು*** ತಿಳಿದಿರುವದೋ ಸ್ವರ್ಗವನ್ನೂ ದುರ್ಗತಿಯನ್ನೂ ಕಂಡುಕೊಂಡಿರುವನೋ, ಮತ್ತು ಯಾವನ ಜನ್ಮವು ಕ್ಷಯವಾಗಿರುವದೋ, ಯಾವನು **ಅಭಿಜ್ಞೆ**ಯಲ್ಲಿ ಪರಾಯಣನಾಗಿಯೂ ಮುನಿಯಾಗಿಯೂ ಇರುವನೋ, ಯಾವನ ಪೂರ್ಣತೆಯೆಲ್ಲ ಪೂರ್ಣವಾಗಿರುವದೋ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

* ಹಿಂದಿನ ಜನ್ಮವು. ಬೌದ್ಧರೂ ಜನ್ಮಾಂತರವನ್ನು ಒಪ್ಪುತ್ತಾರೆ.

# ಪರಿಶಿಷ್ಟ

## ೧. ಬೌದ್ಧಮತದ

ಬುದ್ಧನ ಮುಖ್ಯೋಪದೇಶವನ್ನು ತಿಳಿದುಕೊಳ್ಳಬೇಕೆನ್ನುವವರು ಆತನು ಉಪದೇಶಿಸಿರುವ ನಾಲ್ಕು **ಆರ್ಯಸತ್ಯ**ಗಳನ್ನು ತಿಳಿದುಕೊಳ್ಳಬೇಕು ಅದರಲ್ಲಿ ಅಡಕವಾಗಿರುವ ಕರ್ಮವಿಪಾಕದ ವರ್ಣನೆಯನ್ನೂ ನಿರ್ವಾಣಪ್ರಾಪ್ತಿಯ ಮಾರ್ಗವನ್ನೂ ತಿಳಿದುಕೊಳ್ಳಬೇಕು. ಇವುಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಲಾಗುವದು.

## ನಾಲ್ಕು ಆರ್ಯಸತ್ಯಗಳು

ಪ್ರಪಂಚವು ಶಾಶ್ವತವೆ, ಅಶಾಶ್ವತವೆ ? ಇದು ಹೇಗೆ ಉಂಟಾಯಿತು ? - ಎಂಬಿವೇ ಮುಂತಾದ ಚರ್ಚೆಗಳು ಬೌದ್ಧಮತದಲ್ಲಿಲ್ಲ. ಚೇತನಾಚೇತನಾತ್ಮಕವಾದ ಜಗತ್ತು ನಮ್ಮ ಎದುರಿಗೆ ಇದೆಯಷ್ಟೆ. ಇದರಲ್ಲಿರುವ ಚೇತನಪ್ರಾಣಿಗಳೆಲ್ಲವೂ **ಪಂಚಸ್ಕಂಧ**ಗಳಿಂದ ಆಗಿರುತ್ತವೆ. ಈ ಸ್ಕಂಧಗಳು ಎಲ್ಲವೂ ಅನಿತ್ಯವಾಗಿರುತ್ತವೆ, ಅನಾತ್ಮವಾಗಿರುತ್ತವೆ, ಎಂದರೆ ಮೇಲೆ ಕಾಣುವ ವಿಕಾರಿಯಾದ ರೂಪವಲ್ಲದೆ ಸ್ಥಿರವಾದ ಯಾವದೊಂದು ಆಧಾರವಸ್ತುವೂ ಇಲ್ಲದವುಗಳಾಗಿರುತ್ತವೆ ; (ಧ. ೨೭೭, ೨೭೯) ಇದನ್ನು ಅರಿಯದೆ ಇರುವದರಿಂದ ಮನುಷ್ಯನಿಗೆ ತಾನು ಒಬ್ಬ ವ್ಯಕ್ತಿಯಾಗಿ ಸ್ಥಿರವಾದ ಆತ್ಮರೂಪದಿಂದ ಇರುವೆನೆಂಬ ನಂಬಿಕೆಯಾಗಿ ಈ ತಪ್ಪು ತಿಳಿವಳಿಕೆಯಿಂದ ಪಾಪಪುಣ್ಯಕರ್ಮಗಳನ್ನು ಮಾಡುತ್ತಾ ಜನ್ಮಾಂತರವನ್ನು ಹೊಂದಿ ಸಂಸಾರದಲ್ಲಿ ತೊಳಲಬೇಕಾಗುತ್ತದೆ. ಈ ಪಾಪಪುಣ್ಯಗಳ ಹಾದಿಯನ್ನು ದಾಟಿ ಪ್ರಜ್ಞೆಯಿಂದ ನಿರ್ವಾಣವನ್ನು ಪಡೆದು ಆನಂದವಿರುವ ಮಾರ್ಗವನ್ನು ತಿಳಿದುಕೊಳ್ಳಬೇಕೆಂಬುವನು ನಾಲ್ಕು ಆರ್ಯಸತ್ಯಗಳನ್ನು ತಿಳಿದುಕೊಳ್ಳಬೇಕು. ದುಃಖ, ದುಃಖಸಮುದಯ, ದುಃಖ ನಿರೋಧ, ದುಃಖನಿರೋಧಗಾಮಿನೀಪ್ರತಿಪತ್ತು - ಇವೇ ಆ ನಾಲ್ಕು ಆರ್ಯಸತ್ಯಗಳು. (ಧ. ೧೯೧)

ಹುಟ್ಟುವದು, ಬೆಳೆಯುವದು, ಸವೆಯುವದು, ಬೇನೆಬೀಳುವದು, ಸಾಯುವದು, ರಾಗ, ದ್ವೇಷ, ಮೋಹ, ತೃಷ್ಣಾ - ಇವೆಲ್ಲಾ ದುಃಖವೇ, ಐದು ಉಪಾದಾನಸ್ಕಂಧಗಳೂ ದುಃಖವೇ - ಹೀಗೆಂದು ತಿಳಿಯುವದು **ದುಃಖ**ವೆಂಬ ಆರ್ಯಸತ್ಯದ ಜ್ಞಾನವು.

ಇಂದ್ರಿಯಗಳಿಗೂ ವಿಷಯಗಳಿಗೂ ಸಂಬಂಧವಾಗಲು ಭೋಗದ ತೃಷ್ಣೆಯುಂಟಾಗುವದು. ವಿಷಯಗಳನ್ನು ಚೆನ್ನಾಗಿ ಅನುಭವಿಸಬೇಕು. ಇದಕ್ಕಾಗಿ ಬಹುಕಾಲವಿರಬೇಕು, ಮತ್ತೊಂದು ಜನ್ಮವನ್ನು ಪಡೆಯಬೇಕು - ಎಂಬ ರೂಪದಲ್ಲಿ ಆಗುವ ತೃಷ್ಣೆಯೇ ದುಃಖವುಂಟಾಗುವದಕ್ಕೆ ಕಾರಣವು. ಇದು **ದುಃಖಸಮುದಯ** ಎಂಬ ಎರಡನೆಯ ಆರ್ಯಸತ್ಯವು. (ಧ.೩೩೮, ೩೪೨)

ದುಃಖವು ಹೋಗಬೇಕಾದರೆ ಈ ತೃಷ್ಣೆಯು ನಾಶವಾಗಬೇಕು ; ಈ ಭೋಗಕ್ಕಾಗಿ ಬದುಕಿರಬೇಕೆಂಬ, ಮತ್ತೊಂದು ಜನ್ಮವನ್ನು ಪಡೆಯಬೇಕೆಂಬ ತೃಷ್ಣೆಯು ಪೂರ ತೊಲಗಬೇಕು - ಹೀಗೆಂಬುದು **ದುಃಖನಿರೋಧ**ವೆಂಬ ಆರ್ಯಸತ್ಯವು. (ಧ. ೩೫೪)

ದುಃಖವನ್ನು ತೊಲಗಿಸುವದಕ್ಕಾಗಿ ತೃಷ್ಣೆಯನ್ನು ಹೊಡೆದಟ್ಟಬೇಕಾದರೆ ಒಂದೇ ಒಂದು ಮಾರ್ಗವಿರುವದು. ಇದಕ್ಕೆ **ಆರ್ಯಅಷ್ಟಾಂಗಿಕಮಾರ್ಗ**ವೆಂದು ಹೆಸರು. ಈ ಮಾರ್ಗವೇ **ದುಃಖನಿರೋಧಗಾಮಿನೀಪ್ರತಿಪತ್ತು** - ಎಂಬ ಆರ್ಯಸತ್ಯವು. (ಧ.೨೭೩, ೨೭೪, ೨೭೫)

## ಆರ್ಯ ಅಷ್ಟಾಂಗಿಕಮಾರ್ಗ

ಈ ಮಾರ್ಗದಲ್ಲಿ ಎಂಟು ಅಂಗಗಳಿರುವದರಿಂದ ಇದಕ್ಕೆ ಈ ಹೆಸರು ಬಂದಿರುತ್ತದೆ. ಸಮ್ಯಗ್ದೃಷ್ಟಿ, ಸಮ್ಯಕ್ಸಂಕಲ್ಪ, ಸಮ್ಯಗ್ವಾಚಾ, ಸಮ್ಯಕ್ಕರ್ಮಾಂತ, ಸಮ್ಯಗಾಜೀವ, ಸಮ್ಯಗ್ವ್ಯಾಯಾಮ, ಸಮ್ಯಕ್ಸ್ಮೃತಿ, ಸಮ್ಯಕ್ಸಮಾಧಿ - ಇವೇ ಎಂಟು ಅಂಗಗಳು. ಮೊದಲನೆಯ ಎರಡು ಅಂಗಗಳನ್ನು **ಪ್ರಜ್ಞೆ**ಯೆಂದೂ ಮುಂದಿನ ಮೂರನ್ನು **ಶೀಲ**ವೆಂದೂ ಉಳಿದ ಮೂರನ್ನು **ಸಮಾಧಿ**ಯೆಂದೂ ಕರೆಯುವದುಂಟು. ಆದ್ದರಿಂದ ಅಷ್ಟಾಂಗಮಾರ್ಗವು ಪ್ರಜ್ಞಾಶೀಲಸಮಾಧಿಯೆಂಬ ಮೂರು ಸ್ಕಂಧಗಳಲ್ಲಿ ಅಡಗಿರುತ್ತದೆ.

**ಸಮ್ಯಗ್ದೃಷ್ಟಿ** :- ಆರ್ಯಸತ್ಯಗಳು ನಾಲ್ಕನ್ನೂ ಸರಿಯಾಗಿ ಅರಿತುಕೊಂಡಿರುವದು ಸಮ್ಯಗ್ದೃಷ್ಟಿಯು ; ಇದರಲ್ಲಿ **ಪ್ರತೀತ್ಯಸಮುತ್ಪಾದ**ದ ಜ್ಞಾನವೂ ಸೇರಿರುತ್ತದೆ.

ಪ್ರತೀತ್ಯಸಮುತ್ಪಾದವೆಂದರೆ ಅವಿದ್ಯೆಯೇ ಮುಂತಾದ **ದ್ವಾದಶನಿದಾನ**ಗಳಿಂದ ಸಂಸಾರವುಂಟಾಗುವ ಬಗೆ. ಹೇಗೆಂದರೆ. ತತ್ತ್ವವನ್ನು ತಿಳಿಯದ ಅವಿದ್ಯೆಯಿಂದ ಕಾಯವಚನಚಿತ್ತಸಂಸ್ಕಾರವುಂಟಾಗುವದು ; ಈ ಸಂಸ್ಕಾರದಿಂದ ಆರು ಬಗೆಯ ವಿಜ್ಞಾನವುಂಟಾಗುವದು.

ವಿಜ್ಞಾನದಿಂದ ನಾಮರೂಪವುಂಟಾಗುವದು, ಎಂದರೆ ಜ್ಞಾನಜ್ಞೇಯವಿಭಾಗವುಂಟಾಗುವದು ; ನಾಮರೂಪದಿಂದ ಷಡಾಯತನಗಳು ಎಂದರೆ ಆರು ಇಂದ್ರಿಯಗಳು ಉಂಟಾಗುವವು ; ಷಡಾಯತನದಿಂದ ಆರು ಬಗೆಯ ಸ್ಪರ್ಶಗಳು ಎಂದರೆ ವಿಷಯೇಂದ್ರಿಯ ಸಂಯೋಗಗಳು ಉಂಟಾಗುವವು ; ಸ್ಪರ್ಶದಿಂದ ವೇದನೆಯುಂಟಾಗುವದು ; ವೇದನೆಯಿಂದ ತೃಷ್ಣೆಯುಂಟಾಗುವದು ; ತೃಷ್ಣೆಯಿಂದ ಉಪಾದಾನ - ಎಂದರೆ ವಿಷಯಗಳ ಗ್ರಹಣ ವುಂಟಾಗುವದು ; ಉಪಾದಾನದಿಂದ ಭವ - ಎಂದರೆ ಹುಟ್ಟುವ ಆಸೆಯುಂಟಾಗುವದು ; ಭವದಿಂದ ಜಾತಿ - ಎಂದರೆ ಜನ್ಮವುಂಟಾಗುವದು ; ಜನ್ಮದಿಂದ ಶೋಕದುಃಖದೌರ್ಮನಸ್ಯ ಗಳುಂಟಾಗುವವು. ಹೀಗೆ ದುಃಖವುಂಟಾಗುವ ಬಗೆಯನ್ನು ತಿಳಿದವನೇ ಸಮ್ಯಗ್ದೃಷ್ಟಿ ಯುಳ್ಳವನು. ಏಕೆಂದರೆ ಅವನು ದುಃಖನಿವಾರಣೆಗೆ ಸರಿಯಾದ ಪ್ರಯತ್ನವನ್ನು ಕಂಡುಕೊಂಡು ಇರುತ್ತಾನೆ.

**ಸಮ್ಯಕ್ಸಂಕಲ್ಪ** :- ಎಲ್ಲರಲ್ಲಿಯೂ ಕನಿಕರದಿಂದ ಇದ್ದು ಎಲ್ಲರನ್ನೂ ಪ್ರೀತಿಸುವ ಸಂಕಲ್ಪ, ಇಂದ್ರಿಯಭೋಗಗಳನ್ನು ಕೈಬಿಡುವ ಯೋಗ್ಯಸಂಕಲ್ಪ.

**ಸಮ್ಯಗ್ವಾಚಾ** :- ಸುಳ್ಳು, ಚಾಡಿ, ಬಿರುನುಡಿ, ಹರಟೆ - ಇವುಗಳನ್ನು ಬಿಟ್ಟು ಸತ್ಯವಾದ ಹಿತವಾದ ಮಾತನ್ನೇ ಆಡುವದು.

**ಸಮ್ಯಕ್ಕರ್ಮಾಂತ** :- ಮತ್ತೊಬ್ಬರನ್ನು ಪೀಡಿಸದೆ, ಕಳವು ಮಾಡದೆ, ಸ್ತ್ರೀಜಿತನಾಗಿ ಸ್ವೇಚ್ಛಾವಿಚಾರಕ್ಕೆ ಹೋಗದೆ, ಪರೋಪಕಾರಕವಾದ ಉತ್ತಮಕಾಯಿಕ ವ್ಯಾಪಾರಗಳನ್ನೇ ಹಿಡಿಯುವದು.

**ಸಮ್ಯಗಾಜೀವ** :- ಮತ್ತೊಬ್ಬರಿಗೆ ತೊಂದರೆಕೊಡುವ ಜೀವನ ಕ್ರಮವನ್ನು ಅನುಸರಿಸದೆ ಯುಕ್ತರೀತಿಯಿಂದಲೇ ಜೀವನಯಾತ್ರೆಯನ್ನು ಸಾಗಿಸುವದು.

**ಸಮ್ಯಗ್ವ್ಯಾಯಾಮ** :- ಕೆಟ್ಟ ಮಾರ್ಗವನ್ನು ಬಿಟ್ಟು ಒಳ್ಳೆಯ ದಾರಿಯನ್ನು ಅನುಸರಿಸುವದಕ್ಕೆ ಪ್ರಯತ್ನಮಾಡುವದು ; ಪಾಪವಾಸನೆಯನ್ನು ಕಡಿಮೆಮಾಡುವದು ಅದನ್ನು ಪೂರ ಬಿಡುವದು ; ಪುಣ್ಯವಾಸನೆಯನ್ನುಂಟುಮಾಡಿಕೊಳ್ಳುವದು, ಅದನ್ನು ಹೆಚ್ಚಿಸುವದು - ಇದಕ್ಕಾಗಿ ಮಾಡುವ ಪ್ರಯತ್ನವೇ ಸಮ್ಯಗ್ವ್ಯಾಯಾಮವು.

**ಸಮ್ಯಕ್ಸ್ಮೃತಿ** :- ಸರಿಯಾದ ವಿಚಾರಗಳನ್ನು ಇಟ್ಟುಕೊಳ್ಳುವದು, ಸರಿಯಾದ ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳುವದು.

**ಸಮ್ಯಕ್ಸಮಾಧಿ** :- ಸರಿಯಾಗಿ ಚಿತ್ತವಿಟ್ಟು ಧ್ಯಾನವಿಟ್ಟು ತತ್ತ್ವವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವದು.

# ಅನಾತ್ಮವಾದ

ಬೌದ್ಧಮತದ ತಿರುಳನ್ನು ಸರಿಯಾಗಿ ಗ್ರಹಿಸುವದಕ್ಕೆ ಅನಾತ್ಮವಾದವನ್ನು ತಿಳಿದುಕೊಳ್ಳಬೇಕು ; ಅನಾತ್ಮವಾದಕ್ಕೆ ಸ್ಕಂಧಗಳ ಅರಿವು ಬೇಕು. ರೂಪ, ವೇದನಾ, ಸಂಜ್ಞಾ, ಸಂಸ್ಕಾರ, ವಿಜ್ಞಾನ - ಎಂದು ಐದು **ಉಪಾದಾನಸ್ಕಂಧ**ಗಳುಂಟು. ಪ್ರಪಂಚದಲ್ಲಿರುವದೆಲ್ಲ ಈ ಐದು ಸ್ಕಂಧಗಳೇ. ರೂಪಸ್ಕಂಧವು ಪೃಥ್ವೀಜಲತೇಜೋವಾಯುಗಳಿಂದ ಆಗಿರುವದು ; ಸ್ಪರ್ಶದಿಂದ ಎಂದರೆ ಇಂದ್ರಿಯವಿಷಯ ಸಂಯೋಗದಿಂದಾಗುವ ಅನುಭವದಿಂದ ವೇದನಾಸ್ಕಂಧವನ್ನು ಅರಿತುಕೊಳ್ಳಬಹುದು ; ಈ ವೇದನೆಯಿಂದಾಗುವ ಅರಿವು ಸಂಜ್ಞಾಸ್ಕಂಧವನ್ನೂ ಸಂಸ್ಕಾರಸ್ಕಂಧವನ್ನೂ ತಿಳಿಸುವದು. ನಾಮರೂಪವಿಭಾಗದಿಂದ (ಎಂದರೆ ಅರಿವು ಇರವು - ಎಂಬ ವಿಂಗಡದಿಂದ) ವಿಜ್ಞಾನಸ್ಕಂಧವನ್ನು ಅರಿತುಕೊಳ್ಳಬಹುದು. ಈ ಸ್ಕಂಧಗಳು ಯಾವಾಗಲೂ ಅನಿತ್ಯ ; ಅನಿತ್ಯವಾಗಿರುವದರಿಂದ ಯಾವಾಗಲೂ ದುಃಖರೂಪ ; ಇವುಗಳಲ್ಲಿ ಯಾವದೂ 'ನಾನು' ಎಂದು ತಿಳಿದುಕೊಳ್ಳುವದಕ್ಕೆ ಅರ್ಹವಾದದ್ದಲ್ಲ. ಹೀಗಿದ್ದರೂ ಈ ಸ್ಕಂಧಗಳ ರೂಪವಾಗಿ ಅಥವಾ ಈ ಸ್ಕಂಧಗಳಿಗೆ ಆಶ್ರಯವಾಗಿ, ಇವುಗಳಿಗಿಂತ ವ್ಯತಿರಿಕ್ತವಾಗಿ, ಯಾವದೋ ಒಂದು ಆತ್ಮನೆಂಬ ನಿತ್ಯವಸ್ತುವಿದೆಯೆಂದು ಅಜ್ಞರು ಕಲ್ಪಿಸುವರು ; ಅವರು ಕಲ್ಪಿಸುವ ವಸ್ತುವು ನಿಜವಾಗಿಲ್ಲ. ಸ್ಕಂಧಗಳಿಗಿಂತ ಬೇರೆ ನಿತ್ಯವಸ್ತು ಯಾವದೂ ಇಲ್ಲ ; ಸ್ಕಂಧಗಳು ಅನಿತ್ಯ, ಪರಿವರ್ತನಶೀಲ, ದುಃಖರೂಪ. ಹೀಗೆಂಬುದು ಅನಾತ್ಮವಾದವು.

ಯಾರು ಅನಾತ್ಮವಾದವನ್ನು ತಿಳಿದುಕೊಳ್ಳಲಾರದೆ ಇರುವರೋ ಅವರು ಸಂಸಾರದಲ್ಲಿ ತೊಳಲುವರು. ಅವರು ತಿಳಿದುಕೊಂಡಿರುವ ತಪ್ಪುತಿಳಿವಳಿಕೆಗೆ **ಸತ್ಕಾಯದೃಷ್ಟಿ**ಯೆಂದೂ **ಆತ್ಮವಾದ**ವೆಂದೂ ಹೆಸರು. ಆತ್ಮನೇ ಇಲ್ಲದ ಮೇಲೆ ಸಂಸಾರದಲ್ಲಿ ತೊಳಲುವರು ಯಾರು, ಬದ್ಧರಾಗಿದ್ದು ಮುಕ್ತರಾಗುವರು ಯಾರು ? - ಎಂದು ಕೇಳಿದರೆ ಬೌದ್ಧರು ಹೀಗೆನ್ನುವರು ; ಮನುಷ್ಯನಾಗಲಿ ಮಿಕ್ಕ ಯಾವ ಪ್ರಾಣಿಯಾಗಲಿ ಸಾಯುವಾಗ ಹಿಂದೆ ಹೇಳಿದ ಪ್ರತೀತ್ಯಸಮುತ್ಪಾದಕ್ರಮದಿಂದ ಆಯಾ ಪ್ರಾಣಿಯ ತೃಷ್ಣೆಯಿಂದ ಉಂಟಾದ ಉಪಾದಾನದ ನಿಮಿತ್ತವಾಗಿ ಮತ್ತೊಂದು ಪ್ರಾಣಿಯು - ಎಂದರೆ ಅದೇ ಬಗೆಯ ವಾಸನೆಗಳುಳ್ಳ ಸ್ಕಂಧಗಳ ಸಮುದಾಯವು - ಉಂಟಾಗುವದು. ಹಿಂದಿನ ಸ್ಕಂಧಗಳ ಸಮುದಾಯದ **ಕರ್ಮವು** ಈ ಹೊಸ ಸ್ಕಂಧಸಮುದಾಯದ ಉತ್ಪತ್ತಿಸ್ವಭಾವಪ್ರವೃತ್ತಿಗಳಿಗೆ ಕಾರಣವಾಗಿರುವದರಿಂದಲೂ, ಹುರುಳಿಯ ಬೀಜದಿಂದ ಹುರುಳಿಯ ಬೀಜವೇ ಉಂಟಾಗುವಂತೆ, ಇವೆರಡೂ ಒಂದೇ

ಜಾತಿಯವಾಗಿರುವದರಿಂದಲೂ ಅದೇ ಪ್ರಾಣಿಯು ಹುಟ್ಟಿತೆಂಬ ವ್ಯವಹಾರ ವುಂಟಾಗುವದು ಸ್ಕಂಧಗಳಿಗಿಂತ ಬೇರೆಯಾಗಿ ಆತ್ಮನಿರುವನೆಂಬುದು ಮಾತ್ರ ನಿರಾಧಾರವಾದ ನಂಬಿಕೆ ; ಸತ್ತಮೇಲೆ ಕರ್ಮಕ್ಕೆ ಯಾವ ಫಲವೂ ಆಗುವದಿಲ್ಲ ವೆಂಬವರ ವಾದವೂ ನಿರಾಧಾರವಾದದ್ದು - ಹೀಗೆಂಬುದು ಬೌದ್ಧರ ಮತವು.

ಕರ್ಮದ ಫಲವಾಗಿ ಉಂಟಾಗುವ ಸಂಸಾರಭ್ರಮಣಕ್ಕೆ ಹಿಂದೆ ಹೇಳಿದ ಅಷ್ಟಾಂಗಮಾರ್ಗವೇ ಪರಿಹಾರೋಪಾಯವು ; ಅದರಿಂದುಂಟಾದ ನಿರ್ವಾಣವನ್ನು ಪಡೆದವರಿಗೆ ಹಿಂದಿನ ಕರ್ಮವೆಲ್ಲ ಮುಗಿದು ಹೋಗಿರುವದು, ಹೊಸ ಕರ್ಮ ವುಂಟಾಗುವದಿಲ್ಲ, ಹೊಸ ಜನ್ಮಕ್ಕೆ ಅವರಿಗೆ ತೃಷ್ಣೆ ಇರುವದಿಲ್ಲ ; ಆದ್ದರಿಂದ ಅವರು ದೀಪವು ಆರಿಹೋದಂತೆ ಆರಿಹೋಗುವರು. ಇದಕ್ಕೆ ಅನುಪಾಧಿಶೇಷ ನಿರ್ವಾಣವೆಂದು ಹೆಸರು.

## ಸಾಧಕನ ಅಂತಸ್ತುಗಳು

ಆರ್ಯಸತ್ಯಗಳನ್ನು ಅರಿಯದೆ ಇರುವವನನ್ನು 'ಪೃಥಗ್ಜನ' (ಬೇರೆಯ ಬಗೆಯವನು) ಎನ್ನುತ್ತಾರೆ. ಬೌದ್ಧಧರ್ಮಕ್ಕೆ ಸೇರಿದವರು **ಆರ್ಯ**ರೆನಿಸುವರು. ಬುದ್ಧನನ್ನೂ ಧರ್ಮವನ್ನೂ ಸಂಘವನ್ನೂ ಶರಣು ಹೊಕ್ಕ ಸಾಧಕನು ಈ ಸತ್ಯ ಗಳನ್ನು ಅರಿತುಕೊಂಡರೆ (೧) ಸತ್ಕಾಯದೃಷ್ಟಿ (ನಿತ್ಯನಾದ ಆತ್ಮನಿರುವನೆಂಬ ನಂಬಿಕೆ), (೨) ವಿಚಿಕಿತ್ಸೆ (ಬುದ್ಧನಲ್ಲಿಯೂ ಅವನು ಉಪದೇಶಿಸಿರುವ ತತ್ತ್ವ ಗಳಲ್ಲಿಯೂ ಸಂದೇಹ), (೩) ಶೀಲವ್ರತಪರಾಮರ್ಶ (ಕರ್ಮಗಳನ್ನೂ ವ್ರತ ಗಳನ್ನೂ ಮಾಡಿ ಶುದ್ಧನಾಗಿ ಸದ್ಗತಿಯನ್ನು ಪಡೆಯುವೆನೆಂಬ ನಂಬಿಕೆ) - ಎಂಬ ಮೂರು ಸಂಯೋಜನೆ (ಅಡಚಣೆ)ಗಳನ್ನು ದಾಟುವನು. ಇವನಿಗೆ **'ಸ್ರೋತ ಆಪನ್ನ'** ನೆಂದು ಹೆಸರು.

ಸ್ರೋತ ಆಪನ್ನನು ರಾಗದ್ವೇಷಮೋಹಗಳನ್ನು ಆದಷ್ಟು ನಿರ್ಬಲ ಮಾಡಿ ಕೊಂಡರೆ ಅದರ ಫಲವಾಗಿ ಮುಂದೆ ಒಂದು ಜನ್ಮವನ್ನು ಮಾತ್ರ ಅನುಭವಿಸಿ ನಿರ್ವಾಣವನ್ನು ಹೊಂದುವನು. ಅವನಿಗೆ **'ಸಕೃದಾಗಾಮಿ'** ಎಂದು ಹೆಸರು. (ಧ. ೧೭೮)

ಮೇಲೆ ಹೇಳಿದ ಮೂರು ಸಂಯೋಜನೆಗಳಲ್ಲದೆ ಕಾಮ, ಪ್ರತಿಘ (ಮತ್ತೊಬ್ಬ ರಿಗೆ ಪ್ರತಿಹಿಂಸೆಯನ್ನು ಮಾಡುವ ಕೆಟ್ಟಬುದ್ಧಿ) - ಇವೆರಡನ್ನೂ ಕಳೆದುಕೊಂಡು ಸ್ವಲ್ಪವೂ ಸ್ವಾರ್ಥಬುದ್ಧಿಯಿಲ್ಲದೆ ಮತ್ತೊಬ್ಬರ ವಿಷಯದಲ್ಲಿ ಒಂದಿಷ್ಟೂ ಕೆಟ್ಟ

ಯೋಚನೆಯನ್ನು ಮಾಡದೆ ಇರುವಾತನು ಔಪಪಾತಿಕದೇವನಾಗಿ ಆ ಲೋಕದಲ್ಲಿಯೇ ನಿರ್ವಾಣವನ್ನು ಹೊಂದುವನು ; ಮತ್ತೆ ಈ ಲೋಕದಲ್ಲಿ ಹುಟ್ಟುವದೇ ಇಲ್ಲ. ಇವನಿಗೆ **'ಅನಾಗಾಮಿ'** ಎಂದು ಹೆಸರು.

ರೂಪರಾಗ (ಭೌತಿಕಲೋಕದಲ್ಲಿ ಹುಟ್ಟಬೇಕೆಂಬ ಆಸೆ), ಅರೂಪರಾಗ (ಅಭೌತಿಕಲೋಕದಲ್ಲಿ ಹುಟ್ಟಬೇಕೆಂಬ ಆಸೆ), ಮಾನ (ಅಭಿಮಾನ), ಉದ್ಧರ್ಷ (ಹೆಮ್ಮೆ), ಅವಿದ್ಯೆ - ಇವುಗಳ ಸೆಲೆಯೇ ಇಲ್ಲದಂತೆ ಮಾಡಿಕೊಂಡವರು ಹತ್ತುಬಗೆಯ ಸಂಯೋಜನೆಗಳಿಂದಲೂ ಬಿಡಿಸಿಕೊಂಡು, ಲೋಕದಲ್ಲಿರುವ ಪದಾರ್ಥಗಳ ತತ್ತ್ವವನ್ನರಿತು ಯಾವ ಬಗೆಯ ತೃಷ್ಣೆಯೂ ಇಲ್ಲದೆ ಉತ್ತಮವಾದ ಸಂಕಲ್ಪದಿಂದಲೂ ಎಲ್ಲರ ವಿಷಯದಲ್ಲಿಯೂ ಮೈತ್ರೀಭಾವನೆಯಿಂದಲೂ ವಿಹರಿಸುವರು. ಇವರು **'ಅರಹಂತ'**ರೆನಿಸುವರು.

ಮೇಲೆ ವರ್ಣಿಸಿರುವ ಮೊದಲನೆಯ ಮೂರು ಅಂತಸ್ತಿನಲ್ಲಿರುವ ಸಾಧಕನಿಗೆ **ಶೈಕ್ಷ**ನೆಂದು ಹೆಸರು ; ಇನ್ನೂ ಸಾಧಿಸತಕ್ಕದ್ದೂ ಕಲಿಯ ತಕ್ಕದ್ದೂ ಇದೆಯಾದ್ದರಿಂದ ಈ ಅಂತಸ್ತಿನ ಸಾಧಕನು ಶೈಕ್ಷನೆನಿಸುವನು. ನಾಲ್ಕನೆಯ ಅಂತಸ್ತನ್ನು ಮುಟ್ಟಿ ಅರಹಂತನಾದವನು ಕೃತಕೃತ್ಯನಾದ್ದರಿಂದ ಅವನಿಗೆ ಅಶೈಕ್ಷನೆಂದು ಹೆಸರು.

## ೨. ವೇದಾಂತಕ್ಕೂ ಬೌದ್ಧಮತಕ್ಕೂ ತಾರತಮ್ಯ

ಅದ್ವೈತವೇದಾಂತದರ್ಶನವನ್ನು ಬೋಧಿಸಿರುವ ಶ್ರೀಗೌಡಪಾದಾಚಾರ್ಯರು, ಶಂಕರಾಚಾರ್ಯರು, ಮತ್ತು ಅವರ ಶಿಷ್ಯರು ಸುರೇಶ್ವರಾಚಾರ್ಯರು - ಇವರುಗಳ ಅಭಿಪ್ರಾಯಕ್ಕೂ ಗೌತಮಬುದ್ಧನು ಬೋಧಿಸಿರುವ ಮತಕ್ಕೂ ತಾರತಮ್ಯವನ್ನು ತಿಳಿಯದೆ ಅನೇಕರು ಈ ಎರಡು ಮತಗಳೂ ಒಂದೇ ಎಂದು ಭ್ರಮಿಸಿರುವರು. ಆದ್ದರಿಂದ ಈ ಎರಡು ದರ್ಶನಗಳಿಗೂ ಇರುವ ತಾರತಮ್ಯವನ್ನು ಸ್ವಲ್ಪಮಟ್ಟಿಗೆ ಇಲ್ಲಿ ತಿಳಿಸುವದು ಪ್ರಯೋಜನಕಾರಿಯಾಗಬಹುದು.

ಅವಿದ್ಯೆಯಿಂದಲೇ ಸಂಸಾರದ ಅನರ್ಥವೆಲ್ಲ ಆಗಿರುವದೆಂದು ಈ ಎರಡು ದರ್ಶನಗಳಲ್ಲಿಯೂ ಹೇಳಿರುತ್ತದೆ. ಆದರೆ ಬೌದ್ಧಧರ್ಮದಲ್ಲಿ ನಾಲ್ಕು ಆರ್ಯಸತ್ಯ

ಗಳನ್ನು ಅರಿಯದಿರುವದೇ ಅವಿದ್ಯೆಯು ; ಈ ಅವಿದ್ಯೆಯಿಂದ ಕಾರ್ಯಕಾರಣ ಸಂಬಂಧದಲ್ಲಿರುವ ಹನ್ನೆರಡು ಕೊಂಡಿಗಳ ಸರಪಳಿಯ ರೂಪದಲ್ಲಿ ಸಂಸಾರವು ಉಂಟಾಗುತ್ತಿರುವದು - ಎಂದು ಹೇಳಿದೆ. ವೇದಾಂತದಲ್ಲಿಯೇ ಎಂದರೆ, ಶುದ್ಧ ಚೈತನ್ಯಸ್ವರೂಪನಾಗಿ ಪರಮಾರ್ಥಸತ್ಯಸ್ವರೂಪನಾಗಿರುವದರಿಂದ ಸ್ವತಃಸಿದ್ಧನಾದ ಆತ್ಮನನ್ನೂ ಮಿಥ್ಯಾರೂಪವಾದ ಅನಾತ್ಮವಸ್ತುವನ್ನೂ ವಿಂಗಡಿಸಿಕೊಂಡು ಅರಿಯಲಾರದೆ ಒಂದರಲ್ಲಿ ಒಂದನ್ನು ಕಲಬೆರಸಿಕೊಂಡಿರುವ **ಅಧ್ಯಾಸ**ವೆಂಬ ತಪ್ಪುತಿಳಿವಿಗೇ ಅವಿದ್ಯೆಯೆಂದು ಹೆಸರು. ಈ ಅವಿದ್ಯೆಯು ಒಂದು ಕಾರಕಸಾಮಗ್ರಿಯಲ್ಲ. ಕುಂಬಾರನ ಚಕ್ರ, ಮಣ್ಣು - ಮುಂತಾದವುಗಳಿಂದ ಮಡಕೆಯು ಆಗಿರುವಂತೆ ಅವಿದ್ಯೆಯಿಂದ ಸಂಸಾರವಾಗಿರುವದಿಲ್ಲ ; ಪರಮಾರ್ಥವನ್ನು ಸರಿಯಾಗಿ ತಿಳಿದುಕೊಳ್ಳದೆ ನಮ್ಮ ಸ್ವರೂಪದಲ್ಲಿ ನಾವುಗಳು ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರವನ್ನು ಹುಟ್ಟುಗಟ್ಟಿಕೊಂಡಿರುತ್ತೇವೆ - ಎಂಬ ಈ ಅರ್ಥದಲ್ಲಿಯೇ ಅವಿದ್ಯೆಯು ಸಂಸಾರಕ್ಕೆ ಕಾರಣವೆಂದು ವೇದಾಂತದಲ್ಲಿ ಹೇಳಿರುತ್ತದೆ. ಸರಿಯಾಗಿ ನೋಡಿದರೆ ಕಾರ್ಯಕಾರಣವೆಂಬುದುಕೂಡ ಅವಿದ್ಯಾಕಲ್ಪಿತವೆಂಬುದು ವೇದಾಂತದ ಸಿದ್ಧಾಂತವಾಗಿರುತ್ತದೆ.

ಅವಿದ್ಯೆಯು ತೃಷ್ಣೆಯ ಮೂಲಕ ಸಂಸಾರಕ್ಕೆ ಕಾರಣವಾಗಿರುವದರಿಂದ ತೃಷ್ಣೆಯನ್ನು ಹೋಗಲಾಡಿಸುವದೇ ನಿರ್ವಾಣಕ್ಕೆ ಮಾರ್ಗವು ; ಇದಕ್ಕಾಗಿ ಅಷ್ಟಾಂಗಿಕ ಮಾರ್ಗವನ್ನು - ಎಂದರೆ ಪ್ರಜ್ಞಾಶೀಲಸಮಾಧಿಗಳನ್ನು - ಅನುಷ್ಠಾನಮಾಡಬೇಕು, ಇದನ್ನು ತಿಳಿದುಕೊಳ್ಳುವದಕ್ಕೆ ಬುದ್ಧನನ್ನೂ ಧರ್ಮವನ್ನೂ ಸಂಘವನ್ನೂ ಶರಣು ಹೊಗಬೇಕು. ಹೀಗೆಂಬುದು ಬೌದ್ಧಮತದ ಉಪದೇಶವು. ತಪ್ಪಾಗಿ ತಿಳಿದಿರುವದೇ ಅವಿದ್ಯೆಯಾದ ಕಾರಣ ಅದನ್ನು ಕಳೆಯುವದಕ್ಕೆ ವಿದ್ಯೆಯೇ ಎಂದರೆ ಸರಿಯಾಗಿ ತಿಳಿದುಕೊಳ್ಳುವದೇ ಮಾರ್ಗವು. ಅವಿದ್ಯೆಯು ಹೋದರೆ ಅದರಿಂದ ಆಗಿರುವ ಕಾಮವೇ ಮುಂತಾದ ಅನರ್ಥಗಳು ತಾವೇ ತೊಲಗುವವಾದ್ದರಿಂದ ಅವನ್ನು ತೊಲಗಿಸುವದಕ್ಕೆ ಬೇರೆ ಯಾವ ಸಾಧನವನ್ನೂ ಮಾಡಬೇಕಾದದ್ದಿಲ್ಲ. ಅವಿದ್ಯೆಯನ್ನು ಕಳೆಯುವ ವಿದ್ಯೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಆತ್ಮಸ್ವರೂಪವನ್ನು ಸರಿಯಾಗಿ ತಿಳಿಸುವ ಉಪನಿಷತ್ತುಗಳ ಶ್ರವಣಮಾಡಿ ಆತ್ಮವಿಷಯಕವಾದ ಮನನ ನಿದಿಧ್ಯಾಸನಗಳನ್ನು ಮಾಡಬೇಕು - ಎಂಬುದು ವೇದಾಂತಿಗಳ ಉಪದೇಶವು. ಸಾಧನವೆಲ್ಲ ವಿಚಾರಕ್ಕೆ ತಕ್ಕಯೋಗ್ಯತೆಯನ್ನು ಸಂಪಾದಿಸಿಕೊಳ್ಳುವದಕ್ಕೆ - ಎಂಬುದು ಅವರ ಮತ.

ಸರ್ವವೂ ಅನಾತ್ಮವು, ಅನಿತ್ಯವು, ದುಃಖವು - ಎಂಬುದನ್ನು ತಿಳಿದುಕೊಂಡು ಅನುಷ್ಠಾನಮಾಡಬೇಕು, ನಿತ್ಯನಾದ ಆತ್ಮನೊಬ್ಬನು ಇದ್ದಾನೆಂದು ತಿಳಿಯುವದು

ಸರಿಯಾದ ದೃಷ್ಟಿಗೆ ಅಡ್ಡಿಯಾಗಿರುವದು - ಎಂಬುದು ಬೌದ್ಧರ ಹೇಳಿಕೆ. ಸರ್ವವೂ ಆತ್ಮನೇ, ಆತ್ಮನು ಸಚ್ಚಿದಾನಂದಸ್ವರೂಪನಾಗಿರುವನು ; ಮಿಥ್ಯಾರೂಪವಾದ ಅನಾತ್ಮದ ಯೋಗ್ಯತೆಯನ್ನು ತಿಳಿಯದಿರುವದೇ ಸರಿಯಾದ ದೃಷ್ಟಿಗೆ ಅಡ್ಡಿಯಾಗಿರುವದು - ಎಂಬುದು ವೇದಾಂತಿಗಳ ಹೇಳಿಕೆ.

ಪ್ರಪಂಚವು ಹೇಗೆ ಬಂದಿತು ? ನಾನು ಎಲ್ಲಿಂದ ಹೇಗೆ ಯಾವಾಗ ಬಂದೆನು ? - ಎಂದು ಮುಂತಾಗಿ ವಿಚಾರಮಾಡುವದು ವ್ಯರ್ಥವು. ಸಂಸಾರದಲ್ಲಿ ಪ್ರತ್ಯಕ್ಷಸಿದ್ಧವಾಗಿರುವ ದುಃಖವನ್ನು ಹೋಗಲಾಡಿಸುವ ಅಷ್ಟಾಂಗಿಕಮಾರ್ಗವನ್ನು ಅನುಸರಿಸುವದು ನಮ್ಮೆಲ್ಲರ ಕರ್ತವ್ಯವು - ಎಂಬುದು ಬೌದ್ಧರ ವಾದವು. ಅನಾತ್ಮವೆಲ್ಲವೂ ಯಾವ ಸಾಕ್ಷಿಚೈತನ್ಯಕ್ಕೆ ಗೋಚರವಾಗುವದೋ ಆ ಚೈತನ್ಯದಲ್ಲಿ ವಿಷಯದ ಧರ್ಮವಾದ ದುಃಖವಿರುವದೆಂಬುದು ಹಾಸ್ಯಾಸ್ಪದವಾದ ಮಾತು ; ಸುಷುಪ್ತಿ, ಸಮಾಧಿ - ಮುಂತಾದ ಅವಸ್ಥೆಗಳಲ್ಲಿ ಯಾವ ದುಃಖವೂ ಇಲ್ಲದ ಆನಂದವೇ ಇರುವದೆಂಬುದು ಎಲ್ಲ ಮತದವರಿಗೂ ಅನುಭವಸಿದ್ಧವಾಗಿರುವದು. ಯಾವದು ಸಾಧನೆಯಿಂದ ಉಂಟಾಗುವದೋ ಅದು ನಿತ್ಯವೆಂಬುದು ಯುಕ್ತಿ ವಿರುದ್ಧವಾಗಿರುವದರಿಂದಲೂ ನಿರ್ವಾಣವು ಸಾಧನಕೃತವಲ್ಲವೆಂದು ಹೇಳಿದರೆ ಅದು ನಿತ್ಯಸಿದ್ಧವಾದ ಸ್ವರೂಪವೇ ಎಂದಾಗಿಬಿಡುವದರಿಂದ ಜ್ಞಾನದಿಂದಲೇ ಮುಕ್ತಿ - ಎಂಬ ಉಪನಿಷತ್ಸಿದ್ಧಾಂತಕ್ಕೇ ಬೌದ್ಧರೂ ಒಪ್ಪಿಗೆಯನ್ನು ಕೊಡಬೇಕಾಗುವದರಿಂದಲೂ ಆತ್ಮಾನಾತ್ಮವಿವೇಕವನ್ನೂ ಆತ್ಮನ ಪರಮಾರ್ಥಸ್ವರೂಪವನ್ನೂ ಕುರಿತು ವಿಚಾರಮಾಡುವದು ಸಪ್ರಯೋಜನವು, ಅದರಿಂದಲೇ ಪರಮಪುರುಷಾರ್ಥವು ದೊರೆಯುವದು - ಎಂದು ವೇದಾಂತಿಗಳು ಹೇಳುತ್ತಾರೆ.

ಬೌದ್ಧರು ವೇದಪ್ರಾಮಾಣ್ಯವನ್ನಾಗಲಿ ಜಗತ್ಕರ್ತೃವಾದ ಈಶ್ವರನೊಬ್ಬನಿರುವನೆಂಬುದನ್ನಾಗಲಿ ಒಪ್ಪುವದಿಲ್ಲ. ವೇದಾಂತಿಗಳ ಮತದಲ್ಲಿ ಉಪನಿಷದ್ವಾಕ್ಯವು ಆತ್ಮಸ್ವರೂಪವನ್ನು ನೇರಾಗಿ ತಿಳಿಸುವದಿಲ್ಲವಾದರೂ ಅನಾತ್ಮಧರ್ಮವನ್ನು ಬೇರ್ಪಡಿಸಿ ಸ್ವತಃಸಿದ್ಧವಾದ ಆತ್ಮತತ್ತ್ವವನ್ನು ತಿಳಿಸಿಕೊಡುವದರಿಂದ ಅದು ಪ್ರಮಾಣವಾಗುತ್ತದೆ. ಪರಮಾರ್ಥದೃಷ್ಟಿಯಿಂದ ನೋಡುವಾಗ ಜಗತ್ತೆಂಬುದು ಆತ್ಮನಿಗಿಂತ ಬೇರೆಯಾಗಿಲ್ಲವಾದರೂ ವ್ಯವಹಾರದೃಷ್ಟಿಯಲ್ಲಿ ಜೀವ, ಈಶ್ವರ - ಎಂಬ ಭೇದವನ್ನೂ ಈಶ್ವರೋಪಾಸನೆಯನ್ನೂ ಅವರು ಒಪ್ಪುತ್ತಾರೆ. ಬೌದ್ಧರು ವೈದಿಕಕರ್ಮಗಳನ್ನು ಪ್ರಯೋಜನಕಾರಿಗಳೆಂದು ನಂಬುವದಿಲ್ಲ. ವೇದಾಂತಿಗಳು ಕರ್ಮಗಳನ್ನು ಮಾಡುವದು ಚಿತ್ತಶುದ್ಧಿಗೆ ಕಾರಣವಾಗಿರುವದೆನ್ನುವರು ; ಈಶ್ವರಾರ್ಪಣ ಬುದ್ಧಿಯಿಂದ ಕರ್ಮವನ್ನು ಮಾಡುವದೂ ವೇದದಲ್ಲಿ ಹೇಳಿರುವಂತೆ

ಈಶ್ವರನ ಧ್ಯಾನವನ್ನು ಮಾಡುವದೂ ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆಯನ್ನುಂಟು ಮಾಡುವದೆಂದು ಅವರ ನಂಬಿಕೆ. ಯೋಗ್ಯನಾದ ಅಧಿಕಾರಿಯು ಯಾವನೇ ಆಗಲಿ, ಅಷ್ಟಾಂಗಿಕಮಾರ್ಗವನ್ನು ಅನುಸರಿಸಿದರೆ ನಿರ್ವಾಣವನ್ನು ಪಡೆಯಬಹುದೆಂದು ಬೌದ್ಧರು ಹೇಳುವಂತೆಯೇ ಯೋಗ್ಯನಾದ ಅಧಿಕಾರಿಯು ಯಾವನೇ ಆಗಲಿ, ತತ್ತ್ವವಿಚಾರವನ್ನು ಮಾಡಿದರೆ ಜ್ಞಾನವನ್ನು ಸಂಪಾದಿಸಿ ಮುಕ್ತಿಯನ್ನು ಪಡೆದು ಕೊಳ್ಳಬಹುದೆಂದು ವೇದಾಂತಿಗಳು ಹೇಳುತ್ತಾರೆ. ಆದರೆ ಸಾಧನವೂ ಮುಕ್ತಿಯೂ ಈ ಎರಡು ಮತಗಳಲ್ಲಿ ಬೇರೆಯೇ ಆಗಿರುತ್ತವೆಯೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಏಕೆಂದರೆ ಆರ್ಯಸತ್ಯಗಳನ್ನು ಅರಿಯದ್ದರಿಂದ ಬಂಧವಾಗಿರುವದೆಂಬುದು ಬೌದ್ಧರ ಸಿದ್ಧಾಂತವಾಗಿರುವದಾದ್ದರಿಂದ ಆ ಸತ್ಯಗಳನ್ನು ಅರಿತುಕೊಂಡು ಅಷ್ಟಾಂಗಿಕ ಮಾರ್ಗವನ್ನು ಅನುಸರಿಸುವದರಿಂದಲೇ ನಿರ್ವಾಣವನ್ನು, ಎಂದರೆ ರಾಗದ್ವೇಷ ಮೋಹಾದಿಗಳ ನಾಶವನ್ನು, ಸಾಧಕನು ಹೊಂದುವನೆಂದು ಆ ಮತದ ದೃಷ್ಟಿಯಿಂದ ಏರ್ಪಡುತ್ತದೆ. ಸರ್ವರಿಗೂ ಆತ್ಮನಾಗಿರುವ ಬ್ರಹ್ಮವನ್ನರಿಯದ್ದರಿಂದ ಬಂಧವಾಗಿರು ವದೆಂದು ವೇದಾಂತಿಗಳ ಮತವಾಗಿರುವದರಿಂದ ಆ ಬ್ರಹ್ಮಾತ್ಮಜ್ಞಾನದಿಂದಲೇ ಮುಕ್ತಿಯು, ಎಂದರೆ ಕರ್ತೃತ್ವಭೋಕ್ತೃತ್ವರೂಪವಾದ ಅನರ್ಥದಿಂದ ಬಿಡುಗಡೆಯು, ಸಾಧಕನಿಗೆ ದೊರೆಯುವದೆಂದು ವೇದಾಂತದೃಷ್ಟಿಯಿಂದ ಏರ್ಪಡುತ್ತದೆ.

---

## ೩. ಧರ್ಮಪದಪಾಳಿಗಾಥೆಗಳೂ ಸಮಾನಾರ್ಥಕ ಸಂಸ್ಕೃತಶ್ಲೋಕಗಳೂ

(ಸೂಚನೆ :- ಇಲ್ಲಿ ಪಾಳಿಯನ್ನು ದಪ್ಪಕ್ಷರದಲ್ಲಿಯೂ ಸಂಸ್ಕೃತವನ್ನು ಸಣ್ಣಕ್ಷರ ದಲ್ಲಿಯೂ ಅಚ್ಚುಮಾಡಿರುತ್ತದೆ. ಸಂಸ್ಕೃತವಚನಗಳ ಕೆಲವು ಕಡೆಗಳಲ್ಲಿ ಸಮಾನಾರ್ಥವನ್ನು ಸೂಚಿಸುವ ಬೇರೆ ಪದಗಳಿವೆ. ಮತ್ತೆ ಕೆಲವು ಕಡೆಗಳಲ್ಲಿ ಶಬ್ದಸಾಮ್ಯವೂ ಕಂಡುಬರುತ್ತದೆ. ಇಂಥ ಕಡೆಗಳಲ್ಲಿ ಒಬ್ಬರಿಂದೊಬ್ಬರು ಕದ್ದಿರುವರೆನ್ನುವದಕ್ಕಿಂತ ಇಬ್ಬರಿಗೂ ಸಮಾನವಾದ ಪುರಾತನಾರ್ಯರ ನಲ್ನುಡಿಯಿದೆಂದು ಭಾವಿಸಿದರೆ ತಪ್ಪಾಗದೆಂದು ತೋರುವದು. ಇಲ್ಲಿ ಕೊಟ್ಟಿ ರುವ ಸಂಖ್ಯೆಗಳು ಒಟ್ಟು ಗ್ರಂಥದ ಗಾಥೆಗಳ ಅನುಕ್ರಮಸಂಖ್ಯೆಯನ್ನು ಸೂಚಿಸುವವು ; ಆಯಾ ವರ್ಗದ ಗಾಥೆಗಳ ಅನುಕ್ರಮಸಂಖ್ಯೆಯನ್ನಲ್ಲ.)

ಮನೋಪುಬ್ಬಙ್ಗಮಾ ಧಮ್ಮಾ ಮನೋಸೇಟ್ಠಾ ಮನೋಮಯಾ
ಮನಸಾ ಚೇ ಪದುಟ್ಠೇನ ಭಾಸತಿ ವಾ ಕರೋತಿ ವಾ ।
ತತೋಽನಂ ದುಕ್ಖಮನ್ವೇತಿ ಚಕ್ಕಂಽವ ವಹತೋ ಪದಂ ॥೧॥

ತಸ್ಯೇಹ ತ್ರಿವಿಧಸ್ಯಾಪಿ ತ್ರ್ಯಧಿಷ್ಠಾನಸ್ಯ ದೇಹಿನಃ
ದಶಲಕ್ಷಣಯುಕ್ತಸ್ಯ ಮನೋ ವಿದ್ಯಾತ್ಪ್ರವರ್ತಕಮ್ ॥ (ಮನು ೧೨-೪)

ನ ಹಿ ವೇರೇನ ವೇರಾನಿ ಸಮ್ಮನ್ತೀಧ ಕುದಾಚನಂ ।
ಅವೇರೇನ ಚ ಸಮ್ಮನ್ತಿ ಏಸ ಧಮ್ಮೋ ಸನನ್ತನೋ ॥೫॥

ನ ಚಾಪಿ ವೈರಂ ವೈರೇಣ ಕೇಶವ ವ್ಯುಪಶಾಮ್ಯತಿ ॥
ಹವಿಷಾಗ್ನಿರ್ಯಥಾ ಕೃಷ್ಣ ಭೂಯ ಏವಾಭಿವರ್ಧತೇ (ಉದ್ಯೋಗ ೭೨-೬೪)

ಅನಿಕ್ಕಸಾವೋ ಕಾಸಾವಂ ಯೋ ವತ್ಥಂ ಪರಿದಹೇಸ್ಸತಿ ।
ಅಪೇತೋ ದಮುಸಚ್ಚೇನ ನ ಸ ಕಾಸಾವಮರಹತಿ ॥೯॥

ಅನಿಷ್ಕಷಾಯೇ ಕಾಷಾಯಮೀಹಾರ್ಥಮಿತಿ ವಿದ್ಧಿ ತಮ್ ।
ಧರ್ಮಧ್ವಜಾನಾಂ ಮುಣ್ಡಾನಾಂ ವೃತ್ತ್ಯರ್ಥಮಿತಿ ಮೇ ಮತಿಃ ॥ (ರಾಜಧರ್ಮ ೧೮-೩೪)

ಇಧ ಸೋಚತಿ ಪೇಚ್ಚ ಸೋಚತಿ ।
ಪಾಪಕಾರೀ ಉಭಯತ್ಥ ಸೋಚತಿ
ಸೋ ಸೋಚತಿ ಸೋ ವಿಹಞ್ಞತಿ ।
ದಿಸ್ವಾ ಕಮ್ಮಕಿಲಿಟ್ಠಮತ್ತನೋ ॥೧೫॥
ಇಧ ಮೋದತಿ ಪೇಚ್ಚ ಮೋದತಿ ।
ಕತಪುಞ್ಞೋ ಉಭಯತ್ಥ ಮೋದತಿ ।
ಸೋ ಮೋದತಿ ಸೋ ಪಮೋದತಿ ।
ದಿಸ್ವಾ ಕಮ್ಮವಿಸುದ್ಧಿಮತ್ತನೋ ॥೧೬॥

ದುರ್ಭಿಕ್ಷಾದೇವ ದುರ್ಭಿಕ್ಷಂ ಕ್ಲೇಶಾತ್ಕ್ಲೇಶಂ ಭಯಾದ್ಭಯಮ್ ।
ಮೃತೇಭ್ಯಃ ಪ್ರಮೃತಂ ಯಾನ್ತಿ ದರಿದ್ರಾಃ ಪಾಪಕಾರಿಣಃ ॥೩॥

ಉತ್ಸವಾದುತ್ಸವಂ ಯಾನ್ತಿ ಸ್ವರ್ಗಾತ್ಸ್ವರ್ಗಂ ಸುಖಾತ್ಸುಖಮ್ ।
ಶ್ರದ್ಧಧಾನಾಶ್ಚ ದಾನಾಶ್ಚ ಧನಾಢ್ಯಾಃ ಶುಭಕಾರಿಣಃ ॥೪॥ (ಮೋಕ್ಷ ೧೮೧-೩, ೪)

ಬಹುಂಽಪಿ ಚೇ ಸಹಿತಂ ಭಾಸಮಾನೋ ।
ನ ತಕ್ಕರೋ ಹೋತಿ ನರೋ ಪಮತ್ತೋ

ಗೋಪೋ'ವ ಗಾವೋ ಗಣಯಂ ಪರೇಸಂ ।
ನ ಭಾಗವಾ ಸಾಮಞ್ಞಸ್ಸ ಹೋತಿ ||೧೯||

ತಸ್ಮಾತ್ ಕ್ಷತ್ರಿಯ ಮಾ ಮಂಸ್ಥಾ ಜಲ್ಪಿತೇನೈವ ವೈ ದ್ವಿಜಮ್ ।
ಯ ಏವ ಸತ್ಯಾನ್ನಾಪೈತಿ ಸಜ್ಞೇಯೋ ಬ್ರಾಹ್ಮಣಃ ತ್ವಯ್ ॥ (ಉದ್ಯೋಗ ೪೩-೪೯)

ಅಪ್ಪಮಾದೋ ಅಮತಪದಂ ಪಮಾದೋ ಮಚ್ಚುನೋ ಪದಂ
ಅಪ್ಪಮತ್ತಾ ನ ಮಿಯನ್ತಿ ಯೇ ಪಮತ್ತಾ ಯಥಾ ಮತಾ ||೨೧||

ಪ್ರಮಾದಂ ವೈ ಮೃತ್ಯುಮಹಂ ಬ್ರವೀಮಿ ತಥಾ ಪ್ರಮಾದಮಮೃತತ್ವಂ ಬ್ರವೀಮಿ
(ಉದ್ಯೋಗ ೪೨-೪)

ಪಞ್ಞಾಪಾಸಾದಮಾರುಯ್ಹ ಅಸೋಕೋ ಸೋಕಿನಂ ಪಜಂ
ಪಬ್ಬತಟ್ಠೋ'ವ ಭುಮ್ಮಟ್ಠೇ ಧೀರೋ ಬಾಲೇ ಅವೇಕ್ಖತಿ ||೨೮||

ಪ್ರಜ್ಞಾಪ್ರಾಸಾದಮಾರುಹ್ಯ ಅಶೋಚ್ಯಃ ಶೋಚತೇ ಜನಾನ್ ।
ಜಗತೀಸ್ಥಾನಿವಾದ್ರಿಸ್ಥಃ ಪ್ರಜ್ಞಯಾ ಪ್ರತಿಪತ್ಸ್ಯತಿ ॥ (ಶಾಂ. ಆಪ. ೧೫೧-೧೧)

ಪ್ರಜ್ಞಾಪ್ರಾಸಾದಮಾರುಹ್ಯಾಶೋಚ್ಯಃ ಶೋಚತೋ ಜನಾನ್ ।
ಭೂಮಿಷ್ಠಾನಿವ ಶೈಲಸ್ಥಃ ಸರ್ವಾನ್ ಪ್ರಜ್ಞೋ'ನುಪಶ್ಯತಿ ॥ (ಯೋಗಾಭಾಷ್ಯ ೧-೪೭)

ಪ್ರಜ್ಞಾಪ್ರಾಸಾದಮಾರುಹ್ಯ ಮುಚ್ಯನ್ತೇ ಮಹತೋ ಭಯಾತ್ ।
ಪ್ರೇಕ್ಷನ್ತೇ ಲೋಕವೃತ್ತಾನಿ ವಿವಿಧಾನಿ ದ್ವಿಜೋತ್ತಮ ॥ (ವನ ೨೦೮-೯೮)

ಫೇಣೂಪಮಂ ಕಾಯಮಿಮಂ ವಿದಿತ್ವಾ ।
ಮರೀಚಿಧಮ್ಮಂ ಅಭಿಸಮ್ಬುಧಾನೋ ।
ಛೇತ್ವಾನಮಾರಸ್ಸ ಪಪುಪ್ಫಕಾನಿ ।
ಅದಸ್ಸನಂ ಮಚ್ಚುರಾಜಸ್ಸ ಗಚ್ಛೇ ||೪೬||

ಅಪಾಂ ಫೇನೋಪಮಂ ಲೋಕಂ ವಿಷ್ಣೋರ್ಮಾಯಾಶತೈರ್ವೃತಮ್ (ಮೋ. ೩೦೧-೫೯)

ಫೇನಮಾತ್ರೋಪಮೇ ದೇಹೇ ಜೀವೇ ಶಕುನಿವತ್ಸ್ಥಿತೇ ॥ (ಮೋ. ೩೦೧-೭)

ಪುಪ್ಫಾನಿ ಹೇವ ಪಚಿನನ್ತಂ ಬ್ಯಾಸತ್ತಮನಸಂ ನರಂ ।
ಸುತ್ತಂ ಗಾಮಂ ಮಹೋಘೋ'ವ ಮಚ್ಚು ಆದಾಯ ಗಚ್ಛತಿ ||೪೭||

ಪುಪ್ಫಾನಿ ಹೇವ ಪಚಿನನ್ತಂ ಬ್ಯಾಸತ್ತಮನಸಂ ನರಂ ।
ಅತಿತ್ತಂ ಯೇವ ಕಾಮೇಸು ಅನ್ತಕೋ ಕುರುತೇ ವಸಂ ||೪೮||

ಪುಷ್ಪಾಣೀವ ವಿಚಿನ್ವಂತಮನ್ಯತ್ರಗತಮಾನಸಮ್ ।
ವೃಕೀವೋರಣಮಾಸಾದ್ಯ ಮೃತ್ಯುರಾದಾಯ ಗಚ್ಛತಿ ॥ (ಮೋ. ೧೭೫-೧೩)

ತಂ ಪುತ್ರಪಶುಸಂಪನ್ನಂ ವ್ಯಾಸಕ್ತಮನಸಂ ನರಂ
ಸುಪ್ತಂ ವ್ಯಾಘ್ರಂ ಮಹೌಘೋ ವಾ ಮೃತ್ಯುರಾದಾಯ ಗಚ್ಛತಿ । (ಮೋ. ೧೭೫-೧೮)

ಸಂಚಿನ್ವಾನಕಮೇವೈಕಂ ಕಾಮಾನಾಮವಿತೃಪ್ತಕಮ್ ।
ವೃಕೀವೋರಣಮಾಸಾದ್ಯ ಮೃತ್ಯುರಾದಾಯ ಗಚ್ಛತಿ ॥ (ಮೋ. ೨೭೮-೧೯)

ನ ಪರೇಸಂ ವಿಲೋಮಾನಿ ನ ಪರೇಸಂ ಕತಾಕತಂ ।
ಅತ್ತನೋವ ಅವೇಕ್ಖೇಯ್ಯ ಕತಾನಿ ಅಕತಾನಿ ಚ ॥೫೦॥

ನೈವ ಪಶ್ಯೇನ್ನ ಶೃಣುಯಾದವಾಚ್ಯಂ ಜಾತು ಕಸ್ಯಚಿತ್ ॥ (ಮೋ. ೨೪೫-೯)

ಚರಂ ಚೇ ನಾಧಿಗಚ್ಛೇಯ್ಯ ಸೇಯಂ ಸದಿಸಮತ್ತನೋ ।
ಏಕಚರಿಯಂ ದಳ್ಹಂ ಕಯಿರಾ ನತ್ಥಿ ಬಾಲೇ ಸಹಾಯತಾ ॥೬೧॥

ಏಕ ಏವ ಚರೇದ್ಧರ್ಮಂ ಸಿದ್ಧ್ಯರ್ಥಮಸಹಾಯವಾನ್ ॥ (ಮೋ. ೨೪೪-೪)

ಏಕ ಏವ ಚರೇದ್ಧರ್ಮಂ ನಾಸ್ತಿ ಧರ್ಮೇ ಸಹಾಯತಾ ।
ಕೇವಲಂ ವಿಧಿಮಾಸಾದ್ಯ ಸಹಾಯಃ ಕಿಂ ಕರಿಷ್ಯತಿ ॥ (ಮೋ. ೧೯೩-೩೨)

ನ ತಂ ಕಮ್ಮಂ ಕತಂ ಸಾಧು ಯಂ ಕತ್ವಾ ಅನುತಪ್ಪತಿ ।
ಯಸ್ಸ ಅಸ್ಸುಮುಖೋ ರೋದಂ ವಿಪಾಕಂ ಪಟಿಸೇವತಿ ॥೬೭॥

ಯದನ್ಯೇಷಾಂ ಹಿತಂ ನ ಸ್ಯಾದಾತ್ಮನಃ ಕರ್ಮಪೌರುಷಮ್ ।
ಅಪತ್ರಪೇತ ವಾ ಯೇನ ನ ತತ್ಕುರ್ಯಾತ್ಕದಾಚನ ॥ (ರಾಜ ೧೨೪-೬೭)

ಕಿಂ ನು ಮೇ ಸ್ಯಾದಿದಂ ಕೃತ್ವಾ ಕಿನ್ನು ಮೇ ಸ್ಯಾದಕುರ್ವತಃ ।
ಇತಿ ಕರ್ಮಾಣಿ ಸಂಚಿನ್ತ್ಯ ಕುರ್ಯಾದ್ವಾಪುರುಷೋ ನ ವಾ (ಉದ್ಯೋಗ ೩೪-೧೯)

## ಪಂಡಿತವರ್ಗ

("ಉದ್ಯೋಗಪರ್ವ ೩೩ನೆಯ ಅಧ್ಯಾಯದಲ್ಲಿ ಪಂಡಿತನ ವರ್ಣನ" ಯನ್ನು ಮಾಡಿರುವ ಶ್ಲೋಕಗಳನ್ನು ನೋಡಿ.)

ಸುಞ್ಞತೋ ಅನಿಮಿತ್ತೋ ಚ ವಿಮೋಕ್ಖೋ ಯಸ್ಸ ಗೋಚರೋ
ಆಕಾಸೇವ ಸಕುನ್ತಾನಂ ಗತಿ ತೇಸಂ ದುರನ್ನಯಾ ॥೯೨॥

ಯಸ್ಸಾಸವಾ ಪರಿಕ್ಖೀಣಾ ಆಹಾರೇ ಚ ಅನಿಸ್ಸಿತೋ ।
ಸುಞ್ಞತೋ ಅನಿಮಿತ್ತೋ ಚ ವಿಮೋಕ್ಖೋ ಯಸ್ಸ ಗೋಚರೋ
ಆಕಾಸೇವ ಸಕುನ್ತಾನಂ ಪದಂ ತಸ್ಸ ದುರನ್ನಯಂ ||೯೩||

ಸರ್ವಭೂತಾತ್ಮಭೂತಸ್ಯ ವಿಭೋರ್ಭೂತಹಿತಸ್ಯ ಚ ।
ದೇವಾಽಪಿ ಮಾರ್ಗೇ ಮುಹ್ಯನ್ತಿ ಅಪದಸ್ಯ ಪದೈಷಿಣಃ || (ಮೋ. ೨೩೯-೨೩)

ಶಕುಂತಾನಾಮಿವಾಕಾಶೇ ಮತ್ಸ್ಯಾನಾಮಿವ ಚೋದಕೇ ।
ಯಥಾ ಗತಿರ್ನ ದೃಶ್ಯೇತ ತಥಾ ಜ್ಞಾನವಿದಾಂ ಗತಿಃ || (ಮೋ. ೨೩೯-೨೪)

ನೇವ ದೇವೋ ನ ಗನ್ಧಬ್ಬೋ ನ ಮಾರೋ ಸಹ ಬ್ರಹ್ಮುನಾ ।
ಜಿತಂ ಅಪಜಿತಂ ಕಯಿರಾ ತಥಾರೂಪಸ್ಸ ಜನ್ತುನೋ ||೧೦೫||

ನಾಸ್ಯ ದೇವಾ ನ ಗಂಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ಪದಮನ್ವವರೋಹನ್ತಿ ಪ್ರಾಪ್ತಸ್ಯ ಪರಮಾಂ ಗತಿಮ್ || (ಮೋ. ೨೨೯-೨೫)

ಅಭಿವಾದನಸೀಲಸ್ಸ ನಿಚ್ಚಂ ವದ್ಧಾಪಚಾಯಿನೋ ।
ಚತ್ತಾರೋ ಧಮ್ಮಾ ವಡ್ಢನ್ತಿ ಆಯು ವಣ್ಣೋ ಸುಖಂ ಬಲಂ ||೧೦೯||

ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।
ಚತ್ವಾರಿ ಸಂಪ್ರವರ್ಧನ್ತೇ ಆಯುರ್ವಿದ್ಯಾ ಯಶೋ ಬಲಮ್ || (ಮನು ೨-೧೨೧)

ಅಭಿವಾದನ .. ... .. ......... ........ ... ಬಲಮ್ (ಉದ್ಯೋ. ೩೯-೭೫)

ಅಭಿತ್ಥರೇಥ ಕಲ್ಯಾಣೇ ಪಾಪಾ ಚಿತ್ತಂ ನಿವಾರಯೇ ।
ದನ್ಧಂ ಹಿ ಕರೋತೋ ಪುಞ್ಞಂ ಪಾಪಸ್ಮಿಂ ರಮತೀ ಮನೋ ||೧೧೬||

ಪಾಪಂ ಚೇ ಪುರಿಸೋ ಕಯಿರಾ ನ ತಂ ಕಯಿರಾ ಪುನಪ್ಪುನಂ ।
ನ ತಂ ಹಿ ಚನ್ದಂ ಕಯಿರಾಥ ದುಕ್ಖೋ ಪಾಪಸ್ಸ ಉಚ್ಚಯೋ ||೧೧೭||

ಕಲ್ಯಾಣಮನುಕರ್ತವ್ಯಂ ಪುರುಷೇಣ ಬುಭೂಷತಾ ।
ಯೇ ಸುಗನ್ಧೀನಿ ಸೇವನ್ತೇ ತಥಾಗನ್ಧಾ ಭವನ್ತಿ ತೇ || (ಆ. ೧೫೨-೨೫)

ವಿಕರ್ಮಣಾ ತಪ್ಯಮಾನಃ ಪಾಪಾದ್ವಿಪರಿಮುಚ್ಯತೇ ।
ನೈತತ್ಕಾರ್ಯಂ ಪುನರಿತಿ ದ್ವಿತೀಯಾತ್ಪರಿಮುಚ್ಯತೇ || (ಆ. ೧೫೨-೨೩)

ಪಾಪೋಽಪಿ ಪಸ್ಸತಿ ಭದ್ರಂ ಯಾವ ಪಾಪಂ ನ ಪಚ್ಚತಿ ।
ಯದಾ ಚ ಪಚ್ಚತಿ ಪಾಪಂ ಅಥ ಪಾಪೋ ಪಾಪಾನಿ ಪಸ್ಸತಿ ||೧೧೯||

ಮಾಪಮಞ್ಞೇಥ ಪಾಪಸ್ಸ ನ ಮಂ ತಂ ಆಗಮಿಸ್ಸತಿ ।
ಉದಬಿನ್ದುನಿಪಾತೇನ ಉದಕುಮ್ಭೋಽಪಿ ಪೂರತಿ ॥
ಬಾಲೋ ಪೂರತಿ ಪಾಪಸ್ಸ ಥೋಕಥೋಕಂಽಪಿ ಆಚಿನಂ ॥೧೨೧॥

ಪಾಪಂ ಕೃತಂ ನ ಸ್ಮರತೀಹ ಮೂಢೋ
ವಿವರ್ತಮಾನಸ್ಯ ತದೇತಿ ಕರ್ತುಃ ।
ರಾಹುರ್ಯಥಾ ಚನ್ದ್ರಮುಪೈತಿ ಚಾಪಿ
ತಥಾಽಬುಧಂ ಪಾಪಮುಪೈತಿ ಕರ್ಮ ॥ (ಮೋ. ೧೯೪-೨೯)

ಸಬ್ಬೇ ತಸನ್ತಿ ದಣ್ಡಸ್ಸ ಸಬ್ಬೇ ಭಾಯನ್ತಿ ಮಚ್ಚುನೋ ।
ಅತ್ತಾನಂ ಉಪಮಂ ಕತ್ವಾ ನ ಹನೇಯ್ಯ ನ ಘಾತಯೇ ॥೧೨೯॥

ಸಬ್ಬೇ ತಸನ್ತಿ ದಣ್ಡಸ್ಯ ಸಬ್ಬೇಸಂ ಜೀವಿತಂ ಪಿಯಂ ।
ಅತ್ತಾನಂ ಉಪಮಂ ಕತ್ವಾ ನ ಹನೇಯ್ಯ ನ ಘಾತಯೇ ॥೧೩೦॥

ಪ್ರಾಣಾ ಯಥಾತ್ಮನೋಽಭೀಷ್ಟಾ ಭೂತಾನಾಮಪಿ ವೈ ತಥಾ ।
ಆತ್ಮೌಪಮ್ಯೇನ ಮನ್ತವ್ಯಂ ಬುದ್ಧಿಮದ್ಭಿಃ ಕೃತಾತ್ಮಭಿಃ ॥ (ಅನು. ೧೧೫-೨೨)

ಸರ್ವಾಣಿ ಭೂತಾನಿ ಸುಖೇ ರಮನ್ತೇ
ಸರ್ವಾಣಿ ದುಃಖಸ್ಯ ಭೃಶಂ ತ್ರಸನ್ತೇ ।
ತೇಷಾಂ ಭಯೋತ್ಪಾದನಜಾತಖೇದಃ
ಕುರ್ಯಾನ್ನ ಕರ್ಮಾಣಿ ಹಿ ಶ್ರದ್ದಧಾನಃ ॥ (ಮೋ.೨೪೫-೨೯)

ಸುಖಕಾಮಾನಿ ಭೂತಾನಿ ಯೋ ದಣ್ಡೇನ ವಿಹಿಂಸತಿ ।
ಅತ್ತನೋ ಸುಖಮೇಸಾನೋ ಪೇಚ್ಚ ಸೋ ನ ಲಭತೇ ಸುಖಂ ॥೧೩೧॥

ನ ತತ್ಪರಸ್ಯ ಸಂದಧ್ಯಾತ್ ಪ್ರತಿಕೂಲಂ ಯದಾತ್ಮನಃ । (ಉದ್ಯೋಗ ೩ ೮-೭೨)

ಯೋಽಹಿಂಸಕಾನಿ ಭೂತಾನಿ ಹಿನಸ್ತ್ಯಾತ್ಮಸುಖೇಚ್ಛಯಾ ।
ಸ ಜೀವಂಶ್ಚ ಮೃತಶ್ಚೈವ ನ ಕ್ವಚಿತ್ಸುಖಮೇಧತೇ ॥ (ಮನು. ೫-೪೫)

ಜೀವಿತುಂ ಯಃ ಸ್ವಯಂ ಚೇಚ್ಛೇತ್ಕಥಂ ಸೋಽನ್ಯಂ ಪ್ರಘಾತಯೇತ್ ॥ (ಮೋಕ್ಷ ೨೫೯-೨೦)

ಯೋ ದಣ್ಡೇನ ಅದಣ್ಡೇಸು ಅಪ್ಪದುಟ್ಠೇಸು ದುಸ್ಸತಿ ।
ದಸನ್ನಮಞ್ಞತರಂ ಠಾನಂ ಖಿಪ್ಪಮೇವ ನಿಗಚ್ಛತಿ ॥೧೩೨॥

ಅಧರ್ಮದಣ್ಡನಂ ಲೋಕೇ ಯಶೋಘ್ನಂ ಕೀರ್ತಿನಾಶನಮ್ ।
ಅಸ್ವರ್ಗ್ಯಂ ಚ ಪರತ್ರಾಪಿ ತಸ್ಮಾತ್ತತ್ಪರಿವರ್ಜಯೇತ್ ॥ (ಮನು. ೮-೧೨೭)

ನ ನಗ್ಗ ಚರಿಯಾ ನ ಜಟಾ ನ ಪಙ್ಕಾ
ನಾನಾಸಕಾ ಥಣ್ಡಿಲಸಾಯಿಕಾ ವಾ ।
ರಜೋ ಚ ಜಲ್ಲಂ ಉಕ್ಕುಟಿಕಪ್ಪಧಾನಂ
ಸೋಧೇನ್ತಿ ಮಚ್ಚಂ ಅವಿತಿಣ್ಣ ಕಙ್ಖಂ ||೧೪೧||

ನ ಮೂಲಫಲಭಕ್ಷಿತ್ವಾನ್ನ ಮೌನಾನ್ನಾನಿಲಾಶನಾತ್ ||
ಶಿರಸೋ ಮುಂಡನಾದ್ವಾಪಿ ನ ಸ್ಥಾನಕುಟಿಕಾಸನಾತ್ ||
ನ ಜಟಾಧಾರಣಾದ್ವಾಪಿ ನ ತು ಸ್ಥಣ್ಡಿಲಶಯ್ಯಯಾ ||
ನಿತ್ಯಂ ಹ್ಯನಶನಾದ್ವಾಪಿ ನಾಗ್ನಿ ಶುಶ್ರೂಷಣಾದಪಿ ।
ನ ಚೋದಕಪ್ರವೇಶೇನ ನ ಚ ಕ್ಷ್ಮಾಶಯನಾದಪಿ ||
ಜ್ಞಾನೇನ ಕರ್ಮಣಾ ವಾಪಿ ಜರಾಮರಣಮೇವ ಚ ।
ವ್ಯಾಧಯಶ್ಚ ಪ್ರಹೀಯನ್ತೇ ಪ್ರಾಪ್ಯತೇ ಚೋತ್ತಮಂ ಪದಮ್ (ವನ. ೨೦೦-೪,೫,೬,೭,)

ಪರಿಜಿಣ್ಣಮಿದಂ ರೂಪಂ ರೋಗನಿಡ್ಢಂ ಪಭಙ್ಗುರಂ ।
ಭಿಜ್ಜತೀ ಪೂತಿಸನ್ದೇಹೋ ಮರಣನ್ತಂ ಹಿ ಜೀವಿತಂ ||೧೪೮||

ಅಟ್ಠೀನಂ ನಗರಂ ಕತಂ ಮಂಸಲೋಹಿತಲೇಪನಂ ।
ಯತ್ಥ ಜರಾ ಚ ಮಚ್ಚೂ ಚ ಮಾನೋ ಮಕ್ಖೋ ಚ ಓಹಿತೋ ||೧೫೦||

ಅಸ್ಥಿಸ್ಥೂಣಂ ಸ್ನಾಯುಯುತಂ ಮಾಂಸಶೋಣಿತಲೇಪನಮ್ ।
ಚರ್ಮಾವನದ್ಧಂ ದುರ್ಗನ್ಧಂ ಪೂರ್ಣಂ ಮೂತ್ರಪುರೀಷಯೋಃ ।
ಜರಾಶೋಕಸಮಾವಿಷ್ಟಂ ರೋಗಾಯತನಮಾಗುರಂ ।
ರಜಸ್ವಲಮನಿತ್ಯಂ ಚ ಭೂತಾವಾಸಮಿಮಂ ತ್ಯಜ ||
(ಮೋ. ೩೩೦-೪೨,೪೩ ; ಮನು ೬-೭೬,೭೭)

ಸರ್ವೇಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾನ್ತಾ ಮರಣಾನ್ತಂ ಚ ಜೀವಿತಮ್ || (ಅಶ್ವ ೪೪-೧೯)
(ರಾಜ ೨೮-೩೧)

ತಂ ಬುದ್ಧಮನನ್ತಗೋಚರಂ ಅಪದಂ ಕೇನ ಪದೇನ ನೇಸ್ಸಥ ||೧೮೦||

ಶಕುನೀನಾಮಿವಾಕಾಶೇ ಜಲೇ ವಾರಿಚರಸ್ಯ ಚ ।
ಪದಂ ಯಥಾ ನ ದೃಶ್ಯೇತ ತಥಾ ಜ್ಞಾನವತಾಂ ಗತಿಃ || (ಮೋ. ೧೮೧-೧೯)

ಅಪಿ ದಿಬ್ಬೇಸು ಕಾಮೇಸು ರತಿಂ ಸೋ ನಾಧಿಗಚ್ಛತಿ ।
ತಣ್ಹಾಕ್ಖಯರತೋ ಹೋತಿ ಸಮ್ಮಾಸಂಬುದ್ಧಸಾವಕೋ ||೧೮೭

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತೋ ಷೋಡಶೀಂ ಕಲಾಮ್ ॥ (ಮೋ. ೧-೪೬)

ದುಕ್ಖಂ ದುಕ್ಖಸಮುಪ್ಪಾದಂ ದುಕ್ಖಸ್ಸ ಚ ಅತಿಕ್ಕಮಂ ।
ಅರಿಯಞ್ಚಟ್ಠಙ್ಗಿಕಂ ಮಗ್ಗಂ ದುಕ್ಖೂಪಸಮಗಾಮಿನಂ ॥೧೯೧॥

ಅಷ್ಟಾಂಗೇನೈವ ಮಾರ್ಗೇಣ ವಿಶುದ್ಧಾತ್ಮಾ ಸಮಾಚರೇತ್ ।
ಸಮ್ಯಕ್ಸಂಕಲ್ಪಸಂಬಂಧಾತ್ ಸಮ್ಯಕ್ಚೇಂದ್ರಿಯನಿಗ್ರಹಾತ್ ॥
ಸಮ್ಯಗ್ವ್ರತವಿಶೇಷಾಚ್ಚ ಸಮ್ಯಕ್ಚ ಗುರುಸೇವನಾತ್ ।
ಸಮ್ಯಗಾಹಾರಯೋಗಾಚ್ಚ ಸಮ್ಯಕ್ಚಾಧ್ಯಯನಾಗಮಾತ್ ॥
ಸಮ್ಯಕ್ಕರ್ಮೋಪಸಂನ್ಯಾಸಾತ್ ಸಮ್ಯಕ್ಚಿತ್ತನಿರೋಧನಾತ್ ।
ಏವಂ ಕರ್ಮಾಣಿ ಕುರ್ವನ್ತಿ ಸಂಸಾರವಿಜಿಗೀಷವಃ ॥ (ವನ. ೩-೭೭, ೭೮, ೭೯, ೮೦)

ಸುಸುಖಂ ಬತ ಜೀವಾಮ ಯೇಸಂ ನೋ ನತ್ಥಿ ಕಿಞ್ಚನಂ ॥೨೦೦॥

ಸುಸುಖಂ ಬತ ಜೀವಾಮಿ ಯಸ್ಯ ಮೇ ನಾಸ್ತಿ ಕಿಂಚನ । (ಮೋ. ೧೭೯-೨)

ಜಯಂ ವೇರಂ ಪಸವತಿ ದುಕ್ಖಂ ಸೇತಿ ಪರಾಜಿತೋ ।
ಉಪಸನ್ತೋ ಸುಖಂ ಸೇತಿ ಹಿತ್ವಾ ಜಯಪರಾಜಯಂ ॥೨೦೧॥

ಜಯೋ ವೈರಂ ಪ್ರಸೃಜತಿ ದುಃಖಮಾಸ್ತೇ ಪರಾಜಿತಃ ।
ಸುಖಂ ಪ್ರಶಾನ್ತಃ ಸ್ವಪಿತಿ ಹಿತ್ವಾ ಜಯಪರಾಜಯೌ ।
ಜಾತವೈರಶ್ಚ ಪುರುಷೋ ದುಃಖಂ ಸ್ವಪಿತಿ ನಿತ್ಯದಾ ॥ (ಉದ್ಯೋಗ ೭೨-೬೦)

ಯೋ ವೇ ಉಪ್ಪತಿತಂ ಕೋಧಂ ರಥಂ ಭನ್ತಂವ ಧಾರಯೇ ॥
ತಮಹಂ ಸಾರಥಿಂ ಬ್ರೂಮಿ ರಸ್ಮಿಗ್ಗಾಹೋ ಇತರೋ ಜನೋ ॥೨೨೨॥

ಯಸ್ತು ಕ್ರೋಧಂ ಸಮುತ್ಪನ್ನಂ ಪ್ರಜ್ಞಯಾ ಪ್ರತಿಬಾಧತೇ ।
ತೇಜಸ್ವಿನಂ ತಂ ವಿದ್ವಾಂಸೋ ಮನ್ಯನ್ತೇ ತತ್ತ್ವದರ್ಶಿನಃ ॥ (ವನ. ೨೮-೧೮)

ಯಃ ಸಮುತ್ಪತಿತಂ ಕ್ರೋಧಂ ನಿಗೃಹ್ಣಾತಿ ಹಯಂ ಯಥಾ ।
ಸ ಯನ್ತೇತ್ಯುಚ್ಯತೇ ಸದ್ಭಿರ್ನ ಯೋ ರಶ್ಮಿಷು ಲಂಬತೇ ॥ (ಆದಿ. ೭೯-೨)

ಅಕ್ಕೋಧೇನ ಜಿನೇ ಕೋಧಂ ಅಸಾಧುಂ ಸಾಧುನಾ ಜಿನೇ ।
ಜಿನೇ ಕದರಿಯಂ ದಾನೇನ ಸಚ್ಚೇನ ಅಲೀಕವಾದಿನಂ ॥೨೨೩॥

ಅಕ್ರೋಧೇನ ಜಯೇತ್ಕ್ರೋಧಮಸಾಧುಂ ಸಾಧುನಾ ಜಯೇತ್
ಜಯೇತ್ಕದರ್ಯಂ ದಾನೇನ ಜಯೇತ್ಸತ್ಯೇನ ಚಾನೃತಮ್ ॥ (ಉದ್ಯೋ. ೨೮-೭೩)

ಯೋ ಪಾಣಿಮತಿಪಾತೇತಿ ಮುಸಾವಾದಞ್ಚ ಭಾಸತಿ ।
ಲೋಕೇ ಅದಿನ್ನಂ ಆದಿಯತಿ ಪರದಾರಞ್ಚ ಗಚ್ಛತಿ ॥೨೪೬॥

ಸುರಾಮೇರಯಪಾನಞ್ಚ ಯೋ ನರೋ ಅನುಯುಞ್ಜತಿ ।
ಇಧೇವಮೇಸೋ ಲೋಕಸ್ಮಿಂ ಮೂಲಂ ಖನತಿ ಅತ್ತನೋ ॥೨೪೭॥

ಅನು. ೧೩

ಕಾಯೇನ ತ್ರಿವಿಧಂ ಕರ್ಮ ವಾಚಾ ಚಾಪಿ ಚತುರ್ವಿಧಮ್ ।
ಮನಸಾ ತ್ರಿವಿಧಂ ಚೈವ ದಶಕರ್ಮಪಥಾಂಸ್ತ್ಯಜೇತ್ ॥೧॥

ಪ್ರಾಣಾತಿಪಾತಃ ಸ್ತೈನ್ಯಂ ಚ ಪರದಾರಾನಥಾಪಿ ಚ ।
ತ್ರೀಣಿ ಪಾಪಾನಿ ಕಾಯೇನ ಸರ್ವತಃ ಪರಿವರ್ಜಯೇತ್ ॥೨॥

ಅಸತ್ಪ್ರಲಾಪಂ ಪಾರುಷ್ಯಂ ಪೈಶುನ್ಯಮನೃತಂ ತಥಾ ।
ಚತ್ವಾರಿ ವಾಚಾ ರಾಜೇಂದ್ರ ನ ಜಲ್ಪೇನ್ನಾನುಚಿಂತಯೇತ್ ॥೪॥

ಅನಭಿಧ್ಯಾ ಪರಸ್ವೇಷು ಸರ್ವಸತ್ವೇಷು ಸೌಹೃದಮ್ ।
ಕರ್ಮಣಾಂ ಫಲಮಸ್ತೀತಿ ತ್ರಿವಿಧಂ ಮನಸಾ ಚರೇತ್ ॥೫॥

ತಸ್ಮಾದ್ವಾಕ್ಕಾಯಮನಸಾ ನಾಚರೇದಶುಭಂ ನರಃ ।
ಶುಭಾಶುಭಾನ್ಯಾಚರನ್ಹಿ ತಸ್ಯ ತಸ್ಯಾಶ್ನುತೇ ಫಲಮ್ ॥೬॥

ನ ತೇನ ಥೇರೋ ಹೋತಿ ಯೇನಸ್ಸ ಪಲಿತಂ ಸಿರೋ ।
ಪರಿಪಕ್ಕೋ ವಯೋ ತಸ್ಸ ಮೋಘಜಿಣ್ಣೋಽತಿ ವುಚ್ಚತಿ ॥೨೬೦॥

ನ ತೇನ ವೃದ್ಧೋ ಭವತಿ ಯೇನಾಸ್ಯ ಪಲಿತಂ ಶಿರಃ ।
ಯೋ ವೈ ಯುವಾಪ್ಯಧೀಯಾನಸ್ತಂ ದೇವಾಃ ಸ್ಥವಿರಂ ವಿದುಃ ॥ (ಮನು. ೨-೧೫೬)

ನ ಹಾಯನೈರ್ನಪಲಿತೈರ್ನ ಚ ಬನ್ಧುಭಿಃ ।
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಃ ಸನೋ ಮಹಾನ್ । (ಮೋಕ್ಷ. ೩೨೩-೬)

ನ ತೇನ ಭಿಕ್ಖೂ ಸೋ ಹೋತಿ ಯಾವತಾ ಭಿಕ್ಖತೇ ಪರೇ ।
ವಿಸ್ಸಂ ಧಮ್ಮಂ ಸಮಾದಾಯ ಭಿಕ್ಖೂ ಹೋತಿ ನ ತಾವತಾ ॥೨೬೬॥

ಯೋಽಧ ಪುಞ್ಞಂ ಚ ಪಾಪಂ ಚ ಬಾಹೇತ್ವಾ ಬ್ರಹ್ಮಚರಿಯವಾ
ಸಙ್ಖಾಯ ಲೋಕೇ ಚರತಿ ಸ ವೇ ಭಿಕ್ಖೂಽತಿ ವುಚ್ಚತಿ ॥೨೬೭॥

ತ್ಯಾಗಾನ್ನ ಭಿಕ್ಷುಕಂ ವಿದ್ಯಾನ್ನ ಮೌಂಡ್ಯಾನ್ನ ಚ ಯಾಚನಾತ್ ।
ಋಜುಸ್ತು ಯೋಽರ್ಥಂ ತ್ಯಜತಿ ನ ಸುಖಂ ವಿದ್ಧಿ ಭಿಕ್ಷುಕಮ್ ॥ (ರಾಜ. ೧೮-೩೧)

ನ ಮೋನೇನ ಮುನೀ ಹೋತಿ ಮೂಳ್ಹರೂಪೋ ಅವಿದ್ದಸು
ಯೋ ಚ ತುಲಂ'ವ ಪಗ್ಗಯ್ಹ ವರಮಾದಾಯ ಪಣ್ಡಿತೋ ||೨೬೮||

ಮೌನಾನ್ನ ಮುನಿರ್ಭವತಿ ನಾರಣ್ಯವಸನಾನ್ಮುನಿಃ |
ಸ್ವಲಕ್ಷಣಂ ತು ಯೋ ವೇದ ಸ ಮುನಿಶ್ರೇಷ್ಠ ಉಚ್ಯತೇ || (ಉದ್ಯೋ. ೪೩-೬೦)

ತಂ ಪುತ್ತಪಸುಸಮ್ಮತ್ತಂ ವ್ಯಾಸತ್ತ ಮನಸಂ ನರಂ |
ಸುತ್ತಂಗಾಮಂ ಮಹೋಘೋ'ವ ಮಚ್ಚು ಆದಾಯ ಗಚ್ಛತಿ ||೨೮೭||

ತಂ ಪುತ್ರಪಶುಸಂಪನ್ನಂ ವ್ಯಾಸಕ್ತಮನಸಂ ನರಂ |
ಸುಪ್ತಂ ವ್ಯಾಘ್ರಂ ಮಹೌಘೋ ವಾ ಮೃತ್ಯುರಾದಾಯ ಗಚ್ಛತಿ || (ಮೋ. ೩೭೮-೧೮)

ಏಕಾಸನಂ ಏಕಸೇಯ್ಯಂ ಏಕೋ ಚರಮತನ್ದಿತೋ |
ಏಕೋ ದಮಯಮತ್ತಾನಂ ವನನ್ತೇ ರಮಿತೋ ಸಿಯಾ ||೩೦೫||

ಏಕ ಏವ ಚರೇನ್ನಿತ್ಯಂ ಸಿದ್ಧ್ಯರ್ಥಮಸಹಾಯವಾನ್ |
ಸಿದ್ಧಿಮೇಕಸ್ಯ ಸಂಪಶ್ಯನ್ನ ಜಹಾತಿ ನ ಹೀಯತೇ || (ಮನು ೬-೪೨)

ಅಹಂ ನಾಗೋ'ವ ಸಙ್ಗಾಮೇ ಚಾಪತೋ ಪತಿತಂ ಸರಂ |
ಅತಿವಾಕ್ಯಂ ತಿತಿಕ್ಖಿಸ್ಸಂ ದುಸ್ಸೀಲೋ ಹಿ ಬಹುಜ್ಜನೋ ||೩೨೦||

ಅತಿವಾದಾಂಸ್ತಿತಿಕ್ಷೇತಾಕೃಷ್ಟಃ ಕುಶಲಂ ವದೇತ್ || (ಮನು. ೬-೪೭)

ನ ತಂ ದಳ್ಹಂ ಬನ್ಧನಮಾಹು ಧೀರಾ ಯದಾಯಸಂ ದಾರುಜಂ ಬಬ್ಬಜಂಚ |
ಸಾರತ್ತರತ್ತಾ ಮಣಿಕುಣ್ಡಲೇಸು ಪುತ್ತೇಸು ದಾರೇಸು ಚ ಯಾ ಅಪೇಕ್ಖಾ ||೩೪೫||

ಕಾಮಬಂಧನಮೇವೇದಂ ನಾನ್ಯದಸ್ತೀಹ ಬನ್ಧನಮ್ |
ಕಾಮಬನ್ಧನಮುಕ್ತೋ ಹಿ ಬ್ರಹ್ಮಭೂಯಾಯ ಕಲ್ಪತೇ || (ಮೋ. ೨೫೧-೭)

ಸಬ್ಬದಾನಂ ಧಮ್ಮದಾನಂ ಜಿನಾತಿ |
ಸಬ್ಬಂ ರಸಂ ಧರ್ಮರಸೋ ಜಿನಾತಿ ||೩೫೪||

ಸರ್ವೇಷಾಮೇವ ದಾನಾನಾಂ ಬ್ರಹ್ಮದಾನಂ ವಿಶಿಷ್ಯತೇ |
ವಾರ್ಯನ್ನಗೋಮಹೀವಾಸಸ್ತಿಲಕಾಞ್ಚನಸರ್ಪಿಷಾಮ್ || (ಮನು ೪-೨೩೩)

ತಿಣದೋಸಾನಿ ಖೇತ್ತಾನಿ ರಾಗದೋಸಾ ಅಯಂ ಪಜಾ |
ತಸ್ಮಾ ಹಿ ವೀತರಾಗೇಸು ದಿನ್ನಂ ಹೋತಿ ಮಹಪ್ಫಲಂ ||೩೫೬||

ತಿಣದೋಸಾನಿ ಖೇತ್ತಾನಿ ದೋಸದೋಸಾ ಅಯಂ ಪಜಾ |
ತಸ್ಮಾ ಹಿ ವೀತದೋಸೇಸು ದಿನ್ನಂ ಹೋತಿ ಮಹಪ್ಫಲಂ ||೩೫೭||

ತಿಣದೋಸಾನಿ ಖೇತ್ತಾನಿ ಮೋಹದೋಸಾ ಅಯಂ ಪಜಾ ।
ತಸ್ಮಾ ಹಿ ವೀತಮೋಹೇಸು ದಿನ್ನಂ ಹೋತಿ ಮಹಪ್ಫಲಂ ||೩೫೮||

ತಿಣದೋಸಾನಿ ಖೇತ್ತಾನಿ ಇಚ್ಛಾದೋಸೋ ಅಯಂ ಪಜಾ ।
ತಸ್ಮಾ ಹಿ ವಿಗತಿಚ್ಛೇಸು ದಿನ್ನಂ ಹೋತಿ ಮಹಪ್ಫಲಂ ||೩೫೯||

ಆನುಶಾಸನಿಕಪರ್ವ ೨೨ನೆಯ ಅಧ್ಯಾಯದಲ್ಲಿ ಇದೇ ವಿಷಯವನ್ನು ನೋಡಿ :

ಅಕ್ರೋಧನಾ ಧರ್ಮಪರಾಃ ಸತ್ಯನಿತ್ಯಾ ದಮೇರತಾಃ ।
ತಾದೃಶಾ ಸಾಧವೋ ವಿಪ್ರಾಸ್ತೇಭ್ಯೋ ದತ್ತಂ ಮಹಾಫಲಮ್ ||೩೩||

ಅಮಾನಿನಃ ಸರ್ವಸಹಾ ದೃಢಾರ್ಥಾ ವಿಜಿತೇಂದ್ರಿಯಾಃ ।
ಸರ್ವಭೂತಹಿತಾ ಮೈತ್ರಾಸ್ತೇಭ್ಯೋ ದತ್ತಂ ಮಹಾಫಲಮ್ ||೧೪||

ಅಲುಬ್ಧಾಃ ಶುಚಯೋ ವೈದ್ಯಾ ಹ್ರೀಮನ್ತಃ ಸತ್ಯವಾದಿನಃ ।
ಸ್ವಕರ್ಮನಿರತಾ ಯೇ ಚ ತೇಭ್ಯೋ ದತ್ತಂ ಮಹಾಫಲಮ್ ||೧೫||

(ಮುಂದಿನ ಅಧ್ಯಾಯದಲ್ಲಿ ೫೦ರಿಂದ ಇದೇ ಬಗೆಯ ಕೆಲವು ಶ್ಲೋಕಗಳಿವೆ.)

ಸುಞ್ಞಾಗಾರಂ ಪವಿಟ್ಠಸ್ಸ ಸನ್ತಚಿತ್ತಸ್ಸ ಭಿಕ್ಖುನೋ ।
ಅಮಾನುಸಿ ರತೀ ಹೋತಿ ಸಮ್ಮಾಧಮ್ಮಂ ವಿಪಸ್ಸತೋ ||೩೭೩||

ಶೂನ್ಯಾಗಾರಮರಣ್ಯಂ ವಾ ವೃಕ್ಷಮೂಲಂ ನದೀಂ ತಥಾ ।
ಪ್ರತಿಶ್ರಯಾರ್ಥಂ ಸೇವೇತ ಪಾರ್ವತೀಂ ವಾಪುನರ್ಗುಹಾಮ್ ॥ (ಅಶ್ವ. ೪೬-೨೧)

(ಇದನ್ನು ೩೯೫ನೆಯ ಗಾಥೆಗೂ ಹೋಲಿಸಬಹುದು)

ಅತ್ತಾ ಹಿ ಅತ್ತನೋ ನಾಥೋ ಅತ್ತಾ ಹಿ ಅತ್ತನೋ ಗತಿ ।
ತಸ್ಮಾ ಸಞ್ಞಮಯತ್ತಾನಂ ಅಸ್ಸಂ ಭದ್ರಂವ ವಾಣಿಜೋ ||೩೮೦||

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬನ್ಧುರಾತ್ಮೈವ ರಿಪುರಾತ್ಮನಃ ॥ (ಗೀತಾ. ೬-೫)

## ಬ್ರಾಹ್ಮಣವರ್ಗ

(ಭಾರತದಲ್ಲಿ ಈ ಕೆಳಗಿನ ಪರ್ವಗಳಲ್ಲಿರುವ ಶ್ಲೋಕಗಳನ್ನು ಈ ವರ್ಗದ ಗಾಥೆಗಳಿಗೆ ಹೋಲಿಸಬಹುದು.)

### ಮೋಕ್ಷ ೨೪೫

ಯೇನ ಕೇನಚಿದಾಚ್ಛನ್ನೋ ಯೇನ ಕೇನಚಿದಾಶ್ರಿತಃ ।
ಯತ್ರ ಕ್ವಚನ ಶಾಯೀ ಸ್ಯಾತ್ತಂ ದೇವಾ ಬ್ರಾಹ್ಮಣಂ ವಿದುಃ ||೧೨||

ವಿಮುಕ್ತಂ ಸರ್ವಸಂಗೇಭ್ಯೋ ಮುನಿಮಾಕಾಶವತ್ಸ್ಥಿತಮ್ ।
ಅಸ್ವಮೇಕಚರಂ ಶಾನ್ತಂ ತಂ ದೇವಾ ಬ್ರಾಹ್ಮಣಂ ವಿದುಃ ॥೨೧॥

ನ ಕ್ರುಧ್ಯೇನ್ನ ಪ್ರಹೃಷ್ಯೇಚ್ಚ ಮಾನಿತೋಽಮಾನಿತಶ್ಚ ಯಃ ।
ಸರ್ವಭೂತೇಷ್ವಭಯದಸ್ತಂ ದೇವಾ ಬ್ರಾಹ್ಮಣಂ ವಿದುಃ ॥೧೪॥

ನಿರಾಶಿಷಮನಾರಂಭಂ ನಿರ್ನಮಸ್ಕಾರಮಸ್ತುತಿಮ್ ।
ನಿರ್ಮುಕ್ತಂ ಬನ್ಧನೈಃ ಸರ್ವೈಸ್ತಂ ದೇವಾ ಬ್ರಾಹ್ಮಣಂ ವಿದುಃ ॥೨೪॥

ವನ ೨೦೬

ಕ್ರೋಧಃ ಶತ್ರುಃ ಶರೀರಸ್ಥೋ ಮನುಷ್ಯಾಣಾಂ ದ್ವಿಜೋತ್ತಮ ।
ಯಃ ಕ್ರೋಧಮೋಹೌ ತ್ಯಜತಿ ತಂ ದೇವಾ ಬ್ರಾಹ್ಮಣಂ ವಿದುಃ ॥೩೨॥

ಯೋ ವದೇದಿಹ ಸತ್ಯಾನಿ ಗುರುಂ ಸಂತೋಷಯೇತ ಚ ।
ಹಿಂಸಿತಶ್ಚ ನ ಹಿಂಸೇತ ತಂ ದೇವಾ ಬ್ರಾಹ್ಮಣಂ ವಿದುಃ ॥೩೩॥

ಜಿತೇನ್ದ್ರಿಯೋ ಧರ್ಮಪರಃ ಸ್ವಾಧ್ಯಾಯನಿರತಃ ಶುಚಿಃ ।
ಕಾಮಕ್ರೋಧೌ ವಶೌ ಯಸ್ಯ ತಂ ದೇವಾ ಬ್ರಾಹ್ಮಣಂ ವಿದುಃ ॥೩೪॥

ಯಸ್ಯ ಚಾತ್ಮಸಮೋ ಲೋಕೋ ಧರ್ಮಜ್ಞಸ್ಯ ಮನಸ್ವಿನಃ ।
ಸರ್ವಧರ್ಮೇಷು ಚರತಸ್ತಂ ದೇವಾ ಬ್ರಾಹ್ಮಣಂ ವಿದುಃ ॥೩೫॥

ಯೋಽಧ್ಯಾಪಯೇದಧೀಯೀತ ಯಜೇದ್ವಾ ಯಾಜಯೀತ ವಾ ।
ದದ್ಯಾದ್ವಾಪಿ ಯಥಾಶಕ್ತಿ ತಂ ದೇವಾ ಬ್ರಾಹ್ಮಣಂ ವಿದುಃ ॥೩೬॥

ಬ್ರಹ್ಮಚಾರೀ ವದಾನ್ಯೋ ಯೋಽಪ್ಯಧೀಯಾದ್ದ್ವಿಜಪುಂಗವಃ ।
ಸ್ವಾಧ್ಯಾಯವಾನಮತ್ತೋ ವೈ ತಂ ದೇವಾ ಬ್ರಾಹ್ಮಣಂ ವಿದುಃ ॥೩೭॥

ವನ ೩೧೮

ನ ಯೋನಿರ್ನಾಪಿ ಸಂಸ್ಕಾರೋ ನ ಶ್ರುತಂ ನ ಚ ಸನ್ತತಿಃ
ಕಾರಣಾನಿ ದ್ವಿಜತ್ವಸ್ಯ ವೃತ್ತಮೇವ ತು ಕಾರಣಮ್ ॥

ಉದ್ಯೋಗ ೪೫

ಧರ್ಮಶ್ಚ ಸತ್ಯಂ ಚ ತಪೋ ದಮಶ್ಚ
ಅಮಾತ್ಸರ್ಯಂ ಹ್ರೀಸ್ತಿತಿಕ್ಷಾನಸೂಯಾ ।
ದಾನಂ ಶ್ರುತಂ ಚೈವ ಧೃತಿಃ ಕ್ಷಮಾ ಚ
ಮಹಾವ್ರತಾ ದ್ವಾದಶ ಬ್ರಾಹ್ಮಣಸ್ಯ ॥೫॥

# ೪. ಶಬ್ದಾನುಕ್ರಮಣಿಕೆ

ಸೂಚನೆ :- ಇಲ್ಲಿ ಶಬ್ದಗಳ ಸಂಸ್ಕೃತರೂಪವನ್ನೇ ಕೊಟ್ಟಿರುತ್ತದೆ. ಬರಿಯ ನಿಘಂಟುವಿನಿಂದ ತಿಳಿಯಬರುವ ಅರ್ಥಕ್ಕಿಂತ ಬೇರೆಯಾದ ಅರ್ಥವುಳ್ಳವಾಗಿ ಬೌದ್ಧ ಗ್ರಂಥಗಳಲ್ಲಿಯೇ ಅಸಾಧಾರಣವಾಗಿ ಕಂಡುಬರುವ ಶಬ್ದಗಳಿಗೆ ಮಾತ್ರ ಇಲ್ಲಿ ಸ್ಥಾನವನ್ನು ಕಲ್ಪಿಸಿದೆ. ಅಂಕಿಗಳು ಗಾಥೆಗಳ ಸಂಖ್ಯೆಯನ್ನು ಸೂಚಿಸುತ್ತವೆ.

**ಅಕೃತ** – ಒಂದರ ಕಾರ್ಯವಲ್ಲದ್ದು. ನಿರ್ವಾಣ ೯೭

**ಅಜ್ಗಣ** – ಪಾಪಕರ್ಮವನ್ನು ಮಾಡುವ ಇಚ್ಛೆಗೆ ವಶನಾಗಿರುವದು ; ಅಜ್ಗಣವಿಲ್ಲದವನು ಅನಜ್ಗಣನು ೨೩೬.

**ಅಧ್ಯಾತ್ಮ** – ತನ್ನೊಳಗಿನ ವಿಚಾರ ೩೬೨ ; ಆತ್ಮವಿಚಾರವೆಂದು ಅರ್ಥವಲ್ಲ, ಬೌದ್ಧರು ಆತ್ಮನನ್ನು ಒಪ್ಪುವದಿಲ್ಲ.

**ಅನಾತ್ಮ** – ಆತ್ಮನಿಲ್ಲದ್ದು, ಹುರುಳಿಲ್ಲದ್ದು ; ಯಾವ ಪದಾರ್ಥದಲ್ಲಿಯೂ ನಿಜವಿಲ್ಲ, ಆಧಾರವಾದ ಶಾಶ್ವತತತ್ತ್ವವಿಲ್ಲ - ಎಂಬ ಅನಾತ್ಮವಾದವು ಬೌದ್ಧಮತದಲ್ಲಿ ಪ್ರಧಾನವಾಗಿರುವದು. ೨೭೯.

**ಅನ್ತಿಮಶರೀರ** – ಇನ್ನು ಮತ್ತೆ ಹುಟ್ಟದ ನಿರ್ವಾಣವನ್ನು ಪಡೆದವ ೩೫೧.

**ಅನಿಮಿತ್ತ** – ಪದಾರ್ಥಗಳು ನಿತ್ಯವೆಂಬ ಬುದ್ಧಿಯನ್ನು ಬಿಟ್ಟ ವಿಮೋಕ್ಷ (= ಧ್ಯಾನ) ೯೨, ೯೩.

**ಅನುತ್ತರ** – ಮಿಗಿಲಿಲ್ಲದ ಸ್ಥಿತಿ, ನಿರ್ವಾಣ ೩೮೩.

**ಅನುಶಯ** – ಸಂಸ್ಕಾರ, ವಾಸನೆ, ಕಾಮರಾಗ (ಭೋಗತೃಷ್ಣೆ), ಪ್ರತಿಘ (ಹಿಂಸೆ), ದೃಷ್ಟಿ (ತಪ್ಪುತಿಳಿವು), ವಿಚಿಕಿತ್ಸಾ (ಸಂಶಯ), ಮಾನ (ಅಭಿಮಾನ), ಭವರಾಗ (ಮತ್ತೆ ಹುಟ್ಟಬೇಕೆಂಬ ಆಸೆ), ಅವಿದ್ಯೆ - ಇವೆಲ್ಲವೂ ಅನುಶಯವೆ.

**ಅಮೃತ** – ನಾಶವಿಲ್ಲದ ಸ್ಥಿತಿ, ನಿರ್ವಾಣ ; ಅಮೃತಪದವೆಂದರೆ ನಿರ್ವಾಣಕ್ಕೆ ಹಾದಿ ೨೧.

**ಅಯೋಗ** – ಯೋಗವಲ್ಲದ್ದು ; ವಿಷಯಾಸಕ್ತಿ ೨೦೯.

**ಅಭಿಜ್ಞಾ** – ದಿವ್ಯಜ್ಞಾನ ೪೨೩.

**ಅರ್ಹನ್ತ** – ಜ್ಞಾನಿ, ಬೌದ್ಧತತ್ತ್ವಜ್ಞಾನದಲ್ಲಿ ಕೊನೆಯ ಮೆಟ್ಟಿಲನ್ನು ಹತ್ತಿ ಮುಕ್ತನಾದವ. ೯೮

**ಅವಿದ್ಯಾ** – ಆರ್ಯಸತ್ಯಗಳನ್ನು ತಿಳಿಯದೆ ಇರುವದರಿಂದಾದ ತಪ್ಪುತಿಳಿವು ; ಹನ್ನೆರಡು ನಿದಾನಗಳಲ್ಲಿ ಮೊದಲನೆಯದು. ಅವಿದ್ಯಾ, ಸಂಸ್ಕಾರ, ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನಾ, ತೃಷ್ಣಾ, ಉಪಾದಾನ, ಭವ, ಜಾತಿ, ಜರಾಮರಣ ಎಂಬ ಹನ್ನೆರಡು ಒಂದರಿಂದಾಗುವುದೇ ದುಃಖಕ್ಕೆ ಕಾರಣವಾಗುವದರಿಂದ ಇವು ಹನ್ನೆರಡನ್ನೂ ನಿದಾನ ಗಳೆನ್ನುತ್ತಾರೆ. ಅವಿದ್ಯೆಯು ಎಲ್ಲಕ್ಕೂ ಹೆಚ್ಚಿನ ಚಿತ್ತಮಲವು ೨೪೩.

**ಅಶುಭಾನುಪಶ್ಯ** – ದೇಹದಲ್ಲಿ ತುಚ್ಛಬುದ್ಧಿಯ ಭಾವನೆಯನ್ನು ಮಾಡುವವನು ೮.

**ಅಷ್ಟಾಂಗಿಕ ಮಾರ್ಗ** – ಸಮ್ಯಗ್ದೃಷ್ಟಿ, ಸಮಕ್ಸಂಕಲ್ಪ, ಸಮ್ಯಗ್ವಾಚಾ, ಸಮ್ಯಕ್ಕರ್ಮಾಂತ, ಸಮ್ಯಗಾಜೀವ, ಸಮ್ಯಗ್ವ್ಯಾಯಾಮ, ಸಮ್ಯಕ್ಸ್ಮೃತಿ, ಸಮ್ಯಕ್ಸಮಾಧಿ – ಎಂಬ ಎಂಟು ಅಂಗಗಳಿಂದ ಕೂಡಿದ ಸಾಧನ. ಈ ಮಾರ್ಗವನ್ನನುಸರಿಸುವದರಿಂದ ದುಃಖವನ್ನು ಹೋಗಲಾಡಿಸಿ ಕೊಳ್ಳಬಹುದೆಂಬುದು ಬುದ್ಧನ ಮುಖ್ಯ ಉಪದೇಶವು. ಯೋಗದರ್ಶನದಲ್ಲಿ ಹೇಳಿರುವ ಅಷ್ಟಾಂಗಗಳೂ ಇದರಲ್ಲಿ ಅಡಕವಾಗಿರುವಂತೆ ತೋರಿದರೂ ಯೋಗಿಗಳು ಆತ್ಮವಾದಿಗಳು, ಬೌದ್ಧರು ಅನಾತ್ಮವಾದಿಗಳು. ೨೭೩

**ಆತ್ಮಾನುಯೋಗಿ** – ಜಿತಾತ್ಮನು ೨೦೯

**ಆಭಾಸ್ವರ** – ದೇವತೆಗಳಲ್ಲಿ ಒಂದು ಬಗೆ ; ಇವರಿಗೆ ಪ್ರೀತಿಯೇ ಭಕ್ಷ್ಯವಂತೆ. ಬೌದ್ಧರೂ ಹಿಂದುಗಳಂತೆ ಬಗೆಬಗೆಯ ದೇವತೆಗಳನ್ನು ನಂಬುವರು. ೨೦೦, ೩೦, ೩೪, ೪೪, ೧೦೫, ೨೨೪.

**ಆರ್ಯ** – ಬೌದ್ಧಮತದವರು ; ಶ್ರಾವಕ, ಪ್ರತ್ಯೇಕಬುದ್ಧ, ಬುದ್ಧ – ಎಂಬ ಅಂತಸ್ತಿನವರು ೨೨. ಆರ್ಯರಲ್ಲದವರು, ಪೃಥಗ್ಜನರು.

**ಆರ್ಯಭೂಮಿ** – ಬೌದ್ಧಮತದವರು ಇರುವ ಸ್ಥಳ ; ನಿರ್ವಾಣ.

**ಆರ್ಯಸತ್ಯ** – ದುಃಖ, ದುಃಖಸಮುದಯ (ಹುಟ್ಟುವ ಬಗೆ), ದುಃಖನಿರೋಧ (ನಾಶವಾಗುವ ಬಗೆ), ದುಃಖನಿರೋಧಗಾಮಿನೀಪ್ರತಿಪತ್ತು (ದುಃಖವನ್ನು ನಾಶಗೊಳಿಸುವ ಮಾರ್ಗದ ತಿಳಿವು) – ಈ ನಾಲ್ಕು ೧೯೦. ಇವುಗಳಲ್ಲಿ ನಾಲ್ಕನೆಯದೇ ಅಷ್ಟಾಂಗಿಕಮಾರ್ಗವು.

**ಆಲಯ** – ಆಸೆ ೪೧೧.

**ಆಸ್ರವ** – ಕಾಮ, ಭವ, ಅವಿದ್ಯಾ, ಮತ್ತು ಕೆಲವು ವೇಳೆಗಳಲ್ಲಿ ದೃಷ್ಟಿ (ತಪ್ಪು ತಿಳಿವು) – ಇದಕ್ಕೆ ಆಸ್ರವಗಳು ಎಂದರೆ ಚಿತ್ತದ ಮಲಗಳು ಎಂದು ಹೆಸರು. ಇವುಗಳಿಲ್ಲದವನು ಅನಾಸ್ರವನು. ೯೩, ೩೮೬.

**ಉತ್ತಮಾರ್ಥ** – ಉತ್ತಮಪ್ರಯೋಜನ, ನಿರ್ವಾಣ. ೪೦೩

**ಉಪಶಮ** – ಶಾಂತಿ. ೧೮೧

**ಉಪಾದಾನ** – ವಿಷಯಗಳನ್ನು ತೆಗೆದುಕೊಳ್ಳಬೇಕೆಂಬ ಹಂಬಲು ; ಇದು ಹನ್ನೆರಡು ನಿದಾನಗಳಲ್ಲಿ ಒಂದು. ೮೯.

**ಊರ್ಧ್ವಸ್ರೋತ** – ಹೊಳೆಗೆ ಎದುರಾಗಿ ಈಜುವವನು, ಪರಲೋಕಕ್ಕೆ ಹೋಗಿ ಅಲ್ಲಿಯೇ ನಿರ್ವಾಣವನ್ನು ಹೊಂದುವ ಅನಾಗಾಮಿ. ೨೧೮

**ಋಜುಗತ** – ಸರಿಯಾದ ಮಾರ್ಗದಲ್ಲಿರುವವನು ; ಬೌದ್ಧಮತದ ಅನುಷ್ಠಾನವನ್ನು ಪ್ರವೇಶಮಾಡಿದ ಸ್ರೋತಾ ಆಪನ್ನನಿಂದ ಹಿಡಿದು ಮೇಲಿನ ಆ ಅಂತಸ್ತುಗಳಲ್ಲಿ ಒಂದರಲ್ಲಿರುವವನು. ೧೮೮

**ಋದ್ಧಿ** – ಯೋಗಸಿದ್ಧಿ, ಆಕಾಶಗಮನವೇ ಮುಂತಾದ್ದು ; ಸಿದ್ಧಿಗಳಲ್ಲಿ ಬೌದ್ಧರಿಗೂ ನಂಬಿಕೆಯುಂಟು. ೧೭೫

**ಓಘತೀರ್ಣ** – ಸಂಸಾರದ ಕ್ಲೇಶಗಳ ಪ್ರವಾಹಗಳನ್ನು ಅಥವಾ ಕಾಮ, ಭವ, ದೃಷ್ಟಿ, ಅವಿದ್ಯೆ – ಎಂಬ ಆಸ್ರವಗಳನ್ನು ದಾಟಿದವ ; ಅರಹಂತ, ಮುಕ್ತ. ೩೭೦

**ಕಲ್ಯಾಣಮಿತ್ರ** – ಒಳ್ಳೆಯ ಭಾವನೆಗಳನ್ನು ಉಪದೇಶಮಾಡಬಲ್ಲವನು. ೭೮

**ಕಷಾಯ** – ರಾಗದ್ವೇಷಾದಿಗಳು. ೯

**ಕೃಷ್ಣಧರ್ಮ** – ಪಾಪಕರ್ಮ ; ಶುಕ್ಲಧರ್ಮಕ್ಕೆ ವಿರುದ್ಧವಾದದ್ದು ೮೭ ; ಯೋಗ ಶಾಸ್ತ್ರದಲ್ಲಿ ಶುಕ್ಲಕೃಷ್ಣಗಳನ್ನು ಯೋಗಿಯು ಮೀರಿರುವನೆಂದು ವರ್ಣಿಸುವಂತೆ ಬೌದ್ಧರೂ ಅರ್ಹಂತರನ್ನು ವರ್ಣಿಸುವರು. ೭

**ಕ್ಷಣ** – ಬುದ್ಧನ ಉಪದೇಶವನ್ನು ಅರಿತುಕೊಳ್ಳುವ ಸಂಭವವಿರುವ ಮನುಷ್ಯನಾಗಿ ಹುಟ್ಟುವ ಕ್ಷಣ ; ಇದು ಬಹು ದುರ್ಲಭವೆಂದು ಬೌದ್ಧರ ನಂಬಿಕೆ. ೩೧೫

**ಕುಶಲ** – ಒಳ್ಳೆಯ ಕರ್ಮ. ೧೮೩

**ಕುಸೀದ** – ಆಲಸಿ. ೭

**ಕಾಯಗತಸ್ಮೃತಿ** – ಶರೀರದಲ್ಲಿರುವ ದೋಷಗಳನ್ನೆಲ್ಲ ಸ್ಮರಿಸಿಕೊಳ್ಳುವದು ೨೯

**ಗ್ರಂಥ** – ಅಭಿಧ್ಯಾ (ಲೋಭ), ವ್ಯಾಪಾದ (ಪರಪೀಡೆ), ಶೀಲವ್ರತಪರಾಮರ್ಶ

(ಕುಕ್ಕುರಶೀಲ, ಗೋವ್ರತ - ಮುಂತಾದವುಗಳನ್ನು ನಂಬಿರುವದು), ಇದಂಸತ್ಯಾಭಿನಿವೇಶ (ಇದೇ ನಿಜವೆಂಬ ದುರಭಿಮಾನ) - ಎಂಬ ಮನಸ್ಸಿನ ಗಂಟುಗಳು ೯೦.

**ಚಿತ್ತಕ್ಲೇಶಗಳು** - ರಾಗದ್ವೇಷಮೋಹಗಳು ; ಕಾಮಚ್ಛಂದ (ಕಾಮುಕತೆ), ವ್ಯಾಪಾದ (ಹಿಂಸಾಬುದ್ಧಿ), ಸ್ತ್ಯಾನಮೃದ್ಧ (ಶರೀರದ ಮತ್ತು ಚಿತ್ತದ ಅಲಸಿಕೆ), ಔದ್ಧತ್ಯ ಕೌಕೃತ್ಯ (ಉದ್ವೇಗ, ಖೇದ), ವಿಚಿಕಿತ್ಸಾ (ಸಂಶಯ) - ಎಂಬ ಐದು ನೀವರಣಗಳು ೮೮.

**ಜಾತಿ, ಜರಾ** - ಹನ್ನೆರಡು ನಿದಾನಗಳಲ್ಲಿ ಎರಡಾದ ಹುಟ್ಟು, ಮುಪ್ಪು - ಇವು ೨೩೮.

**ತಥಾಗತ** - ಹಾಗೆ ಬಂದವನು, ಬುದ್ಧನು ; ಅನೇಕರು ಬುದ್ಧರು ಆಗಾಗ್ಗ ಅವತರಿಸುವರೆಂದೂ ಹಾಗೆಯೇ ಗೌತಮಬುದ್ಧನೂ ಅವತರಿಸಿರುವನೆಂದೂ ಬೌದ್ಧರು ಹೇಳುವರು ೨೭೬.

**ತಾದಿ** - ಇದು ವ್ಯಾಪಕಜ್ಞಾನವುಳ್ಳವನು ಎಂಬರ್ಥದ ತಾಯಿನ್ ಎಂಬ ಶಬ್ದದ ತದ್ಭವವೆಂದು ತೋರುವದು ; ಈ ಶಬ್ದವು ಗೌಡಪಾದಕಾರಿಕೆಯಲ್ಲಿ (೪-೯೯) ಕಂಡು ಬರುತ್ತದೆ. ಸಾಂಕೃತ್ಯಾಯನರು ತಾದೃಶಃ ಎಂದು ಸಂಸ್ಕೃತಛಾಯೆಯನ್ನು ಬರೆದಿದ್ದಾರೆ ೯೪, ೯೫, ೯೬.

**ತೃಷ್ಣಾ** - ಸಂಸಾರದುಃಖಕ್ಕೆ ಕಾರಣವಾಗಿರುವ ವಿಷಯಗಳ ನೀರಡಿಕೆ ; ಇದು ಹನ್ನೆರಡು ನಿದಾನಗಳಲ್ಲಿ ಒಂದೆಂದು ಬುದ್ಧನು ಉಪದೇಶಿಸಿರುತ್ತಾನೆ. ಬೌದ್ಧಮತದಲ್ಲಿ ತೃಷ್ಣಾಕ್ಷಯದ ವಿಷಯವನ್ನೇ ಮುಖ್ಯವಾಗಿ ಒತ್ತಿ ಉಪದೇಶಮಾಡಿರುತ್ತದ. ೨೯ನೆಯ ವರ್ಗವನ್ನು ನೋಡಿ.

**ದೇವತೆ** - ಬೌದ್ಧರೂ ದೇವತೆಗಳನ್ನು ನಂಬುವರು ೭, ೮, ೪೦, ೪೬, ೫೭, ೧೦೫, ೧೭೯, ೭೪, ೨೭೫, ೨೭೬.

**ಧರ್ಮ** - ಪದಾರ್ಥಗಳು ೨೭೯ ; ನಿಯಮ ; ಮಾಡಬೇಕಾದದ್ದು ; ವೇದನಾ, ಸಂಜ್ಞಾ, ಸಂಸ್ಕಾರ - ಎಂಬ ಮೂರು ಸ್ಕಂಧಗಳು ೧.

**ಧರ್ಮವಿನಿಶ್ಚಯ** - ಧರ್ಮವನ್ನು ಬೇಕೆಂದು ಹುಡುಕಿ ನಿರ್ಣಯಿಸಿಕೊಳ್ಳುವದು ೧೪೪.

**ಧ್ಯಾನ** - ಸರಿಯಾದ ಧ್ಯಾನವೆಂಬುದು ಅಷ್ಟಾಂಗಮಾರ್ಗದಲ್ಲಿ ಒಂದು ಸಾಧನವು ೭ ; ಬೌದ್ಧರು ಧ್ಯಾನದಲ್ಲಿ ನಾಲ್ಕು ಮೆಟ್ಟಿಲುಗಳುಂಟೆಂದು ಹೇಳುವರು ; ಇವುಗಳಲ್ಲಿ ಕೊನೆಯವೆರಡು ನಮ್ಮ ಯೋಗಿಗಳು ಹೇಳುವ ಸಂಪ್ರಜ್ಞಾತಸಮಾಧಿಯನ್ನೂ ಅಸಂಪ್ರಜ್ಞಾತಸಮಾಧಿಯನ್ನೂ ಹೋಲುತ್ತವೆ.

**ನಂದೀಭವ** - ಇಂದ್ರಿಯಭೋಗದಿಂದಾದ ಆಸೆ ೪೧೩.

**ನಾಮ, ರೂಪ** - ಜ್ಞಾನ,ಜ್ಞೇಯ ; ಹನ್ನೆರಡು ನಿದಾನಗಳಲ್ಲಿ ಒಂದು ೨೨೧.

**ನಿರಯ** - ನರಕ ; ಬೌದ್ಧರೂ ನರಕಗಳಲ್ಲಿ ನಂಬಿಕೆಯುಳ್ಳವರು ೧೨೭.

**ನಿರ್ವಾಣ** - ಸಂಸಾರದಿಂದ ಬಿಡುಗಡೆಯಾಗಿ ಹೊಂದುವ ಸ್ಥಿತಿ ೨೩ ; ಇದಕ್ಕೆ ಯೋಗಕ್ಷೇಮ (೨೩) ಅನುತ್ತರ (೩೩), ಅಮೃತ (೧೧೪), ದ್ವೀಪ (೨೫೭), ಅಕೃತ (೯೭), ಉತ್ತಮಾರ್ಥ (೪೦೩), ವಿಶುದ್ಧಿ (೨೭೭) - ಎಂದೂ ಹೆಸರುಗಳುಂಟು.

**ನಿಷ್ಪ್ರಪಂಚ** - ಪ್ರಪಂಚದಲ್ಲಿ ಅಭಿರುಚಿಯಿಲ್ಲದವ, ಬುದ್ಧ ೨೫೪.

**ನೈಷ್ಕಾಮ್ಯ** - ಕಾಮವಿಲ್ಲದೆ ಇರುವದು. ೧೮೧ನೆಯ ಗಾಥೆಯಲ್ಲಿರುವ ನೇಕ್ಖಮ್ಮ ಎಂಬುದಕ್ಕೆ ನೈಷ್ಕರ್ಮ್ಯ ಎಂದು ಸಾಂಕೃತ್ಯಾಯರನ್ನನುಸರಿಸಿ ಕನ್ನಡಿಸಿದೆ. ಇದನ್ನು ನೈಷ್ಕಾಮ್ಯ ಎಂದೂ ಕನ್ನಡಿಸಬಹುದು. ನೈಷ್ಕಾಮ್ಯ (ಪೀಡಿಸಬೇಕೆಂಬ ಇಚ್ಛೆಯಿಲ್ಲದಿರುವದು, ಕೇಡುಬಗೆಯದಿರುವದು).

**ಪರಿನಿರ್ವಾಣ** - ಸಂಪೂರ್ಣವಾದ ನಿರ್ವಾಣ ೮೯.

**ಪುದ್ಗಲ** - ಪುರುಷ ; ಸ್ಕಂಧಗಳ ಗುಂಪೇ ಪುದ್ಗಲನೆಂಬ ಪ್ರಾಣಿ, ಬೇರೆ ಆತ್ಮನಿಲ್ಲವೆಂಬುದು ಬೌದ್ಧರ ಮತ ೩೪೪.

**ಪೂರ್ವನಿವಾಸ** - ಹಿಂದಿನ ಜನ್ಮ ; ಬೌದ್ಧರೂ ಜನ್ಮಾಂತರವನ್ನು ಒಪ್ಪುವರು ೪೨೩.

**ಪೃಥಗ್ಜನ** - ಬೌದ್ಧಮತದ ಹೊರಗೆ ಇರುವವರು, ಅನಾರ್ಯರು ೫೯.

**ಪ್ರಜ್ಞಾ** - ಅಷ್ಟಾಂಗಿಕಮಾರ್ಗದಲ್ಲಿ ಒಂದು ಭಾಗ ೨೮ ; ಸಮ್ಯಗ್ದೃಷ್ಟಿ, ಸಮ್ಯಕ್ಸಂಕಲ್ಪ - ಎಂಬ ಎರಡರ ಗುಂಪು.

**ಪ್ರಾತಿಮೋಕ್ಷ** - ಭಿಕ್ಷುಗಳು ಹೀಗೆ ಹೀಗೆ ನಡೆದುಕೊಳ್ಳಬೇಕೆಂಬ ನಿಯಮ ; ಈ ನಿಯಮಗಳನ್ನು ತಿಳಿಸುವ ವಿನಯಪಿಟಕದ ಭಾಗಕ್ಕೂ ಈ ಹೆಸರು ಬಂದಿರುತ್ತದೆ ೪೯.

**ಬಲಾನೀಕ** - ಶ್ರದ್ಧಾಬಲ, ವೀರ್ಯಬಲ, ಸ್ಮೃತಿಬಲ, ಸಮಾಧಿಬಲ, ಪ್ರಜ್ಞಾಬಲ - ಎಂಬ ಐದು ಬಲಗಳುಳ್ಳವ ; ಬುದ್ಧನಿಗೆ ದಶಬಲ (ಹತ್ತು ಬಲಗಳುಳ್ಳವನು) ಎಂಬ ಹೆಸರೂ ಇದೆ ೩೯೯.

**ಬುದ್ಧ** - ಜ್ಞಾನಿ. ಗೌತಮನು ಕಂಡುಹಿಡಿದ ಬೌದ್ಧಧರ್ಮದ ತತ್ತ್ವವನ್ನು ಮನಗಂಡವನು ; ಸಂಸಾರಿಗಳು ಶರಣುಹೋಗಬೇಕಾದ ಬುದ್ಧ, ಧರ್ಮ, ಸಂಘ - ಎಂಬ ರತ್ನತ್ರಯಗಳಲ್ಲಿ ಒಂದು ೧೯೦.

**ಭವ** - ಲಾಭ, ಹುಟ್ಟಬೇಕೆಂಬ ಆಸೆ ೨೮೨.

**ಭಾವನೆ** - ಕಾಯಚಿತ್ತಗಳ ಸಂಬಂಧವಾದ ದುಃಖಗಳು ತಟ್ಟದಂತೆ ಮಾಡಿಕೊಳ್ಳುವ ಸಾಧನೆ ; ಮೈತ್ರೀ, ಕರುಣಾ, ಮುದಿತಾ, ಉಪೇಕ್ಷಾ - ಇವುಗಳಲ್ಲಿ ಒಂದು ೩೦೧.

**ಭಾವಿತಾತ್ಮ** - ಕಾಯಚಿತ್ತಗಳ ಭಾವನೆಯನ್ನು ಮಾಡಿಕೊಂಡಿರುವವನು ; ಸಂಬೋಧಿಯ ಅಂಗಗಳನ್ನು ಭಾವನೆಮಾಡಿಕೊಂಡಿರುವವನು ೧೦೬.

**ಭೂರಿ** - ಜ್ಞಾನವು ೨೮೨.

**ಮಘವಾ** - ದೇವತೆಗಳೊಡೆಯನಾದ ಇಂದ್ರ ; ಬೌದ್ಧರಿಗೂ ಇಂದ್ರನ ಶ್ರೇಷ್ಠತೆಯಲ್ಲಿ ನಂಬಿಕೆಯುಂಟು ೧೦.

**ಮನ್ತ್ರ** - ಮಂತ್ರಜಪಕ್ಕೆ ಫಲವುಂಟೆಂಬುದು ಬೌದ್ಧರಿಗೂ ಸಮ್ಮತ ೨೪೧.

**ಮಾರ** - ಸಾಧಕನನ್ನು ಕೆಟ್ಟ ಹಾದಿಗೆಳೆದು ಸಂಸಾರಕ್ಕೆ ಸಿಕ್ಕಿಸುವ ದೇವತೆ ೭.

**ಮಾರಧೇಯ** - ಮೃತ್ಯುವಿನ ರಾಜ್ಯ, ರಾಗದ್ವೇಷಮೋಹಗಳು ೩೪.

**ಮಿಥ್ಯಾದೃಷ್ಟಿ** - ಸಮ್ಯಗ್ದೃಷ್ಟಿಗೆ ವಿರುದ್ಧವಾದದ್ದು ; ದುಃಖಾದಿಗಳನ್ನು ತಿಳಿಯದೆ ಇರುವದು, ಬೌದ್ಧಮತಕ್ಕೆ ವಿರುದ್ಧವಾದ ಮಿಥ್ಯಾಮತವನ್ನು ಇಟ್ಟುಕೊಂಡಿರುವದು ೧೬೭, ೩೧೬, ೩೧೭, ೩೧೮.

**ಮಿಥ್ಯಾಸಂಕಲ್ಪ** - ಸಮ್ಯಕ್ಸಂಕಲ್ಪಕ್ಕೆ ವಿರುದ್ಧವಾದದ್ದು ; ಅಸಾರವನ್ನೇ ಸಾರವೆಂದು ತಿಳಿಯುವ ಬುದ್ಧಿ ೧೧.

**ಮೈತ್ರೀ** - ಯಾವಾಗಲೂ ಎಲ್ಲರನ್ನೂ ಮಿತ್ರರೆಂದೇ ಭಾವಿಸುವದು ೩೬೮.

**ಯೋಗಕ್ಷೇಮ** - ಕಲ್ಯಾಣಕಾರಿಯಾದ ಪದ, ನಿರ್ವಾಣ ೨೩.

**ವಿತರ್ಕ** - ಚಿತ್ತದ ಸ್ಥೂಲಾವಸ್ಥೆ, ಸಂದೇಹ ೯೧.

**ವಿಭವ** - ನಷ್ಟ ೨೮೨.

**ವಿಮೋಕ್ಷ** - ಶೂನ್ಯತಾ, ಅನಿಮಿತ್ತ, ಅಪ್ರಣಿಹಿತ (ಸರ್ವವೂ ದುಃಖ) - ಎಂಬ ಮೂರು ಬಗೆಯ ಧ್ಯಾನ ೯೨.

**ವಿಶುದ್ಧಿ** - ಅತ್ಯಂತವಾಗಿ ಶುದ್ಧಿಯಾಗಿರುವ ಸ್ಥಿತಿ, ನಿರ್ವಾಣ ೨೭೭, ೨೭೮, ೨೭೯.

**ವಿವೇಕ** - ಏಕಾಂತವಾಸ ೮೭. ಇದರಲ್ಲಿ ಏಕಾಂತವಾಸವೆಂಬ ಕಾಯವಿವೇಕ, ರಾಗದ್ವೇಷಾದಿಗಳಿಲ್ಲದಂತೆ ಮಾಡುವದೆಂಬ ಚಿತ್ತವಿವೇಕ, ಉಪಾಧಿಗಳಿಲ್ಲದಂತೆ ಮಾಡಿಕೊಳ್ಳುವ ಉಪಾಧಿವಿವೇಕ (ನಿರ್ವಾಣ) - ಈ ಮೂರೂ ಸೇರಿವೆ ೮.

**ವೀರ್ಯ** - ಉದ್ಯೋಗ ; ಸರಿಯಾಗಿ ಸಾಧನಗಳಲ್ಲಿ ಉದ್ಯೋಗಮಾಡುವವನು, ಆರಬ್ಧವೀರ್ಯನು, ಮಾಡುವನು ಹೀನವೀರ್ಯನು ೧೧೨.

**ಶಮಥ** - ಶಾಂತಿ, ಧ್ಯಾನ, ಸಮಾಧಿ ೯೪.

**ಶೀಲ** - ಇವು ಮುಖ್ಯವಾಗಿ ಐದು : ಪ್ರಾಣಾತಿಪಾತವಿರತಿ (ಕೊಲ್ಲದಿರುವದು) ಮೃಷಾವಚನವಿರತಿ (ಸುಳ್ಳಾಡದಿರುವದು). ಅದತ್ತಾದಾನವಿರತಿ (ಕಳ್ಳತನವನ್ನು ಮಾಡದಿರುವದು). ವ್ಯಭಿಚಾರವಿರತಿ (ಪರಸ್ತ್ರೀಸಂಗಮಾಡದಿರುವದು), ಸುರಾಮೈರೇಯಪಾನವಿರತಿ (ಮಾದಕದ್ರವ್ಯವನ್ನು ಪಾನಮಾಡದಿರುವದು) ೨೪೬, ೨೪೭. ಇವುಗಳ ಜೊತೆಗೆ ಅಪರಾಹ್ನ ಭೋಜನತ್ಯಾಗ, ನೃತ್ಯಗೀತತ್ಯಾಗ, ಮಾಲಾದ್ಯಲಂಕಾರತ್ಯಾಗ, ಮಹಾರ್ಘಶಯ್ಯಾತ್ಯಾಗ, ಸ್ವರ್ಣರಜತತ್ಯಾಗ - ಇವೈದನ್ನೂ ಭಿಕ್ಷುಗಳು ಪಾಲಿಸಬೇಕು. ಅಷ್ಟಾಂಗಗಳೊಡನೆ ಸಮ್ಯಗ್ವಾಚಾ, ಸಮ್ಯಗಾಜೀವ, ಸಮ್ಯಕ್ಕರ್ಮಾಂತ - ಈ ಮೂರರ ಗುಂಪಿಗೆ ಶೀಲಸ್ಕಂಧವೆಂದು ಹೆಸರು.

**ಶೀಲವ್ರತ** - ಕುಕ್ಕುರಶೀಲ, ಗೋವ್ರತ - ಮುಂತಾದ ಶೀಲಗಳು ಮತ್ತು ವ್ರತಗಳು - ಇವುಗಳಲ್ಲಿ ನಂಬಿಕೆಯಿಟ್ಟಿರುವದು ಶೀಲವ್ರತಪರಾಮರ್ಶವೆಂಬ ಸಂಯೋಜನವೆಂದೂ ಅದರಿಂದ ಉತ್ತಮವಾದ ಜ್ಞಾನಕ್ಕೆ ಅಡ್ಡಿಯಾಗುವದೆಂದೂ ಬೌದ್ಧರು ಹೇಳುವರು ೨೭೧.

**ಶುಕ್ಲ** - ಪೀಡಾಯುಕ್ತವಲ್ಲದ ಕರ್ಮ, ಇದಕ್ಕೆ ಸುಖಮಯವೇದನೆಯೇ ಫಲ ೮೭.

**ಶುದ್ಧಾಜೀವ** - ಒಬ್ಬರಿಗೆ ಪೀಡೆಯನ್ನು ಮಾಡದ ರೀತಿಯಿಂದ ಜೀವಿಸುವದು ; ಇದೇ ಸಮ್ಯಗಾಜೀವ ಅಷ್ಟಾಂಗಮಾರ್ಗದ ಒಂದು ಅಂಗ ೩೬೬.

**ಶುಭಾನುಪಶ್ಯ** - ದೇಹದಲ್ಲಿ ಶುಭದೃಷ್ಟಿಯುಳ್ಳವ ; ಇವನು ಮಾರನ ವಶನಾಗಿರುತ್ತಾನೆ ೭. ದೇಹದಲ್ಲಿ ಕುತ್ಸಿತಬುದ್ಧಿಯುಳ್ಳವನು ಅಶುಭಾನುಪಶ್ಯನು ೮.

**ಶೂನ್ಯತಾ** - ಸರ್ವವೂ ಅನಾತ್ಮವೆಂಬ ವಿಮೋಕ್ಷ ( ಧ್ಯಾನ) ೯೨.

**ಶೈಕ್ಷ** - ಇನ್ನೂ ಕಲಿಯಬೇಕಾದದ್ದು ಉಳಿದಿರುವಾತನು ; ಅರ್ಹಂತನಾಗದೆ ಇರುವ ಆರ್ಯನು ೪೫. ಸ್ರೋತಆಪನ್ನ, ಸಕೃದಾಗಾಮಿ, ಅನಾಗಾಮಿ - ಎಂಬ ಮೂರು ಅಂತಸ್ತಿನವರೂ ಶೈಕ್ಷರೇ.

**ಶ್ರಮಣ** - ಸಂನ್ಯಾಸಿ ೩೮೮ ; ಶ್ರಾಮಣ್ಯವೆಂದರೆ ಶ್ರಮಣನಾದದ್ದರ ಫಲ ೧೯.

**ಶ್ರಾವಕ** - ಶಿಷ್ಯ, ಬುದ್ಧನ ಅನುಯಾಯಿ ೭೫.

**ಸಂಯೋಗ** - ರಾಗಾದಿಗಳೊಡನೆ ಸೇರಿರುವದು ; ಅವುಗಳೊಡನೆ ಸೇರಿಲ್ಲದವನು ವಿಸಂಯುಕ್ತನು ೩೮೪, ೩೮೫.

**ಸಂಯೋಜನ** - ಸತ್ಕಾಯದೃಷ್ಟಿ (ಸ್ಕಂಧಗಳಿಗಿಂತ ಬೇರೆ ಆತ್ಮನಿರುವನೆಂಬ ನಂಬಿಕೆ), ವಿಚಿಕಿತ್ಸಾ (ಸಂಶಯ), ಶೀಲವ್ರತಪರಾಮರ್ಶ (ಬಾಹ್ಯಾಚಾರದಿಂದಲೇ ಕೃತಕೃತ್ಯನಾದೆನೆಂದು

ತಿಳಿಯುವದು), ಕಾಮರಾಗ (ಸ್ಥೂಲಭೋಗದ ಆಸೆ), ರೂಪರಾಗ (ರೂಪಲೋಕದಲ್ಲಿ ಹುಟ್ಟಿ ಭೋಗಿಸಿಯೇನೆಂಬ ಇಚ್ಛೆ), ಅರೂಪರಾಗ (ಅರೂಪದೇವತೆಗಳ ಭೋಗದಲ್ಲಿ ಆಸೆ), ಪ್ರತಿಘ (ಹಿಂಸೆ), ಮಾನ (ಅಭಿಮಾನ), ಔದ್ಧತ್ಯ (ಉದ್ಧತನಾಗಿರುವದು), ಅವಿದ್ಯೆ. ಈ ಪತ್ತೂ ಬಂಧಕಗಳೆಂದು ಬೌದ್ಧರು ಹೇಳುವರು ೨೯. ಇವುಗಳನ್ನು ದಾಟಿದವನು **ಅರಹಂತ**ನಾಗುತ್ತಾನೆ.

**ಸಂವರ** - ಕಾಯವಚನಮನಸ್ಸುಗಳನ್ನು ದುಶ್ಚರಿತಕ್ಕೆ ಬಿಡದೆ ಹಿಡಿತದಲ್ಲಿಟ್ಟುಕೊಳ್ಳುವದು. ೩೬.

**ಸಂಸಾರ** - ಜನನಮರಣಚಕ್ರ, ಸ್ಕಂಧಮಯವಾದ ಪುದ್ಗಲವು ನಾಶವಾದರೆ ಅದರ ಕರ್ಮಫಲವಾಗಿ ಅದೇ ಬಗೆಯ ಮತ್ತೊಂದು ಪುದ್ಗಲವು ಜನಿಸುವದು. ಸ್ಕಂಧಗಳಿಗಿಂತ ಬೇರೆಯಾಗಿ ಆತ್ಮನನ್ನು ಬೌದ್ಧರು ಒಪ್ಪುವದಿಲ್ಲ ೬೦.

**ಸಂಸ್ಕಾರ** - ಉಂಟಾಗಿರುವ ಧರ್ಮ(ವಸ್ತು)ಗಳು ; ಸಂಸ್ಕಾರಗಳೆಲ್ಲ ಅನಿತ್ಯ, ಅನಾತ್ಮ, ದುಃಖ - ಎಂದು ತಿಳಿಯುವದು ನಿರ್ವಾಣಕ್ಕೆ ಮಾರ್ಗವು ೨೭೭, ೨೭೮.

**ಸದ್ಧರ್ಮ** - ಉತ್ತಮವಾದ ಧರ್ಮ, ಶ್ರದ್ಧಾ, ಹ್ರೀ (ದುರಾಚಾರದಲ್ಲಿ ಲಜ್ಜ), ಅಪತ್ರಪ (ಕೆಟ್ಟ ಆಚಾರವನ್ನು ಮಾಡುವದರಲ್ಲಿ ಸಂಕೋಚ), ಬಹುಶ್ರುತತ್ವ (ಬಹುವಾಗಿ ಧರ್ಮಶ್ರವಣಮಾಡಿರುವದು), ಆರಬ್ಧವೀರ್ಯನಾಗಿರುವದು (ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಕೈಕೊಳ್ಳುವದರಲ್ಲಿ ಉದ್ಯೋಗಶೀಲತೆ) ಸ್ಮೃತಿಗಳುಳ್ಳವನಾಗಿರುವದು, ಪ್ರಜ್ಞೆ (ದುಃಖದ ಉತ್ಪತ್ತಿನಾಶಗಳನ್ನು ತಿಳಿಯಬಲ್ಲ ಶಕ್ತಿ) - ಇವು ಏಳಕ್ಕೆ ಈ ಹೆಸರು.

**ಸಂಬೋಧ್ಯಂಗ** - ಸ್ಮೃತಿ, ಧರ್ಮವಿಚಯ (ಧರ್ಮವನ್ನು ಹುಡುಕುವದು), ವೀರ್ಯ (ಸಾಧನದಲ್ಲಿ ಉದ್ಯೋಗಶೀಲತೆ), ಪ್ರೀತಿ (ಹರ್ಷ), ಪ್ರಶ್ರಬ್ಧಿ (ಶಾಂತಿ), ಸಮಾಧಿ, ಉಪೇಕ್ಷಾ (ಮನಸ್ಸು ಏರುಪೇರಿಲ್ಲದೆ ಇಟ್ಟಿರುವದು) - ಇವು ಏಳೂ ಸಂಬೋಧಿಯೆಂಬ ಪರಮಜ್ಞಾನವನ್ನು ಕೊಡುವದಕ್ಕೆ ಸಹಾಯಕವಾಗಿರುವದರಿಂದ ಇವಕ್ಕೆ ಈ ಹೆಸರು ೮೯.

**ಸಮಾಧಿ** - ಚಿತ್ತದ ಏಕಾಗ್ರತೆ ; ಅಷ್ಟಾಂಗಮಾರ್ಗದಲ್ಲಿ ಸಮ್ಯಗ್ವ್ಯಾಯಾಮ, ಸಮಕ್ಸ್ಮೃತಿ, ಸಮ್ಯಕ್ಸಮಾಧಿ - ಎಂಬ ಅಂಗಗಳ ಗುಂಪು ೧೧೦.

**ಸಮ್ಯಗ್ದೃಷ್ಟಿ** - ಸರಿಯಾದ ತಿಳಿವಳಿಕೆ ; ಅಷ್ಟಾಂಗಮಾರ್ಗದ ಮೊದಲನೆಯ ಅಂಗ ೩೧೯.

**ಸಮ್ಯಕ್ಪ್ರಣಿಧಾನ** - ಉತ್ತಮವಾದ ಕಾಮನೆ ೪೩. ಇದು ಮಿಥ್ಯಾಪ್ರಣಿಧಾನಕ್ಕೆ ವಿರುದ್ಧ.

**ಸಮ್ಯಕ್ಸಂಕಲ್ಪ** - ಯೋಗ್ಯವಾದದ್ದನ್ನೇ ತಿಳಿದು ಮಾಡುವ ಉತ್ತಮಸಂಕಲ್ಪ ; ಅಷ್ಟಾಂಗಮಾರ್ಗದಲ್ಲಿ ಎರಡನೆಯ ಅಂಗ ೧೨ ; ಇದಕ್ಕೆ ವಿರುದ್ಧವಾದದ್ದು ಮಿಥ್ಯಾಸಂಕಲ್ಪ.

**ಸಮ್ಯಕ್ಸಂಬುದ್ಧ** - ೫೮೮

**ಸ್ಕಂಧ** - ರೂಪ, ವೇದನಾ, ಸಂಜ್ಞಾ, ಸಂಸ್ಕಾರ, ವಿಜ್ಞಾನ - ಇವು ಐದು. ಈ ಐದೇ ಜಗತ್ತೆಲ್ಲ ಆಗಿರುವವೆಂದು ಬೌದ್ಧರ ನಂಬಿಕೆ. ಪೃಥ್ವಿ, ಜಲ, ಅಗ್ನಿ, ವಾಯು ಇವು ರೂಪಸ್ಕಂಧ. ಮಿಕ್ಕವೆಲ್ಲ ಅರಿವಿನ ರೂಪಗಳಾದ್ದರಿಂದ ಅವುಗಳನ್ನು ವಿಜ್ಞಾನದಲ್ಲಿ ಜೊತೆ ಅಡಕಮಾಡಬಹುದು. ಆಗ ನಾಮ, ರೂಪ - ಎಂಬ ಎರಡೇ ವಿಭಾಗವಾಗುತ್ತವೆ.

**ಸ್ಮೃತಿ** - ಎಚ್ಚರದಿಂದ ತತ್ತ್ವವನ್ನು ಸ್ಮರಣೆಮಾಡುವುದು. ಬುದ್ಧಾನುಸ್ಮೃತಿ (ಬುದ್ಧನ ಗುಣಗಳನ್ನು ಸ್ಮರಿಸಿಕೊಳ್ಳುವುದು), ಧರ್ಮಾನುಸ್ಮೃತಿ (ಬೌದ್ಧಧರ್ಮದ ಹೆಚ್ಚುಗಾರಿಕೆಯನ್ನು ಸ್ಮರಿಸಿಕೊಳ್ಳುತ್ತಿರುವುದು), ಸಂಘಾನುಸ್ಮೃತಿ (ಬೌದ್ಧಸಂಘದ ಗುಣಗಳನ್ನು ಸ್ಮರಿಸಿಕೊಳ್ಳುತ್ತಿರುವುದು), ಶೀಲಾನುಸ್ಮೃತಿ (ಪಂಚ (ಅಥವಾ ದಶ) ಶೀಲಗಳನ್ನು ಸ್ಮರಿಸುತ್ತಿರುವುದು), ದೇವತಾನುಸ್ಮೃತಿ, ಮರಣಾನುಸ್ಮೃತಿ, ಕಾಯಗತಾನುಸ್ಮೃತಿ (ಶರೀರ ಸ್ಥಿತಿವಿಕಾರಗಳನ್ನು ನೆನಪಿನಲ್ಲಿಟ್ಟುಕೊಂಡಿರುವುದು), ಆನಾಪಾನಸ್ಮೃತಿ (ಪ್ರಾಣಾಯಾಮವನ್ನು ಎಚ್ಚರಿಕೆಯಿಂದ ಮಾಡುವುದು). ಉಪಶಮಾನುಸ್ಮೃತಿ (ಅರಿತು ಸಮಾಧಿಯನ್ನು ಹೊಂದುವುದು) ಎಂದು ಹತ್ತು ಸ್ಮೃತಿಗಳುಂಟು ೯೧, ೧೮೧, ೨೯೩, ೩೯೬, ೩೯೭, ೨೯೮, ೨೯೯

**ಸ್ನಾತಕ** - ಪಾಪಗಳನ್ನೆಲ್ಲ ಕಳೆದುಕೊಂಡವ ೪೨೨ ; ಬ್ರಹ್ಮಚರ್ಯಾಶ್ರಮವನ್ನು ಮುಗಿಸಿ ಗೃಹಸ್ಥಧರ್ಮಕ್ಕೆ ಸಿದ್ಧನಾದವನು ಎಂಬ ವೈದಿಕಧರ್ಮದಲ್ಲಿರುವ ಅರ್ಥವು ಇಲ್ಲಿಲ್ಲ.

**ಸ್ರೋತ** - ವಿಷಯಗಳ ಕಡೆಗೆ ಮನಸ್ಸು ಹರಿಯುವ ೬ ದ್ವಾರಗಳು ೩೩೯.

**ಸ್ರೋತ ಆಪತ್ತಿ** - ನಿರ್ವಾಣಕ್ಕೆ ಕೊಂಡೊಯ್ಯುವ ಪ್ರವಾಹಕ್ಕೆ ಬಿದ್ದ ಬೌದ್ಧಸಾಧಕನು, ಶೈಕ್ಷರಲ್ಲಿ ಮೊದಲನೆಯ ಅಂತಸ್ತಿನವನ ಸ್ಥಿತಿ ೧೭೮.

## ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳಿಂದ ಸ್ವಯಂರಚಿತ, ಓದಲೇಬೇಕಾದ ಕೆಲವು ಪುಸ್ತಕಗಳು.

| ಕ್ರಮ ಸಂಖ್ಯೆ | ಹೆಸರು | ಪುಟಗಳು |
|---|---|---|
| 1. | ವೇದಾಂತವೂ ಆಧುನಿಕ ಜನ ಜೀವನವೂ (ಶ್ರೀಶ್ರೀಗಳವರ ಮೂರು ಉಪನ್ಯಾಸಗಳು) | 46 |
| 2. | ಅನುಭವ ಪರ್ಯಂತವಾದ ಆತ್ಮವಿಚಾರ (6 ಉಪನ್ಯಾಸಗಳು) | 66 |
| 3. | ಪರಿಪೂರ್ಣದರ್ಶನ (8 ಉಪನ್ಯಾಸಗಳು) | 58 |
| 4. | ಶಾಂಕರವೇದಾಂತದ ಮೂಲತತ್ತ್ವಗಳು (21 ಉಪನ್ಯಾಸಗಳು) | 112 |
| 5. | ಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು (54 ಉಪನ್ಯಾಸಗಳು) | 381 |
| 6. | ಅನುಭವಗಮ್ಯವೇದಾಂತ (55 ಉಪನ್ಯಾಸಗಳು) | 286 |
| 7. | ಅಧ್ಯಾತ್ಮವಿದ್ಯೆ (26 ಉಪನ್ಯಾಸಗಳು) | 158 |
| 8. | ವೇದಾಂತದರ್ಶನ | 48 |
| 9. | ಶಾಂಕರವೇದಾಂತಪ್ರಕ್ರಿಯೆ | 90 |
| 10. | ಶಂಕರವೇದಾಂತಸಾರ (28 ಉಪನ್ಯಾಸಗಳು) | 360 |

(ರಕ್ಷಾಕವಚದ ಹಿಂಬದಿಯನ್ನು ನೋಡಿ)

| ಕ್ರಮ ಸಂಖ್ಯೆ | ಹೆಸರು | ಪುಟಗಳು |
|---|---|---|
| 11. | ಗೌಡಪಾದ ಹೃದಯ | 492 |
| 12. | ವೇದಾಂತಾರ್ಥಸಾರ ಸಂಗ್ರಹ (12 ಉಪನ್ಯಾಸಗಳು) | 120 |
| 13. | ಅಧ್ಯಾಸಭಾಷ್ಯಾರ್ಥ ವಿಮರ್ಶೆ | 92 |
| 14. | ಶಂಕರಸಿದ್ಧಾಂತ (ಮೂಲಾವಿದ್ಯಾವಿಮರ್ಶೆ) | 104 |
| 15. | ಪರಮಾರ್ಥಚಿಂತಾಮಣಿ | 292 |
| 16. | ಭಗವದ್ಗೀತಾರ್ಥ ಸರ್ವಸ್ವ | 220 |
| 17. | ಭಗವದ್ಗೀತೆಯ ಉಪನ್ಯಾಸಗಳು (೧-೨ನೆ ಭಾಗಗಳು) | 1244 |
| 18. | ಶ್ರೀ ಶಂಕರಭಗವತ್ಪಾದವೃತ್ತಾಂತಸಾರ ಸರ್ವಸ್ವ | 516 |
| 19. | ಶ್ರೀಭಾಷ್ಯಮ್ | 328 |
| 20. | ವೇದಾರ್ಥಸಂಗ್ರಹ | 224 |
| 21. | ತತ್ತ್ವಸಮಾಸ | 44 |
| 22. | ಲಕ್ಷಣಶಾಸ್ತ್ರ ಉರುಫ್‌ಹಸೇನ್ | 36 |


**ಪುಸ್ತಕಗಳ ಪೂರ ಬೆಲೆ ಪಟ್ಟಿಗೆ ಬರೆದುಕೊಳ್ಳಿ.**


## ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ, ಹಾಸನ ಜಿಲ್ಲೆ - 573211

ದೂರವಾಣಿ : 08175 - 73820